₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 29.12.2025 ಸಂಪುಟ: 10 ಸಂಚಿಕೆ:348 ಪುಟಗಳು: 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಮ್ಮೆಲ್ಲರದ್ದೂ ಒಂದೇ ಕೈ

ಬೆಂಗಳೂರಿನ ಭಾರತ್ ಜೋಡೋ ಭವನದಲ್ಲಿ ಭಾನುವಾರ ಕೆಪಿಸಿಸಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಕ್ಯಾಮರಾ ಕಣ್ಣಿಗೆ ಕಾಣಿಸಿಕೊಂಡದ್ದು ಹೀಗೆ...

ಸೊಂಪಾದ ಪುಟಗಳು



ಜನವರಿ ಒಂಬತ್ತಕ್ಕೆ ದಿಲ್ಲಿಯಲ್ಲಿ ಫೈನಲ್

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ತಾಳಮದ್ದಳೆ ಬಾಲಿವುಡ್, ಅರ್ಥಧಾರಿಗಳು ಐಟಂ ಡಾನ್ಸರ್‌ಗಳಾಗಬಾರದು

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ವ್ಯವಹಾರ ಚತುರತೆ ಎಂದರೆ ಕೇವಲ ಲಾಭ ಗಳಿಸುವುದಲ್ಲ. ಬದಲಿಗೆ ಬಿಕ್ಕಟ್ಟಿನ ನಡುವೆಯೂ ಅವಕಾಶವನ್ನು ಗುರುತಿಸುವ ದೂರದೃಷ್ಟಿ ಮತ್ತು ಸೋಲನ್ನೂ ಯಶಸ್ಸಿನ ಮೆಟ್ಟಿಲನ್ನಾಗಿ ಮಾಡಿಕೊಳ್ಳುವ ಬುದ್ಧಿವಂತಿಕೆ. ಮಾರುಕಟ್ಟೆಯ ಬದಲಾವಣೆಗಳಿಗೆ ತಕ್ಕಂತೆ ತನ್ನನ್ನು ತಾನು ಅಪ್ಡೇಟ್ ಮಾಡಿಕೊಳ್ಳುವುದು.

ವಕ್ರತುಂಡೋಕ್ತಿ

ನಮ್ಮದೇ ಹಣವನ್ನು ನಾವೇ ಭಿಕ್ಷೆ ಬೇಡಿ ವಾಪಸ್ ಪಡೆಯಲು ಒಬ್ಬ ಹೊಸ ಶತ್ರುವನ್ನು ಹಣ ಕೊಟ್ಟು ಖರೀದಿಸಿಬೇಕೆಂದಿದ್ದರೆ ಸಾಲ ಕೊಡಬಹುದು.

ಕೇರಳ ಚುನಾವಣಾ ವಿಷಯವಾದ ಬೆಂಗಳೂರಿನ ಕೋಗಿಲು ಲೇಔಟ್‌ಗಳ ತೆರವು
ಕೇರಳ ಸಿಎಂ ಆಕ್ಷೇಪದ ಬೆನ್ನಲ್ಲೇ ಇಂದು ಸಿಎಂ ಸಿದ್ದು ಸಭೆ | ನಿರಾಶ್ರಿತರಿಗೆ ಜಾಗ?
ಕಾಂಗ್ರೆಸ್ ನಡೆಗೆ ಬಿಜೆಪಿ ತೀವ್ರ ಆಕ್ಷೇಪ, ಅಕ್ರಮ ನಿವಾಸಿಗಳಿಗೆ ಆಶ್ರಯವೇಕೆ?: ಪ್ರಶ್ನೆ

ತೆರವು ರಾಜಕೀಯ ತಿರುವು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದ್ದ ಬೆಂಗಳೂರಿನ ಕೋಗಿಲು ಗ್ರಾಮದ ಫಕೀರ್ ಕಾಲೋನಿ, ವಸೀಮ್ ಲೇಔಟ್‌ನ ಅನಧಿಕೃತ ಮನೆಗಳ ತೆರವು ಇದೀಗ ನೆರೆ ರಾಜ್ಯ ಕೇರಳದಲ್ಲಿ 'ರಾಜಕೀಯ' ಮೇಲಾಟಕ್ಕೆ ತಿರುಗಿದೆ. ಕೇರಳದಲ್ಲಿ ಆಗಬಹುದಾದ ಡ್ಯಾಮೇಜ್ ಅನ್ನು ಸರಿಪಡಿಸಲು ಕರ್ನಾಟಕದ ಅನಧಿಕೃತ ನಿವಾಸಿಗಳಿಗೆ 'ಸೂರು' ನೀಡಿ ಎನ್ನುವ ಆಗ್ರಹ ಕರ್ನಾಟಕ ರಾಜಕೀಯದಲ್ಲೂ ವಿವಾದ ಸೃಷ್ಟಿಸಿದೆ.

ಕೇರಳ ಮುಖ್ಯಮಂತ್ರಿ, ಎಡಪಕ್ಷಗಳ ಮಿತ್ರಕೂಟ (ಎಲ್‌ಡಿಎಫ್) ನಾಯಕ ವಿಜಯ್ ಪಿಣರಾಯಿ ಟ್ವೀಟ್‌ನಿಂದ ಕೇರಳ ಕಾಂಗ್ರೆಸ್ ಇಕ್ಕಟ್ಟಿನ ಸ್ಥಿತಿ ಎದುರಿಸುತ್ತಿದೆ. ಕೇರಳದಲ್ಲಿ ಮುಂದಿನ ವರ್ಷ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೇರುವ ನಿರೀಕ್ಷೆಯಿದೆ. ಇತ್ತೀಚೆಗಷ್ಟೇ ಅಲ್ಲಿ ನಡೆದ ಸ್ಥಳೀಯ ಚುನಾವಣೆಯಲ್ಲಿ ಪಿಣರಾಯಿ ನೇತೃತ್ವದ ಎಲ್‌ಡಿಎಫ್ ಹೀನಾಯ ಸೋಲನುಭವಿಸಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಕಾಂಗ್ರೆಸ್ ಸರಕಾರ ಅನಧಿಕೃತ ಮುಸ್ಲಿಮ್ ನಿವಾಸಿಗಳನ್ನು ಒಕ್ಕಲೆಬ್ಬಿಸಿದ್ದನ್ನು ಪಿಣರಾಯಿ ದೊಡ್ಡದಾಗಿ ಬಿಂಬಿಸುವ ಯತ್ನ ಮಾಡಿದ್ದಾರೆ. ಕೇರಳದಲ್ಲಿ ಚುನಾವಣೆಗೆ ಕೆಲವೇ ತಿಂಗಳಿರುವಾಗ ನಡೆದ ಈ ರೀತಿಯ ಘಟನೆಗಳು ಕೇರಳ ಮುಸ್ಲಿಮರ ಮತಕ್ಕೆ ಹೊಡೆತ ಬೀಳುತ್ತದೆ. ಆದ್ದರಿಂದ ಅವರಿಗೆ ಬದಲಿಗೆ ವ್ಯವಸ್ಥೆ ಮಾಡುವಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಹೇಳಿದ್ದನ್ನು, ಕರ್ನಾಟಕ ಕಾಂಗ್ರೆಸ್ ಸರಕಾರ ಪಾಲಿಸಲು ಮುಂದಾಗಿದೆ. ಆದರೆ ಕಾಂಗ್ರೆಸ್ ಸರಕಾರದ ಈ ನಡೆ ಪ್ರತಿಪಕ್ಷಗಳ ಕೆಂಗಣ್ಣಿಗೆ ಕಾರಣವಾಗಿದ್ದು ಸಿಎಂ, ಡಿಸಿಎಂ ವಿರುದ್ಧ ಬಿಜೆಪಿಗರು ಮುಗಿಬಿದ್ದಿದ್ದಾರೆ. → 4



ಭಾನುವಾರ ಸಂಜೆ ಸಚಿವ ಜಮೀರ್ ಅಹ್ಮದ್ ಅವರು ಫಕೀರ್ ಕಾಲೋನಿ, ವಸೀಮ್ ಲೇಔಟ್‌ಗೆ ಭೇಟಿ ನೀಡಿ ನಿರಾಶ್ರಿತರೊಂದಿಗೆ ಚರ್ಚಿಸಿದರು.

ವೇಣುಗೋಪಾಲ್ ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ. ಅವರು ಆಡಳಿತದಲ್ಲಿ ಹಸ್ತಕ್ಷೇಪ ಮಾಡಲ್ಲ, ಆದರೆ ನಮಗೆ ಸಲಹೆ ನೀಡುವ ಅಧಿಕಾರ ಅವರಿಗಿದೆ. ಬಿಜೆಪಿ ರಾಷ್ಟ್ರೀಯ ನಾಯಕರು ರಾಜ್ಯ ನಾಯಕರಿಗೆ ಸಲಹೆ ನೀಡುವುದಿಲ್ಲವೇ? ನಮ್ಮದು ರಾಷ್ಟ್ರೀಯ ಪಕ್ಷ, ನಮಗೆ ಜವಾಬ್ದಾರಿ ಇದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬೆಂಗಳೂರಿನ ವಿಷಯದಲ್ಲಿ ಪಿಣರಾಯಿ ತಲೆ ಹಾಕುವುದು ಬೇಡ ಎಂದರೆ, ವೇಣುಗೋಪಾಲ್‌ಗೂ ಡಿಕೆಶಿ ತಿರುಗೇಟು ಕೊಡಬೇಕಿತ್ತು. ಹಸ್ತಕ್ಷೇಪ ಬೇಡ ಅಂತ ಹೇಳಬೇಕಿತ್ತು. ಅಪಾರ್ಟ್‌ಮೆಂಟ್ ನಿವಾಸಿಗಳಿಗೆ, ಉದ್ಯಮಿಗಳಿಗೆ ಧಮ್ಕಿ ಹಾಕುವಾಗ ಇರುವ ಪರಾಕ್ರಮ ಎಲ್ಲಿ ಹೋಯಿತು?
-ಡಾ.ಅಶ್ವತ್ಥನಾರಾಯಣ, ಮಾಜಿ ಡಿಸಿಎಂ

ಬಿಜೆಪಿಗರ ಆರೋಪ

- ಕಾಂಗ್ರೆಸ್ ನಾಯಕ ವೇಣುಗೋಪಾಲ್ ಸೂಪರ್ ಸಿಎಂ ರೀತಿ ನಡೆದುಕೊಳ್ಳುತ್ತಿದ್ದಾರೆ
- ಕೇರಳ ಸಿಎಂ ಪಿಣರಾಯಿಗೆ ಹೇಳಿದಂತೆ, ವೇಣುಗೋಪಾಲ್‌ಗೆ ಏಕೆ ತಿರುಗೇಟು ಕೊಟ್ಟಿಲ್ಲ?
- ಅಕ್ರಮವಾಗಿ ಮನೆ ಕಟ್ಟಿಸಿಕೊಂಡವರಿಗೆ ನಿವೇಶನ ಕೊಡುವ ಅಗತ್ಯ ಏನು?
- ನಿಯಮಬದ್ಧವಾಗಿದ್ದವರನ್ನು ಕಾಡುವ ಕಾಂಗ್ರೆಸಿಗರಿಗೆ, ಮುಸ್ಲಿಮರ ಮೇಲೇಕೆ ಪ್ರೀತಿ?

ಕಾಂಗ್ರೆಸ್ ಸಮರ್ಥನೆ

- ವೇಣುಗೋಪಾಲ್ ಎಂದಿಗೂ ಕರ್ನಾಟಕ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ
- ಬಿಜೆಪಿ ನಾಯಕರು ಸಲಹೆ ನೀಡುವಂತೆ, ಕಾಂಗ್ರೆಸ್ ನಾಯಕರೂ ಸಲಹೆ ನೀಡುತ್ತಾರೆ
- ಅರ್ಹರಿಗೆ ಸಮಸ್ಯೆಯಾಗದಿರಲು ಸಿದ್ದರಾಮಯ್ಯ ನೇತೃತ್ವದಲ್ಲಿ ಇಂದು ಸಭೆ ನಡೆಯಲಿದೆ
- ಅರ್ಹ ನಿರಾಶ್ರಿತರು ಹಾಗೂ ಸ್ಥಳೀಯರಿಗೆ ನಿಯಮದಂತೆ ಪುನರ್ವಸತಿ ಕಲ್ಪಿಸಲಾಗುವುದು

ಕೇರಳ ಶಾಸಕ, ಸಂಸದರ ಭೇಟಿ

ಪಿಣರಾಯಿ ವಿಜಯನ್ ಅವರ ಆರೋಪದ ಬಳಿಕ ಕೇರಳದ ಇಬ್ಬರು ಜನಪ್ರತಿನಿಧಿಗಳು ಕೋಗಿಲು ಗ್ರಾಮಕ್ಕೆ ಭೇಟಿ ನೀಡಿರುವುದು ಭಾರಿ ವಿವಾದಕ್ಕೆ ಕಾರಣವಾಗಿದೆ. ಶನಿವಾರವಷ್ಟೇ ಕೇರಳ ಸಂಸದ ಎ.ಎ.ರಹೀಂ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ನಿರಾಶ್ರಿತರೊಂದಿಗೆ ಚರ್ಚಿಸಿದ್ದರು. ಭಾನುವಾರ ಕೇರಳ ಸರಕಾರದ ಮಾಜಿ ಸಚಿವ, ಶಾಸಕ ಕೆ.ಟಿ. ಜಲೀಲ್ ಸ್ಥಳಕ್ಕೆ ಭೇಟಿ ನೀಡಿ ಚರ್ಚಿಸಿದ್ದಾರೆ. ನೆರೆ ರಾಜ್ಯದ ಜನಪ್ರತಿನಿಧಿಗಳು ಕರ್ನಾಟಕಕ್ಕೆ ಬಂದು ಪರಿಶೀಲನೆ ನಡೆಸಿದರೂ ಸರಕಾರ ಮೌನವಾಗಿರುವುದು ಸಾರ್ವಜನಿಕರ ಆಕ್ಷೇಪಕ್ಕೆ ಕಾರಣವಾಗಿದೆ.

ಹುಣಸೂರಿನಲ್ಲಿ ಗನ್ ತೋರಿಸಿ ಶೋರೂಮಿಗೆ ಕನ್ನ
6.50 ಕೋಟಿ ರು. ಮೌಲ್ಯದ 5 ಕೆಜಿ ಚಿನ್ನ ಕಳ್ಳರ ಕೈಗೆ

ಸಿನಿಮಾ ಶೈಲಿಯಲ್ಲಿ ಚಿನ್ನದಂಗಡಿ ದರೋಡೆ!

ಮೈಸೂರು: ಐವರು ಮುಸುಕುಧಾರಿಗಳ ತಂಡವೊಂದು ಹಾಡಹಗಲೇ ಚಿನ್ನದ ಅಂಗಡಿಗೆ ನುಗ್ಗಿ ಸಿನಿಮೀಯ ಶೈಲಿಯಲ್ಲಿ ದರೋಡೆ ಮಾಡಿರುವ ಘಟನೆ ಹುಣಸೂರು ಪಟ್ಟಣದಲ್ಲಿ ಭಾನುವಾರ ನಡೆದಿದೆ. ಪಟ್ಟಣದ ಬಸ್ ನಿಲ್ದಾಣ ಸಮೀಪವಿರುವ ಸ್ಕೈಗೋಲ್ಡ್ ಆ್ಯಂಡ್ ಡೈಮಂಡ್ಸ್ ಶೋರೂಂಗೆ ನುಗ್ಗಿದ ಮುಸುಕುಧಾರಿಗಳು ಚಿನ್ನದ ಅಂಗಡಿ ಸಿಬ್ಬಂದಿಗೆ ಗನ್ ತೋರಿಸಿ ಬೆದರಿಸಿದ್ದಾರೆ, ಸುಮಾರು 5 ಕೆಜಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ. ಪ್ರಸ್ತುತ ಮಾರು ಕಟ್ಟೆಯಲ್ಲಿ ಈ ಚಿನ್ನದ ಬೆಲೆ 6.50 ಕೋಟಿ ರು. ಇದೆ.



ಚಿನ್ನದ ಅಂಗಡಿ ದರೋಡೆ ಪ್ರಕರಣ ಭೇದಿಸಲು ಐವರು ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ಐದು ಪ್ರತ್ಯೇಕ ತಂಡ ರಚಿಸಲಾಗಿದೆ. ಜಿಲ್ಲೆಯ 18 ಕಡೆ ನಾಕಾಬಂದಿ ಹಾಕಿ ತಪಾಸಣೆ ಮಾಡಲಾಗುತ್ತಿದೆ. ದರೋಡೆಕೋರರು ಹಿಂದಿಯಲ್ಲಿ ಮಾತನಾಡುತ್ತಿದ್ದರು ಎಂದು ತಿಳಿದುಬಂದಿದೆ.
-ವಿಷ್ಣುವರ್ಧನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಹೇಗಾಯ್ತು?: ಮಧ್ಯಾಹ್ನ ಸುಮಾರು 1.30ರ ಸಮಯದಲ್ಲಿ ಘಟನೆ ನಡೆದಿದ್ದು, ಸುಮಾರು 10ಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದ ವೇಳೆ ಏಕಾಏಕಿ ನುಗ್ಗಿದ 5 ಮಂದಿ ಗನ್ ತೋರಿಸಿದ್ದಾರೆ. ಐವರ ಪೈಕಿ ನಾಲ್ವರು ಮುಸುಕು ಧರಿಸಿದ್ದರು. ಓರ್ವ ಗ್ಯಾಂಗ್ ಲೀಡರ್ ಎರಡು ಕೈಗಳಲ್ಲೂ ಗನ್ ಹಿಡಿದು ಸಿನಿಮೀಯ ಶೈಲಿಯಲ್ಲಿ ಬೆದರಿಕೆ ಹಾಕಿದ್ದಾನೆ. ನಂತರದ ಕೆಲವೇ ನಿಮಿಷದಲ್ಲಿ ಅಂಗಡಿಯಲ್ಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ. ಎರಡು ಬೈಕ್‌ಗಳಲ್ಲಿ ಬಂದ ಗ್ಯಾಂಗ್ ಕೈಚಳಕ ತೋರಿಸಿದೆ. ದರೋಡೆಕೋರರನ್ನು ಸಿಬ್ಬಂದಿ ಹಿಂಬಾಲಿಸಿದ್ದಾರೆ. ಆದರೆ ದುಷ್ಕರ್ಮಿಗಳನ್ನು ಹಿಡಿಯಲು ಸಾಧ್ಯವಾಗಿಲ್ಲ. ರಾಬರಿ ನಡೆಸಿದ ಸಂಪೂರ್ಣ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸ್ಥಳಕ್ಕೆ ಎಸ್ಪಿ ವಿಷ್ಣುವರ್ಧನ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ಕುರಿತು ತನಿಖೆ ಮುಂದುವರಿದಿದೆ.

ಹೇಗಾಯ್ತು ದರೋಡೆ?

- ಭಾನುವಾರ ಮಧ್ಯಾಹ್ನ 1.30ರ ಹೊತ್ತಿಗೆ ಮೈಸೂರು ಜಿಲ್ಲೆಯ ಹುಣಸೂರಿನ ನಗರದಲ್ಲಿ ಘಟನೆ
- 5 ಮುಸುಕುಧಾರಿಗಳು ಸ್ಕೈಗೋಲ್ಡ್ ಚಿನ್ನದಂಗಡಿ ಪ್ರವೇಶ, ಗನ್ ತೋರಿಸಿ ಸಿಬ್ಬಂದಿಗೆ ಬೆದರಿಕೆ
- ಕೆಲವೇ ನಿಮಿಷಗಳಲ್ಲಿ ದರೋಡೆ, ಖದೀಮರನ್ನು ಹಿಂಬಾಲಿಸಿದರೂ ಸಿಬ್ಬಂದಿ ಕೈಗೆ ಸಿಗದೇ ಪರಾರಿ
- ದರೋಡೆಯ ಪ್ರತಿ ದೃಶ್ಯಗಳು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆ, ಪೊಲೀಸರಿಂದ ಕಳ್ಳರ ಪತ್ತೆಗೆ ಶೋಧ

ಹೊಸ ವರ್ಷ; 20 ಸಾವಿರ ಪೊಲೀಸ್ ಕಣ್ಗಾವಲು: ಪರಂ

ಬೆಂಗಳೂರು: ಬೆಂಗಳೂರಿನಲ್ಲಿ ಹೊಸ ವರ್ಷದ ಸಂಭ್ರಮಾಚರಣೆಯ ವೇಳೆ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲು ಬರೋಬ್ಬರಿ 20 ಸಾವಿರ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲು ತೀರ್ಮಾನಿಸಲಾಗಿದೆ. ಬೆಂಗಳೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗೃಹಸಚಿವ ಪರಮೇಶ್ವರ, ನಿಯೋಜಿತ ಪೊಲೀಸ್ ಸಿಬ್ಬಂದಿಯಲ್ಲಿ ಸಂಚಾರಿ ಪೊಲೀಸರು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದವರಾಗಿದ್ದು, 21 ಸಿಎಆರ್ ತುಕಡಿ, 88 ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗಿದೆ ಎಂದರು.

ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಚಿರತೆ ಪತ್ತೆ: ಸೆರೆಗೆ ಸಿದ್ಧತೆ

ಹುಬ್ಬಳ್ಳಿ: ಇಲ್ಲಿನ ವಿಮಾನ ನಿಲ್ದಾಣ ಪರಿಸರದಲ್ಲಿ ಚಿರತೆ ಓಡಾಟ ನಡೆಸಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಶುಕ್ರವಾರ ಸಂಜೆ ಮತ್ತು ಶನಿವಾರ ಬೆಳಗ್ಗಿನ ಜಾವದಲ್ಲಿ ಚಿರತೆ ಓಡಾಟ ನಡೆಸಿರೋದು ಕಂಡುಬಂದಿದೆ. ಚಿರತೆ ಸೆರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಅಲರ್ಟ್ ಆಗಿದ್ದಾರೆ. ಶ್ವಾನದಳದೊಂದಿಗೆ 2 ಪ್ರತ್ಯೇಕ ಬೋನು ಹಾಗೂ ಗಾಮನಗಟ್ಟಿ ಹೊರ ವಲಯ ಮತ್ತು ವಿಮಾನ ನಿಲ್ದಾಣದ ಪರಿಸರದಲ್ಲಿ ಕ್ಯಾಮೆರಾಗಳನ್ನು ಅಳವಡಿಸಿದ್ದಾರೆ.

ದೆಹಲಿಯ ಇಂದಿರಾಭವನದಲ್ಲಿ ಭಾನುವಾರ ಕಾಂಗ್ರೆಸ್‌ನ 140ನೇ ಸಂಸ್ಥಾಪನಾ ದಿನಾಚರಣೆ ನಡೆಯಿತು. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಧ್ವಜಾರೋಹಣ ನಡೆಸಿದರು. ಪಕ್ಷದ ಸಂಸದೀಯ ಮುಖ್ಯಸ್ಥೆ ಸೋನಿಯಾ ಗಾಂಧಿ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಉಪಸ್ಥಿತರಿದ್ದರು.

ಬಾಂಗ್ಲಾ ಮಾಜಿ ಪ್ರಧಾನಿ ಖಾಲಿದಾ ತೀವ್ರ ಅಸ್ವಸ್ಥ

ಢಾಕಾ: ಬಾಂಗ್ಲಾದ ಮಾಜಿ ಪ್ರಧಾನಿ, ಬಿಎನ್‌ಪಿ ನಾಯಕಿ ಖಾಲಿದಾ ಜಿಯಾ ತೀವ್ರ ಅನಾರೋಗ್ಯಕ್ಕೊಳಗಾಗಿದ್ದಾರೆ. ಹಲವು ಗಣ್ಯರು ಅವರನ್ನು ಭೇಟಿಯಾಗಿ ಆರೋಗ್ಯವನ್ನು ವಿಚಾರಿಸುತ್ತಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೈದ್ಯ ಡಾ.ಜಾಹಿದ್, ಜಿಯಾ ಖಾಲಿದಾ ಢಾಕಾದ ಎವರ್‌ಕೇರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಚೇತರಿಕೆಯೇ ಕಾಣುತ್ತಿಲ್ಲ ಎಂದಿದ್ದಾರೆ. ಜಿಯಾ ಅವರು ನ.23 ರಿಂದಲೂ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಅಧ್ಯಕ್ಷೆ 80 ವರ್ಷದ ಜಿಯಾ ಪರಿಸ್ಥಿತಿ ಡಿಸೆಂಬರ್ 11ಕ್ಕೆ ವಿಕೋಪಕ್ಕೆ ಹೋಗಿತ್ತು. ವಿಶ್ರಾಂತಿ ನೀಡಲು ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಲಾಯಿತು.

ಕಾರವಾರದಲ್ಲಿ ದ್ರೌಪದಿ ಮುರ್ಮು ಸಬ್‌ಮರಿನ್ ಸಂಚಾರ: 2ನೇ ರಾಷ್ಟ್ರಪತಿ

ವಾಗ್ಶೀರ್‌ನಲ್ಲಿ ರಾಷ್ಟ್ರಪತಿ

ಕಾರವಾರ: ಇಲ್ಲಿನ ಕದಂಬ ನೌಕಾನೆಲೆಗೆ ಭಾನುವಾರ ಆಗಮಿಸಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಐಎನ್‌ಎಸ್ ವಾಗ್ಶೀರ್ ಸಬ್‌ಮರಿನ್‌ನಲ್ಲಿ ಪ್ರಯಾಣಿಸಿ ವಿಶೇಷ ದಾಖಲೆ ನಿರ್ಮಿಸಿದರು. ಡಾ.ಎಪಿಜೆ ಅಬ್ದುಲ್ ಕಲಾಮ್ ನಂತರ ಇಂತಹದ್ದೊಂದು ಯಾನ ಮಾಡಿದ ಕೇವಲ 2ನೇ ರಾಷ್ಟ್ರಪತಿ ಇವರು. 2006 ರಲ್ಲಿ ಕಲಾಮ್ ಇಂತಹದ್ದೊಂದು ಯಾನ ಮಾಡಿದ್ದರು. ಭಾರತೀಯ ಸೇನಾ ಪಡೆಗಳ ಮುಖ್ಯಸ್ಥೆಯಾಗಿರುವ ರಾಷ್ಟ್ರಪತಿ ಮುರ್ಮು ಕಾರವಾರ ನೌಕಾನೆಲೆ ಯಲ್ಲಿ ವಾಗ್ಶೀರ್‌ನಲ್ಲಿ ಪ್ರಯಾಣಿಸಿದರು. ಅವರೊಂದಿಗೆ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಇದ್ದರು. ಇದಕ್ಕೂ ಮುನ್ನ ದ್ರೌಪದಿ ಮುರ್ಮು ಅವರನ್ನು ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಮೀನು ಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತು ವಾರಿ ಸಚಿವ ಮಂಕಾಳ ಎಸ್ ವೈದ್ಯ ಸ್ವಾಗತಿಸಿದರು. ಪ್ರಾಜೆಕ್ಟ್-75 ಸ್ಕಾರ್ಪೀನ್ ಕಾರ್ಯಕ್ರಮದಡಿ ನೌಕಾಪಡೆಗೆ ಸೇರಿಕೊಂಡ 6ನೇ ಮತ್ತು ಅಂತಿಮ ಸಬ್‌ಮರಿನ್ ಐಎನ್‌ಎಸ್ ವಾಗ್ಶೀರ್. ಅದು ಈ ವರ್ಷ ಜನವರಿಯಲ್ಲಿ ಕಾರ್ಯಾ ಚರಣೆ ಆರಂಭಿಸಿತ್ತು. ಇದರಲ್ಲಿ ಟಾರ್ಪೆಡೋ, ಹಡಗುರಕ್ಷಣಾ ಕ್ಷಿಪಣಿ ವ್ಯವಸ್ಥೆ, ಸಮುದ್ರದೊಳಗೆ ಯುದ್ಧ ಮಾಡುವ ಸಾಮರ್ಥ್ಯವನ್ನು ಇದು ಹೊಂದಿದೆ.

ನೂರ್ ಸೇನಾನೆಲೆ ಮೇಲೆ ಭಾರತ ದಾಳಿ ಸತ್ಯ: ಪಾಕ್

ಕರಾಚಿ: ಭಾರತವು ಈ ವರ್ಷ ಮೇ ತಿಂಗಳಿನಲ್ಲಿ ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಡೆಸಿದ್ದಾಗ, ಪಾಕ್‌ನ ನೂರ್ ಖಾನ್ ವಾಯುನೆಲೆಯ ಮೇಲೆ ದಾಳಿ ನಡೆದಿತ್ತು ಎಂದು ಪಾಕಿಸ್ತಾನ ಮೊದಲ ಬಾರಿಗೆ ಒಪ್ಪಿಕೊಂಡಿದೆ. ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಪತ್ರಿಕಾಗೋಷ್ಠಿಯಲ್ಲಿ ರಾವಲ್ಪಿಂಡಿಯ ಚಕ್ಲಾಲಾದಲ್ಲಿರುವ ನೂರ್ ಖಾನ್ ವಾಯುನೆಲೆಯನ್ನು ಗುರಿಯಾಗಿಸಿಕೊಂಡು ಭಾರತೀಯ ಡ್ರೋನ್‌ಗಳು ದಾಳಿ ನಡೆಸಿವೆ ಎಂದು ಹೇಳಿದ್ದಾರೆ. ಭಾರತವು 36 ಗಂಟೆಗಳಲ್ಲಿ ಪಾಕಿಸ್ತಾನದ ಮೇಲೆ ಒಟ್ಟು 80 ಡ್ರೋನ್‌ಗಳನ್ನು ಕಳುಹಿಸಿತ್ತು. ಒಂದು ಡ್ರೋನ್ ಮೇ 10ರಂದು ನೂರ್ ಖಾನ್ ವಾಯು ನೆಲೆ ಮೇಲೆ ನಡೆಯಿತು ಎಂದಿದ್ದಾರೆ.

ಬೆಂಗಳೂರಿನಲ್ಲಿ ಸಿಕ್ಕಿದ್ದು 58 ಕೋಟಿ ರು. ಡ್ರಗ್ಸ್ ಅಲ್ಲ ಬರೀ 1.20 ಕೋಟಿ ರು. ಡ್ರಗ್ಸ್: ಗೃಹ ಸಚಿವ ಪರಂ

ಡ್ರಗ್ಸ್: ಮಹಾ ಪೊಲೀಸ್ ಸುಳ್ಳು

ಬೆಂಗಳೂರು: ಹೊಸವರ್ಷದ ಹೊಸ್ತಿಲಿನಲ್ಲಿರುವ ರಾಜಧಾನಿ ಬೆಂಗಳೂರಿನಲ್ಲಿ ಭಾರೀ ಪ್ರಮಾಣದ ಮಾದಕವಸ್ತು ಹಾಗೂ ಮಾದಕವಸ್ತು ತಯಾರಿಕಾ ಕಾರ್ಖಾನೆ ಪತ್ತೆಯಾಗಿರುವುದು ವಿವಾದಕ್ಕೆ ಕಾರಣವಾಗಿದ್ದು, ರಾಜಕೀಯ ವಾಕ್ಸಮರಕ್ಕೆ ವೇದಿಕೆಯಾಗಿದೆ. ಮಹಾರಾಷ್ಟ್ರ ಪೊಲೀಸರು ಬೆಂಗಳೂರು ಪೊಲೀಸರೊಂದಿಗೆ ಶನಿವಾರ ರಾತ್ರಿ ಬೆಂಗಳೂರಿನ ವಿವಿಧ ಭಾಗದಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ ಅಪಾರ ಪ್ರಮಾಣದ ಮಾದಕವಸ್ತು ಹಾಗೂ ಕಚ್ಚಾವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. → 4

ಭದ್ರತಾಪಡೆ ಭೀತಿ, ಪರಾರಿಯಾಗಲು ಹೆಣಗಾಟ ದೂರದ ಪರ್ವತಪ್ರದೇಶಗಳಲ್ಲಿ ಅಡಗಲು ಯತ್ನ

ಜಮ್ಮುನಲ್ಲಿ 35 ಪಾಕ್ ಉಗ್ರರು!

ಶ್ರೀನಗರ: ಜಮ್ಮುಕಾಶ್ಮೀರ ರಾಜಧಾನಿ ಶ್ರೀನಗರದಲ್ಲಿ ಇತ್ತೀಚೆಗಷ್ಟೇ ಇಬ್ಬರು ಉಗ್ರರು ಓಡಾಡುತ್ತಿದ್ದ ಸುಳಿವು ಸಿಕ್ಕಿತ್ತು. ಅದರ ಬೆನ್ನಲ್ಲೇ ಜಮ್ಮು ಭಾಗದಲ್ಲಿ 30ರಿಂದ 35 ಉಗ್ರರು ಸಂಚರಿಸುತ್ತಿದ್ದಾರೆ ಎಂಬ ಮಾಹಿತಿ ದಕ್ಕಿದ್ದು, ಭಾರತೀಯ ಸೇನೆ ಇವರನ್ನು ವಶಕ್ಕೆ ಪಡೆಯಲು ಕಾರ್ಯಾಚರಣೆ ನಡೆಸಿದೆ. ಸದ್ಯ ಜಮ್ಮುಕಾಶ್ಮೀರದಲ್ಲಿ ಮೂಳೆಗಳನ್ನು ಕೊರೆಯುವಷ್ಟು ವಿಪರೀತ ಚಳಿಯಿದೆ. ಭದ್ರತಾಪಡೆಗಳು ತೀವ್ರ ಶೋಧ ನಡೆಸಿರುವುದರಿಂದ ತಪ್ಪಿಸಿಕೊಳ್ಳಲಾಗದೇ ಉಗ್ರರು ಪರ್ವತಪ್ರದೇಶಗಳಿಗೆ ಓಡಿ ಹೋಗುತ್ತಿದ್ದಾರೆ.

ಅಮೆರಿಕದಲ್ಲಿ ತೀವ್ರ ಹಿಮಪಾತ: 9000 ವಿಮಾನಗಳು ರದ್ದು



ವಾಷಿಂಗ್ಟನ್: ಅಮೆರಿಕದಲ್ಲಿ ಹಿಮಪಾತ ಜೋರಾಗಿದೆ. ಭಾರೀ ಹಿಮಗಾಳಿಯಿಂದಾಗಿ ತಾಪಮಾನ ಕಡಿಮೆಯಾಗುತ್ತಿದ್ದು, ನ್ಯೂಯಾರ್ಕ್‌ನಲ್ಲಿ ಎಲ್ಲವೂ ಮಂಜಿನಗಡ್ಡೆಗಳಾಗುತ್ತಿವೆ. ಕುಡಿಯುವ ನೀರು ಕೂಡ ಗಟ್ಟಿಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಜನಜೀವನ ಅಸ್ತವ್ಯಸ್ತವಾಗುವ ಎಲ್ಲಾ ಲಕ್ಷಣಗಳು ಗೋಚರಿಸಿವೆ. ಬರೀ ಶನಿವಾರವೇ 9 ಸಾವಿರಕ್ಕೂ ಹೆಚ್ಚು ವಿಮಾನಗಳ ಹಾರಾಟ ಸ್ಥಗಿತ ಅಥವಾ ವಿಳಂಬವಾಗಿದೆ. ಇದರಿಂದ ಕ್ರಿಸ್ಮಸ್ ರಜೆ ಕಳೆಯಲು ತೆರಳಿದ್ದ ಪ್ರವಾಸಿಗರು ಪರದಾಡುವಂತಾಗಿದೆ. ಜನ ರಸ್ತೆಗಿಳಿಯದಂತೆ ಅಮೆರಿಕ ಸರಕಾರ ಸೂಚನೆ ನೀಡಿದೆ. ಮುಖ್ಯವಾಗಿ ನ್ಯೂಯಾರ್ಕ್‌ನಲ್ಲಿ ವಿಪರೀತ ಚಳಿಯಿದ್ದು, ಸೆಂಟ್ರಲ್ ಪಾರ್ಕ್‌ನಲ್ಲಿ 4.3 ಇಂಚಿನಷ್ಟು ದಪ್ಪದ ಮಂಜು ಆವರಿಸಿಕೊಂಡಿದೆ. 2022ರ ನಂತರ ಇದೇ ಗರಿಷ್ಠ ಹಿಮಪಾತ.

ದುಬೈನಲ್ಲಿ 1000 ಮಕ್ಕಳಿಗೆ ಕನ್ನಡ ಪಾಠ, ಈ ಅಭಿಮಾನ ಹೆಮ್ಮೆಯ ಸಂಗತಿ: ಮನ್ ಕೀ ಬಾತ್‌ನಲ್ಲಿ ಪ್ರಧಾನಿ

ದುಬೈ ಕನ್ನಡ ಶಾಲೆ, ಐಐಎಸ್‌ಸಿ ಗೀತಾಂಜಲಿಗೆ ಮೋದಿ ಮೆಚ್ಚುಗೆ

ದೆಹಲಿ: ತಮ್ಮ 129ನೇ ಮನ್ ಕೀ ಬಾತ್‌ನಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಕನ್ನಡವನ್ನು ಮನಬಿಚ್ಚಿ ಹೊಗಳಿದ್ದಾರೆ. ಈ ವರ್ಷದ ಕೊನೆಯ ಮನ್ ಕೀ ಬಾತ್‌ನಲ್ಲಿ ಹಲವಾರು ಸಂಗತಿಗಳನ್ನು ಪ್ರಸ್ತಾಪಿಸಿದ ಪ್ರಧಾನಿ, ಬೆಂಗಳೂರಿನ ಐಐಎಸ್‌ಸಿ ಶಿಕ್ಷಣ ಸಂಸ್ಥೆಯ ಸಂಗೀತ ತರಗತಿಗಳನ್ನೂ ಶ್ಲಾಘಿಸಿದ್ದಾರೆ.

ದುಬೈನಲ್ಲಿ ಬಹಳ ವರ್ಷಗಳಿಂದ ಕನ್ನಡಿಗರು ವಾಸವಿದ್ದಾರೆ. ದುಬೈ ಕನ್ನಡಿಗರು ತಮ್ಮಲ್ಲಿ ತಾವೇ ಒಂದು ಪ್ರಶ್ನೆ ಕೇಳಿಕೊಂಡರು. ನಮ್ಮ ಮಕ್ಕಳು ತಾಂತ್ರಿಕ ಜಗತ್ತಿನಲ್ಲಿ ಪ್ರಗತಿ ಹೊಂದುತ್ತಿದ್ದಾರೆ. ಆದರೆ ಅವರು ತಮ್ಮ ಮೂಲನೆಲದ ಭಾಷೆಯಾದ ಕನ್ನಡದಿಂದ ದೂರ ಆಗುತ್ತಿದ್ದಾರೆಯೇ ಅನ್ನುವ ಆತಂಕ ದುಬೈ ಕನ್ನಡಿಗರಿಗೆ ಬಂತು. ಆಗಿನಿಂದಲೇ ಅವರು ದುಬೈನಲ್ಲಿ ಕನ್ನಡ ಪಾಠ ಶಾಲೆ ಆರಂಭ ಮಾಡಿದರು ಎಂದು ಮೋದಿ ದುಬೈನಲ್ಲಿ ಕನ್ನಡ ಗಟ್ಟಿಯಾಗುತ್ತಿರುವ ಬಗ್ಗೆ ಉದಾಹರಣೆ ಸಮೇತ ತಿಳಿಸಿದ್ದಾರೆ. → 4

2015ರಲ್ಲಿ ಗೀತಾಂಜಲಿ ಶುರು

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ದೊಡ್ಡದಾಗಿ ಬೆಳೆಯುತ್ತ ಹೋದಂತೆ ಶೈಕ್ಷಣಿಕ ತರಗತಿಗಳ ಒತ್ತಡವೂ ತೀವ್ರವಾಗಿತ್ತು. ಅದರ ನಡುವೆ ಕೆಲವು ವಿದ್ಯಾರ್ಥಿಗಳಿಗೆ ಸಂಗೀತದಲ್ಲಿ ಆಸಕ್ತಿಯಿರುವುದನ್ನು ಗೀತಾ ಅನಂತ್ ಎನ್ನುವವರು ಪತ್ತೆ ಮಾಡಿದರು. 2015ರಲ್ಲಿ ಕೇವಲ 4 ವಿದ್ಯಾರ್ಥಿಗಳು ಸಂಗೀತಾಭ್ಯಾಸ ಶುರು ಮಾಡಿದ್ದು, ಈಗ ಗೀತಾಂಜಲಿ ಐಐಎಸ್‌ಸಿ ಎಂದು ಕರೆಸಿಕೊಂಡಿದೆ. ಇದನ್ನೇ ಭಾನುವಾರ ಮೋದಿ ಮೆಚ್ಚಿ ಮಾತನಾಡಿದ್ದು. ಸಣ್ಣ ಸಂಗೀತ ತರಗತಿಯಾಗಿ ಶುರುವಾದ ಗೀತಾಂಜಲಿ, ಈಗ ಕ್ಯಾಂಪಸ್‌ನ ಸಾಂಸ್ಕೃತಿಕ ಕೇಂದ್ರವಾಗಿದೆ. ಅಲ್ಲಿ 200ಕ್ಕೂ ಅಧಿಕ ಆಸಕ್ತರಿದ್ದಾರೆ ಎಂದಿದ್ದಾರೆ.

ಮೋದಿಗೆ ದುಬೈ ಕನ್ನಡಿಗರ ಕೃತಜ್ಞತೆ

ಯುಎಇ ಹಾಗೂ ಗಲ್ಫ್ ಪ್ರದೇಶದಲ್ಲಿರುವ ಅನಿವಾಸಿ ಭಾರತೀಯರಿಗೆ ಕನ್ನಡ ಭಾಷೆಯನ್ನು ಕಲಿಸಿ, ಪ್ರಚಾರ ಮಾಡುವಲ್ಲಿ ಅಲ್ಲಿನ ಕನ್ನಡ ಪಾಠಶಾಲೆ ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯನ್ನು ಪ್ರಧಾನಿ ಮೋದಿಯವರು ಮೆಚ್ಚಿ, ಅಭಿನಂದಿಸಿರುವುದು ನಮ್ಮೆಲ್ಲರಿಗೂ ಅಪಾರ ಗೌರವ ಮತ್ತು ಹೆಮ್ಮೆಯ ಕ್ಷಣವಾಗಿದೆ ಎಂದು ದುಬೈ ಕನ್ನಡ ಪಾಠಶಾಲೆಯ ಅಧ್ಯಕ್ಷ ಶಶಿಧರ್ ನಾಗರಾಜಪ್ಪ ಹೇಳಿದ್ದಾರೆ. ಈ ಗೌರವವು ಕನ್ನಡ ಪಾಠಶಾಲೆ ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೂ ಅತ್ಯಂತ ಭಾವನಾತ್ಮಕ ಹಾಗೂ ಗರ್ವಭರಿತ ಕ್ಷಣ ಇದು ಎಂದು ಶಶಿಧರ್ ಅವರು ಪ್ರತಿಕ್ರಿಯಿಸಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಕೋಗಿಲು ಲೇಔಟ್ ತೆರವು, ರಾಜ್ಯ ರಾಜಕಾರಣದಲ್ಲಿ ಕೇರಳ ಹಸ್ತಕ್ಷೇಪ



ಸಮಾಚಾರ ಸಣ್ಣದಲ್ಲ

ಬಸ್ ಟಯರ್ ಸ್ಫೋಟ: ವ್ಯಕ್ತಿಗೆ ಗಾಯ

ಬೆಂಗಳೂರು: ಬಿಎಂಟಿಸಿ ಬಸ್ ಟಯರ್ ಸ್ಫೋಟಗೊಂಡು ಒಬ್ಬ ವ್ಯಕ್ತಿ ಗಾಯಗೊಂಡ ಘಟನೆ ನಗರದ ಸಿಂಗಸಂದ್ರದಲ್ಲಿ ನಡೆದಿದೆ. ಬಸ್ ಭಾನುವಾರ ಬೆಳಗ್ಗೆ ಅತ್ತಿಬೆಲೆಯಿಂದ ಮೆಜೆಸ್ಟಿಕ್ ಕಡೆ ಹೊರಟಿತ್ತು. ಈ ವೇಳೆ ಬಸ್‌ನ ಟಯರ್ ಸ್ಫೋಟಗೊಂಡಿದ್ದು, ಟಯರ್ ಬಳಿಯ ಸೀಟ್‌ಗೆ ಹಾನಿಯಾಗಿದೆ. ಅಲ್ಲದೇ ಕೆಳಭಾಗದಲ್ಲಿ ಛಿದ್ರವಾಗಿ ಬಸ್ ತುಂಬ ಧೂಳು ಆವರಿಸಿದೆ. ಕೂದಲೆಳೆ ಅಂತರದಲ್ಲಿ ಭಾರೀ ಅನಾಹುತ ತಪ್ಪಿದಂತಾಗಿದೆ. ಸ್ಫೋಟದಿಂದ ಉಂಟಾದ ಶಬ್ದದಿಂದ ಜನ ಕೆಲಕಾಲ ಕಂಗಾಲಾ ಗಿದ್ದರು. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಕಿರುಕುಳ: ಡೆಲಿವರಿ ಬಾಯ್ ಬಂಧನ

ಬೆಂಗಳೂರು: ಮಾಲ್‌ನಲ್ಲಿ ಕ್ರಿಸ್‌ಮಸ್ ಆಚರಿಸುತ್ತಿದ್ದಾಗ ಯುವತಿಯ ಖಾಸಗಿ ಅಂಗ ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದ ಡೆಲಿವರಿ ಬಾಯ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಗುವಾಹಟಿ ಮೂಲದ ಮನೋಜ್ ಚಾಂದ್(27) ಬಂಧಿತ ಆರೋಪಿ. ಡಿ.25ರಂದು ರಾತ್ರಿ 9:30ರ ಸುಮಾರಿಗೆ ಮಾಲ್‌ನಲ್ಲಿ ಕ್ರಿಸ್‌ಮಸ್ ಆಚರಣೆ ವೇಳೆ ಈ ಘಟನೆ ನಡೆದಿದೆ. ಉದ್ದೇಶಪೂರ್ವಕವಾಗಿ ಯುವತಿಯ ಬಳಿ ಹೋಗಿ, ಖಾಸಗಿ ಅಂಗ ಸ್ಪರ್ಶಿಸಿ ಅಸಭ್ಯವಾಗಿ ವರ್ತಿಸಿ ಪರಾರಿಯಾಗಿದ್ದ. ಯುವತಿ ನೀಡಿದ ದೂರಿನ ಆಧಾರದ ಮೇಲೆ ಮಹಾದೇವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪರಿಶೀಲನೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ವೆಂಕಟರಮಣನಿಗೆ ವಿಶೇಷ ಪೂಜೆ ನಾಳೆ

ಬೆಂಗಳೂರು: ಹೆಸರುಘಟ್ಟ ಮುಖ್ಯರಸ್ತೆ ಸಿಡೇದಹಳ್ಳಿಯ ಸೌಂದರ್ಯ ನಗರದಲ್ಲಿ ಸೌಂದರ್ಯ ಟೆಂಪಲ್ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಶ್ರೀಸೌಂದರ್ಯ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ಡಿ.30 ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜೆಗಳನ್ನು ಆಯೋಜಿಸಿದೆ. ಎಲ್ಲರ ಸಹಕಾರದಿಂದ ಮಂದಿರ ನಿರ್ಮಾಣವಾಗಿದೆ. ದೇವಾಲಯದಲ್ಲಿ ಧರ್ಮ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಮಂಗಳೂರು ಶೈಲಿಯಲ್ಲಿ ಮಂದಿರ ನಿರ್ಮಾಣ ಮಾಡಲಾಗಿದ್ದು, ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜೆಗಳನ್ನು ಆಯೋಜಿಸಿದ್ದೇವೆ. ಭಕ್ತಾಧಿಗಳು ದೇವಾಲಯಕ್ಕೆ ಆಗಮಿಸಿ ಪೂಜಾ ಕೈಂಕರ್ಯ ಗಳಲ್ಲಿ ಭಾಗವಹಿಸುವ ಮೂಲಕ ಭಗವಂತನ ಪ್ರೀತಿಗೆ ಪಾತ್ರರಾಗಬೇಕು ಎಂದು ಟೆಂಪಲ್ ಟ್ರಸ್ಟ್ ಅಧ್ಯಕ್ಷ ಸೌಂದರ್ಯ ಮಂಜಪ್ಪ ಹಾಗೂ ಕುಟುಂಬ ಸದಸ್ಯರು ಮನವಿ ಮಾಡಿದ್ದಾರೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ 66/11ಕೆವಿ ಮಲ್ಲೇಶ್ವರದ ಸಿ-6 ಉಪ ವಿಭಾಗದಲ್ಲಿ ಸೋಮವಾರ ಬೆಳಗ್ಗೆ 10 ರಿಂದ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.ಲೊಟ್ಟೆಗೊಲ್ಲಹಳ್ಳಿ, ಮುನಿಹನುಮಯ್ಯ ಕಾಲೋನಿ, ಸಂಜೀವಪ್ಪ ಕಾಲೋನಿ, ನೇತಾಜಿ ನಗರ, ಫೈಪ್ ಲೈನ್ ರಸ್ತೆ, ಮತ್ತಿಕೆರೆ, ಮೋಹನ್ ಕುಮಾರ್ ನಗರ, ಜೆಪಿ ಪಾರ್ಕ್, ಅಕ್ಕಿಯಪ್ಪ ಉದ್ಯಾನ, ಬಿಕೆ ನಗರ, ಎಲ್ಐಸಿ ಕಾಲೋನಿ, ಪಂಪ ನಗರ, ಮತ್ತಿಕೆರೆ, 1ನೇ ಮುಖ್ಯ ರಸ್ತೆ ಯಶವಂತಪುರ, ಎಚ್‌ಎಂಟಿ ಲೇಔಟ್, ಎಲ್‌ಸಿಆರ್ ಶಾಲಾ ರಸ್ತೆ, ಗೋಕುಲ 1ನೇ ಹಂತ, ಗುರುಮೂರ್ತಿ ರೆಡ್ಡಿ ಕಾಲೋನಿ, ಕೆಎನ್ ವಿಸ್ತರಣೆ, ಮತ್ತಿಕೆರೆ, ಎಸ್‌ಬಿಎಂ ಕಾಲೋನಿ, ಬೃಂದಾವನ ನಗರ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. 66/11ಕೆವಿ ಬ್ಯಾಟರಾಯನಪುರ ಸಬ್‌ಸ್ಟೇಷನ್ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಹೆಬ್ಬಾಳ ವಿಭಾಗದ ಸಿ-8 ಉಪ ವಿಭಾಗದಲ್ಲಿ ಸೋಮವಾರ ಬೆಳಗ್ಗೆ 11 ರಿಂದ ಮಧ್ಯಾಹ್ನ 4 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಜ್ಞಾನೇಶ್ವರಿ ಲೇಔಟ್, ಗುರುದರ್ಶನ ಲೇಔಟ್, ವೆಂಕಟಸ್ವಾಮಪ್ಪ ಲೇಔಟ್, ನಂಜಪ್ಪ ವೃತ್ತ, ಎಲ್‌ಜೆ ಎನ್ ಕ್ಲೇವ್, ಬಸವ ಸಮಿತಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್ಸಿ, ಎಸ್ಟಿ ಸಮಸ್ಯೆ ಬಗೆಹರಿಸದಿದ್ದರೆ ಕ್ರಮ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಗಂಭೀರವಾಗಿ ಪರಿಗಣಿಸದೇ ಇರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಎಚ್ಚರಿಕೆ ನೀಡಿದರು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ನಿಯಂತ್ರಿಸುವ ಕುರಿತು ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿ, ಜಿಲ್ಲೆಯ 6 ಪಂಚಾಯಿತಿಗಳಲ್ಲಿ ಎಸ್‌ಸಿಪಿ, ಟಿಎಸ್‌ಪಿ ಹಣ ದುರುಪಯೋಗ ಸಂಬಂಧ ತನಿಖಾ ತಂಡಗಳನ್ನು ರಚಿಸಲಾಗಿದ್ದು, ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈ ಯೋಜನೆಯ ಹಣ ಅನುದಾನ ಆಯಾ ಸಾಲಿನಲ್ಲಿಯೇ ವೆಚ್ಚವಾಗಿ ಅರ್ಹರಿಗೆ ಸೌಲಭ್ಯ ತಲುಪಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ಪಿಯುಸಿ, ಡಿಪ್ಲೊಮಾ/ಐಟಿಐ, ಡಿಗ್ರಿ ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಮೂಲ ಸೌಕರ್ಯಗಳನ್ನು ಒದಗಿಸಬೇಕು . ಪ್ರತಿ ಎರಡನೇ ಭಾನುವಾರ ದಲಿತರ ಸಭೆಯನ್ನು ಠಾಣಾ ಮಟ್ಟದಲ್ಲಿ ನಡೆಸಿ, ಕುಂದು ಕೊರತೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಂಜಿ ರೋಡ್ ಸುತ್ತಮುತ್ತ 10ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ | ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆಗೆ ಕ್ರಮ

ಹೊಸವರ್ಷಕ್ಕೆ 20 ಸಾವಿರ ಪೊಲೀಸರ ನಿಯೋಜನೆ: ಪರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನ ವಿವಿಧೆಡೆ ನಡೆಯುವ ಹೊಸ ವರ್ಷ ಸಂಭ್ರಮಾಚರಣೆ ವೇಳೆ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಲು ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದರು.

ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ನಗರದಲ್ಲಿ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳು, ಬಂದೋಬಸ್ತ್ ವ್ಯವಸ್ಥೆ ಹಾಗೂ ಸುರಕ್ಷತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದ ಅವರು, ನಗರದಲ್ಲಿ ಹೊಸ ಸಂಭ್ರಮಾಚರಣೆಯ ಕರ್ತವ್ಯಕ್ಕೆ ಒಟ್ಟು 20 ಸಾವಿರ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ಕಾನೂನು ಸುವ್ಯವಸ್ಥೆ 14 ಸಾವಿರ ಪೊಲೀಸರು, 2500 ಟ್ರಾಫಿಕ್ ಪೊಲೀಸರು, 88 ಕೆಎಸ್‌ಆರ್‌ಪಿ ತುಕಡಿ, 21 ಸಿಎಆರ್, 266 ಹೊಯ್ಸಳ ವಾಹನ, 250 ಕೋಬ್ರ ವಾಹನಗಳನ್ನು ನಿಯೋಜಿಸಲಾಗುತ್ತಿದೆ. 400 ಟ್ರಾಫಿಕ್ ವಾರ್ಡನ್‌ಗಳನ್ನು ನಿಯೋಜಿಸಲಾಗಿದೆ. ಜನ ದಟ್ಟಣೆ ನಿಯಂತ್ರಿಸಲು ವಾಟರ್ ಜೆಟ್ ಸೇರಿದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದ್ದು, ಸಿವಿಲ್ ಡಿಫೆನ್ಸ್, ಹೋಮ್ ಗಾರ್ಡ್ಸ್ ಸೇರಿದಂತೆ ಒಟ್ಟು 20 ಸಾವಿರ ಪೊಲೀಸರನ್ನು ನಿಯೋಜಿಸಲಾಗುವುದು ಎಂದು ವಿವರಿಸಿದರು. ಹೊಸ ವರ್ಷದ ಆಚರಣೆಯಲ್ಲಿ ಹೆಚ್ಚಿನ ಜನ ಭಾಗವಹಿಸುತ್ತಿದ್ದಾರೆ. ಕಳೆದ ವರ್ಷ 8 ಲಕ್ಷಕ್ಕು ಹೆಚ್ಚು ಜನರು ಸಂಭ್ರಮಾಚರಣೆಗಳಲ್ಲಿ ಭಾಗವಹಿಸಿದ್ದರು. ಎಂ.ಜಿ.ರಸ್ತೆ, ಬ್ರಿಗೇಡ್ ರೋಡ್, ಇಂದಿರಾನಗರ, ಕೋರಮಂಗಲ, ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ರಸ್ತೆಯನ್ನು ಹೆಚ್ಚು ಜನ ಸೇರುವ ಸ್ಥಳಗಳೆಂದು ಗುರುತಿಸಲಾಗಿದೆ. ಹಿಂದಿನ ವರ್ಷದ ಅನುಭವದ ಮೇಲೆ ಈ ಸ್ಥಳಗಳನ್ನು ಗುರುತಿಸಲಾಗಿದೆ. ಹಿಂದಿನ ವರ್ಷಕ್ಕಿಂತ ಹೆಚ್ಚು ಜನ ಸೇರಬಹುದು ಎಂದು ಅಂದಾಜಿಸಲಾಗಿದ್ದು, ಸುಮಾರು 10 ಲಕ್ಷಕ್ಕು ಹೆಚ್ಚು ಜನ ಸೇರುವ ಸಾಧ್ಯತೆ ಇದೆ ಎಂದರು.

ಹೊಸ ವರ್ಷಾಚರಣೆ ಆಗಮನದ ಹಿನ್ನೆಲೆ ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಗೃಹ ಸಚಿವ ಜಿ.ಪರಮೇಶ್ವರ್ ಸಭೆ ನಡೆಸಿದರು.

ಜನರು ಸುರಕ್ಷಿತವಾಗಿ ಮನೆಗಳಿಗೆ ಹೋಗಲು ಅನುವು ಮಾಡಿಕೊಡಲಾಗುವುದು. ಬಾರ್ ಆ್ಯಂಡ್ ರೆಸ್ಟೋರೆಂಟ್, ಮೆಟ್ರೋ ಕಾರಿಡಾರ್, ಮನೋರಂಜನಾ ಸ್ಥಳಗಳಲ್ಲಿ ಹೆಚ್ಚಿನ ರೀತಿಯಲ್ಲಿ ಯುವಕ-ಯುವತಿಯರು ಸೇರುತ್ತಾರೆ. ಇದಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅವಶ್ಯಕತೆ ಇರುವ ಸ್ಥಳಗಳಲ್ಲಿ ವಾಚ್ ಟವರ್, 180 ಕಡೆ ಫೋಕಸ್ ಲೈಟ್‌ಗಳನ್ನು ಅಳವಡಿಸಲಾಗುವುದು.

ಸಾರ್ವಜನಿಕರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಲು ಪೊಲೀಸ್ ಆ್ಯಕ್ಸಿಸ್ ಕಂಟ್ರೋಲ್, ವಾಹನ ತಪಾಸಣೆ ವ್ಯವಸ್ಥೆ ಮಾಡಲಾಗಿದೆ. ಟ್ಯಾಕ್ಸಿಗಳು ಸಿಗುವುದಿಲ್ಲ, ಅಂತವರು ಸುರಕ್ಷಿತವಾಗಿ ಮನೆಗಳಿಗೆ ಹೋಗಲು ಎಂಟು ಕಡೆ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಸಂಭ್ರಮಾಚರಣೆ ನಡೆಯುವ ಸ್ಥಳಗಳಲ್ಲಿ 250 ಕಡೆ ತಾತ್ಕಲಿಕವಾಗಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸೇಫ್ಟಿ ಶೆಲ್ಟರ್‌ಗಳು, ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗುತ್ತಿದೆ. ಜನದಟ್ಟಣೆಯ ಮೇಲೆ ಡ್ರೋನ್ ಕ್ಯಾಮೆರಾಗಳಿಂದ ಪೊಲೀಸರು ನಿಗಾವಹಿಸಲಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ ಅವರು, ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ರವರು, ಜಂಟಿ ಪೊಲೀಸ್ ಆಯುಕ್ತರುಗಳಾದ ರಮೇಶ್ ಬಾನೋಥ್, ವಂಶಿಕೃಷ್ಣ, ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಅಜಯ್ ಹಿಲೋರಿ, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಹಾಗೂ ಎಲ್ಲ ವಿಭಾಗಗಳ ಡಿಸಿಪಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

> ಉಗ್ರರ ದಾಳಿಯ ದೃಷ್ಟಿಯಿಂದಲೂ ಹೆಚ್ಚಿನ ಭದ್ರತೆಗೆ ಒತ್ತು ನೀಡಲಾಗಿದೆ. ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಪೊಲೀಸರು ಹೆಚ್ಚಿನ ಮಾಹಿತಿ ಸಂಗ್ರಹಿಸಿ, ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಗಮನ ಹರಿಸಲಾಗಿದೆ. ಮುಖ ಚರ್ಯೆ ಗುರುತಿಸುವ ಎಐ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ. ಅಪರಾಧ ಚಟುವಟಿಕೆ ಹಿನ್ನೆಲೆಯುಳ್ಳವರ ಮಾಹಿತಿ ಫೇಸ್ ರೆಕಾಗ್ನೈಸೇಷನ್ ಎಐ ಕ್ಯಾಮೆರಾದಿಂದ ಗೊತ್ತಾಗಲಿದೆ. ಅಂಥವರು ಕಂಡು ಬಂದರೆ ಕೂಡಲೇ ಎಚ್ಚರಿಕೆ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ ಅನುಕೂಲವಾಗುತ್ತದೆ.
>
> - ಡಾ.ಜಿ. ಪರಮೇಶ್ವರ, ಗೃಹ ಸಚಿವ

ಡಿಜಿಗೆ ಸಚಿವ ಪರಮೇಶ್ವರ್ ನಿರ್ದೇಶನಗಳು

- ಬೀಚ್, ಮಾಲ್, ಬಾರ್ ಹಾಗೂ ಹೆದ್ದಾರಿಗಳಂತ ಹಾಟ್ ಸ್ಪಾಟ್‌ಗಳಲ್ಲಿ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಬೇಕು.
- ವಾಹನ, ಕಾಲ್ನಡಿಗೆ, ಬೈಕ್ ಮತ್ತು ಅಶ್ವಾರೋಹಿ ಗಸ್ತುಗಳನ್ನು ಹೆಚ್ಚಿಸಿ
- ಎಲ್ಲ ಚೆಕ್ ಪೋಸ್ಟ್‌ಗಳಲ್ಲಿ ವಿಡಿಯೊಗ್ರಾಫಿ ಮಾಡಿಕೊಳ್ಳಬೇಕು.
- ಡ್ರಿಂಕ್ ಆ್ಯಂಡ್ ಡ್ರೈವ್ ವಿರುದ್ಧ ಶೂನ್ಯ ಸಹಿಷ್ಣುತೆ ಪಾಲಿಸಿ; ಕೂಡಲೇ ಎಫ್‌ಐಆರ್ ದಾಖಲಿಸಿ, ವಾಹನ ಜಪ್ತಿ ಮಾಡಬೇಕು.
- ಚುಡಾಯಿಸುವಿಕೆಯನ್ನು ತಡೆಯಲು ಮಹಿಳಾ ಪೊಲೀಸ್ ತಂಡಗಳನ್ನು ನಿಯೋಜಿಸಬೇಕು.
- ಡ್ರೋನ್, ಸಿಸಿಟಿವಿ ಮತ್ತು ಕೃತಕ ಬುದ್ಧಿಮತ್ತೆ ಬಳಸಿ ಜನಸಂದಣಿಯ ಮೇಲೆ ನಿಗಾವಹಿಸಿ.
- ಧ್ವನಿವರ್ಧಕಗಳ ಮೂಲಕ ಜನರನ್ನು ಶಾಂತಗೊಳಿಸಲು ಅಥವಾ ಮಾರ್ಗ ಬದಲಿಸಲು ಸೂಚನೆ ನೀಡುವುದು.
- ಆಂಬ್ಯುಲೆನ್ಸ್, ಅಗ್ನಿಶಾಮಕ ಮತ್ತು ವೈದ್ಯಕೀಯ ತಂಡಗಳನ್ನು ಸಿದ್ಧ ಸ್ಥಿತಿಯಲ್ಲಿಡುವುದು.
- ಕರ್ತವ್ಯದಲ್ಲಿರುವ ಎಲ್ಲಾ ಸಿಬ್ಬಂದಿ ಸೂರ್ಯಾಸ್ತದ ಬಳಿಕ ಕಡ್ಡಾಯವಾಗಿ ಪ್ರತಿಫಲಕ ಜಾಕೆಟ್ ಧರಿಸಬೇಕು.
- ಜನಸಮೂಹದ ಮೇಲೆ ನಿಗಾ ಇಡಲು ಎತ್ತರದ ವಾಚ್ ಟವರ್‌ಗಳನ್ನು ನಿರ್ಮಿಸಬೇಕು.
- ಈ ನಿರ್ದೇಶನಗಳನ್ನು ಪಾಲಿಸದಿದ್ದರೆ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮ

ಹೀಟ್ ಮ್ಯಾಪ್ ಪರಿಚಯ

ಜನದಟ್ಟನೆ ಮೇಲೆ ನಿಗಾವಹಿಸಲು ಇದೇ ಮೊದಲ ಬಾರಿಗೆ ಹೀಟ್ ಮ್ಯಾಚ್ ಪರಿಚಯಿಸಲಾಗಿದೆ. ಅತಿ ಹೆಚ್ಚು ಜನ ಸೇರಿರುವ ಸ್ಥಳಗಳನ್ನು ಕೆಂಪು ಬಣ್ಣದಿಂದ ಗುರುತಿಸಲಾಗುತ್ತದೆ. ಹಳದಿ ಬಣ್ಣದಿಂದ ಗುರುತಿಸುವ ಸ್ಥಳಗಳನ್ನು ಹೆಚ್ಚಿನ ಜನ ಸೇರುತ್ತಿರುವುದನ್ನು ಸೂಚಿಸುತ್ತದೆ. ಹಸಿರು ಬಣ್ಣ ಇರುವುದು ಕಡಿಮೆ ಜನ ಇರುವುದನ್ನು ಗುರುತಿಸಬಹುದು. ಇದನ್ನು ಕಮಾಂಡ್ ಕೇಂದ್ರದಿಂದ ನಿಗಾವಹಿಸಲಾಗುತ್ತದೆ. ಇದನ್ನು ಆಧರಿಸಿ ಪೊಲೀಸರು ಅಗತ್ಯ ಕ್ರಮ ಕೈಗೊಳ್ಳಲಿದ್ದಾರೆ. ಇದೇ ರೀತಿ ಆಂಬುಲೆನ್ಸ್, ವಾಹನಗಳು, ಟ್ರಾಫಿಕ್ ಸಮಸ್ಯೆ ಸೇರಿದಂತೆ ಜನಗಳಿಗೆ ಮಾಹಿತಿ ಸಿಗಲು ಕ್ಯೂಆರ್ ಕೋಡ್ ಪರಿಚಯಿಸಲಾಗಿದೆ. ಕ್ಯೂಆರ್ ಕೋಡ್ ಮೂಲಕ ಮಾಹಿತಿ ಪಡೆಯಬಹುದು ಎಂದು ಸಚಿವ ಪರಮೇಶ್ವರ್ ವಿವರಿಸಿದರು. ಹೊಸ ವರ್ಷವನ್ನು ಜವಾಬ್ದಾರಿಯಿಂದ ಸಂಭ್ರಮಾಚರಣೆ ಮಾಡುವಂತೆ ಸಾರ್ವಜನಿಕರಿಗೆ ಮನವಿ ಮಾಡಲಾಗುವುದು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಲಾಗುತ್ತಿದೆ. ನಿಮ್ಮ ಮನೆಯ ಯುವಕರು, ಮನೆಯಿಂದ ಹೊರ ಹೋದ ಬಳಿಕ ವಾಪಸ್ ಮನೆಗೆ ಬರುವವರೆಗೂ ಅವರ ಬಗ್ಗೆ ನಿಗಾವಹಿಸಬೇಕು ಎಂದು ಸಾರ್ವಜನಿಕರಿಗೆ ಮನವಿ ಮಾಡಿದರು.

ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಹರ್ಷಿತಾ ಸೇರಿದಂತೆ ವಿವಿಧ ಸಾಧಕರಿಗೆ 'ಗಾಂಧಿ ಪ್ರಿಯ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಈ ವೇಳೆ ತ್ಯಾಗರಾಜ ಕೋಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಸೇರಿದಂತೆ ಹಲವರಿದ್ದರು.

ಕೆಎಸ್‌ಆರ್‌ಟಿಸಿಗೆ ಮತ್ತೊಂದು ಗರಿ

ಬೆಂಗಳೂರು: ಮೋಟಾರಿಂಗ್ ವರ್ಲ್ಡ್ ಮ್ಯಾಗಝೀನ್ ಆಫ್ ಡೆಲ್ಲಿ ಪ್ರೆಸ್ ಗ್ರೂಪ್ ಆಯೋಜಿಸಿದ ಮೋಟಾರಿಂಗ್ ವರ್ಲ್ಡ್ ಗ್ರೀನ್ ಮೊಬಿಲಿಟಿ ಅವಾರ್ಡ್ಸ್-2025ನಲ್ಲಿ ಕೆಎಸ್‌ಆರ್‌ಟಿಸಿಯು ನಾಲ್ಕು ಪ್ರಶಸ್ತಿಯನ್ನು ಗಳಿಸಿಕೊಂಡಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದು, ಸಾರಿಗೆ ಇಲಾಖೆಯ ಅಪರ ಸಾರಿಗೆ ಆಯುಕ್ತ ಜೆ. ಜ್ಞಾನೇಂದ್ರ ಕುಮಾರ್ ಪ್ರಶಸ್ತಿಯನ್ನು ಸ್ವೀಕರಿಸಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟ ಹವಾಮಾನ ನೀತಿ ತಜ್ಞ ಪ್ರಶಸ್ತಿಗಳನ್ನು ಆಯ್ಕೆ ಮಾಡಲಾಗಿದ್ದು, ಕೆಎಸ್‌ಆರ್‌ಟಿಸಿಯು ಬೆಸ್ಟ್ ಸ್ಟೇಟ್ ಫಾರ್ ಟೂ ವೀಲ್ಲರ್ ಇವಿ ಅಡಾಪ್ಷನ್ ಹಾಗೂ ಬೆಸ್ಟ್ ಸ್ಟೇಟ್ ಫಾರ್ ಫೋರ್ ವೀಲ್ಹರ್ ಇವಿ ಅಡಾಪ್ಷನ್‌ನಲ್ಲಿ, ಬೆಸ್ಟ್ ಸಿಟಿ ಫಾರ್ ಇವಿ ಬಸ್ ಅಡಾಪ್ಷನ್‌ನಲ್ಲಿ ಬೆಳ್ಳಿ ಪ್ರಶಸ್ತಿಯನ್ನು ಮತ್ತು ಬೆಸ್ಟ್ ಸ್ಟೇಟ್ ಫಾರ್ ಇವಿ ಚಾರ್ಜಿಂಗ್ ಇನ್ಫ್ರಾಸ್ಟ್ರಕ್ಚರ್ ಮತ್ತು ಬೆಸ್ಕಾಂ ಗೆ ಚಿನ್ನದ ಪ್ರಶಸ್ತಿಯನ್ನು ಗಳಿಸಿಕೊಂಡಿದೆ.

ಕೇಂದ್ರ, ರಸ್ತೆ ಸಾರಿಗೆ, ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಂದ ಸಾರಿಗೆ ಇಲಾಖೆ ಅಪರ ಸಾರಿಗೆ ಆಯುಕ್ತ ಜೆ.ಜ್ಞಾನೇಂದ್ರ ಕುಮಾರ್ ಪ್ರಶಸ್ತಿ ಸ್ವೀಕರಿಸಿದರು.

ಯುವತಿಯಿಂದ 37 ಲಕ್ಷ ಹಣ ಪಡೆದಿದ್ದ ಆರೋಪಿಯ ಬಂಧನ

ಪ್ರೀತಿಯ ಹೆಸರಲ್ಲಿ ಯುವತಿಗೆ ವಂಚನೆ

ಬೆಂಗಳೂರು: ರಾಜ್ಯದಲ್ಲಿ ಮತ್ತೊಂದು ಲವ್ ಸೆಕ್ಸ್ ದೋಖಾ ಆರೋಪ ಪ್ರಕರಣ ಸದ್ದು ಮಾಡಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತ ಯುವತಿಯನ್ನು ಬೆದರಿಸಿ ಆಕೆಯಿಂದ ಲಕ್ಷಾಂತರ ಹಣ ರು. ಪಡೆದಿರುವ ಜತೆಗೆ, ಆಕೆಯ ಮನೆಯಲ್ಲಿದ್ದ ಚಿನ್ನಾಭರಣವನ್ನು ಆರೋಪಿ ಕದ್ದಿದ್ದ. ಅಲ್ಲದೆ, ಯುವತಿಯ ಸಹೋದರಿ ಮೇಲೂ ಲೈಂಗಿಕ ದೌರ್ಜನ್ಯವನ್ನು ಎಸಗಿದ್ದ ಎನ್ನಲಾಗಿದೆ.

ಬೆಂಗಳೂರಿನ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಆರೋಪಿ ಶುಭಾಂಶು ಶುಕ್ಲಾ (27)ನನ್ನು ಪೊಲೀಸರು ಬಂಧಿಸಿದ್ದಾರೆ. ಮೊದಲು ಸಂತ್ರಸ್ತೆಯ ಸಹೋದರಿಯಾದ ಅಪ್ರಾಪ್ತೆಯನ್ನು ಪರಿಚಯ ಮಾಡಿಕೊಂಡಿದ್ದ. ಆಕೆಯ ಕುಟುಂಬಕ್ಕೂ ಬಲ್ಲವನಾಗಿದ್ದ. ಬಳಿಕ ಬಾಲಕಿ ಸಹೋದರಿಯನ್ನು ಪ್ರೀತಿ ಬಲೆಯಲ್ಲಿ ಬೀಳಿಸಿದ್ದ ಈತ, ಆಕೆಯನ್ನು ತನ್ನ ಜತೆ ಕರೆದುಕೊಂಡು ಹೋಗಿದ್ದ. ಆರೋಪಿಯ ಮಾತು ಕೇಳಿ ಮುಂಬೈನಲ್ಲಿ ಕೆಲಸ ಸಿಕ್ಕಿದೆ ಎಂದು ಯುವತಿ ಮನೆಯವರಿಗೆ ನಂಬಿ ಈತನೊಂದಿಗೆ ತೆರಳಿದ್ದಳು. ನಂತರ ಫ್ಲ್ಯಾಟ್‌ನಲ್ಲಿ ಶುಭಾಂಶು ಮತ್ತು ಯುವತಿ ಲಿವಿನ್ ರಿಲೇಷನ್‌ಶಿಪ್‌ನಲ್ಲಿದ್ದರು ಎನ್ನಲಾಗಿದೆ.

ಸಮಯ ಕಳೆದಂತೆ ಶುಭಾಂಶುಗೆ ಮೊದಲೇ ಮದುವೆಯಾಗಿರುವ ಬಗ್ಗೆ ಸಂತ್ರಸ್ತೆಗೆ ಗೊತ್ತಾಗಿದೆ. ಈ ಬಗ್ಗೆ ವಿಚಾರಿಸಿದಾಗ ಆಕೆಯ ಜತೆ ತಾನು ವಿಚ್ಛೇದನ ಪಡೆದುಕೊಳ್ಳುತ್ತೇನೆ. ನಿನ್ನ ಮದುವೆಯಾಗಿ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ನಂಬಿಸಿದ್ದ. ಶುಭಾಂಶು ಪತ್ನಿಯೂ ಸಂತ್ರಸ್ತೆ ಜತೆ ಮಾತಾಡಿದ್ದು ತಾನು ಆತನಿಗೆ ಡಿವೋರ್ಸ್ ನೀಡುವುದಾಗಿ ತಿಳಿಸಿದ್ದಳು. ಹೀಗಾಗಿ ಶುಭಾಂಶು ಮೇಲೆ ಭರವಸೆ ಇಟ್ಟು ಸಂತ್ರಸ್ತೆ ಸಂಬಂಧ ಮುಂದುವರಿಸಿದ್ದಳು. ಆದರೆ, ಮತ್ತೊಮ್ಮೆ ಅಪ್ರಾಪ್ತ ಯುವತಿಗೂ ಶುಭಾಂಶು ಇದೇ ರೀತಿ ವಂಚಿಸುತ್ತಿರುವುದು ಸಂತ್ರಸ್ತೆಗೆ ತಿಳಿದುಬಂದಿದ್ದು, ಆಕೆ ಮುಂದೆ ಈತನ ಬಂಡವಾಳವನ್ನು ಸಂತ್ರಸ್ತೆ ಬಯಲು ಮಾಡಿದ್ದಳು. ಆ ಬಳಿಕ ಶುಭಾಂಶು ಚಿತ್ರಹಿಂಸೆ ಆರಂಭವಾಗಿತ್ತು ಎಂದು ದೂರಲಾಗಿದೆ.

559 ಗ್ರಾಂ ಚಿನ್ನಾಭರಣ ಕಳವು

ಸಂತ್ರಸ್ತ ಯುವತಿ ಬಳಿ 37 ಲಕ್ಷ ಹಣವನ್ನೂ ಪಡೆದಿದ್ದ ಆರೋಪಿ ಶುಭಾಂಶು, ಯುವತಿ ಮನೆಯಲ್ಲಿ 559 ಗ್ರಾಂ ಚಿನ್ನಾಭರಣ ಸಹ ಕದ್ದಿದ್ದ. ಈ ಬಗ್ಗೆ ದೂರು ನೀಡಿದರೆ ಸಾಯಿಸುತ್ತೇನೆ ಎಂದು ಬೆದರಿಸಿದ್ದ. ಆ ಬಳಿಕ ಸಂತ್ರಸ್ತೆ ಚಿತ್ರಹಿಂಸೆ ತಾಳಲಾರದೆ ಶುಭಾಂಶುನನ್ನು ಬಿಟ್ಟು ಬಂದಿದ್ದಳು. ಸಂತ್ರಸ್ತೆಯ ಪರಿಚಯಕ್ಕೆ ಮೂಲ ಕಾರಣವಾಗಿದ್ದ ಆಕೆಯ ಅಪ್ರಾಪ್ತ ಸಹೋದರಿಯ ಮೇಲೂ ಶುಭಾಂಶು ಅತ್ಯಾಚಾರ ಎಸಗಿದ್ದಾನೆ ಎನ್ನಲಾಗಿದೆ. ಗ್ರೂಪ್ ಸ್ಟಡಿ ಮಾಡಲು ತೆರಳುತ್ತಿದ್ದಾಗ ಪರಿಚಯವಾಗಿದ್ದ ಶುಭಾಂಶು, ತನ್ನ ಮೇಲೆ ಅತ್ಯಾಚಾರ ಎಸಗಿದ್ದಾನೆ. ನಾನು ಕರೆದಾಗೆಲ್ಲ ಬರಬೇಕು ಎಂದು ಬೆದರಿಸಿದ್ದ ಆತ, ನಿನ್ನ ಮನೆಯವರನ್ನು ನನಗೆ ಪರಿಚಯ ಮಾಡಿಸು ಎಂದಿದ್ದ ಎಂದು ಬೆದರಿಕೆ ಹಾಕಿದ್ದ ಎಂದೂ ದೂರು ದಾಖಲಾಗಿದೆ.

ಮದ್ಯ ಸೇವಿಸಿ ಕಾರು ಚಾಲನೆ: ಪಾದಚಾರಿ ಸಾವು

ಬೆಂಗಳೂರು: ಕುಡಿದ ಮತ್ತಿನಲ್ಲಿದ್ದ ವಿದ್ಯಾರ್ಥಿಯೊಬ್ಬ ವೇಗವಾಗಿ, ಅಡ್ಡಾದಿಡ್ಡಿ ಕಾರು ಚಾಲನೆ ಮಾಡಿದ್ದರಿಂದ ಸಂಭವಿಸಿದ ಅಪಘಾತದಲ್ಲಿ ಪಾದಚಾರಿ ಮೃತಪಟ್ಟಿರುವ ಘಟನೆ ನಗರದ ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್-7ರಲ್ಲಿ ಶನಿವಾರ ರಾತ್ರಿ ನಡೆದಿದೆ.ಮೃತ ವ್ಯಕ್ತಿಯನ್ನು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಿವಾಸಿ ಸಂತೋಷ್ (28) ಎಂದು ಗುರುತಿಸಲಾಗಿದೆ. ಹೋಟೆಲ್‌ವೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಅವರು, ರಾಜೀವ್ ಗಾಂಧಿ ನಗರದ ಪಿಜಿಯಲ್ಲಿದ್ದರು.

ಎಚ್‌ಎಸ್‌ಆರ್ ಲೇಔಟ್ ಸಂಚಾರಿ ಪೊಲೀಸರ ಮಾಹಿತಿ ಪ್ರಕಾರ, ಲೇಔಟ್‌ನ 27ನೇ ಕ್ರಾಸ್ ಬಳಿ ತಡರಾತ್ರಿ ಘಟನೆ ನಡೆದಿದೆ. ಆ ಸಂದರ್ಭದಲ್ಲಿ ಸಂತೋಷ್ ಅವರು, ಸ್ನೇಹಿತರೊಂದಿಗೆ ಊಟ ಮುಗಿಸಿ ಪಿಜಿಗೆ ನಡೆದುಕೊಂಡು ಹೋಗುತ್ತಿದ್ದರು. 23 ವರ್ಷದ ಅಬ್ದುಲ್ ರೆಹಮಾನ್ ಎಂಬವರು ಅಡ್ಡಾದಿಡ್ಡಿಯಾಗಿ ಚಲಾಯಿಸಿಕೊಂಡು ಬಂದ ಆಡಿ ಕಾರು ಸಂತೋಷ್ ಅವರಿಗೆ ಗುದ್ದಿದೆ. ಡಿಕ್ಕಿಯ ರಭಸಕ್ಕೆ ಸಂತೋಷ್ ಅವರು ಸಾಕಷ್ಟು ದೂರ ಗಾಳಿಯಲ್ಲಿ ಹಾರಿ ಹೋಗಿ ಬಿದ್ದಿದ್ದರು. ಆದರೂ, ಕಾರು ನಿಲ್ಲಿಸದ ಆರೋಪಿ, ರಸ್ತೆ ಬದಿ ನಿಂತಿದ್ದ ಮತ್ತೆರಡು ವಾಹನಗಳಿಗೂ ಗುದ್ದಿದ್ದ. ಗಂಭೀರವಾಗಿ ಗಾಯಗೊಂಡಿದ್ದ ಸಂತೋಷ್ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ.

ಆರೋಪಿ ಬಿಬಿಎ ವಿದ್ಯಾರ್ಥಿ

ಆರೋಪಿ ಅಬ್ದುಲ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಬಿಬಿಎ ವಿದ್ಯಾರ್ಥಿಯಾಗಿರುವ ಆತ, ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್-7 ನಿವಾಸಿ. ಕಾರು, ಆರೋಪಿಯ ತಾಯಿಯ ಹೆಸರಿನಲ್ಲಿದೆ. ಅಪಘಾತದ ವೇಳೆ ಅಬ್ದುಲ್ ಜತೆ, ಆತನ ಸ್ನೇಹಿತನೂ ಇದ್ದ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಆರೋಪಿ ಅಜಾಗರೂಕತೆಯಿಂದ ವಾಹನ ಚಲಾಯಿಸಿದ್ದ. ಮದ್ಯ ಸೇವನೆ ಮಟ್ಟವನ್ನು ಖಚಿತಪಡಿಸಿಕೊಳ್ಳಲು ರಕ್ತದ ಮಾದರಿಯನ್ನು ಪರೀಕ್ಷೆಗೆ ಕಳುಹಿಸಿದ್ದೇವೆ. ಆತನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಹಾಗೂ ಮೋಟಾರು ವಾಹನ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳಡಿಯಲ್ಲಿ ಪ್ರಕರಣ ದಾಖಲಿಕೊಂಡಿದ್ದೇವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸೂರಜ್ ಕುಟುಂಬದಿಂದ ನಾಗ್ಪುರದಲ್ಲಿ ದೂರು ದಾಖಲು

ಸೂರಜ್‌ಗೆ ಗಾನವಿ ಪೋಷಕರಿಂದ ಕಿರುಕುಳ

ಬೆಂಗಳೂರು: ಬೆಂಗಳೂರಿನ ನವವಿವಾಹಿತೆ ಗಾನವಿ ಹಾಗೂ ಆಕೆಯ ಪತಿ ಸೂರಜ್ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ದಿನೆದಿನೇ ಹೊಸ ತಿರುವು ಪಡೆಯುತ್ತಿದೆ. ಗಾನವಿ ಸಾವಿನ ಬಳಿಕ ಶನಿವಾರ ನಾಗ್ಪುರದಲ್ಲಿ ಪತಿ ಸೂರಜ್ ಪ್ರಾಣ ಕಳೆದುಕೊಂಡಿದ್ದರು. ಇದೀಗ ಸೂರಜ್ ಸಹೋದರ ಗಾನವಿ ಪೋಷಕರ ವಿರುದ್ಧ ಮಹಾ ರಾಷ್ಟ್ರದಲ್ಲಿ ಅಧಿಕೃತ ದೂರು ದಾಖಲಿಸಿದ್ದಾರೆ. ಸೂರಜ್ ಸಾವಿನ ಬಳಿಕ ಅವರ ಸಹೋದರ ನಾಗ್ಪುರದ ಸೋನೆಗಾವ್ ಪೊಲೀಸ್ ಠಾಣೆಗೆ ತೆರಳಿ, ನನ್ನ ತಮ್ಮ ಸೂರಜ್ ಸಾವಿಗೆ ಗಾನವಿ ಕುಟುಂಬಸ್ಥರೇ ನೇರ ಕಾರಣ ಎಂದು ಆರೋಪಿಸಿದ್ದಾರೆ. ಗಾನವಿ ಕಡೆಯವರು ನಿರಂತರವಾಗಿ ಬೆದರಿಕೆ ಹಾಕಿದ್ದರು, ಅವಮಾನ ಹಾಗೂ ಮಾನಸಿಕ ಕಿರುಕುಳ ನೀಡಿದ್ದರು. ಅದನ್ನೇ ತಾಳಲಾರದೆ ಸೂರಜ್ ಈ ತೀರ್ಮಾನಕ್ಕೆ ಬಂದಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಗಾನವಿಗೊಂದು ಲವ್ ಸ್ಟೋರಿ: ಸೂರಜ್ ಕುಟುಂಬಸ್ಥರು

ಸೂರಜ್ ಜತೆ ಗಾನವಿ ಹಸೆಮಣೆ ಏರುವ ಮುನ್ನ ಹರ್ಷಾ ಎಂಬಾತನನ್ನು ಪ್ರೀತಿ ಮಾಡ್ತಿದ್ದಳು. ಆತನನ್ನೇ ಮದುವೆಯಾ ಗಲು ಬಯಸಿದ್ದಳು ಎಂದು ಸೂರಜ್ ಕುಟುಂಬಸ್ಥರು ಆರೋಪಿಸಿದ್ದಾರೆ. ಶ್ರೀಲಂಕಾಗೆ ಹನಿಮೂನ್‌ಗೆಂದು ಹೋಗಿದ್ದ ಈ ಜೋಡಿ ವಾಪಸ್ ಆಗಿದ್ದು ಕೂಡ ಇದೇ ಕಾರಣಕ್ಕೆ ಹನಿಮೂನ್‌ನಲ್ಲಿ ತನ್ನ ಲವ್ ಸ್ಟೋರಿ ಬಗ್ಗೆ ಹೇಳಿದ್ದಳು. ಹೀಗಾಗಿಯೇ ಹನಿಮೂನ್‌ಗೆ ಹೋಗಿದ್ದವರು ಅರ್ಧಕ್ಕೆ ವಾಪಸ್ ಆಗಿದ್ದರು ಎಂದು ಸೂರಜ್ ಕುಟುಂಬ ಸ್ಥರು ಆರೋಪ ಮಾಡಿದ್ದಾರೆ. ಈ ಸಂಬಂಧ ಸೂರಜ್ ಕುಟುಂಬದವರು ಈಗಾಗಲೇ ಬೆಂಗಳೂರಿನ ವಿದ್ಯಾರಣ್ಯಪುರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸದ್ಯ ನಾಗಪುರ ಪೊಲೀಸರು ತನಿಖೆ ನಡೆಸುತ್ತಿದ್ದು, ಪ್ರಕರಣವನ್ನು ಮುಂದಿನ ಹಂತದಲ್ಲಿ ಬೆಂಗಳೂರಿಗೆ ವರ್ಗಾಯಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಎರಡೂ ರಾಜ್ಯಗಳ ಪೊಲೀಸರು ಪ್ರಕರಣದ ಮೇಲೆ ನಿಗಾ ವಹಿಸಿದ್ದಾರೆ.

ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿದ ಡಾ ಜಿ.ಆರ್.ಕೃಷ್ಣಪ್ಪ

ಸೆಂಟ್ ಫ್ಲವರ್ಸ್ ಶಾಲೆಗೆ ಉತ್ತಮ ಶಿಕ್ಷಣದ ಉದ್ದೇಶ

ಬೆಂಗಳೂರು: ವಿದ್ಯಾದಾನ ಮಹಾದಾನ ಎಂಬುದನ್ನು ಅರಿತು ಚಂದ್ರಾಲೇಔಟ್ ಬಡಾವಣೆಯಲ್ಲಿ ಮಧ್ಯಮ ವರ್ಗ ದವರು, ಕೂಲಿಕಾರರು, ಆಟೋಚಾ ಲಕರು, ವ್ಯಾಪಾರಸ್ಥರ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಬೇಕೆಂಬ ಧ್ಯೇಯ ದೊಂದಿಗೆ ಸೆಂಟ್ ಫ್ಲವರ್ಸ್ ಆಂಗ್ಲ ಮಾಧ್ಯಮ ಶಾಲೆಯನ್ನು ಸ್ಥಾಪಿಸಲಾಯಿತು ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ ಜಿ.ಆರ್.ಕೃಷ್ಣಪ್ಪ ಹೇಳಿದರು.

ನಗರದ ಚಂದ್ರಾಲೇ ಔಟ್,ವಿಜಯನಗರದಲ್ಲಿರುವ ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್‌ನ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಶಿಕ್ಷಕರ ಶ್ರಮದಿಂದ ಪ್ರತಿವರ್ಷ ನಮ್ಮ ವಿದ್ಯಾರ್ಥಿಗಳು ಉತ್ತಮ ರ‍್ಯಾಂಕ್ ಗಳಿಸುತ್ತಿರುವುದು, ಉತ್ತಮ ಶಿಕ್ಷಣ ನೀಡುತ್ತಿರುವುದಕ್ಕೆ ನಮಗೆ ತೃಪ್ತಿ ತಂದಿದೆ. ಇನ್ನೂ ಹೆಚ್ಚಿನ ವಿದ್ಯಾಭ್ಯಾಸವನ್ನು ಮಕ್ಕಳಿಗೆ ನೀಡಲು ನಮ್ಮ ಸಂಸ್ಥೆ ಬದ್ಧವಾಗಿದೆ ಎಂದರು. ವ್ಯವಸ್ಥಾಪಕ ನಿರ್ದೇಶಕ ದರ್ಶನ್ ಕೃಷ್ಣ ಮಾತನಾಡಿ, ಅಧ್ಯಕ್ಷರಿಗೆ ಬೆನ್ನೆಲುಬಾಗಿ ನಿಂತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ನಾವು ಎಂದೂ ಹಿಂಜರಿಯದೆ ಮುಂದಿರುತ್ತೇವೆ ಎಂದರು. ಈ ಸಂದರ್ಭದಲ್ಲಿ ಜಾಣಗೆರೆ ವೆಂಕಟರಾಮಯ್ಯ, ಪ್ರಾಂಶುಪಾಲರಾದ ಸೌಮ್ಯ, ವಿನುತ, ಬಿನ್ನಿ ಬೋಸ್, ಪೋಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಗರದ ಚಂದ್ರಾಲೇ ಔಟ್,ವಿಜಯನಗರದಲ್ಲಿರುವ ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್‌ನ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ ಜಿ.ಆರ್. ಕೃಷ್ಣಪ್ಪ ಉದ್ಘಾಟಿಸಿದರು.

ಮುನೀಶ್ ಮೌದ್ಗಿಲ್ ವಿರುದ್ಧ ಪ್ರತಿಭಟನೆ,ಸಂಧಾನ ಯಶಸ್ವಿ

ಅವಾಚ್ಯ ಪದ ಬಳಕೆ ನಿಲ್ಲಿಸಲು ಸೂಚನೆ

ಬೆಂಗಳೂರು: 'ತಂತ್ರಾಂಶ ಸಮಸ್ಯೆ ಸರಿಪಡಿಸಬೇಕು. ಅಮಾನತು ಶಿಫಾರಸು ವಾಪಸ್ ಪಡೆಯಬೇಕು, ಮೇಲಾಧಿಕಾರಿ ಅವಾಚ್ಯ ಪದ ಬಳಕೆ ನಿಲ್ಲಿಸಬೇಕು ಎಂದು ಜಿಬಿಎ ನೌಕರರು ನಡೆಸುತ್ತಿದ್ದ ಮೌನ ಪ್ರತಿಭಟನೆಯು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರ ಮಧ್ಯಪ್ರವೇಶದಿಂದ ಅಂತ್ಯಗೊಂಡಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮತ್ತು ಪದಾಧಿಕಾರಿಗಳೊಂದಿಗೆ ತುಷಾರ್ ಗಿರಿನಾಥ್ ಮತ್ತು ಮಹೇಶ್ವರ್ ರಾವ್ ಅವರು ತುರ್ತು ಸಭೆ ನಡೆಸಿದರು. ಇ-ಖಾತಾ ವಿತರಣೆ ತಂತ್ರಾಂಶದಲ್ಲಿರುವ ತಾಂತ್ರಿಕ ದೋಷಗಳನ್ನು ಸರಿಪಡಿಸಿದರೆ ಇ-ಖಾತಾ ತ್ವರಿತವಾಗಿ ವಿತರಣೆ ಮಾಡಲು ಸಾಧ್ಯ ಎಂದು ನೌಕರರು ಗಮನಕ್ಕೆ ತಂದರು. ಎನ್‌ಐಸಿ ಸಂಸ್ಥೆಯೊಂದಿಗೆ ಸಭೆ ನಡೆಸಿ ಇ-ಖಾತಾ ತಂತ್ರಾಂಶದಲ್ಲಿರುವ ನ್ಯೂನತೆಯನ್ನು ಸರಿಪಡಿಸುವುದಾಗಿ ಇಬ್ಬರು ಅಧಿಕಾರಿಗಳು ಭರವಸೆ ನೀಡಿದರು.

ಉಪ ಆಯುಕ್ತ ಡಿ.ಕೆ. ಬಾಬು ಮತ್ತು ಕಂದಾಯ ಅಧಿಕಾರಿ ವರಲಕ್ಷ್ಮಮ್ಮ ಅವರ ಅಮಾನತಿಗೆ ಸರಕಾರಕ್ಕೆ ಸಲ್ಲಿಸಿರುವ ಪ್ರಸ್ತಾವವನ್ನು ಹಿಂಪಡೆಯಲು ನೌಕರರು ಮನವಿ ಮಾಡಿದರು. ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಿ ನಂತರ ಕ್ರಮ ವಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಬೆ.8.30ಕ್ಕೆ ನಡೆಸುವ ವಿಡಿಯೊ ಸಂವಾದದಲ್ಲಿ ನಿಂದನಾತ್ಮಕ ಪದಗಳನ್ನು ಬಳಸುತ್ತಿರುವ ಬಗ್ಗೆ ನೌಕರರು ಗಮನಕ್ಕೆ ತಂದರು. ಮುನೀಶ್ ಅವರು ನಾಗರಿಕರಿಗೆ ತ್ವರಿತವಾಗಿ ಇ-ಆಸ್ತಿ ಪ್ರಕ್ರಿಯೆ ನಡೆಸಿಕೊಡಲು ಸೂಚಿಸುವಾಗ ಕೆಲವು ಪದಗಳನ್ನು ಬಳಸಿರಬಹುದು. ಕಂದಾಯ ಇಲಾಖೆಯ ಕಾರ್ಯಗಳ ಹಿತದೃಷ್ಟಿಯಿಂದ ಎಲ್ಲ ಅಧಿಕಾರಿ, ನೌಕರರು ಕಂದಾಯ ಇಲಾಖೆಯ ಮುಖ್ಯಸ್ಥರಾಗಿರುವ ವಿಶೇಷ ಆಯುಕ್ತರಿಗೆ ಸಹಕಾರ ನೀಡುವಂತೆ ಅಧಿಕಾರಿಗಳು ಕೋರಿದರು. ಹೀಗಾಗಿ ಮೌನ ಪ್ರತಿಭಟನೆಯನ್ನು ವಾಪಸ್ ಪಡೆದಿದ್ದೇವೆ. ನಮ್ಮ ಬೇಡಿಕೆಗೆ ಸ್ಪಂದಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಹಿರಿಯ ಅಧಿಕಾರಿಗಳಿಗೆ ಧನ್ಯವಾದಗಳು' ಎಂದು ಸಂಘದ ಅಧ್ಯಕ್ಷರು ತಿಳಿಸಿದರು.

ಅರಮನೆ ಮೈದಾನದಲ್ಲಿ 4 ದಿನಗಳಿಂದ ಅದ್ದೂರಿಯಾಗಿ ನಡೆದ ಸಮ್ಮೇಳನ | ಸಮಾರೋಪ ಸಮಾರಂಭದಲ್ಲಿ ಹಲವು ಗಣ್ಯರು ಭಾಗಿ

ವಿಶ್ವ ಆಯುರ್ವೇದ ಸಮ್ಮೇಳನಕ್ಕೆ ತೆರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡಾ.ಗಿರಿಧರ ಕಜೆ ಅವರ ನೇತೃತ್ವದಲ್ಲಿ ನಡೆದ ಎರಡನೇ ವಿಶ್ವ ಆಯುರ್ವೇದ ಸಮ್ಮೇಳನಕ್ಕೆ ಭಾನುವಾರ ತೆರೆಬಿದ್ದಿದೆ.

ಕಳೆದ ನಾಲ್ಕು ದಿನಗಳಿಂದ ಅರಮನೆ ಮೈದಾನದಲ್ಲಿ ನಡೆದ ಆಯುರ್ವೇದ ಸಮ್ಮೇಳನದಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಆಯುರ್ವೇದ ತಜ್ಞರು ಭಾಗವಹಿಸಿದ್ದರು. ನೂರಾರು ಸಂವಾದ ಕಾರ್ಯಕ್ರಮಗಳೊಂದಿಗೆ, ವೈವಿಧ್ಯಮಯ ಚಟುವಟಿಕೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಇಡೀ ಸಮ್ಮೇಳನ ಮೆಚ್ಚುಗೆಗಳಿಸಿತು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ, ಆಯುರ್ವೇದ ವಿಶ್ವ ಸಮ್ಮೇಳನ ಅನ್ನು ನೋಡಿದಾಗ ಅದು ಕೇವಲ ಒಂದು ಕಾರ್ಯಕ್ರಮವಲ್ಲ, ಇಡೀ ಸಮಾಜವನ್ನು ಒಂದೇ ವೇದಿಕೆಗೆ ತರಲು ನಡೆದಿರುವ ಮಹತ್ವದ ಪ್ರಯತ್ನ. ಇಂತಹ ಸಮ್ಮೇಳನ ಸರಕಾರ ಮಾಡಬೇಕು. ಆದರೆ ಡಾ.ಗಿರಿಧರ ಕಜೆಯವರು ಆಯೋಜಿಸಿರುವುದು ಶ್ಲಾಘನೀಯ. ಸಮಾಜದಲ್ಲಿ ಆರೋಗ್ಯದ ಜಾಗೃತಿ ಮತ್ತು ಜವಾಬ್ದಾರಿಯುತ ಜೀವನಶೈಲಿ ರೂಪಿಸುವುದು ಇಂದಿನ ದೊಡ್ಡ ಸವಾಲು. ಸಮಾಜವನ್ನು ಕಟ್ಟಬೇಕು ಎಂದರೆ ಅದು ವ್ಯಕ್ತಿಯಿಂದಲೇ ಆರಂಭವಾಗಬೇಕು. ಪ್ರತಿಯೊಬ್ಬರಲ್ಲೂ ಜಾಗೃತಿ, ಮನವರಿಕೆ ಮತ್ತು ತಿಳಿವಳಿಕೆ ಮೂಡಬೇಕು. ಈ ದಿಕ್ಕಿನಲ್ಲಿ ನಾವು ಇನ್ನೂ ಪ್ರಾರಂಭಿಕ ಹಂತದಲ್ಲೇ ಇದ್ದೇವೆ ಎಂದರು.

21ನೇ ಶತಮಾನದಲ್ಲಿ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದ್ದರೂ, ಅದಕ್ಕೆ ಸಮಾನವಾಗಿ ಸಮಸ್ಯೆಗಳೂ ಹೆಚ್ಚುತ್ತಿವೆ. ಸಮಸ್ಯೆಗಳೊಂದಿಗೆ ಪರಿಹಾರಗಳೂ ಇವೆ. ಆದರೆ ಆ ಪರಿಹಾರಗಳನ್ನು ಸಮಾಜದ ಬದುಕಿಗೆ ಅಳವಡಿಸಿಕೊಳ್ಳಲು ನಿರಂತರ ಪ್ರಯತ್ನ ಅಗತ್ಯ. ಈ ಸಮ್ಮೇಳನದಲ್ಲಿ ಕೇವಲ ಚರ್ಚೆಗೆ ಮಾತ್ರವಲ್ಲದೇ, ಎಕ್ಸಿಬಿಷನ್, ಆಹಾರ ಪದ್ಧತಿ, ಜೀವನ ಶೈಲಿ ಕುರಿತು ಪ್ರಾಯೋಗಿಕವಾಗಿ ತೋರಿಸುವ ಕೆಲಸವೂ ನಡೆಯುತ್ತಿರುವುದು ವಿಶೇಷ ಎಂದರು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳನ್ನು ಸಮಗ್ರವಾಗಿ ಏಕೀಕರಿಸುವ ಅಗತ್ಯವಿದೆ. ಆಹಾರ ಪದ್ಧತಿಯಲ್ಲಿ ಬದಲಾವಣೆ, ಪ್ರಕೃತಿಯೊಂದಿಗೆ ಹೊಂದಾಣಿಕೆ, ಪರಿಸರ ಸಂರಕ್ಷಣೆ ಮತ್ತು ಸಸ್ಟೇನಬಿಲಿಟಿ ಇಂದಿನ ಅನಿವಾರ್ಯತೆಗಳಾಗಿವೆ. ಜೀವನಶೈಲಿ ರೋಗಗಳು, ವಿಷಮಯ ಆಹಾರ, ಸೋಂಕು ರೋಗಗಳು ಎಲ್ಲವೂ ಪ್ರಕೃತಿ ಮತ್ತು ಪರಿಸರದೊಂದಿಗೆ ನಮ್ಮ ಸಂಬಂಧವನ್ನು ಪುನರ್‌ವಿಮರ್ಶೆ ಮಾಡುವ ಅಗತ್ಯವಿದೆ ಎಂದರು.

ಆಯುರ್ವೇದ ಕಾಲೇಜುಗಳು ಮತ್ತು ಸಂಸ್ಥೆಗಳು ಒಟ್ಟಾಗಿ ಸಾಮೂಹಿಕ ಸೌಲಭ್ಯಗಳನ್ನು ನಿರ್ಮಿಸಿದರೆ ದೊಡ್ಡ ಮಟ್ಟದ ಬೆಳವಣಿಗೆ ಸಾಧ್ಯ. ಈ ನಿಟ್ಟಿನಲ್ಲಿ ಸರಕಾರ, ವೈದ್ಯರು, ಸಮಾಜ ಎಲ್ಲರೂ ಒಂದಾಗಿ ಕೆಲಸ ಮಾಡಿದರೆ ಮಾತ್ರ ನಿಜವಾದ ಆರೋಗ್ಯಕರ ಸಮಾಜ ನಿರ್ಮಾಣ ಮಾಡಬಹುದು ಎಂದರು.

ಆಯುರ್ವೇದ ಜೀವನ ಕ್ರಮ: ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಬಾಲವೀರ ರೆಡ್ಡಿ ಮಾತನಾಡಿ, ಆಯುರ್ವೇದವು ಕೇವಲ ಚಿಕಿತ್ಸಾ ಪದ್ಧತಿಯಲ್ಲ, ಅದು ಜೀವನದ ಶೈಲಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸುವಂತಾಗಿರುವ ನಾಲ್ಕು ದಿನಗಳ ಆಯುರ್ವೇದ ವಿಶ್ವ ಸಮ್ಮೇಳನವು ಭವ್ಯವಾಗಿ ನಡೆಯುತ್ತಿದೆ. ಸಾವಿರಾರು ಜನರ ಭಾಗವಹಿಸುವಿಕೆಯಿಂದ ಈ ಸಮ್ಮೇಳನ ಒಂದು ಐತಿಹಾಸಿಕ ಆರೋಗ್ಯ ಚಳವಳಿಯ ರೂಪ ಪಡೆದುಕೊಂಡಿದೆ. ಡಾ. ಗಿರಿಧರ ಅವರು ಪ್ರತಿದಿನ 200ಕ್ಕೂ ಹೆಚ್ಚು ರೋಗಿಗಳಿಗೆ ಸೇವೆ ಸಲ್ಲಿಸುತ್ತಿದ್ದು, ಬೆಂಗಳೂರಿನಲ್ಲೇ 21 ಆಯುರ್ವೇದ ಕೇಂದ್ರ ಗಳು ಮತ್ತು ಉಪಕೇಂದ್ರಗಳನ್ನು ಯಶಸ್ವಿ ಯಾಗಿ ನಡೆಸುತ್ತಿರುವುದು ಗಮನಾರ್ಹ. ಮುಂದಿನ ದಿನಗಳಲ್ಲಿ ದೇಶದಾದ್ಯಂತ ಇನ್ನೂ 100 ಆಯುರ್ವೇದ ಕೇಂದ್ರಗಳನ್ನು ಸ್ಥಾಪಿಸುವ ಅವರ ಕನಸಿಗೆ ಎಲ್ಲರ ಆಶೀರ್ವಾದ ಅಗತ್ಯವಿದೆ ಎಂದರು.

ಆಯುರ್ವೇದವು ದೇಹವನ್ನಷ್ಟೇ ಅಲ್ಲ, ಮನಸ್ಸನ್ನೂ ಶುದ್ಧಗೊಳಿಸುತ್ತದೆ. ಮೊದಲು ಆತ್ಮಶುದ್ಧಿ, ನಂತರ ದೇಹಶುದ್ಧಿ ಅದೇ ಆಯುರ್ವೇದದ ಮೂಲ ತತ್ವವಾಗಿದೆ. ನಾಲ್ಕು ದಿನಗಳ ಈ ವಿಶ್ವ ಸಮ್ಮೇಳನವನ್ನು ಆಯೋಜಿಸುವುದು ಸುಲಭದ ಕೆಲಸವಲ್ಲ. ಸಾವಿರಾರು ಜನರು ಪ್ರತಿದಿನ ಸೇರುವ ಈ ವೇದಿಕೆ ಆಯುರ್ವೇದದ ಜಾಗತಿಕ ಮಹತ್ವವನ್ನು ಪ್ರತಿಪಾದಿಸುತ್ತಿದ್ದು, ಭವಿಷ್ಯದಲ್ಲಿ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ದಿಕ್ಕು ತೋರಿಸುವ ಮಹತ್ವದ ಹೆಜ್ಜೆಯಾಗಿದೆ ಎಂದರು.

ನಗರದ ಅರಮನೆ ಮೈದಾನದಲ್ಲಿ ನಡೆದ ಆಯುರ್ವೇದ ಸಮ್ಮೇಳನದ ಕೊನೆ ದಿನದ ಕಾರ್ಯಕ್ರಮದಲ್ಲಿ ರಾಮಚಂದ್ರಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ, ಮೂಡಬಿದ್ರಿ ಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಬಾಲವೀರ ರೆಡ್ಡಿ, ರಾಜ್ಯ ಮಾಹಿತಿ ಆಯುಕ್ತ ಡಾ. ಮಹೇಶ್ ವಾಲ್ವೇಕರ್, ಕಾರ್ಯಕ್ರಮದ ರೂವಾರಿ ಗಿರಿಧರ್ ಕಜೆ, ವಾಗ್ಮಿ ಕೆ.ಪಿ. ಪುತ್ತೂರಾಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಮ್ಮೇಳನ ಸಮಾರೋಪ ಸಮಾರಂಭದಲ್ಲಿ ಅಶ್ವತ್ಥ್ ನಾರಾಯಣ್ ಪಾಲ್ಗೊಂಡರು.

ಜನರನ್ನು ಆಕರ್ಷಿಸಿದ ಶಿಲಾಜಿತ್ ಮಳಿಗೆ

ಶಿಲಾಜಿತ್ ಅನ್ನು ಹಿಮಾಲಯನ್ ರೇರ್ ಮಿನರಲ್ ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯ ವಾಗಿ ಸಿಗುವ ಪದಾರ್ಥವಲ್ಲ. ಶಿಲಾಜಿತ್ ರೂಪುಗೊಳ್ಳಲು ನೂರಾರು ವರ್ಷಗಳು ಬೇಕಾಗುತ್ತವೆ. ಹಿಮಾಲಯದ ನಿರ್ದಿಷ್ಟ ಎತ್ತರ, ನಿರ್ದಿಷ್ಟ ತಾಪಮಾನ ಮತ್ತು ವಿಶಿಷ್ಟ ಪ್ರಕೃತಿ ಪರಿಸ್ಥಿತಿಗಳಲ್ಲಿ ಮಾತ್ರ ಇದು ರೂಪುಗೊಳ್ಳುತ್ತದೆ. ಮಾನವ ದೇಹಕ್ಕೆ ಅನೇಕ ಖನಿಜಗಳು ಅಗತ್ಯ. ವಯಸ್ಸು ಹೆಚ್ಚಾದಂತೆ ಆಹಾರದಲ್ಲಿನ ಕೊರತೆಯಿಂದ ದೇಹದಲ್ಲಿ ಖನಿಜಗಳ ಉತ್ಪಾದನೆ ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ದಣಿವು, ಜಂಟಿ ನೋವು, ಶಕ್ತಿಹೀನತೆ ಉಂಟಾಗಿರುತ್ತದೆ. ಈ ರೀತಿಯ ಎಲ್ಲ ಸಮಸ್ಯೆಗಳನ್ನು ನಿವಾರಿಸುವ ಶಕ್ತಿ ಇದರಲ್ಲಿದೆ. ಈ ಖನಿಜವನ್ನು ಸಮ್ಮೇಳನದಲ್ಲಿ ಪ್ರದರ್ಶನ ಮಾಡಿದ್ದರಿಂದ, ಜನರನ್ನು ಆಕರ್ಷಿಸಿತು.

ದೇಶಿ ಗೋ ತಳಿಗಳ ಪ್ರದರ್ಶನ

ಭಾರತವು ಜಗತ್ತಿನಲ್ಲೇ ಅತ್ಯಂತ ವೈವಿಧ್ಯಮಯ ದೇಸಿ ಗೋ ತಳಿಗಳನ್ನು ಹೊಂದಿದೆ. ಭಾರತದಲ್ಲಿ ಒಟ್ಟು 32ದೇಸಿ ಗೋ ತಳಿಗಳು ಗುರುತಿಸಲ್ಪಟ್ಟಿದ್ದು, ಹನ್ನೊಂದು ಅಪರೂಪದ ಗೇರು, ಹಳ್ಳಿಕಾರ, ಜವಾರ ಸೇರಿದಂತೆ ಇನ್ನಿತರ ತಳಿಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಉದ್ದೇಶ ಹಾಗೂ ದೇಸಿ ಗೋ ತಳಿಗಳ ವೈವಿಧ್ಯತೆಯನ್ನು ಸಮಗ್ರವಾಗಿ ಪರಿಚಯಿಸುವ ನಿಟ್ಟಿನಲ್ಲಿ ಪ್ರದರ್ಶಿಸಲಾಗಿರುವುದು ಅತ್ಯಂತ ವಿಶೇಷವಾಗಿತ್ತು.

ಪ್ರಕೃತಿ ನಮ್ಮನ್ನು ಬಿಟ್ಟಿರಬಹುದು. ಆದರೆ ನಾವು ಪ್ರಕೃತಿಯನ್ನು ಬಿಟ್ಟಿರಲಾಗದು. ಆಯುರ್ವೇದ ಪ್ರಕೃತಿಯನ್ನು ಅವಲಂಬಿಸಿದ್ದು, ಪ್ರಕೃತಿಯಲ್ಲಿ ಸಹಜವಾಗಿ ಸಿಗುವ ಔಷಧಗಳನ್ನೇ ಬಳಸಿ ಆರೋಗ್ಯ ಪೂರ್ಣ ಜೀವನ ನೀಡುವುದು ಆಯುರ್ವೇದದ ಮಹತ್ವವಾಗಿದೆ.

-ಕೆ.ಪಿ. ಪುತ್ತೂರಾಯ, ವಾಗ್ಮಿ

ಇಂದು ಆಯುರ್ವೇದದ ಪ್ರಭಾವ ಬೆಳೆಯುತ್ತಿದ್ದು, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಯುರ್ವೇದದ ಕುರಿತಾದ ಆಸಕ್ತಿ ಹೆಚ್ಚುತ್ತಿದೆ. ನಾವು ಆಯುರ್ವೇದ ವೈದ್ಯರು ಹಾಗೂ ವಿದ್ಯಾರ್ಥಿಗಳು ಆಯುರ್ವೇದ ಕ್ಷೇತ್ರದಲ್ಲಿ ಹೆಚ್ಚಿನ ಅಧ್ಯಯನ ಹಾಗೂ ಸಂಶೋಧನೆ ಮಾಡುವ ಮೂಲಕ ಭಾರತ ವಿಶ್ವಗುರು ವಾಗಲು ನಮ್ಮ ಪಾತ್ರವನ್ನು ನಿರ್ವಹಿಸೋಣ.

-ಡಾ. ಮಹೇಶ್ ವಾಲ್ವೇಕರ್,
ರಾಜ್ಯ ಮಾಹಿತಿ ಆಯುಕ್ತ

ಸಮ್ಮೇಳನದ ರೂವಾರಿ ಡಾ.ಗಿರಿಧರ ಕಜೆ ಅವರಿಗೆ ಆಯುರ್ವೇದ ಬೃಹಸ್ಪತಿ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಸಮ್ಮೇಳನದ ದಾಖಲೆಗಳು

1 ಆಯುರ್ವೇದದ ಅಷ್ಟಾಂಗ ಹೃದಯದ ದಿನಚರ್ಯಾ ಅಧ್ಯಾಯದ ಪಠಣವು ಇಂಡಿಯನ್ ಬುಕ್ಸ್ 'ಆಫ್ ರೆಕಾರ್ಡ್ಸ್ ಹಾಗೂ ಏಷಿಯನ್ ಬುಕ್ಸ್ ಆಫ್ ರೆಕಾರ್ಡ್ಸ್ ಪುಸ್ತಕದಲ್ಲಿ ದಾಖಲಾಯಿತು.

2 ದಕ್ಷಿಣದ 7 ರಾಜ್ಯಗಳಲ್ಲಿ ಸುಮಾರು 4300 ಕಿ.ಮಿ ಹಾಗೂ 137 ಆಯುರ್ವೇದ ಕಾಲೇಜುಗಳಿಗೆ ಆಯುರ್ವೇದ ರಥದ ಸಂಚಾರ.

3 ಸಮ್ಮೇಳನದಲ್ಲಿ 1005 ವೈದ್ಯಕೀಯ ಪ್ರಬಂಧಗಳ ಮಂಡನೆ.

4 6000+ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ವೈದ್ಯಕೀಯ ಪ್ರತಿನಿಧಿಗಳು ಭಾಗಿ.

5 400 ಆಯುರ್ವೇದ ತಜ್ಞರಿಗೆ 'ವಿಶ್ವ ಆಯುರ್ವೇದ ರತ್ನ' ಪ್ರಶಸ್ತಿ ಪ್ರದಾನ.

ಶೃಂಗಸಭೆಯ ಘೋಷಣೆ

1 ಪ್ರಾಥಮಿಕ ಶಿಕ್ಷಣದಿಂದ ಆಯುರ್ವೇದವನ್ನು ಪರಿಚಯಿಸಲು ಮತ್ತು ಸೇರಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಒತ್ತಾಯಿಸುವುದು

2 ವೈದ್ಯಕೀಯ ವ್ಯವಸ್ಥೆಯ ಎಲ್ಲಾ ಭಾಗಗಳಿಗೆ ಸಮಾನವಾಗಿ ಸರಕಾರಿ ಹಣ ಹಂಚಿಕೆ ಮಾಡಲು ವಿನಂತಿ

3 ಭಾರತದ ಪ್ರತಿಯೊಂದು ರಾಜ್ಯದಲ್ಲೂ ಆಯುಷ್ ಸಚಿವಾಲಯವನ್ನು ಪರಿಚಯಿಸುವುದು

4 ಸಾಮಾಜಿಕ ಮತ್ತು ಆರ್ಥಿಕ ಸಮಾಜದ ಉನ್ನತಿಗೆ ತರಲು ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ಒಳಗೊಂಡಂತೆ ಔಷಧೀಯ ಸಸ್ಯಗಳನ್ನು ಬೆಳೆಸಬೇಕು.

5 ಔಷಧೀಯ ಸಿದ್ಧತೆಗಳಿಗಾಗಿ ಎಲ್ಲಾ ಔಷಧೀಯ ಸಸ್ಯಗಳು ಮತ್ತು ಖನಿಜ ಮೂಲಗಳ ಬಳಕೆಯನ್ನು ಅನುಮತಿಸುವುದು

6 ಪ್ರತಿ ರಾಜ್ಯಕ್ಕೂ ವಿಶೇಷ ; ಆಸ್ಪತ್ರೆ ಹೊಂದಿರುವ ಕನಿಷ್ಠ 5 ಆಯುರ್ವೇದ ಸಂಶೋಧನಾ ಸಂಸ್ಥೆಗಳನ್ನು ಪ್ರಾರಂಭಿಸಿ

7 ಭಾರತದ ಎಲ್ಲಾ ತಾಲ್ಲೂಕುಗಳಲ್ಲಿ ಆಯುರ್ವೇದ ಪ್ರಾಥಮಿಕ ಆರೋಗ್ಯ ಕೇಂದ್ರಗಳು

8 ಆಯುರ್ವೇದ ಮೂಲಕ ಜೀವನ ಶೈಲಿ ತಿದ್ದುಪಡಿಯ ಬಗ್ಗೆ ಸಾರ್ವಜನಿ ಕರಿಗೆ ಶಿಕ್ಷಣ ನೀಡಲು ತಾಲೂಕು ಮಟ್ಟದಲ್ಲಿ ದೇಶಾದ್ಯಂತ ಆಯು ರ್ವೇದ ವೆಲ್ನೆಸ್ ಕ್ಲಿನಿಕ್‌ಗಳನ್ನು ತೆರೆಯುವುದು

9 ಎಲ್ಲಾ ಆಯುರ್ವೇದ ವಿಮಾ ರಕ್ಷಣೆಯನ್ನು ಒಳಗೊಳ್ಳಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು

10 ಎಲ್ಲಾ ಆಯುರ್ವೇದದ ಶಾಸ್ತ್ರೀಯ ಔಷಧಿಗಳಿಗೆ ಜಿಎಸ್‌ಟಿ ಸ್ಲ್ಯಾಬ್‌ನಿಂದ ವಿನಾಯಿತಿ ಮತ್ತು ಎಲ್ಲಾ ಸ್ವಾಮ್ಯದ ಔಷಧಿಗಳಿಗೆ 5% ವಿನಾಯಿತಿ

ಸಮಾಚಾರ ಸಣ್ಣದಲ್ಲ

ಪಿಇಎಸ್ ವಿವಿ ವಿದ್ಯಾರ್ಥಿಯ ಸಾಧನೆ



ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ದರ್ಶನ್ ಮಾಲಗಿಮಣಿ ಓಪನ್ ಸ್ಟ್ಯಾಕ್‌ಗೆ ಓಪನ್-ಸೋರ್ಸ್ ಕೊಡುಗೆ ನೀಡಿದ್ದಾರೆ. ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ (ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ) ಅಂತಿಮ ಪದವಿ ವಿದ್ಯಾರ್ಥಿಯಾಗಿರುವ ದರ್ಶನ್ ಮಾಲಗಿಮಣಿ ಈ ಸಾಧನೆ ಮಾಡಿದ್ದಾರೆ. ಪಿಇಎಸ್ ವಿಶ್ವವಿದ್ಯಾಲಯವು ವಿಶ್ವದಲ್ಲಿ ವ್ಯಾಪಕವಾಗಿ ನಿಯೋಜಿಸಲಾದ ಕ್ಲೌಡ್ ಕಂಪ್ಯೂಟಿಂಗ್ ಫ್ಲಾಟ್‌ಫಾರ್ಮ್‌ಗಳಲ್ಲಿ ಒಂದಾದ ಓಪನ್ ಸ್ಟ್ಯಾಕ್‌ಗೆ ಜಾಗತಿಕವಾಗಿ ಮಹತ್ವದ ಓಪನ್-ಸೋರ್ಸ್ ಕೊಡುಗೆಯನ್ನು ನೀಡಿದೆ. ದರ್ಶನ್ ಅವರ ಕೊಡುಗೆಯನ್ನು ಅಧಿಕೃತವಾಗಿ ಓಪನ್ ಸ್ಟ್ಯಾಕ್ ಗ್ಲಾನ್ಸ್ 2024.1ಗೆ ವಿಲೀನಗೊಳಿಸಲಾಗಿದೆ. ಇದು ವಿಶ್ವದಾದ್ಯಂತ ಉತ್ಪಾದನಾ ಓಪನ್ ಸ್ಟಾಕ್ ಕ್ಲೌಡ್ ಪರಿಸರಗಳಿಗೆ ಅಂಗೀಕೃತ ಸ್ಥಾಪನೆ ಮತ್ತು ನಿಯೋಜನೆ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸಲಿದೆ.

ಹೊಸ ವರ್ಷಕ್ಕೆ ಪ್ರವಾಸಿ ತಾಣಗಳು ಭರ್ತಿ

ಬೆಂಗಳೂರು: ಹೊಸ ವರ್ಷಾಚರಣೆ ಹಿನ್ನೆಲೆ ಜನರು ಪ್ರವಾಸಿ ತಾಣಗಳತ್ತ ಮುಖ ಮಾಡಿದ್ದು, ರಾಜ್ಯದ ಪ್ರಮುಖ ಪ್ರವಾಸಿ ತಾಣಗಳು ಜನರಿಂದ ತುಂಬಿ ತುಳುಕುತ್ತಿವೆ. ಪ್ರವಾಸಿಗರು ಹೊಸ ವರ್ಷವನ್ನು ಸ್ವಾಗತಿಸಲು ಪ್ರವಾಸಿ ತಾಣಕ್ಕೆ ತೆರಳುತ್ತಿದ್ದು, ಹೋಂ ಸ್ಟೇ, ಲಾಡ್ಜ್‌ಗಳು, ರೆಸಾರ್ಟ್ ಹಾಗೂ ಹೋಟೆಲ್‌ಗಳು ಕೂಡಾ ಜನರಿಂದ ತುಂಬಿ ಹೋಗಿದ್ದವು. ಈ ವರ್ಷದ ಮಹಾಮಳೆಯ ಮಧ್ಯೆಯೂ ಕಾಫಿನಾಡಿಗೆ ಸಿಕ್ಕಾಪಟ್ಟೆ ಬೇಡಿಕೆ ಬಂದಿದ್ದು, ಮುಳ್ಳಯ್ಯನಗಿರಿ, ಬಾಬಾಬುಡನ್ ಗಿರಿ, ಸೀತಾಳಯ್ಯನಗಿರಿ, ಶೃಂಗೇರಿ, ಹೊರನಾಡು, ಕುದುರೆಮುಖ ಸೇರಿದಂತೆ ಪ್ರಮುಖ ಗಿರಿಶಿಖರಗಳಲ್ಲಿ ಪ್ರವಾಸಿಗರು ಹೊಸ ವರ್ಷದ ರಾತ್ರಿಗಾಗಿ ಹಾತೊರೆಯುತ್ತಾರೆ. ಹೆಚ್ಚಿನ ಪ್ರವಾಸಿಗರು ಆಗಮಿಸುತ್ತಿರುವುದರಿಂದ ವಾಹನಗಳನ್ನು ನಿಯಂತ್ರಿಸುವುದೇ ಪೊಲೀಸರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸಕ್ಕರೆ ನಾಡು ಮಂಡ್ಯ ಜಿಲ್ಲೆಯ ಪ್ರವಾಸಿ ತಾಣಗಳಿಗೆ ಪ್ರವಾಸಿಗರು ಲಗ್ಗೆ ಇಡುತ್ತಿದ್ದಾರೆ. ಅದರಲ್ಲೂ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೆ ಪ್ರವಾಸಿಗರ ದಂಡು ಬಂದು ಪಕ್ಷಿ ಸಂಕುಲವನ್ನು ವೀಕ್ಷಣೆ ಮಾಡುತ್ತಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ದೋಣಿ ವಿಹಾರ, ಮೊಸಳೆ ಹಾಗೂ ಪಕ್ಷಿ ಸಂಕುಲವನ್ನು ವೀಕ್ಷಣೆ ಮಾಡಿ ಎಂಜಾಯ್ ಮಾಡುತ್ತಿದ್ದಾರೆ. ಅತ್ತ ಹನುಮ ಜನ್ಮಸ್ಥಳ ಅಂಜನಾದ್ರಿಗೆ ಲಕ್ಷಾಂತರ ಭಕ್ತರು ಆಗಮಿಸಿದ ಹಿನ್ನೆಲೆ ಅಂಜನಾದ್ರಿ ಬೆಟ್ಟ ಸಂಪೂರ್ಣ ಜಾಮ್ ಆಗಿತ್ತು. ಬೆಟ್ಟದ ಮೇಲೆ ಏರಿ ಆಂಜನೇಯನ ದರ್ಶನ ಪಡೆಯಲು ಜನರು ಹರಸಾಹಸ ಪಡುತ್ತಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಮಾನಸಿಕ ಸ್ಥಿರತೆಗೆ ಯೋಗ ಮಾರ್ಗ: ಸದ್ಗುರು

ಬೆಂಗಳೂರು: ಮಾನವನೊಳಗಿನ ಸ್ಥಿರತೆಯ ಮಹತ್ವ ಅತೀ ಮುಖ್ಯ, ನಮ್ಮೊಳಗೆ ನಾವು ಸ್ಥಿರತೆಯನ್ನು ತಂದುಕೊಳ್ಳುವುದೇ ಬಹುಮುಖ್ಯವಾದುದು. ಶಾಂಭವಿ ಮಹಾಮುದ್ರ ಒಂದು ಜೀವಂತ ಹಾಗೂ ಅದ್ಭುತ ಅಭ್ಯಾಸ. ಸಂತೋಷವಾಗಲಿ, ಯಾತನೆಯಾಗಲಿ ಅವೆಲ್ಲವೂ ನಮ್ಮೊಳಗಿನಿಂದಲೇ ಉದ್ಭವಿಸುತ್ತವೆ. ಇದನ್ನು ಅರಿತುಕೊಂಡರೆ, ಅದೇ ಸಾಕಷ್ಟು ಜ್ಞಾನೋದಯ ಎಂದು ಸದ್ಗುರು ತಿಳಿಸಿದರು.

ಚಿಕ್ಕಬಳ್ಳಾಪುರದಲ್ಲಿ ನಡೆದ ಸದ್ಗುರುಗಳೊಂದಿಗಿನ ವಿಶೇಷ ಇನ್ನರ್ ಎಂಜಿನಿಯರಿಂಗ್ ಸತ್ಸಂಗದ ಉದ್ದೇಶದಿಂದ ನಡೆಸಲಾದ ಆನಂದ ಅಲೆ ಉಪಕ್ರಮದ ಭಾಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆತ್ಮಹತ್ಯೆ ಮತ್ತು ಮಾನಸಿಕ ಆರೋಗ್ಯದ ಕುರಿತ ಜಾಗತಿಕ ಕಾಳಜಿಯ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಹೊರಡಿಸಿರುವ ಎಚ್ಚರಿಕೆಯನ್ನು ಉಲ್ಲೇಖಿಸಿ, ಆತ್ಮಹತ್ಯೆ ಸಾವಲ್ಲ ಆದರೆ ಮೂಲ ಸ್ವಯಂ ಸಂರಕ್ಷಣಾ ಪ್ರವೃತ್ತಿಯನ್ನು ಮೀರುವಷ್ಟು ತೀವ್ರ ಯಾತನೆಗೆ ಒಳಗಾಗಿರುವುದೇ ನಿಜವಾದ ದುರಂತ ಎಂದರು.

ಸಭಿಕರೊಂದಿಗೆ ಸಂವಾದದ ವೇಳೆ, ಇನ್ನರ್ ಎಂಜಿನಿಯರಿಂಗ್ ತನ್ನ ಜೀವನದಲ್ಲಿ ತಂದ ಸಕಾರಾತ್ಮಕ ಬದಲಾವಣೆಗಳ ಕುರಿತು ಒಬ್ಬ ಧ್ಯಾನಿ ಅನುಭವ ಹಂಚಿಕೊಂಡರು. ಪ್ರತಿಕ್ರಿಯಿಸಿದ ಸದ್ಗುರುಗಳು, ಪ್ರಜ್ಞಾಪೂರ್ವಕ ಅಭಿವ್ಯಕ್ತಿಯ ಅಗತ್ಯ ತಿಳಿಸಿ, ಒಳ್ಳೆಯ ಸಂಗತಿಗಳು ನಿಮ್ಮ ಜೀವನದಲ್ಲಿ ನಡೆಯುತ್ತಿದ್ದರೆ, ಅದನ್ನು ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಹಂಚಿಕೊಳ್ಳಿ. ಜನರು ಸದಾ ನಕಾರಾತ್ಮಕ ವಿಷಯಗಳನ್ನು ಮಾತ್ರ ಹಂಚಿಕೊಳ್ಳುವ ಸಮೀಕರಣವನ್ನು ನಾವು ಬದಲಾಯಿಸಬೇಕು ಎಂದರು. 2025ರ ಅಂತ್ಯ ಸಮೀಪಿಸುತ್ತಿರುವ ಸಂದರ್ಭದಲ್ಲಿ ಸದ್ಗುರುಗಳು ಜನರು ವಿರಾಮ ತೆಗೆದುಕೊಂಡು ತಮ್ಮ ಜೀವನವನ್ನು ಆಳವಾಗಿ ಪರಿಶೀಲಿಸಬೇಕು. ನಿಮ್ಮ ಸಮಯ ಸೀಮಿತವಾಗಿದೆ ಎಂಬ ಅರಿವು ಬಂದಾಗ, ಜೀವನ ಅಮೂಲ್ಯವಾಗುತ್ತದೆ ಎಂದರು.

ಚಿಕ್ಕಬಳ್ಳಾಪುರದಲ್ಲಿ ನಡೆದ ಸದ್ಗುರುಗಳೊಂದಿಗಿನ ವಿಶೇಷ ಇನ್ನರ್ ಇಂಜಿನಿಯರಿಂಗ್ ಸತ್ಸಂಗದ ಉದ್ದೇಶದಿಂದ ನಡೆಸಲಾದ ಆನಂದ ಅಲೆ ಉಪಕ್ರಮದ ಭಾಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸದ್ಗರು ಜನರಿಗೆ ಆಶೀರ್ವಾದ ನೀಡಿದರು.

ಜಲಮಂಡಳಿ ಒಟಿಎಸ್‌ಗೆ ಸರಕಾರದಿಂದ ಅನುಮತಿ

ಬೆಂಗಳೂರು: ದೀರ್ಘಕಾಲದಿಂದ ನೀರಿನ ಬಿಲ್ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಬೆಂಗಳೂರು ಜಲಮಂಡಳಿಯು ಒನ್ ಟೈಮ್ ಸೆಟಲ್‌ಮೆಂಟ್ ಅವಕಾಶವನ್ನು ನೀಡಿದೆ. ಜಲಮಂಡಳಿಯ ಒನ್ ಟೈನ್ ಸೆಟಲ್‌ಮೆಂಟ್ ಯೋಜನೆಗೆ ಸರಕಾರದ ನಗರಾಭಿವೃದ್ಧಿ ಇಲಾಖೆ ಅನುಮತಿ ನೀಡಿದ್ದು, ಸರಕಾರದ ಆದೇಶದಡಿಯಲ್ಲಿ ಬಾಕಿ ಇರುವ ನೀರಿನ ಬಿಲ್ಲಿನ ಅಸಲು ಮೊತ್ತವನ್ನು ಏಕಕಾಲದಲ್ಲಿ ಪಾವತಿಸಿದರೆ, ಬಡ್ಡಿ ಮತ್ತು ದಂಡದ ಮೊತ್ತವನ್ನು ಶೇ.100 ರಷ್ಟು ಮನ್ನಾ ಮಾಡುವ ಯೋಜನೆ ಜಾರಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ಜಲಮಂಡಳಿಯಲ್ಲಿ ಗ್ರಾಹಕ ಸ್ನೇಹಿ ನಿಯಮಾವಳಿಗಳನ್ನು ಅಳವಡಿಸಲಾಗಿದ್ದು, ಗ್ರಾಹಕರು ನೇರವಾಗಿ ಜಲಮಂಡಳಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಅಲ್ಲದೇ, ಹೊಸ ಆ್ಯಪ್ ಒಂದನ್ನು ನಿರ್ಮಿಸಲಾಗುತ್ತಿದ್ದು ಇವುಗಳಲ್ಲಿ ನೋಂದಣಿ ಮಾಡಿಕೊಂಡ ಗ್ರಾಹಕರಿಗೆ ಹಣ ಪಾವತಿಸಲು ಕಾಲಾವಕಾಶ ಮತ್ತು ಅಂತಿಮ ದಿನಾ ಂಕವನ್ನು ತಿಳಿಸಲಾಗುತ್ತದೆ ಎಂದರು.

ಕನ್ನಡ ಭಾಷೆ ಬಳಕೆ ಕಡಿಮೆಯಾಗಿದೆ ಆದರೆ ಅಳಿವು ಆಗಿಲ್ಲ: ಶಂಕರ ಬಿದರಿ

ಆನೇಕಲ್: ಅನ್ಯ ಭಾಷಿಕರು ಉದ್ಯೋಗ ಅರಸಿ ಬೆಂಗಳೂರಿಗೆ ಬಂದು ನೆಲೆಸಿದ ಮಾತ್ರಕ್ಕೆ ಶಾಸ್ತ್ರೀಯ ಸ್ಥಾನಮಾನ ಹೊಂದಿರುವ ಅಭಿಜಾತ ಭಾಷೆ ಕನ್ನಡಕ್ಕೆ ಯಾವುದೇ ಕುಂದು ಬರುವುದಿಲ್ಲ. ನಗರ ಪ್ರದೇಶದಲ್ಲಿ ಕನ್ನಡ ಭಾಷೆ ಬಳಕೆ ಕಡಿಮೆ ಅನಿಸಿದರೂ ಎಂದಿಗೂ ಅಳಿವಿಲ್ಲ ಪೊಲೀಸ್ ನಿವೃತ್ತ ಮಹಾ ನಿರ್ದೇಶಕರಾದ ಶಂಕರ್ ಎಂ.ಬಿದರಿ ತಿಳಿಸಿದರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಕನ್ನಡ ನುಡಿ ಸಮ್ಮೇಳನ ಹಾಗೂ ಕರುನಾಡ ಚೇತನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಕ್ರಮ ಸದ್ದಿಲ್ಲದೇ ನಡೆಯುತ್ತಿದೆ. ಅದಕ್ಕೆ ಆಧುನಿಕತೆಯ ತಂತ್ರಜ್ಞಾನದ ಲೇಪನದೊಂದಿಗೆ ಕಲಿಕೆಗೆ ವೇಗ ನೀಡಬೇಕು. ಎಂಎನ್‌ಸಿ ಕಂಪನಿಗಳಲ್ಲಿನ ಜನರನ್ನು ಪ್ರೀತಿ ವಿಶ್ವಾಸದಿಂದ ಮನವೊಲಿಸಿ ಕನ್ನಡ ಕಲಿಕೆ ಕಡ್ಡಾಯ ಮಾಡಬೇಕೆಂಬ ಎಂದು ಸಲಹೆ ನೀಡಿದರು. ಕರುನಾಡ ಚೇತನ ಪ್ರಶಸ್ತಿ ಸ್ವೀಕರಿಸಿದ ಜೇನು ಗೂಡು ಮಹೇಶ್ ಊಗಿನಹಳ್ಳಿ ಮಾತನಾಡಿ, ಪ್ರಶಸ್ತಿ ಗಳು ವ್ಯಕ್ತಿಯ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಕನ್ನಡ ಭಾಷೆಯು ನೆರೆ ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ಸುಭದ್ರವಾಗಿ ಬೇರೂರಿದೆ. ರಾಜ್ಯದ ಪ್ರತಿಭೆಗಳನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುತ್ತಿರುವುದು ಸಂತಸ ತಂದಿದೆ ಎಂದರು. ಈ ವೇಳೆ ಸಾಹಿತಿ ಕಾಂತರಾಜಪುರ ಸುರೇಶ್, ಜಾನಪದ ಪರಿಷತ್ ನ ಮಾಜಿ ಅಧ್ಯಕ್ಷ ಟಿ.ತಿಮ್ಮೇಗೌಡ, ಸಮ್ಮೇಳನದ ಅಧ್ಯಕ್ಷ ಟಿ.ಚಂದ್ರಪ್ಪ, ಡಾ. ಶಾಂತರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಕನ್ನಡ ನುಡಿ ಸಮ್ಮೇಳನದಲ್ಲಿ ಜೇನುಗೂಡು ಮಹೇಶ್ ಊಗಿನಹಳ್ಳಿ ಅವರಿಗೆ ಕರುನಾಡ ಚೇತನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಈ ವೇಳೆ ಪೊಲೀಸ್ ನಿವೃತ್ತ ಮಹಾ ನಿರ್ದೇಶಕರಾದ ಶಂಕರ್ ಎಂ.ಬಿದರಿ, ಸಾಹಿತಿ ಕಾಂತರಾಜಪುರ ಸುರೇಶ್, ಜಾನಪದ ಪರಿಷತ್‌ನ ಮಾಜಿ ಅಧ್ಯಕ್ಷ ಟಿ.ತಿಮ್ಮೇಗೌಡ, ಸಮ್ಮೇಳನದ ಅಧ್ಯಕ್ಷ ಟಿ.ಚಂದ್ರಪ್ಪ, ಡಾ. ಶಾಂತರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಂಕಿತ ಪುಸ್ತಕ ಪ್ರಕಾಶನದ ಸಾವಿರ ಪುಸ್ತಕದ ಸಂಭ್ರಮ 30ನೇ ವಾರ್ಷಿಕೋತ್ಸವದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಮತ

ಅಂಕಿತ ಪುಸ್ತಕದ ಹುಟ್ಟಿಗೆ ಕನ್ನಡ ವಿವಿ ಕೊಡುಗೆ ಅಪಾರ

ಬೆಂಗಳೂರು: ಬದುಕಿನ ತಿರುವುಗಳು ಅಂದುಕೊಂಡದ್ದಕ್ಕಿಂತ ಕ್ಲಿಷ್ಟಕರವಾಗಿರುತ್ತದೆ ಆ ಮೂಲಕ ಸ್ವಾವಲಂಬಿ ಜೀವನವನ್ನು ಕಟ್ಟಿಕೊಡುತ್ತದೆ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಅಂಕಿತ ಪುಸ್ತಕ ಪ್ರಕಾಶನದ 'ಸಾವಿರದ ಸಂಭ್ರಮ' 1000ನೇ ಕೃತಿ ಲೋಕಾರ್ಪಣೆ ಹಾಗೂ 30ನೇ ವಾರ್ಷಿಕೋತ್ಸವದ ಸಂಭ್ರಮವನ್ನು ಉದ್ಘಾಟಿಸಿ ಮಾತನಾಡಿ, ಅಂಕಿತ ಪುಸ್ತಕದ ಹುಟ್ಟಿಗೆ ಕನ್ನಡ ವಿಶ್ವವಿದ್ಯಾಲಯದ ಕೊಡುಗೆ ಅಪಾರ. ಒಂದೊಂದು ಸಲ ಬದುಕಿನ ತಿರುವುಗಳು ನಾವು ಅಂದುಕೊಂಡದಕ್ಕಿಂತ ಬಹಳ ಕ್ಲಿಷ್ಟಕರವಾಗಿರುತ್ತದೆ. ತಿರುವುಗಳು ಉತ್ತಮವಾದ ಸ್ವಾವಲಂಬಿ ಜೀವನವನ್ನು ಕಟ್ಟಿಕೊಡುತ್ತದೆ. ಪ್ರಕಾಶ್ ಕಂಬತ್ತಳ್ಳಿ ದಂಪತಿಗಳ ಬದುಕು ಅವರ ಆಯ್ಕೆಯಲ್ಲ. ಇದರ ಹೊರತಾಗಿ ಅವರಿಗೆ ಬದುಕು ಹೇಗೆ ಅವರಿಗೆ ದಾರಿ ತೋರಿಸಿದೆಯೋ ಹಾಗೆ ಅವರು ನಡೆದುಕೊಂಡು ಬಂದಿದ್ದಾರೆ. ಆ ನಿಟ್ಟಿನಲ್ಲಿ ಇಂದು ಅವರು ಬಹಳ ದೊಡ್ಡ ಪುಸ್ತಕೋದ್ಯಮದ ರೂವಾರಿಗಳಾಗಿ ಪುಸ್ತಕದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಇನ್ನು ಇವರ ಬಹಳ ವಿಶೇಷವಾದ ಗುಣವೆಂದರೆ ಈ ದಂಪತಿಗಳಿಗಿರುವ ಸಾಹಿತ್ಯ ಜ್ಞಾನ ಹಾಗೂ ವ್ಯವಹಾರ ಜ್ಞಾನ. ಈ ಎರಡು ಗುಣಗಳು ಇಂದು ಅವರನ್ನು 1000 ಕೃತಿಗಳ ಪ್ರಕಟಣೆಯ ಹಂತಕ್ಕೆ ತಂದು ಇಟ್ಟಿದೆ ಎಂದರು.

ವಿಶ್ವವಾಣಿ ಡಿಜಿಟಲ್‌ನ ಸುದ್ದಿ ಸಂಪಾದಕ, ಲೇಖಕ ಹರೀಶ್ ಕೇರ ಕೃತಿ ಕುರಿತು ಮಾತನಾಡಿ, ದಕ್ಷಿಣ ಕನ್ನಡದ ರೋಗಗಳು, ಅಸ್ತಿತ್ವಗಳು, ಗುಣಗಳು, ವ್ಯಕ್ತಿಗಳು ಹಾಗೂ ಅವರ ಚಹರೆಗಳು ಎಲ್ಲವೂ ಎಲ್ಲ ಕಾಲ ದೇಶಗಳಲ್ಲಿ ಕಂಡುಬರುತ್ತಿರುವುದರಿಂದ ಹಾಗೂ ಎಲ್ಲ ದೇಶಕ್ಕೂ ಅವು ವ್ಯಾಪಿಸಿರುವುದರಿಂದ ಅದನ್ನು ದಕ್ಷಿಣ ಕನ್ನಡ ಎಂದು ಮಾತ್ರ ಭಾವಿಸದೇ, ಇದು ಇಡೀ ಮನುಕುಲ ಹಾಗೂ ನಮ್ಮ ದೇಶದ ಕಥೆ ಎಂದು ಭಾವಿಸಬೇಕು. ಜೋಗಿಯವರ ಈ ಕೃತಿ ಕನ್ನಡ ಸಾಹಿತ್ಯಕ್ಕೆ ಹೊಸತನದ ನಂಟು. ಇಲ್ಲಿ ಆ ಭಾಗದ ರಕ್ತಸಿಕ್ತ ಚಿತ್ರಣವನ್ನು ಕಾಣಬಹುದಾಗಿದ್ದು, ದಕ್ಷಿಣ ಕನ್ನಡಕ್ಕೆ ಕಾದಂಬರಿಯ ನಂಟಿದ್ದು, ಅವುಗಳಿಗೆ ಬಹಳ ಒಳ್ಳೆಯ ಗುಣವಿದೆ. ಪ್ರತಿಯೊಂದು ಕಾದಂಬರಿಕಾರನ ಗುಣವೆಂದರೆ, ಆತ ತನ್ನೊಳಗಿನ ಭಾಷೆಯನ್ನು ಅಲ್ಲಿಯೇ ಬಿಟ್ಟು, ದಕ್ಷಿಣ ಕನ್ನಡದ ಕನ್ನಡ ಭಾಷೆಯನ್ನು ಇಲ್ಲಿ ಬಳಸುತ್ತಾನೆ. ಅದೇ ಇಲ್ಲಿಯ ಕಾದಂಬರಿಗಳ ಹಾಗೂ ಕಾದಂಬರಿಕಾರನ ವಿಶೇಷ ಎಂದು ತಿಳಿಸಿದರು.

ಅಂಕಿತ ಪುಸ್ತಕ ಪ್ರಕಾಶನದಿಂದ 1000ನೇ ಕೃತಿ ಲೋಕಾರ್ಪಣೆ ಮಾಡಲಾಯಿತು. ಈ ವೇಳೆ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಲೇಖಜ ಜಯಂತ್ ಕಾಯ್ಕಿಣಿ, ಕನ್ನಡ ಪ್ರಭ ಪುರವಣಿ ಸಂಪಾದಕ ಜೋಗಿ, ಲೇಖಕ ಹರೀಶ್ ಕೇರ ಇದ್ದರು.

ಮೆಟ್ಟಿಲುಗಳು ಬದುಕಿನ ಸಂಕೇತ

ಕಾದಂಬರಿಯನ್ನು ಲೋಕಾರ್ಪಣೆಗೊಳಿಸಿದ ಹಿರಿಯ ಸಾಹಿತಿ ಜಯಂತ ಕಾಯ್ಕಿಣಿ ಮಾತ ನಾಡಿ, ಮೆಟ್ಟಿಲುಗಳು ಬದುಕಿನ ಸಂಕೇತ. ಜೀವನ ದಲ್ಲಿ ಏರಿಳಿತಗಳು ಆಗುತ್ತಲೇ ಇರುತ್ತದೆ. ಮೆಟ್ಟಿಲುಗಳು ಇದರ ಸಂಕೇತ. ಇನ್ನು ಹಲವರು ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಯೋಚನೆ ಮಾಡ್ತಾರೆ. ಆದರೆ ಹಲವರಿಗೆ ಗೊತ್ತಿಲ್ಲ ಪುಸ್ತಕ ಎನ್ನುವುದು ಜೀವನದುದ್ದಕ್ಕೂ ನಮ್ಮ ಜತೆ ಇರುವಂತಹ ಒಂದು ಆಸ್ತಿ. ನಾನು ಈಗಲೂ ಮರಳಿ ಮಣ್ಣಿಗೆ ಕೃತಿಯನ್ನ ಆಗಾಗ ಓದುತ್ತಲೇ ಇರು ತ್ತೇನೆ. ಏಕೆಂದರೆ ಪುಸ್ತಕದ ಅನುಭವ ನಮ್ಮ ಜತೆ ಶಾಶ್ವತವಾಗಿರುತ್ತದೆ. ಮುಖ್ಯವಾಗಿ ನಮ್ಮ ಜೀವನ ದಲ್ಲಿ, ಸಂಬಂಧಗಳಲ್ಲಿ ಬರುವಂತಹ ಪರೀಕ್ಷೆಗಳಿಗೆ ಪಥ್ಯ ಪುಸ್ತಕ ಸಾಹಿತ್ಯ ಎಂದರು.

ಸಮಾಚಾರ ಸಣ್ಣದಲ್ಲ

ರಾಜ್ಯದ ಪೊಲೀಸರ ಸಹಕಾರದಿಂದಲೇ ದಾಳಿ

ಮಂಡ್ಯ: ಕರ್ನಾಟಕ ಪೊಲೀಸರ ಸಹಕಾರದಿಂದಲೇ ಮಹಾರಾಷ್ಟ್ರ ಪೊಲೀಸರು ದಾಳಿ ಮಾಡಿದ್ದಾರೆ. ಆ

ಬಗ್ಗೆ ನಮಗೆ ಮಾಹಿತಿ ಸಿಕ್ಕಿದೆ. ಇಡೀ ಪ್ರಪಂಚದಲ್ಲೆ ಡ್ರಗ್ ಮಾಫಿಯಾ ಇದೆ ಎಂದು ಬೆಂಗಳೂರಿನಲ್ಲಿ ಮಹಾರಾಷ್ಟ್ರ ಪೊಲೀಸರಿಂದ ಡ್ರಗ್ಸ್ ಸೀಜ್ ವಿಚಾರ ವಾಗಿ ಸಚಿವ ಚಲುವರಾಯ ಸ್ವಾಮಿ ಮಾತನಾಡಿದರು. ಡ್ರಗ್ಸ್ ಮಾಫಿಯಾ ದವರು ದೊಡ್ಡ ದೊಡ್ಡ ಲೀಡರ್ ಜತೆಯೇ ಓಡಾಡ್ತಿರ್ತಾರೆ. ಅವರನ್ನೂ ಹಿಡಿಯೋಕೆ ಕಾನೂನು ವ್ಯಾಪ್ತಿಗೂ ಬರ್ತಿಲ್ಲ. ಕಾನೂನು ಭದ್ರತೆಯಲ್ಲಿಯೇ ಯಾರು ಕಂಡು ಹಿಡಿಯದಂತೆ ಡ್ರಗ್ ಮಾಫಿಯಾ ನಡೆಯುತ್ತಿದೆ. ಎರಡು ವರ್ಷದಲ್ಲಿ 50 ಕಡೆ ನಮ್ಮ ಪೊಲೀಸರು ದಾಳಿ ಮಾಡಿದ್ದಾರೆ. ಮಹಾರಾಷ್ಟ್ರ ದವರು ಬೆಂಗಳೂ ರಿನಲ್ಲಿ ಎರಡು ಕಡೆ ದಾಳಿ ಮಾಡಿದ್ರೆ ತಪ್ಪೇನು?. ನಾವು ಯಾವುದನ್ನೂ ಲಘು ವಾಗಿ ಪರಿಗಣಿಸಲ್ಲ. ಸರಕಾರ ನಮ್ಮ ಪೊಲೀಸರಿಗೆ ಫ್ರೀ ಹ್ಯಾಂಡ್ ಕೊಟ್ಟಿದ್ದಾರೆ. ಡ್ರಗ್ ಮಾಫಿಯಾ ವಿರುದ್ಧ ನಮ್ಮ ಸರಕಾರ ಕಾನೂನು ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದ್ದಾರೆ.

ಖರ್ಗೆಯವರಿಗೆ ನಾನೇ ಹೈಕಮಾಂಡ್ ಎನ್ನುವ ಧೈರ್ಯವಿಲ್ಲ

ಮೈಸೂರು: ನಾನು ಹೈಕಮಾಂಡ್ ಎಂದು ಹೇಳುವ ಧೈರ್ಯ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.

ಸುದ್ದಿಗಾರರ ಜತೆ ಮಾತ ನಾಡಿದ ಅವರು, ಮಲ್ಲಿಕಾ ರ್ಜುನ ಖರ್ಗೆ ಅವರು ಸೀನಿಯರ್, ರಾಜ್ಯದ ಸಿಎಂ ಕುರ್ಚಿ ವಿಚಾರವಾಗಿ ಸರಿ ಯಾಗಿ ನಿರ್ಧಾರ ಕೈಗೊ ಳ್ಳಲು ಅವರಿಗೆ ಆಗುತ್ತಿಲ್ಲ. ದಲಿತ ಸಿಎಂ ವಿಚಾರ ಬಂದಾಗ ಡಿ.ಕೆ. ಶಿವಕುಮಾರ್ ಅವರು, ಖರ್ಗೆ ಅವರು ಸಿಎಂ ಆದರೆ ನಾನು ಬಿಟ್ಟು ಕೊಡುವೆ ಅಂದಿದ್ದರು. ಆದರೆ, ಸಿದ್ದರಾಮಯ್ಯನವರಿಗೆ ಆ ಉದಾರತೆ ಇಲ್ಲ. ಪಕ್ಷ ಕಟ್ಟಿ ದುಡಿದಿರುವ ಡಿ.ಕೆ. ಶಿವಕುಮಾರ್‌ಗೆ ಸಿಎಂ ಸ್ಥಾನ ಕೊಡಬೇಕು. ಆದರೆ, ಸಿದ್ದರಾಮಯ್ಯ ಮನಸ್ಸು ಮಾಡುತ್ತಿಲ್ಲ. ಹೈಕ ಮಾಂಡ್ ಮಾತನಾಡುತ್ತಿಲ್ಲ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ ಎಂದಾಯಿತು ಎಂದರು. ಸಿದ್ದರಾಮಯ್ಯನವರೇ ನೀವು ಕಾಂಗ್ರೆಸ್‌ನಲ್ಲಿ ಇದ್ದೀರೋ ಅಥವಾ ಬೇರೆ ಪಕ್ಷದಲ್ಲಿ ಇದ್ದೀರೋ? ಕಾಂಗ್ರೆಸ್ಸೇ ಅಹಿಂದ. ಹೀಗಿರುವಾಗ ಅಹಿಂದ ಸಮ್ಮೇಳನ ಮಾಡಿಸಿ ಕಾಂಗ್ರೆಸ್ ಬಾಗಿಲು ಹಾಕಿಸುತ್ತಿರಾ?. ಕಾಂಗ್ರೆಸ್‌ನಲ್ಲಿ ಕೇಳುವವರು ಇಲ್ಲದೇ ಹೀಗೆ ಆಗುತ್ತಿದೆ. ಅರಮನೆಯ ಜಯ ಮಾರ್ತಾಂಡ ಗೇಟ್ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣವನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿ, ಸೂಕ್ತ ತನಿಖೆ ನಡೆಸಬೇಕು. ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಮೂವರು ಸಾವನ್ನಪ್ಪಿದ್ದಾರೆ. ಆ ಸ್ಥಳದ ಸುತ್ತ ಸಿಸಿಟಿವಿ ಕ್ಯಾಮರಾದಲ್ಲಿ ಏನೂ ರೆಕಾರ್ಡ್ ಆಗಿಲ್ಲ. ಅರಮನೆಗೆ ಭದ್ರತೆ ಇಲ್ಲದಂತಾ ಗಿದೆ. ಪಾರಂಪರಿಕ ಕಟ್ಟಡವಾಗಿರುವ ಅರಮನೆಗೆ ಹೆಚ್ಚಿನ ಭದ್ರತೆ ಒದಗಿಸಬೇಕು ಎಂದು ಒತ್ತಾಯಿಸಿದರು.

...ಗೀತಾಂಜಲಿಗೆ ಮೋದಿ ಮೆಚ್ಚುಗೆ

← ಮೊದಲ ಪುಟದಿಂದ

ಕನ್ನಡ ಪಾಠಶಾಲೆಯಲ್ಲಿ ಮಕ್ಕಳಿಗೆ ಕನ್ನಡ ಭಾಷೆ ಕಲಿಸುತ್ತಿದ್ದಾರೆ. ಕನ್ನಡ ಓದು, ಬರಹ, ಮಾತಾಡುವುದನ್ನು ಕಲಿಸುತ್ತಿದ್ದಾರೆ. ಈಗ ಆ ಪಾಠಶಾಲೆಯಲ್ಲಿ ಒಂದು ಸಾವಿರ ಮಕ್ಕಳಿಗೆ ಕನ್ನಡ ಭಾಷೆ ಕಲಿಸುವ ಕೆಲಸ ಆಗುತ್ತಿದೆ. ಈ ಮೂಲಕ ದುಬೈನಲ್ಲಿ ಇರುವ ಕನ್ನಡಿಗರು ಭಾಷಾಭಿಮಾನ ಮೆರೆಯುತ್ತಿದ್ದಾರೆ. ಕನ್ನಡ ನಾಡು-ನುಡಿ ನಮ್ಮ ಹೆಮ್ಮೆ, ಕನ್ನಡ ಭೂಮಿ, ಭಾಷೆ ನಮ್ಮ ಹೆಮ್ಮೆಯಾಗಿದೆ ಎಂದಿದ್ದಾರೆ.

ಫಿಜಿಯಲ್ಲಿ ತಮಿಳು ದಿನಾಚರಣೆ: ಫಿಜಿಯಲ್ಲಿ ನಡೆಯುತ್ತಿರುವ ತಮಿಳು ದಿನಾಚರಣೆಯನ್ನೂ ಮೋದಿ ಮೆಚ್ಚಿದ್ದಾರೆ. ಫಿಜಿಯಲ್ಲಿ ಭಾರತೀಯ ಭಾಷೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಶ್ಲಾಘನೀಯ ಕೆಲಸ ನಡೆದಿದೆ. ಅಲ್ಲಿನ ಹೊಸ ಪೀಳಿಗೆ ಯನ್ನು ತಮಿಳು ಭಾಷೆಯೊಂದಿಗೆ ಸಂಪರ್ಕಿಸಲು ವಿವಿಧ ಹಂತಗಳಲ್ಲಿ ನಿರಂತರ ಪ್ರಯತ್ನಗಳು ನಡೆಯುತ್ತಿವೆ. ಕಳೆದ ತಿಂಗಳು, ಫಿಜಿಯ ರಾಕಿರಾಕಿ ಪ್ರದೇಶದ ಒಂದು ಶಾಲೆಯು ತನ್ನ ಮೊದಲ ತಮಿಳು ದಿನ ಆಚರಣೆಯನ್ನು ನಡೆಸಿತು. ಈ ದಿನವು ಮಕ್ಕಳಿಗೆ ತಮ್ಮ ಭಾಷೆಯ ಬಗ್ಗೆ ತಮ್ಮ ಹೆಮ್ಮೆಯನ್ನು ವ್ಯಕ್ತಪಡಿಸಲು ವೇದಿಕೆಯನ್ನು ಒದಗಿಸಿತು ಎಂದಿದ್ದಾರೆ.

ಮಹಾರಾಷ್ಟ್ರ ಪೊಲೀಸರು ಹೇಳಿದಷ್ಟು ಪ್ರಮಾಣದ ಡ್ರಗ್ಸ್ ಸಿಕ್ಕಿಲ್ಲವೆಂದ ಪರಂ | ಸಮರ್ಥನೆಯ ಹೊರತಾಗಿಯೂ ಅಧಿಕಾರಿಗಳಿಗೆ ತರಾಟೆ | ನೆರೆ ರಾಜ್ಯದವರಿಗೆ ಸಿಕ್ಕಿರುವ ಮಾಹಿತಿ ಕರ್ನಾಟಕ ಪೊಲೀಸರಿಗೆ ಏಕೆ ಸಿಕ್ಕಿಲ್ಲ? ಬಿಜೆಪಿ ಪ್ರಶ್ನೆ

ಡ್ರಗ್ಸ್ ಭಾರಿ ಕಾರ್ಯಾಚರಣೆ: ಒಪ್ಪದ ಗೃಹ ಇಲಾಖೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾಂಸ್ಕೃತಿ ನಗರಿ ಮೈಸೂರಿನಲ್ಲಿ ಕೆಲ ತಿಂಗಳ ಹಿಂದೆ ಡ್ರಗ್ಸ್ ಫ್ಯಾಕ್ಟರಿ ಪತ್ತೆಯಾದ ವಿಷಯ ಮಾಸುವ ಮೊದಲೇ, ರಾಜಧಾನಿ ಬೆಂಗಳೂರಿನಲ್ಲಿ ಮಾದಕ ವಸ್ತು ಫ್ಯಾಕ್ಟರಿ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿ, ಭಾರಿ ಪ್ರಮಾಣದ ರಾಸಾಯನಿಕ ವನ್ನು ವಶಕ್ಕೆ ಪಡೆದಿರುವುದು ಗೃಹ ಇಲಾಖೆಗೆ ಇರಸು-ಮುರಸು ಉಂಟು ಮಾಡಿದೆ. ಮಹಾರಾಷ್ಟ್ರ ಪೊಲೀಸರು ಹೇಳಿದಷ್ಟು ಪ್ರಮಾಣದಲ್ಲಿ ಡ್ರಗ್ಸ್ ಸಿಕ್ಕಿಲ್ಲವೆಂದು ಗೃಹ ಸಚಿವ ಪರಮೇಶ್ವರ ಸಮ ರ್ಥಿಸಿಕೊಂಡರೂ, ಅಧಿಕಾರಿಗಳನ್ನು ತರಾಟೆಗೆ ತಗೆದುಕೊಂಡಿದ್ದಾರೆ ಎನ್ನಲಾಗಿದೆ.

ಭಾನುವಾರ ಬೆಳಗ್ಗೆ ಬೆಂಗಳೂರು ಪೊಲೀಸ್ ಆಯುಕ್ತ ಕಚೇರಿಯಲ್ಲಿ ಹೊಸವರ್ಷಾಚರಣೆಯ ಸಿದ್ಧತೆಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ, ಡ್ರಗ್ಸ್ ಪತ್ತೆಯಾಗಿರುವ ವಿಷಯವನ್ನು ಪ್ರಸ್ತಾಪಿಸಿ ಅಧಿ ಕಾರಿಗಳನ್ನು ತರಾಟೆಗೆ ತಗೆದುಕೊಂಡಿದ್ದಾರೆ ಎನ್ನಲಾ ಗಿದೆ. ಮಹಾರಾಷ್ಟ್ರ ಪೊಲೀಸರೊಂದಿಗೆ ನಮ್ಮವರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ. ಆದರೆ ಮಹಾರಾಷ್ಟ್ರ ಪೊಲೀಸರಿಗೆ ಸಿಕ್ಕ ಮಾಹಿತಿ ನಮ್ಮ ಪೊಲೀಸರಿಗೆ ಏಕೆ ಸಿಕ್ಕಿಲ್ಲ ಎಂದು ಪ್ರಶ್ನಿಸಿದ್ದಾರೆ.

ಕೆಲ ತಿಂಗಳ ಹಿಂದೆ ಮೈಸೂರಿನಲ್ಲಿ ಇದೇ ರೀತಿಯ ಸಿಂಥೆಟಿಕ್ ಡ್ರಗ್ಸ್ ಉತ್ಪಾದನೆಯ ಕಾರ್ಖಾನೆ ಪತ್ತೆಯಾಗಿತ್ತು. ಎಚ್ಚರವಹಿಸುವಂತೆ ಸೂಚನೆ ನೀಡಿದ್ದರೂ, ಬೆಂಗಳೂರಿನಲ್ಲಿ ಮಾದಕ ವಸ್ತುಗಳ ತಯಾರಿಕಾ ಘಟಕ ತಲೆ ಎತ್ತಿವೆ. ಅದರ ಲ್ಲಿಯೂ ಮಹಾರಾಷ್ಟ್ರದ ಪೊಲೀಸರ ಕಾರ್ಯಾ ಚರಣೆಯಿಂದ ಕಂಡುಬಂದಿರುವುದು ನಾಚಿಕೆ ಗೇಡು. ರಾಜ್ಯದ ಪೊಲೀಸರ ಬಳಿಯೂ ಗುಪ್ತದಳ ಇದೆ, ಡ್ರಗ್ಸ್ ನಿಗ್ರಹ ಪಡೆಯಿದೆ. ಮಾದಕವಸ್ತು ನಿಯಂತ್ರಿಸುವ ಉದ್ದೇಶದಿಂದಲೇ, ಪ್ರತ್ಯೇಕ ಪಡೆಗಳನ್ನು ರಚಿಸಿದ್ದರೂ ಪತ್ತೆ ಮಾಡದಿರುವುದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅಧಿಕಾರಿ ಗಳ ವಿರುದ್ಧ ಗರಂ ಆಗಿದ್ದಾರೆ ಎನ್ನಲಾಗಿದೆ.

ಮಾದಕ ವಸ್ತುಗಳನ್ನು ಸಹಿಸಿಕೊಳ್ಳಬಾರದು ಎಂದು ಹಲವು ಬಾರಿ ತಾಕೀತು ಮಾಡಿದ್ದೇವೆ. ಇದರ ನಿಯಂತ್ರಣಕ್ಕೆ ಸರಕಾರ ಎಲ್ಲ ರೀತಿಯ ನೆರವು ನೀಡುತ್ತಿದೆ. ಹಾಗಿದ್ದರೂ ಏಕೆ ಇಂತಹ ಕೃತ್ಯಗಳು ನಡೆಯುತ್ತಿದೆ? ಮಾದಕ ವಸ್ತುಗಳ, ಸರಬರಾಜು, ಮಾರಾಟ ಮತ್ತು ಬಳಕೆಯೇ ದೊಡ್ಡ ಸವಾಲಾಗಿತ್ತು. ಅಂಥದ್ದರಲ್ಲಿ ಮಾದಕವಸ್ತುಗಳೇ ಇಲ್ಲಿ ತಯಾರಾಗುತ್ತಿವೆ ಎಂದರೆ ನಾಚಿಕೆಗೇಡು. ಇದಕ್ಕೆ ಸಂಬಂಧಪಟ್ಟ ಹಿರಿಯ ಪೊಲೀಸ್ ಅಧಿಕಾರಿ ಗಳನ್ನೇ ಹೊಣೆ ಮಾಡುವುದಾಗಿ ಎಚ್ಚರಿಕೆ ನೀಡಿದ್ದು, ಕರ್ತವ್ಯ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವ ಬಗ್ಗೆಯೂ ಪರಿ ಶೀಲಿಸುವಂತೆ ಸೂಚಿಸಿದ್ದಾರೆ ಎನ್ನಲಾಗಿದೆ.

ಸರಕಾರದ ವಿರುದ್ಧ ಹೋರಾಟ: ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ್, ಯುವ ಜನಾಂಗದ ಭವಿಷ್ಯಕ್ಕೆ ಮಾರಕವಾಗಿರುವ ಡ್ರಗ್ಸ್ ದಂಧೆಯನ್ನು ಗಂಭೀರವಾಗಿ ಪರಿಗಣಿಸಿ, ಇದಕ್ಕೆ ಕಡಿವಾಣ ಹಾಕಲು ಕೂಡಲೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿ ದ್ದರೆ ಸರಕಾರದ ವಿರುದ್ಧ ಉಗ್ರ ಹೋರಾಟ ನಡೆಸಬೇಕಾಗುತ್ತದೆ. ಬೆಳಗಾವಿ ಅಧಿವೇಶನದಲ್ಲಿ ಡ್ರಗ್ಸ್ ಮಾಫಿಯಾ ಬಗ್ಗೆ ಪ್ರಸ್ತಾಪ ಮಾಡಿದಾಗ 'ಡ್ರಗ್ಸ್ ದಂಧೆ ಎಲ್ಲ ರಾಜ್ಯಗಳಲ್ಲಿಯೂ ಇದೆ' ಎಂದು ಗೃಹಸಚಿವ ಪರಮೇಶ್ವರ್ ಅವರು ಉಡಾಫೆ ಉತ್ತರ ಕೊಟ್ಟಿದ್ದರು ಎಂದು ಕಿಡಿಕಾರಿದರು.

ಕಳೆದ ಜುಲೈನಲ್ಲಿ ಮೈಸೂರಿನಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆ ಹಚ್ಚಿ, ಸುಮಾರು 390 ಕೋಟಿ ರು. ಮೌಲ್ಯದ 192 ಕೆ.ಜಿ. ಮೆಫೆಡ್ರೋನ್ ಡ್ರಗ್ಸ್ ವಶಪಡಿಸಿಕೊಂಡಿದ್ದ ಮಹಾರಾಷ್ಟ್ರ ಪೊಲೀ ಸರು ಇದೀಗ ಬೆಂಗಳೂರಿನ 3 ಡ್ರಗ್ಸ್ ಫ್ಯಾಕ್ಟರಿ ಮೇಲೆ ನಡೆಸಿ 56 ಕೋಟಿ ರು. ಮೌಲ್ಯದ ಡ್ರಗ್ಸ ವಶಪಡಿಸಿಕೊಂಡಿರುವುದಾಗಿ ಹೇಳಿದ್ದಾರೆ. ಕಾಂಗ್ರೆಸ್ ಸರಕಾರದ ಅವಧಿಯಲ್ಲಿ, ಕರ್ನಾಟಕ ಪೊಲೀಸ್ ಇಲಾಖೆ ನಿತ್ರಾಣವಾಗಿದೆ. ಕರ್ನಾಟಕ ದಲ್ಲಿ ನಡೆಯುತ್ತಿರುವ ಡ್ರಗ್ಸ್ ದಂಧೆ ಪತ್ತೆ ಹಚ್ಚಲು, ಡ್ರಗ್ಸ್ ದಂಧೆಕೋರರನ್ನು ಹಾಕಲು ಮಹಾರಾಷ್ಟ್ರ ಪೊಲೀಸರು ಬರಬೇಕಾದರೆ ಕರ್ನಾಟಕದ ಪೊಲೀಸ್ ಇಲಾಖೆ ಏನು ಮಾಡುತ್ತಿದೆ? ರಾಜ್ಯದ ಗುಪ್ತಚರ ಇಲಾಖೆ ಏನು ಮಾಡುತ್ತಿದೆ? ಎಂದು ಪ್ರಶ್ನಿಸಿದ್ದಾರೆ.

ದಾಳಿಯಲ್ಲಿ ಸಿಕ್ಕಿದ್ದೇನು?

ಮಹಾರಾಷ್ಟ್ರ ಪೊಲೀಸರ ಪ್ರಕಾರ, ಬೆಂಗಳೂರಿನ ಮೂರು ಕಡೆಗಳಲ್ಲಿ ಡ್ರಗ್ಸ್ ಫ್ಯಾಕ್ಟರಿ ಮೇಲೆ ದಾಳಿ ನಡೆಸಿ 55.88 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದ ಪ್ರಕರಣ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ. ಮುಂಬೈನಲ್ಲಿ ಇತ್ತೀಚೆಗೆ 1.5 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿತ್ತು. ಈ ವೇಳೆ ಡ್ರಗ್ ಫೆಡ್ಲರ್ ಅಬ್ದುಲ್ಲಾ ಖಾದರ್ ಶೇಕ್ ವಿಚಾರಣೆ ವೇಳೆ ಬೆಳಗಾವಿ ಮೂಲದ ಪ್ರಶಾಂತ್ ಯಲ್ಲಪ್ಪ ಪಾಟೀಲ್ ಎಂಬಾತನ ಹೆಸರನ್ನು ಬಾಯಿಬಿಟ್ಟಿದ್ದ. ಪಾಟೀಲ್ ವಿಚಾರಣೆ ವೇಳೆಯಲ್ಲಿ ಸಿಕ್ಕ ಮಾಹಿತಿಯ ಆಧಾರದ ಮೇಲೆ, ಬೆಂಗಳೂರಿನ ಮೂರು ಕಡೆ ದಾಳಿ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿದ್ದಾರೆ. ಹೊರಮಾವು, ಯರಪ್ಪನಹಳ್ಳಿ, ಕಣ್ಣೂರು ಬಳಿ ಡ್ರಗ್ಸ್ ಫ್ಯಾಕ್ಟರಿ ನಡೆಸುತ್ತಿರುವುದು ಪತ್ತೆಯಾಗಿದೆ. ದಾಳಿ ವೇಳೆ 4.1 ಕೆಜಿ ಘನ ಎಂಡಿಎಂಎ ಮತ್ತು 17 ಕೆಜಿ ದ್ರವ ಎಂಡಿಎಂಎ ಸೇರಿ 55.88 ಕೋಟಿ ರು. ಮೌಲ್ಯದ ಒಟ್ಟು 21.4 ಕೆಜಿ ಡ್ರಗ್ಸ್ ವಶಕ್ಕೆ ಪಡೆದಿದ್ದಾರೆ.

ಮಹಾ ಹೇಳಿಕೆ ಒಪ್ಪದ ಸಚಿವ ಪರಮೇಶ್ವರ

ಮಹಾರಾಷ್ಟ್ರ ಪೊಲೀಸರ ಈ ಹೇಳಿಕೆಯನ್ನು ಗೃಹ ಸಚಿವ ಪರಮೇಶ್ವರ ಸಾರಸಗಟಾಗಿ ತಳ್ಳಿಹಾಕಿದ್ದಾರೆ. ಮಹಾರಾಷ್ಟ್ರ ಪೊಲೀಸರು ಮುಂಬೈನಲ್ಲಿ ಸಿಕ್ಕ ಆರೋಪಿಯ ಮಾಹಿತಿ ಆಧರಿಸಿ ಬೆಂಗಳೂರಿನಲ್ಲಿ ಆರೋಪಿಯೊಬ್ಬನನ್ನು ಹಿಡಿದಿದ್ದಾರೆ. ಮುಂಬೈ ಪೊಲೀಸರು ಮತ್ತು ಬೆಂಗಳೂರು ನಗರ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿಯು ಡ್ರಗ್ಸ್ ತಯಾರಿಸಲು ಬೇಕಾದ ಮೆಫೆಡ್ರಿನ್ ಎಂಬ ಕೆಮಿಕಲ್ ಸಂಗ್ರಹಿಸಿಟ್ಟುಕೊಂಡಿದ್ದ. 58 ಕೋಟಿ ಮೌಲ್ಯದ ಡ್ರಗ್ಸ್ ಹಿಡಿದಿದ್ದೇವೆ ಎಂದು ಅವರು ಹೇಳಿಕೊಂಡಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾಹಿತಿ. ಪತ್ತೆಯಾಗಿರುವ ಡ್ರಗ್ಸ್ ಕೆಮಿಕಲ್ ಮೌಲ್ಯ ಕೆಜಿಗೆ 30 ಲಕ್ಷ ರು. ಬೆಲೆಬಾಳುತ್ತದೆ. ಒಟ್ಟು 4 ಕೆಜಿಗೆ 1.20 ಕೋಟಿ ಮೌಲ್ಯವಾಗುತ್ತದೆ. ಇದರೊಂದಿಗೆ ಮೂರು ಕಡೆಗಳಲ್ಲಿ ಫ್ಯಾಕ್ಟರಿ ಇತ್ತು ಎಂಬುದು ಸುಳ್ಳು. ಘಟನೆಯ ಬಗ್ಗೆ ಸಮರ್ಥಿಸಿಕೊಳ್ಳಲು ಹೋಗುವುದಿಲ್ಲ. ಆದರೆ ನಮ್ಮವರು ಇರಲಿಲ್ಲ ಎನ್ನುವುದು ಸರಿಯಲ್ಲ. ಕಾರ್ಯಾಚರಣೆ ವೇಳೆ ನಮ್ಮ ಡಿಸಿಪಿಯವರು ಮುಂಬೈ ಪೊಲೀಸರೊಂದಿಗೆ ಇದ್ದರು. ಡ್ರಗ್ಸ್ ದಂಧೆಯ ವಿರುದ್ಧ ರಾಷ್ಟ್ರೀಯ ಮಟ್ಟದಲ್ಲಿ ಸಂಘಟಿತವಾಗಿ ಹೋರಾಟ ನಡೆಸಲಾಗುತ್ತಿದೆ ಎಂದು ಹೇಳಿದರು.

ಗೃಹ ಇಲಾಖೆಯಲ್ಲಿ ಡ್ರಗ್ಸ್ ನಿಯಂತ್ರಣಕ್ಕೆ ಬದ್ಧತೆಯಿರುವ ಅಧಿಕಾರಿಗಳ ನೇಮಕವಾಗಿಲ್ಲ. ಹೊರ ರಾಜ್ಯದ ಪೊಲೀಸರು ಮುಂದೆಯೂ ಬಂದು ರೇಡ್ ಮಾಡುವ ಪರಿಸ್ಥಿತಿ ಇದೆ. ಡ್ರಗ್ಸ್ ಫ್ಯಾಕ್ಟರಿಗಳ ಪತ್ತೆ, ಡ್ರಗ್ಸ್ ಸೇವನೆ, ಮಾರಾಟ ಹೆಚ್ಚಳ ಎಲ್ಲಕ್ಕೂ ಪೊಲೀಸ್ ವೈಫಲ್ಯ ಕಾರಣ. ಅನೇಕ ಕಡೆ ಪೊಲೀಸರೇ ಡ್ರಗ್ಸ್ ಪೆಡ್ಲರ್‌ಗಳ ಜತೆ ಕೈ ಜೋಡಿಸಿದ್ದಾರೆ. ಪೊಲೀಸರು ಡ್ರಗ್ಸ್ ಪೆಡ್ಲರ್ ಗಳಿಂದ ಹಣ ಪಡೆದು ದಂಧೆಗೆ ಸಹಾಯ ಮಾಡುತ್ತಿದ್ದಾರೆ. ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ.

– ಭಾಸ್ಕರ್ ರಾವ್ ನಿವೃತ್ತ ಐಪಿಎಸ್



ಮಹಾರಾಷ್ಟ್ರ ಪೊಲೀಸರಿಗೆ ಡ್ರಗ್ಸ್ ಫ್ಯಾಕ್ಟರಿ ಎಲ್ಲಿದೆ ಅಂತ ಗೊತ್ತಾಗುತ್ತದೆ. ನಮ್ಮ ಪೊಲೀಸರಿಗೆ ಗೊತ್ತಾಗಲ್ಲ ಎಂದರೆ ಯಾವ ರೀತಿಯಲ್ಲಿ ಕೆಲಸವಾಗುತ್ತಿದೆ? ಗೃಹ ಸಚಿವರಿಗೆ ಏನೂ ಗೊತ್ತಿಲ್ಲ, ಪರಿಶೀಲಿಸುತ್ತೇವೆ, ನೋಡುತ್ತೇವೆ ಎನ್ನುತ್ತಾರೆ. ಪೊಲೀಸ್ ಹುದ್ದೆಗಳನ್ನು ಮಾರಾಟಕ್ಕಿಟ್ಟಿದ್ದಾರೆ. ಡ್ರಗ್ಸ್ ಪೆಡ್ಲರ್‌ಗಳಿಂದ ಹಣ ಪಡೆದು ಆಡಳಿತ ಮಾಡುತ್ತಿದ್ದಾರೆ. ನಮ್ಮ ಯುವಕರಿಗೂ ಭವಿಷ್ಯ ಇಲ್ಲ, ನಮ್ಮ ನಾಡಿಗೂ ಭವಿಷ್ಯ ಇಲ್ಲ. ಕಾಂಗ್ರೆಸ್‌ನವರಿಗೆ ಯಾವುದನ್ನೂ ನಿರ್ವಹಣೆ ಮಾಡಲು ಆಗುತ್ತಿಲ್ಲ.

– ಡಾ.ಅಶ್ವತ್ಥನಾರಾಯಣ, ಮಾಜಿ ಡಿಸಿಎಂ

ಡ್ರಗ್ಸ್: ಮಹಾ ಪೊಲೀಸ್ ಸುಳ್ಳು

← ಮೊದಲ ಪುಟದಿಂದ

ಈ ದಾಳಿಯ ಬಳಿಕ ಮಹಾರಾಷ್ಟ್ರ ಪೊಲೀಸರು ಬೆಂಗಳೂರಿನಲ್ಲಿ 58 ಕೋಟಿ ರು. ಮೌಲ್ಯದ ಡ್ರಗ್ಸ್ ಸಿಕ್ಕಿದೆ ಎಂದು ಘೋಷಿಸಿದರು. ಆದರೆ ಮಹಾರಾಷ್ಟ್ರ ಪೊಲೀಸರ ಈ ಹೇಳಿಕೆಯನ್ನು ಗೃಹ ಸಚಿವ ಪರಮೇಶ್ವರ್ ಒಪ್ಪದೇ, 1.20 ಕೋಟಿ ರು. ಮೌಲ್ಯದ ಡ್ರಗ್ಸ್ ಸಿಕ್ಕಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಈ ರೀತಿ ಭಿನ್ನ ಹೇಳಿಕೆ ನೀಡಿರುವುದು ಚರ್ಚೆಗೆ ಕಾರಣ ವಾಗಿದೆ. ಮಹಾರಾಷ್ಟ್ರ ಪೊಲೀಸರ ಪ್ರಕಾರ, ಬೆಂಗಳೂರಿನ ಮೂರು ಕಡೆ ದಾಳಿ ನಡೆಸಿ 55.88 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಆರ್‌ಜೆ ಇವೆಂಟ್ ಹೆಸರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ನಡೆಸುತ್ತಿದ್ದರು ದಾಳಿ ವೇಳೆ 4.1 ಕೆಜಿ ಘನ ಎಂಡಿಎಂಎ ಮತ್ತು 17 ಕೆಜಿ ದ್ರವ ಎಂಡಿಎಂಎ ಸೇರಿ 55.88 ಕೋಟಿ ರು. ಮೌಲ್ಯದ ಒಟ್ಟು 21.4 ಕೆಜಿ ಡ್ರಗ್ಸ್ ವಶಕ್ಕೆ ಪಡೆಯಲಾಗಿದೆ. ರಾಜಸ್ಥಾನ ಮೂಲದ ಸೂರಜ್ ರಮೇಶ್ ಯಾದವ್, ಮಲ್ಖಾನ್ ರಾಮಲಾಲ್ ಬಿಷ್ಣೋಯ್ ಸೇರಿದಂತೆ ನಾಲ್ವ ರನ್ನು ಬಂಧಿಸಲಾಗಿದೆ. ಈ ಫ್ಯಾಕ್ಟರಿಗಳಿಂದ ದೇಶದ ಅನೇಕ ರಾಜ್ಯಗಳಿಗೆ ಡ್ರಗ್ಸ್ ಸರಬರಾಜು ಶಂಕೆ ವ್ಯಕ್ತವಾಗಿದ್ದು, ಮಹಾರಾಷ್ಟ್ರ ಪೊಲೀಸರು ಬಂಧಿತರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ರಾಜ್ಯ ಸರಕಾರದ ವಿರುದ್ಧ ಬಿಜೆಪಿ ನಾಯಕರು ತಿರುಗಿ ಬಿದ್ದಿದ್ದು, ಮಾದಕವಸ್ತು ಮಾರಾಟಕ್ಕೆ ಸಂಪೂರ್ಣ ಕಡಿವಾಣ ಹಾಕುವ ತನಕ ಸರಕಾರದ ವಿರುದ್ಧ ಹೋರಾಟ ನಡೆಸುವುದಾಗಿ ಬಿಜೆಪಿ ನಾಯಕರು ಎಚ್ಚರಿಸಿದ್ದಾರೆ.

ಮಹಾರಾಷ್ಟ್ರ ಪೊಲೀಸರು 58 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಆದರೆ ಇದು ಸತ್ಯಕ್ಕೆ ದೂರವಾದ ಮಾಹಿತಿ. ಪತ್ತೆಯಾಗಿರುವ ರಾಸಾಯನಿಕ ಪ್ರತಿ ಕೆಜಿಗೆ 30 ಲಕ್ಷ ರು. ಒಟ್ಟು ನಾಲ್ಕು ಕೆಜಿ ರಾಸಾಯನಿಕ ಪತ್ತೆಯಾಗಿದ್ದು ಇದರ ಮೊತ್ತ 1.20 ಕೋಟಿ ರು. ಆಗಿದೆ. ಬೆಂಗಳೂರು ನಗರ ಪೊಲೀಸ್, ಮುಂಬೈ ಪೊಲೀಸ್, ಎನ್‌ಸಿಬಿ, ಸೋಕೋ ಜಂಟಿ ಕಾರ್ಯಾಚರಣೆ ನಡೆಸಿದ್ದಾರೆ. ಬೆಂಗಳೂರು ಪೊಲೀಸರು ಕ್ರಮ ಕೈಗೊಂಡಿಲ್ಲ ಎನ್ನುವುದು ತಪ್ಪು.

– ಡಾ.ಜಿ.ಪರಮೇಶ್ವರ ಗೃಹ ಸಚಿವ

ಕೂಡಲೇ ಸಿಎಂ ಸಿದ್ದರಾಮಯ್ಯ ಎಚ್ಚೆತ್ತುಕೊಳ್ಳಲಿ: ಬಸವರಾಜ ಬೊಮ್ಮಾಯಿ

ಡ್ರಗ್ಸ್ ಜಾಲ ತಡೆಗಟ್ಟದಿದ್ದರೆ ಉಡ್ತಾ ಕರ್ನಾಟಕ

ಗದಗ: ಮಹಾರಾಷ್ಟ್ರ ಪೊಲೀಸರು ಕರ್ನಾಟಕಕ್ಕೆ ಬಂದು ಡ್ರಗ್ಸ್ ಟ್ರಾಫಿಕಿಂಗ್ ಮಾಡುವವರನ್ನು ಪತ್ತೆ ಹೆಚ್ಚುತ್ತಾರೆ ಎಂದರೆ ಇಲ್ಲಿನ ಪೊಲೀಸರು ಡ್ರಗ್ಸ್ ಟ್ರಾಫಿಕಿಂಗ್‌ನಲ್ಲಿ ಶಾಮೀಲಾಗಿದ್ದಾರೆ ಎಂಬ ಅನುಮಾನ ಮೂಡುತ್ತದೆ. ಮುಖ್ಯಮಂತ್ರಿಗಳು ಎಚ್ಚೆತ್ತುಕೊಳ್ಳದಿದ್ದರೆ ಉಡ್ತಾ ಕರ್ನಾಟಕ ಆಗಲಿದೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಡಗ್ಸ್ ಬಳಕೆ ಕರ್ನಾಟಕದಲ್ಲಿ ಅತಿ ಹೆಚ್ಚಿದೆ. ಅದನ್ನು ನಿಯಂತ್ರಿಸಲು ಸರಕಾರ ಸ್ಪೆಷಲ್ ಸ್ಕ್ವಾಡ್ ಮಾಡಿದ್ದಾರೆ. ಆದರೆ, ಪೊಲೀಸರ ಭಯ ಇಲ್ಲ. ಹಲವಾರು ಪ್ರಸಂಗಗಳಲ್ಲಿ ಪೊಲೀಸರು ಕೆಲವರನ್ನು ಬಂಧಿಸಿದ್ದಾರೆ. ಇದಕ್ಕಾಗಿ ವಿಶೇಷ ಕಾನೂನಿದೆ. ಅದನ್ನು ಬಳಕೆ ಮಾಡುತ್ತಿಲ್ಲ. ಮಹಾರಾಷ್ಟ್ರದವರು ಬಂದು ಇಲ್ಲಿ ಡಗ್ಸ್ ಪತ್ತೆ ಹೆಚ್ಚುತ್ತಾರೆ ಎಂದರೆ ಇಲ್ಲಿನ ಪೊಲೀಸರು ಡ್ರಗ್ ಟ್ರಾಫಿಕಿಂಗ್‌ನಲ್ಲಿ ಶಾಮೀಲಾಗಿದ್ದಾರೆ ಎಂಬ ಅನುಮಾನ ಮೂಡು ತ್ತದೆ. ಹಾವೇರಿ ಸೇರಿದಂತೆ ಜಿಲ್ಲಾ ಕೇಂದ್ರಗಳಲ್ಲೂ ಡ್ರಗ್ಸ್ ಮುಕ್ತವಾಗಿ ಮಾರಾಟವಾಗುತ್ತಿದೆ. ಇದೇ ರೀತಿ ಮುಂದುವರೆದರೆ ಪಂಜಾಬ್ ಆದ ಹಾಗೆ ಆಗುತ್ತದೆ. ಉಡ್ತಾ ಪಂಜಾಬ್ ಥರಾ ಉಡ್ತಾ ಕರ್ನಾಟಕ ಆಗುತ್ತದೆ ಎಂದು ಹೇಳಿದರು.

ರಾಜ್ಯ ಸರಕಾರ ದ್ವೇಷ ಭಾಷಣ ಮಾಡುವು ದರ ವಿರುದ್ಧ ಕಾನೂನು ತರುವ ಬದಲು, ರೈತರ ಗೊಬ್ಬರ ಕಳ್ಳತನ ಮಡುವವರಿಗೆ ಕಠಿಣ ಕಾನೂನಿನಲ್ಲ, ಡ್ರಗ್ ಮಾರುವವರಿಗೂ ಬಿಗಿ ಕಾನೂನಿಲ್ಲ. ಕಳ್ಳಭಟ್ಟಿ ಮಾಡುವವರಿಗೂ ಬಿಗಿ ಕಾನೂನಿಲ್ಲ. ರಾಜ್ಯ ಕಾನೂನು ಸುವ್ಯವಸ್ಥೆ ಅನೈತಿಕ ಚಟುವಟಿಯಿಕೆಯಿಂದ ಕೂಡಿದೆ. ಆದರೆ ಸರಕಾರ ಕುರ್ಚಿ ಸಂಪೂರ್ಣ ಕಚ್ಚಾಟದಲ್ಲಿ ಮುಳುಗಿದೆ. ಹೀಗಾಗಿ ಡ್ರಗ್ಸ್ ಮಾಫಿಯಾಗೆ ಕಡಿವಾಣ ಬೀಳುತ್ತಿಲ್ಲ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಕಿಡಿಕಾರಿದರು.



ಯಾವ ಅಧಿಕಾರಿಗಳ ವ್ಯಾಪ್ತಿ ಯಲ್ಲಿ ಡ್ರಗ್ಸ್ ಮಾರಾಟ ನಡೆಯುತ್ತಿದೆ. ಆ ಎಲ್ಲ ಅಧಿಕಾರಿಗಳನ್ನು ಬದಲಾಯಿಸಬೇಕು. ಮುಖ್ಯಮಂತ್ರಿಗಳು ಎಚ್ಚೆತ್ತುಕೊಳ್ಳಬೇಕು. ಸ್ಕ್ವಾಡ್‌ಗಳನ್ನು ಮಾಡಿ ಡ್ರಗ್ಸ್ ಟ್ರಾಫಿಕಿಂಗ್ ಮಾಡುವವ ರನ್ನು ಒದ್ದು ಒಳಗೆ ಹಾಕಬೇಕು. ಡ್ರಗ್ಸ್ ಟ್ರಾಫಿಕಿಂಗ್ ಮಾಡುವರಿಗೆ ಕಠಿಣ ಕಾನೂನು ತರಬೇಕು.

– ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ

ಕೇರಳ ಸಿಎಂ ಹೇಳಿಕೆ ರಾಜಕೀಯ ಪ್ರೇರಿತ: ಈಶ್ವರ್ ಖಂಡ್ರೆ

ಬೀದರ್: ಕೇರಳ ಸಿಎಂ ಹೇಳಿಕೆ ರಾಜಕೀಯ ಪ್ರೇರಿತವಾಗಿದೆ ಎಂದು ಬೆಂಗಳೂರಿನ ಕೋಗಿಲು ಬಳಿ ಮನೆ, ಶೆಡ್ ನೆಲಸಮ

ವಿರೋಧಿಸಿ ಕೇರಳ ಸಿಎಂ ಟ್ವೀಟ್‌ಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇರಳದಲ್ಲಿ ನಡೆದ ಸ್ಥಳೀಯ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯಭೇರಿ ಬಾರಿಸಿ ಅವರ ಪಕ್ಷ ಧೂಳಿಪಟವಾಗಿದೆ. ಹೀಗಾಗಿ ರಾಜಕೀಯ ದುರುದ್ದೇಶದಿಂದಾಗಿ ಬೆಂಗಳೂರಿನ ಕಾರ್ಯಾಚರಣೆಯನ್ನು ವಿರೋಧಿಸಿ ಜನರಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ. ಎಲ್ಲಾ ಜಾತಿ, ಧರ್ಮದವರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಕೆಲಸ ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ಯಾರಿಗೂ ಅನ್ಯಾಯ ಮಾಡದೇ ಪರ್ಯಾಯ ವ್ಯವಸ್ಥೆ ಮಾಡುವ ಕೆಲಸ ಮಾಡುತ್ತೇವೆ. ಈಗಾಗಲೇ ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಹೇಳಿಕೆ ನೀಡಿದ್ದು, ನಾವು ಯಾವಾಗಲು ಕೇರಳಕ್ಕೆ ಸಹಾಯ ಮಾಡುತ್ತಾ ಬಂದಿದ್ದೇವೆ. ಈ ರೀತಿ ಒಬ್ಬ ಸಿಎಂ ಹೇಳೋದು ಅವರ ಗೌರವಕ್ಕೆ ಶೋಭೆ ತರಲ್ಲ. ಕೇರಳ ಸಿಎಂ ತಮ್ಮ ಹೇಳಿಕೆ ವಾಪಸ್ ಪಡೆಯಬೇಕು. ಅವರ ಹೇಳಿಕೆಗೆ ಯಾವುದೇ ಬೆಲೆ ಇಲ್ಲ ಎಂದು ಕಿಡಿಕಾರಿದ್ದಾರೆ.

ಮೈಸೂರಿನ ಅರಮನೆ ಮುಂಭಾಗದಲ್ಲಿ ಹೀಲಿಯಂ ಸ್ಫೋಟ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಈಗಾಗಲೇ ಮಾನ್ಯ ಗೃಹ ಮಂತ್ರಿಗಳು ತನಿಖೆಗೆ ಆದೇಶ ಮಾಡಿದ್ದು, ಇದು ಸಿಎಂ ಸಿದ್ದರಾಮಯ್ಯ ಗಮನದಲ್ಲೂ ಇದೆ. ಇದರ ಬುಡ ಎಲ್ಲಿದೆ ಎಂದು ನಮ್ಮ ಪೊಲೀಸರು ತನಿಖೆ ಮಾಡುತ್ತಿದ್ದು, ಯಾರೆಲ್ಲ ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

-ಈಶ್ವರ್ ಖಂಡ್ರೆ ಸಚಿವ

ತೆರವು ರಾಜಕೀಯ ತಿರುವು

← ಮೊದಲ ಪುಟದಿಂದ

ಕಾನೂನುಬದ್ಧವಾಗಿಯೇ ತೆರವುಗೊಳಿಸಿರುವು ದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ನೀಡಿರುವಾಗ ಬದಲಿ ವಸತಿ ವ್ಯವಸ್ಥೆಯನ್ನು ಸರಕಾರ ಕಲ್ಪಿಸಲು ಮುಂದಾಗಿರುವುದು ಏಕೆ? ಎಐಸಿಸಿ ಕಚೇರಿಯಿಂದ ವೇಣುಗೋಪಾಲ್ ಹೇಳುತ್ತಿದ್ದಂತೆ, ಕರ್ನಾಟಕದ ಸರಕಾರದ ತೀರ್ಮಾನಗಳೇ ಬದಲಾಗುತ್ತದೆ ಎನ್ನುವುದಾದರೆ, ವೇಣುಗೋಪಾಲ್ ಕರ್ನಾಟಕದ ಸೂಪರ್ ಸಿಎಂ ಆಗಿದ್ದಾರೆಯೇ ಎಂದು ಬಿಜೆಪಿ ನಾಯಕರು ಪ್ರಶ್ನಿಸಿದ್ದಾರೆ.

ಅರ್ಹರಿಗೆ ಮಾತ್ರ ಬದಲಿ ವ್ಯವಸ್ಥೆ ಕಲ್ಪಿಸುವುದಾಗಿ ಕಾಂಗ್ರೆಸ್ ನಾಯಕರು ಸಮರ್ಥಿಸಿಕೊಂಡಿದ್ದರೂ, ಮುಂದಿನ ಮೇನಲ್ಲಿರುವ ಕೇರಳ ವಿಧಾನಸಭಾ ಚುನಾವಣೆಯ ಕಾರಣಕ್ಕೆ ಸರಕಾರ ಬದಲಿ ವ್ಯವಸ್ಥೆಗೆ ಮುಂದಾಗಿದೆ ಎಂದು ಹೇಳಲಾಗುತ್ತಿದೆ. ಮೂಲಗಳ ಪ್ರಕಾರ, ಘಟನೆ ಬೆಳಕಿಗೆ ಬರುತ್ತಿದ್ದಂತೆ ಇದರಿಂದ ಕೇರಳ ಚುನಾವಣೆಗೆ ಹೊಡೆತ ಬೀಳಲಿದೆ. ಮುಸ್ಲಿ ಮತಗಳನ್ನು ಕ್ರೋಢೀಕರಿಸಬೇಕು ಎನ್ನುವ ಕಾರಣಕ್ಕಾಗಿಯೇ ಪಿಣರಾಯಿ ವಿಜಯನ್, ಫಕೀರ್ ಕಾಲೋನಿ, ವಸೀಮ್ ಲೇಔಟ್ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಆದ್ದರಿಂದ ಡ್ಯಾಮೇಜ್ ಕಂಟ್ರೋಲ್ ಮಾಡುವಂತೆ ಕೆ.ಸಿ.ವೇಣುಗೋಪಾಲ್ ಸೂಚನೆ ನೀಡಿದರು. ಇದರ ಬೆನ್ನಲ್ಲೇ, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಿಬ್ಬರೂ 'ಬದಲಿ ನಿವೇಶನ'ದ ಭರವಸೆ ನೀಡಿದ್ದರು.

ಇಂದು ಸಿಎಂ ನೇತೃತ್ವದಲ್ಲಿ ಸಭೆ: ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸೋಮವಾರ ಸಭೆ ನಡೆಸಲು ತೀರ್ಮಾನಿಸಿದ್ದು, ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬಹುದು? ನಿರಾಶ್ರಿತರಿಗೆ ಬದಲಿ ವ್ಯವಸ್ಥೆಯನ್ನು ಯಾವ ಯೋಜನೆಯಲ್ಲಿ ಕೊಡಿಸಬಹುದು ಎನ್ನುವ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ. ಈಗಾಗಲೇ ವಸತಿ ಇಲಾಖೆಯ ಯೋಜನೆಗಳಲ್ಲಿ ಈ ನಿರಾಶ್ರಿತರಿಗೆ ಸೂರು ಕಲ್ಪಿಸುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಜಮೀರ್ ಅಹ್ಮದ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಟ್ಟಡಗಳನ್ನು ತೆರವುಗೊಳಿಸಿದರೂ, ಸ್ಥಳದಲ್ಲಿಯೇ ಇರುವ ಮುಸ್ಲಿಂ ಕುಟುಂಬ ಸದಸ್ಯರೊಂದಿಗೆ ಮಾತುಕತೆ ನಡೆಸಿರುವ ಜಮೀರ್, ಯಾರಿಗೂ ಸಮಸ್ಯೆಯಾಗದಂತೆ ಸರಕಾರ ಕ್ರಮವಹಿಸಲಿದೆ ಎನ್ನುವ ಭರವಸೆಯನ್ನು ನೀಡಿದ್ದಾರೆ ಎಂದು ತಿಳಿದುಬಂದಿದೆ. ಆದರೆ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸಿದಕ್ಕೂ ಬದಲಿ ನಿವೇಶನ, ಮನೆ ನೀಡುವುದು ಸರಿಯಲ್ಲ. ಕೇರಳ ಚುನಾವಣೆಯನ್ನು ಮುಂದಿಟ್ಟುಕೊಂಡು, ಕರ್ನಾಟಕದಲ್ಲಿ ಬದಲಾವಣೆ ಮಾಡಲು ಮುಂದಾಗಿರುವುದು ಸರಿಯಲ್ಲ ಎನ್ನುವ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಚಳಿ ಜತೆಗೆ ಮಂಜಿನ ವಾತಾವರಣ ಮುಂದುವರಿಕೆ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಶೀತದಲೆಯ ಪ್ರಭಾವ ಜೋರಾಗಿದ್ದು, ಎಲ್ಲಾ ಭಾಗಗಳಲ್ಲಿಯೂ ಚಳಿ ಹಾಗೂ ಒಣ ಹವೆಯು ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದ್ದು, ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಬೆಳಗಿನ ಸಮಯ ದಟ್ಟ ಮಂಜು ಕಾಣಿಸಿಕೊಳ್ಳುವ ಸಾಧ್ಯತೆಯಿರುವುದರಿಂದ ವಾಹನ ಸವಾರರು ಎಚ್ಚರಿಕೆಯಿಂದ ಚಾಲನೆ ಮಾಡಬೇಕೆಂದು ಸೂಚಿಸಲಾಗಿದೆ. ಜತೆಗೆ ಕರಾವಳಿ ಸೇರಿದಂತೆ ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನ ಭಾಗಗಳಲ್ಲಿಯೂ ತೀವ್ರ ಚಳಿಯ ಜೊತೆಗೆ ಒಣಹವೆಯಿರಲಿದೆ.

ನಗರದಲ್ಲಿ ಚಳಿಯ ಜತೆಗೆ ಮಂಜು ಮುಸುಕಿದ ವಾತಾವರಣವಿರುವುದರಿಂದ

ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಚ್ಚರಿಕೆಯಿಂದಿರಬೇಕು. ಬೆಚ್ಚನೆಯ ಉಡುಪು ಧರಿಸುವುದರ ಜತೆಗೆ ಸಮತೋಲನ ಆಹಾರ ಸೇವನೆಗೆ ಒತ್ತು ನೀಡುವಂತೆ ಸಲಹೆ ನೀಡಿದೆ. ತೀವ್ರ ಚಳಿಯಿಂದ ಜನರ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದು, ಬೆಚ್ಚಗಿನ ಹೊದಿಕೆ ಹೊತ್ತುಕೊಳ್ಳಬೇಕು ಹಾಗೂ ಬಿಸಿ ಆಹಾರ ಸೇವನೆ ಮಾಡಬೇಕು ಎಂದು ವೈದ್ಯರು ಸೂಚಿಸಿದ್ದಾರೆ.

ಎಲ್ಲೆಲ್ಲಿ ಒಣ ಹವೆ?: ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ರಾಮನಗರ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು, ಚಾಮರಾಜ ನಗರ, ಮೈಸೂರು, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿಯೂ ಒಣ ಹವೆಯ ವಾತಾವರಣ ಇರಲಿದೆ. ಕರಾವಳಿಯ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಣ ಹವೆಯಿರಲಿದೆ ಎಂದು ಇಲಾಖೆ ತಿಳಿಸಿದೆ. ಉತ್ತರ ಒಳನಾಡು ಭಾಗದ ಜಿಲ್ಲೆಗಳಾದ ಬೆಳಗಾವಿ, ಬೀದರ್, ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ, ಕಲಬುರಗಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ ಮತ್ತು ವಿಜಯನಗರದಲ್ಲಿ ಕಳೆದ ಹಲವು ದಿನಗಳಿಂದ ಒಣಹವೆಯ ವಾತಾವರಣವಿದ್ದು, ಇಂದೂ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕನನೀಸ ಮತ್ತು ಒಚ ಮಂಡಳಿ
ಮುಖ್ಯ ಅಭಿಯಂತರವರ ಕಛೇರಿ
ಜಲಭವನ, ಪಿ-4, 10ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, 3ನೇ ಮಹಡಿ
ಸರಸ್ವತಿಪುರಂ, ಮೈಸೂರು-09. ದೂ: 0821-2545894, ಇಮೇಲ್: kwbcemys2014@gmail.com

IFT ಸಂಖ್ಯೆ:1460/2025-26 ದಿನಾಂಕ: 23.12.2025

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿಯ ವಿವರ: ಚಾಮರಾಜನಗರಕ್ಕೆ 2ನೇ ಹಂತದ ಒಳಚರಂಡಿ ಯೋಜನೆಯನ್ನು 5 ವರ್ಷಗಳ ಅವಧಿ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (DBOT) ವಿಧಾನದ ಮೂಲಕ (ಲಂಪ್ಸಮ್ ಟೆಂಡರ್ – ವೇರಿಯೇಷನ್ ಇಲ್ಲದಂತೆ)" ಟೆಂಡರನ್ನು **ರೂ.9641.04 ಲಕ್ಷಗಳಿಗೆ** (ಜಿ.ಎಸ್.ಟಿ.ಹೊರತುಪಡಿಸಿ), ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಇಂಡೆಂಟ್ **ಸಂಖ್ಯೆ: KUWSDB/2025-26/WS/WORK_INDENT465** ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಸಂಪರ್ಕಿಸುವುದು.

ಸಹಿ/– ಮುಖ್ಯ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ, ಮೈಸೂರು

DIPR/MYS/KAVITA/1426/25-26

ನ್ಯಾಯಕ್ಕಾಗಿ ತೆರಳಿದ ವಿವಾಹಿತೆ ಜತೆ ಪೊಲೀಸ್ ಸಂಬಂಧ | ಗಂಡನಿಂದ ಆರೋಪ

ವಿವಾಹಿತೆ ಜತೆ ಪಿಎಸ್‌ಐ ಅಕ್ರಮ ಸಂಬಂಧ

ವಿಜಯಪುರ: ಕೌಟುಂಬಿಕ ಕಲಹ ಹಿನ್ನೆಲೆ ನ್ಯಾಯಕ್ಕಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ

ವಿವಾಹಿತೆ ಜತೆ ಪಿಎಸ್ ಐ ಅನೈತಿಕ ಸಂಬಂಧ ಹೊಂದಿದ ಆರೋಪ ಕೇಳಿ ಬಂದಿದೆ.

ನಡೆದದ್ದೇನು?: ಕಳೆದ 10 ವರ್ಷಗಳ ಹಿಂದೆ ಭೀಮಾಶಂಕರ ವಿಜಯಪುರ ಜಿಲ್ಲೆಯ ಕೊಲ್ಹಾರ ಪಟ್ಟಣದ ಅನುರಾಧ ಜೊತೆಗೆ ಮದುವೆಯಾಗಿತ್ತು. ದಂಪತಿಗೆ ಒಂದು ಗಂಡು, ಒಂದು ಹೆಣ್ಣು ಮಗುವಿದೆ. ತಂದೆಯನ್ನು ಕಳೆದುಕೊಂಡಿರುವ ಭೀಮಾಶಂಕರ, ತಾಯಿ, ಪತ್ನಿ ಮತ್ತು ಮಕ್ಕಳ ಜತೆಗೆ ವಾಸವಿದ್ದರು. ಮದುವೆಯಾದ 5 ವರ್ಷಗಳ ಬಳಿಕ ಗಂಡ-ಹೆಂಡತಿ ಮಧ್ಯೆ ಜಗಳ ಹಿನ್ನೆಲೆ ಅನುರಾಧಾ ಆಲಮೇಲ ಠಾಣೆಗೆ ದೂರು ನೀಡಿದ್ದರು. ಈ ವೇಳೆ ವಿಚಾರಣೆ ನೆಪದಲ್ಲಿ ಆಲಮೇಲ ಠಾಣೆಯ ಎಎಸ್‌ಐ ಆಗಿದ್ದ ಮನೋಹರ ಕಂಚಗಾರ ಅನುರಾಧ ಮೊಬೈಲ್ ನಂಬರ್ ಪಡೆದುಕೊಂಡಿದ್ದರು. ಇದೇ ನೆಪದಲ್ಲಿ ಅನುರಾಧ ಹಾಗೂ ಪೊಲೀಸ್ ಅಧಿಕಾರಿ ಮನೋಹರ್ ಮಧ್ಯೆ ಮಾತಿನ ಸಲುಗೆ ಮುಂದೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಾರೆ ಎಂದು ಅನುರಾಧ ಪತಿ ಭೀಮಾಶಂಕರ ಹೋಳ್ಕರ ಆರೋಪಿಸಿದ್ದಾರೆ.

ಕಾರಣಾಂತರಗಳಿಂದ ತನ್ನ ಇಬ್ಬರು ಮಕ್ಕಳು, ಪತ್ನಿ ಅನುರಾಧ ಜತೆ 2023ರಲ್ಲಿ ಭೀಮಾಶಂಕರ ಕೆಲಸಕ್ಕಾಗಿ ಬೆಂಗಳೂರಿಗೆ ಹೋಗಿದ್ದರಂತೆ. ಜತೆಗೆ ಪಿತ್ರಾರ್ಜಿತ ಆಸ್ತಿ ಮಾರಾಟ ಮಾಡಿದ ಹಣದಲ್ಲಿ ಬೆಂಗಳೂರಿನಲ್ಲಿ ಒಂದು ಮನೆಯನ್ನು ತನ್ನ ಹಾಗೂ ಪತ್ನಿ ಅನುರಾಧ ಹೆಸರಿನಲ್ಲಿ ಖರೀದಿ ಮಾಡಿದ್ದರು. ಬೆಂಗಳೂರಿನಲ್ಲಿದ್ದರೂ ಇವರ ಸಂಸಾರದಲ್ಲಿ ಸಾಮರಸ್ಯ ಇರಲಿಲ್ಲ. ಸಣ್ಣ ಪುಟ್ಟ ವಿಷಯಕ್ಕೂ ಕುಂಬಳಗೋಡು ಪೊಲೀಸ್ ಠಾಣೆ ಮೆಟ್ಟಿಲು ಹತ್ತುವುದು ಅನುರಾಧಗೆ ಕಾಮನ್ ಆಗಿತ್ತು. ಇದೆಲ್ಲದರ ಹಿಂದೆ ಪೊಲೀಸ್ ಅಧಿಕಾರಿ ಮನೋಹರ್ ಕಂಚಗಾರ ಇದ್ದಾರೆಂಬ ವಿಚಾರ ಭೀಮಾಶಂಕರಗೆ ಗೊತ್ತಾಗಿದೆ. ಪೊಲೀಸ್ ಅಧಿಕಾರಿಗಳು ಭೀಮಾಶಂಕರ ಹಾಗೂ ಅನುರಾಧ ಇಬ್ಬರ ಕೌನ್ಸಲಿಂಗ್ ಮಾಡಿದಾಗ ತಾನು ಪೊಲೀಸ್ ಅಧಿಕಾರಿ ಮನೋಹರ್ ಕಂಚಗಾರ ಜತೆ ಇರುತ್ತೇನೆ. ಅವರ ಹಾಗೂ ನನ್ನ ಮಧ್ಯೆ ಸಂಬಂಧವಿದೆ ಎಂದು ಒಪ್ಪಿಕೊಂಡಿದ್ದಾಳೆ.

ಸದ್ಯ ಬಸವನಬಾಗೇವಾಡಿ ಠಾಣೆಯಲ್ಲಿ ಪಿಎಸ್‌ಐ ಮನೋಹರ್ ಕಂಚಗಾರ ತಿಂಗಳಿನಿಂದ ಸೇವೆಗೆ ಹಾಜರಾಗಿಲ್ಲ ಎನ್ನಲಾಗಿದೆ.

ನನ್ನ ಮದುವೆಯಾಗಿ 10 ವರ್ಷವಾಗಿದೆ ಕಳೆದ 5 ವರ್ಷದಿಂದ ಇಬ್ಬರ ಮಧ್ಯೆ ಸಣ್ಣ ಪುಟ್ಟ ಗಲಾಟೆಗಳಾಗುತ್ತಿದ್ದವು, ಆಗ ನನ್ನ ಹೆಂಡತಿ ಆಲಮೇಲ ಠಾಣೆಯಲ್ಲಿ ಕಂಪ್ಲೆಂಟ್ ನೀಡಿದ್ದಳು, ನಂತರ ನಾವಿಬ್ಬರು ಬೆಂಗಳೂರಿನಲ್ಲಿದ್ದೆವು. ನಾನು ಆಲಮೇಲಗೆ ವಾಪಸ್ ಬಂದೆ. ಬರುವಾಗ ನನ್ನ ಹೆಂಡತಿ ಮೊಬೈಲ್ ತಂದಿದ್ದೆ. ಮೊಬೈಲನಲ್ಲಿ ಅವರಿಬ್ಬರು ಚಾಟಿಂಗ್ ಮಾಡಿರುವ ಹಾಗೂ ಅವರಿಬ್ಬರ ನಡುವೆ ಅನೈತಿಕ ಸಂಬಂಧ ಇರುವ ಬಗ್ಗೆ ನನಗೆ ಗೊತ್ತಾಗಿದೆ. ಆಲಮೇಲದಲ್ಲಿದ್ದ ಎಎಸ್ಐ ಕೆಂಚಗಾರ ಈಗ ಪಿಎಸ್‌ಐ ಆಗಿದ್ದು, ನನಗೆ ಜೀವ ಬೆದರಿಕೆ ಹಾಕುತ್ತಿದ್ದಾನೆ.

-ಭೀಮಾಶಂಕರ ಹೋಳ್ಕರ ಅನುರಾಧಾ ಪತಿ

ಸಮಾಚಾರ ಸಣ್ಣದಲ್ಲ

ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಚಿರತೆ

ಹುಬ್ಬಳ್ಳಿ: ವಿಮಾನ ನಿಲ್ದಾಣ ಪರಿಸರದಲ್ಲಿ ಚಿರತೆ ಓಡಾಟ ನಡೆಸಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಶುಕ್ರವಾರ ಸಂಜೆ ಮತ್ತು ಶನಿವಾರ ಬೆಳಗ್ಗಿನ ಜಾವದಲ್ಲಿ ಚಿರತೆ ಓಡಾಟ ಕಂಡುಬಂದಿದೆ. ಕಳೆದ ಐದು ದಿನಗಳ ಹಿಂದೆ ವಿಮಾನ ನಿಲ್ದಾಣದ ಆವರಣದಲ್ಲಿ ಕಾಣಿಸಿಕೊಂಡಿದ್ದ ಚಿರತೆಯ ಸೆರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಅಲರ್ಟ್ ಆಗಿದ್ದಾರೆ. ಶ್ವಾನದಳದೊಂದಿಗೆ ಎರಡು ಪ್ರತ್ಯೇಕ ಬೋನು ಹಾಗೂ ಗಾಮನಗಟ್ಟಿ ಹೊರವಲಯ ಮತ್ತು ವಿಮಾನ ನಿಲ್ದಾಣದ ಪರಿಸರದಲ್ಲಿ ಕ್ಯಾಮೆರಾ ಟ್ರ್ಯಾಪ್‌ಗಳನ್ನ ಅಳವಡಿಸಿದ್ದಾರೆ. ವಿಮಾನ ನಿಲ್ದಾಣದ ಆವರಣ ಗೋಡೆಯಿಂದ ಶುಕ್ರವಾರ ಸಂಜೆ 6.40 ರ ವೇಳೆ ಹೊರಗೆ ಜಿಗಿದು ಹೋಗಿರುವ ಚಿರತೆ ಶನಿವಾರ ನಸುಕಿನ ಜಾವ 2 ಗಂಟೆಗೆ ಮತ್ತೆ ಗಾಮನಗಟ್ಟಿ ಕಡೆಯಿಂದ ವಿಮಾನ ನಿಲ್ದಾಣದ ಒಳಗೆ ಜಿಗಿದಿದ್ದು, ಏರ್‌ಪೋರ್ಟ್‌ನ ಆವರಣದಲ್ಲಿರುವ ಗಿಡಗಂಟೆಗಳ ಮಧ್ಯದಲ್ಲಿ ಓಡಾಡಿದೆ. ಆ ನಂತರ ಹೊರಗೆ ಹೋಗಿರುವುದು ಕಂಡುಬಂದಿಲ್ಲ. ಚಿರತೆ ಸಂಚರಿಸುತ್ತಿರುವ ಮಾರ್ಗದಲ್ಲಿಯೇ ಎರಡು ಬೋನುಗಳನ್ನು ಅಳವಡಿಸಲಾಗಿದೆ.

ಆರ್.ಡಿ.ಪಾಟೀಲ್ ಕಿರಿಕ್: ಎಫ್‌ಐಆರ್

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದ ಕಿಂಗ್‌ಪಿನ್ ಆರ್.ಡಿ. ಪಾಟೀಲ್ ಕೇಂದ್ರ ಕಾರಾಗೃಹದಲ್ಲಿ ಪದೇ ಪದೆ ಜೈಲು ನಿಯಮಗಳನ್ನು ಉಲ್ಲಂಘಿಸುತ್ತಿದ್ದು, ಶನಿವಾರ ಸಾಯಂಕಾಲ ಬ್ಯಾರಕ್ ತಪಾಸಣೆಗೆ ಬಂದ ಸಿಬ್ಬಂದಿ ಜತೆ ವಾಗ್ವಾದ ನಡೆಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾನೆ. ಹಿರಿಯ ಅಧಿಕಾರಿಗಳ ಸೂಚನೆಯ ಮೇರೆಗೆ ಜೈಲು ಸಿಬ್ಬಂದಿ ಬ್ಯಾರಕ್ ತಪಾಸಣೆಗೆ ಮುಂದಾದಾಗ, ಆರ್.ಡಿ. ಪಾಟೀಲ್ ಅಹಂಕಾರದಿಂದ ವರ್ತಿಸಿದ್ದಾನೆ ಎನ್ನಲಾಗಿದೆ. ನನ್ನ ಬ್ಯಾರಕ್ ತಪಾಸಣೆ ಮಾಡಲು ನಿಮಗೆ ಅನುಮತಿ ಇದೆಯೇ? ಅನುಮತಿ ಪತ್ರವಿಲ್ಲದೆ ಒಳಗೆ ಬಿಡುವುದಿಲ್ಲ ಎಂದು ಏರುಧ್ವನಿಯಲ್ಲಿ ಕಿರುಚಾಡಿ ಸಿಬ್ಬಂದಿಯೊಂದಿಗೆ ತಗಾದೆ ತೆಗೆದಿದ್ದಾನೆ. ಈ ಹಿನ್ನೆಲೆಯಲ್ಲಿ ಜೈಲಿನ ಮುಖ್ಯ ಅಧೀಕ್ಷಕಿ ಡಾ.ಅನಿತಾ ಅವರು ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮತ್ತೊಂದು ಜೈಲಿಗೆ ಸ್ಥಳಾಂತರ?: ಕೇವಲ ಎರಡು ವಾರಗಳ ಹಿಂದೆಯೂ ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಜೈಲಿನಿಂದ ಹೊರಬರುವ ಸಂದರ್ಭದಲ್ಲಿ ಆರ್.ಡಿ. ಪಾಟೀಲ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಸುದ್ದಿಯಾಗಿದ್ದ. ಈಗ ಮತ್ತೆ ಜೈಲಿನೊಳಗೆ ದರ್ಪ ತೋರುತ್ತಿರುವುದು ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಜೈಲಿನಲ್ಲಿ ಸತತವಾಗಿ ಅಶಿಸ್ತು ಪ್ರದರ್ಶಿಸುತ್ತಿರುವ ಕಾರಣ, ಭದ್ರತಾ ದೃಷ್ಟಿಯಿಂದ ಆತನನ್ನು ಬೇರೆ ಜಿಲ್ಲೆಯ ಕಾರಾಗೃಹಕ್ಕೆ ಸ್ಥಳಾಂತರಿಸುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

ನಾಯಿಯನ್ನು ಹೊತ್ತೊಯ್ದ ಚಿರತೆ

ಚಿಕ್ಕಮಗಳೂರು: ಒಣಲು ಹಾಕಿದ್ದ ಅಡಕೆ ರಾಶಿ ಬಳಿ ಮಲಗಿದ್ದ ನಾಯಿಯ ಮೇಲೆ ಚಿರತೆ ದಾಳಿ ನಡೆಸಿ ಹೊತ್ತೊಯ್ದ ಘಟನೆ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಜಾತ್ರೆಮೈದಾನ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಬಸವರಾಜ್ ತಮ್ಮ ಮನೆ ಮುಂದಿನ ಅಂಗಳದಲ್ಲಿ ಅಡಕೆಯನ್ನು ಒಣಗಿಸಿ, ಕಳ್ಳತನ ಪ್ರಕರಣ ಹೆಚ್ಚಾಗಿರುವ ಹಿನ್ನೆಲೆ ನಾಯಿಯನ್ನು ಬಿಟ್ಟಿದ್ದರು. ಈ ವೇಳೆ ನಾಯಿಯನ್ನು ಚಿರತೆ ಹೊತ್ತೊಯ್ದಿದೆ. ನಾಯಿ ಗಾಢ ನಿದ್ರೆಯಲ್ಲಿದ್ದಾಗ ಸೂಕ್ಷ್ಮ ಹೆಜ್ಜೆಗಳನ್ನಿಡುತ್ತಾ ಅಂಗಳಕ್ಕೆ ಬಂದ ಚಿರತೆ ನಾಯಿಯ ಹತ್ತಿರ ಬಂದು, ಕುತ್ತಿಗೆಯನ್ನು ಬಲವಾಗಿ ಹಿಡಿದು ಹೊತ್ತೊಯ್ದಿದೆ.ಮನೆ ಅಂಗಳಕ್ಕೆ ಬಂದು ಬೇಟೆಯಾಡಿರುವುದು ಗ್ರಾಮಸ್ಥರಲ್ಲಿ ಆತಂಕ ಹುಟ್ಟಿಸಿದೆ. ರಾತ್ರಿ ವೇಳೆ ಜನ ಮನೆಯಿಂದ ಹೊರಬರಲು ಭಯಪಡುತ್ತಿದ್ದು, ಚಿರತೆ ಸೆರೆ ಹಿಡಿಯಬೇಕು ಎಂದು ಅರಣ್ಯ ಇಲಾಖೆಗೆ ಸ್ಥಳೀಯರು ಆಗ್ರಹಿಸಿದ್ದಾರೆ.

ಸಕಲೇಶಪುರ-ಕುಕ್ಕೆ ಮಾರ್ಗ ವಿದ್ಯುದೀಕರಣ

ಮಂಗಳೂರು: ಕಡಿದಾದ ಹಾದಿ, ದಟ್ಟ ಅರಣ್ಯ ಹಾಗೂ ಹತ್ತಾರು ಸುರಂಗಗಳನ್ನು ಒಳಗೊಂಡಿರುವ ಪಶ್ಚಿಮ ಘಟ್ಟದ ಸಕಲೇಶಪುರಸುಬ್ರಹ್ಮಣ್ಯ ರಸ್ತೆ ನಡುವಿನ ರೈಲು ಮಾರ್ಗವು ಈಗ ಸಂಪೂರ್ಣವಾಗಿ ವಿದ್ಯುದೀಕರಣಗೊಂಡಿದೆ ಎಂದು ಮೈಸೂರು ವಿಭಾಗದ ವಾಣಿಜ್ಯ ವ್ಯವಸ್ಥಾಪಕ ಗಿರೀಶ್ ಧರ್ಮರಾಜ್ ಕಲಗೊಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಡಿ.28ರಂದು ಈ ಮಾರ್ಗದಲ್ಲಿ ವಿದ್ಯುತ್ ಚಾಲಿತ ಇಂಜಿನ್ (ಎಲೆಕ್ಟ್ರಿಕ್ ಲೋಕೋ) ಪರೀಕ್ಷಾರ್ಥ ಸಂಚಾರ ಯಶಸ್ವಿಯಾಗಿ ನಡೆಸುವ ಮೂಲಕ ಮೈಸೂರು ರೈಲ್ವೆ ವಿಭಾಗವು ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿದೆ. ಭಾರತೀಯ ರೈಲ್ವೆಯ ಅತ್ಯಂತ ಕಠಿಣ ಹಾಗೂ ತಾಂತ್ರಿಕ ಸವಾಲುಗಳಿಂದ ಕೂಡಿದ 55 ಕಿ.ಮೀ. ಉದ್ದದ ಈ ಘಾಟ್ ವಿಭಾಗದಲ್ಲಿ 93.55 ಕೋಟಿ ವೆಚ್ಚದಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಈ ಮಾರ್ಗವು 57 ಸುರಂಗಗಳು, 258 ಸೇತುವೆಗಳು ಹಾಗೂ 108 ತೀಕ್ಷ್ಣ ವಕ್ರತೆಯನ್ನು ಹೊಂದಿದೆ. ಇಲ್ಲಿನ ಭೌಗೋಳಿಕ ಸ್ಥಿತಿಗತಿ ಅತ್ಯಂತ ಸಂಕೀರ್ಣವಾಗಿದ್ದು, ಕಾಮಗಾರಿ ನಡೆಸುವುದು ರೈಲ್ವೆ ಇಂಜಿನಿಯರ್‌ಗಳಿಗೆ ದೊಡ್ಡ ಸವಾಲಾಗಿತ್ತು. ಈ ಸಾಧನೆಯಿಂದಾಗಿ ಮೈಸೂರು ವಿಭಾಗದ ಸಂಪೂರ್ಣ ಘಾಟ್ ವಿಭಾಗವು ಈಗ ವಿದ್ಯುತ್ ಚಾಲಿತ ರೈಲು ಸಂಚಾರಕ್ಕೆ ಸಿದ್ಧವಾಗಿದೆ. ಇದರಿಂದ ಇಂಧನ ಉಳಿತಾಯವಾಗುವುದಲ್ಲದೆ, ಪರಿಸರ ಸ್ನೇಹಿ ಹಾಗೂ ವೇಗದ ಸಂಚಾರಕ್ಕೆ ಅನುಕೂಲವಾಗಲಿದೆ ಎಂದರು.

36 ವರ್ಷಗಳ ಬಳಿಕ ಚುನಾವಣೆ ಸಾಧ್ಯತೆ | ಕೇಡರ್ ಗಟ್ಟಿಪಡಿಸಿಕೊಳ್ಳಲು ಮುಂದಾದ ಕಾಂಗ್ರೆಸ್

ವಿವಿಗಳಲ್ಲಿ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಶಕಗಳ ಹಿಂದೆಯೇ ಸ್ಥಗಿತವಾಗಿರುವ ವಿದ್ಯಾರ್ಥಿ ಸಂಘಟನೆಗಳ ಚುನಾವಣೆಗೆ ಮರುಜೀವ ನೀಡುವ ಮೂಲಕ ತನ್ನ ಕೇಡರ್ ಅನ್ನು ಗಟ್ಟಿಗೊಳಿಸಿಕೊಳ್ಳಲು ಹಾಗೂ ಯುವಕರನ್ನು ಪಕ್ಷದತ್ತ ಸೆಳೆಯುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಇದೆ.

ವಿಧಾನಸಭಾ ಚುನಾವಣಾ ಸಮಯದಲ್ಲಿ ವಿವಿ ಹಾಗೂ ಕಾಲೇಜುಗಳ ವಿದ್ಯಾರ್ಥಿ ಸಂಘಟನೆಗಳಿಗೆ ಚುನಾವಣೆ ನಡೆಸುವ ವಿಷಯವನ್ನು ಕಾಂಗ್ರೆಸ್ ಪ್ರಸ್ತಾಪಿಸಿತ್ತು. ಬಳಿಕ ಕೆಲ ತಿಂಗಳ ಹಿಂದೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಹ ಇದೇ ವಿಷಯವಾಗಿ ಮಾತನಾಡಿ, ಶೀಘ್ರದಲ್ಲಿಯೇ ಚುನಾವಣೆ ನಡೆಸುವ ಬಗ್ಗೆ ಸಾಧಕ-ಬಾಧಕಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಕ್ರಮ ವಹಿಸುವುದಾಗಿ ಹೇಳಿದ್ದರು. ಇದೀಗ ಇದರ ಮುಂದುವರೆದ ಭಾಗವಾಗಿ ವಿದ್ಯಾರ್ಥಿಗಳ ಸಂಘಟನೆಗಳ ಚುನಾವಣೆ ನಡೆಸುವ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ವರದಿ ನೀಡಲು ಸಚಿವ ಶರಣಪ್ರಕಾಶ್ ಪಾಟೀಲ್ ನೇತೃತ್ವದಲ್ಲಿ ಸಮಿತಿಯೊಂದನ್ನು ಕೆಪಿಸಿಸಿ ವತಿಯಿಂದ ರಚಿಸಲಾಗಿದ್ದು, 15 ದಿನದಲ್ಲಿ ವರದಿ ನೀಡಲು ಸೂಚಿಸಲಾಗಿದೆ.

ವಿದ್ಯಾರ್ಥಿ ದೆಸೆಯಲ್ಲಿಯೇ ನಾಯಕತ್ವ ಗುಣಗಳನ್ನು ಬೆಳೆಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಸಂಘದ ಚುನಾವಣೆ ನಡೆಸುವ ಉದ್ದೇಶವಿದೆ ಎನ್ನಲಾಗಿದೆ. ಆದರೆ ಈ ಚುನಾವಣೆಗಳ ಮೂಲಕ ಯುವಕರನ್ನು ಪಕ್ಷದತ್ತ ಸೆಳೆಯಬಹುದು, ವಿದ್ಯಾರ್ಥಿ ಸಂಘಟನೆಯಿಂದ ಪಕ್ಷದೊಂದಿಗೆ ಇರುವವರು ಕೊನೆಯವರೆಗೂ ನಿಷ್ಠರಾಗಿರುತ್ತಾರೆ ಎನ್ನುವ ದೂರದೃಷ್ಟಿಯನ್ನಿಟ್ಟುಕೊಂಡು ಈ ಚುನಾವಣೆಗಳನ್ನು ನಡೆಸಲು ಕಾಂಗ್ರೆಸ್ ಉತ್ಸಾಹ ತೋರಿದೆ.

ಯಾವೆಲ್ಲ ಅಂಶಗಳ ಬಗ್ಗೆ ವರದಿ?: ಸಮಿತಿಯೂ ಚುನಾವಣೆ ಹಾಗೂ ಉಮೇದುವಾರಿಕೆ ಅರ್ಹತೆಗಳ ಬಗ್ಗೆ, ಚುನಾವಣೆ ನಡೆಸುವ ಪ್ರಕ್ರಿಯೆ ಹಾಗೂ ವ್ಯವಸ್ಥೆ ಹೇಗಿರಬೇಕೆಂಬ ಬಗ್ಗೆ ಮಾಹಿತಿ, ಚುನಾವಣೆಯ ವೆಚ್ಚ ಮತ್ತು ಪಾರದರ್ಶಕತೆ, ದೂರುಗಳ ಪರಿಹಾರ ಮತ್ತು ಭದ್ರತೆ ವ್ಯವಸ್ಥೆ ಬಗ್ಗೆ, ಪ್ರಾತಿನಿಧ್ಯ ಮತ್ತು ಅಂತರ್ಗತ ಶಿಕ್ಷಣ, ಮಹಿಳೆಯರು, ಕಡೆಗಣಿಸಲಾದ ಸಣ್ಣ ಸಮುದಾಯಗಳು ಮತ್ತು ವಿಕಲಚೇತನ ವಿದ್ಯಾರ್ಥಿಗಳಿಗೆ ಸೀಟುಗಳ ಮೀಸಲು ಅಥವಾ ಕೋಟಾವನ್ನು ನಿಗದಿಪಡಿಸುವುದು, ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಶೈಕ್ಷಣಿಕ ವೇಳಾಪಟ್ಟಿಗೆ ತೊಂದರೆಯಾಗದಂತೆ ವಿದ್ಯಾರ್ಥಿ ಸಂಘದ ಅವಧಿಯನ್ನು ನಿರ್ಧರಿಸುವ ಶಿಫಾರಸುಗಳೊಂದಿಗೆ ವರದಿ ನೀಡಲು ಸಮಿತಿಗೆ ಸೂಚಿಸಲಾಗಿದೆ.

35 ವರ್ಷದ ಹಿಂದೆ ನಿಂತಿದ್ದ ಚುನಾವಣೆ

ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ವಿದ್ಯಾರ್ಥಿ ಸಂಘದ ಚುನಾವಣೆಗಳು ಸ್ಥಗಿತಗೊಂಡು 35 ವರ್ಷಗಳಾಗಿವೆ. 1989ರ ಆಸುಪಾಸಿನಲ್ಲಿ ನಡೆದ ವಿದ್ಯಾರ್ಥಿ ಸಂಘಗಳ ಚುನಾವಣಾ ವೇಳೆಯ ಗಲಭೆ ಹಾಗೂ ಕ್ಯಾಂಪಸ್‌ನಲ್ಲಿ ಆಗುತ್ತಿದ್ದ ವಿದ್ಯಾರ್ಥಿ ಸಂಘಟನೆಗಳ ನಡುವಿನ ಗಲಾಟೆಗಳನ್ನು ತಪ್ಪಿಸಲು ಅಂದಿನ ಸರಕಾರ ಚುನಾವಣೆ ಸ್ಥಗಿತಗೊಳಿಸಿತ್ತು. ಆದರೀಗ ಪುನಃ ಆರಂಭಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿಕೊಂಡಿದೆ. ಆದರೆ ಖಾಸಗಿ ವಿಶ್ವವಿದ್ಯಾಲಯಗಳು ಈ ಚುನಾವಣೆ ನಡೆಸಲು ಅನುಮತಿ ನೀಡುವುದೇ ಎನ್ನುವ ಗೊಂದಲಗಳಿವೆ. ಸದ್ಯ ದೆಹಲಿ, ಉತ್ತರಾಖಾಂಡ್, ಕೇರಳ, ತೆಲಂಗಾಣ, ಅರುಣಾಚಲ ಪ್ರದೇಶ, ಪಂಜಾಬ್ ರಾಜ್ಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ಅಸ್ತಿತ್ವದಲ್ಲಿದೆ.

ಸಮಿತಿಯಲ್ಲಿ ಯಾರಿದ್ದಾರೆ?



ಡಾ.ಶರಣ ಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ (ಸಂಚಾಲಕ), ಡಾ. ಸುಧಾಕರ್, ಉನ್ನತ ಶಿಕ್ಷಣ ಸಚಿವ, ಸಲೀಂ ಅಹ್ಮದ್, ಮುಖ್ಯ ಸಚೇತಕ, ವಿಧಾನಪರಿಷತ್, ರಿಜ್ವಾನ್ ಅರ್ಷದ್, ಶಾಸಕರು, ಬಿ. ಶಿವಣ್ಣ, ಶಾಸಕರು, ಪುಟ್ಟಣ್ಣ, ವಿಧಾನಪರಿಷತ್ ಸದಸ್ಯರು, ಬಸವನಗೌಡ ಬಾದರ್ಲಿ, ವಿಧಾನಪರಿಷತ್ ಸದ್ಯಸರು, ಎಚ್.ಎಸ್. ಮಂಜುನಾಥ್, ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ, ಕೀರ್ತಿ ಗಣೇಶ್, ಅಧ್ಯಕ್ಷರು, ಎನ್‌ಎಸ್‌ಯುಐ.

ವಿದ್ಯಾರ್ಥಿ ಚುನಾವಣೆ ಹೇಗೆ ನಡೆಸಬೇಕು ಎಂದು ತೀರ್ಮಾನಿಸಲು ಹೊಸ ಸಮಿತಿ ರಚನೆ ಮಾಡಲಾಗಿದೆ. ಇದರಿಂದ ಹೊಸ ನಾಯಕರನ್ನು ಬೆಳಕಿಗೆ ತರಲಾಗುವುದು. ಶರಣ ಪ್ರಕಾಶ್ ಪಾಟೀಲ್ ಸೇರಿದಂತೆ 9 ಜನರ ಸಮಿತಿ ರಚನೆ ಮಾಡಲಾಗಿದೆ. ಇವರು ಸರಕಾರಕ್ಕೆ ವರದಿ ಸಲ್ಲಿಕೆ ಮಾಡಲಿದ್ದಾರೆ. ನಾವುಗಳು ಸಹ ಈ ಹಿಂದೆ ವಿದ್ಯಾರ್ಥಿ ಚುನಾವಣೆಗಳ ಮೂಲಕವೇ ರಾಜಕೀಯಕ್ಕೆ ಬಂದವರು. ಆನಂತರ ಗಲಾಟೆಗಳು ಹೆಚ್ಚಾದ ಕಾರಣಕ್ಕೆ ರಂಗನಾಥ್ ಅವರು ಇದನ್ನು ನಿಲ್ಲಿಸಿಬಿಟ್ಟರು. ಈಗ ಇದರ ಅವಶ್ಯಕತೆ ಹೆಚ್ಚು ಕಾಣುತ್ತಿದೆ.

– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ತನಿಖಾ ವರದಿಯಿಂದ ಸ್ಫೋಟ ಪ್ರಕರಣದ ಸತ್ಯಾಸತ್ಯತೆ ಬಯಲು

ದಾವಣಗೆರೆ: ಮೈಸೂರು ಅರಮನೆ ಬಳಿ ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣದ ಕುರಿತಂತೆ ಏನೇ ಇದ್ದರೂ ತನಿಖಾ ವರದಿಗಾಗಿ ನಾವು ಕಾಯಬೇಕಾಗುತ್ತದೆ ಎಂದು ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮೈಸೂರು ಅರಮನೆ ಬಳಿಯ ಸ್ಫೋಟ ಪ್ರಕರಣದ ಕುರಿತಂತೆ ತಜ್ಞರ ವರದಿ ಬಂದ ಬಳಿಕ ನಮ್ಮ ಹೇಳಿಕೆ ಕೊಡೋಣ. ಸದ್ಯಕ್ಕೆ ಸುಮ್ಮನೆ ಹೇಳಿಕೆ ಕೊಡುವುದು ಸರಿಯಾಗುವುದಿಲ್ಲ. ಮೊದಲು ತಜ್ಞರಿಂದ ಅಧಿಕೃತ ವರದಿ ಬರಲಿ ಎಂದರು.

ಬೆಂಗಳೂರಿನ ಕೋಗಿಲು ಲೇಔಟ್‌ನಲ್ಲಿ ಅಕ್ರಮ ಒತ್ತುವರಿ ತೆರವು ವಿಚಾರದಲ್ಲಿ ಕೇರಳ ಸರಕಾರ ಮಧ್ಯ ಪ್ರವೇಶಿಸಿದೆ. ಕಾನೂನು ಪ್ರಕಾರ ರಾಜ್ಯ ಸರಕಾರ ಮುಂದುವರಿಯುವುದು ಸೂಕ್ತ. ನೆರೆ ರಾಜ್ಯದ ತಂತ್ರಗಾರಿಕೆ ಇತ್ಯಾದಿಯನ್ನು ಆ ರಾಜ್ಯದವರಿಗೆ ಕೇಳಬೇಕು. ಅಕ್ರಮವೋ, ಅಧಿಕೃತವೋ ನಮ್ಮ ನ್ಯಾಯಾಲಯ, ಅಧಿಕಾರಿಗಳು ತೀರ್ಮಾನಿಸುತ್ತಾರೆ. ಕಾಂಗ್ರೆಸ್ ತಂತ್ರಗಾರಿಕೆ ಬಗ್ಗೆ ನಾನು ಹೇಳುವುದಕ್ಕೆ ಬರುವುದಿಲ್ಲ. ಕಾನೂನಾತ್ಮಕವಾಗಿ ಕೆಲಸ ಮಾಡಿಯೆಂದಷ್ಟೇ ನಾವು ಹೇಳಬಹುದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಹದಗೆಟ್ಟ ಕಾನೂನು ಸುವ್ಯವಸ್ಥೆ

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಪೊಲೀಸ್ ಇಲಾಖೆ ಸಂಪೂರ್ಣ ಸ್ವತಂತ್ರವಿಲ್ಲದಾಗಿದೆ. ಡ್ರಗ್ಸ್ ಹಾವಳಿ ಮೀತಿ ಮೀರಿದೆ. ಪೊಲೀಸರು ಇದಕ್ಕೆ ಕಡಿವಾಣ ಹಾಕುವ ಕೆಲಸ ಮಾಡಿ ರಾಜ್ಯದ ಗೌರವ ಉಳಿಸಲಿ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು. ಹಾವೇರಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಕುರ್ಚಿಗಾಗಿ ಹಗ್ಗ ಜಗ್ಗಾಟದಿಂದ ರಾಜ್ಯದ ಅಭಿವೃದ್ಧಿ ಹಾಗೂ ಕಾನೂನು ಸುವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ರಾಜ್ಯದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅಧಿಕಾರಕ್ಕಾಗಿ ತಿಕ್ಕಾಟ ನಡೆದಿರುವುದು ಸತ್ಯ. ಇದನ್ನು ರಾಜ್ಯದ ಜನ ಗಮನಿಸುತ್ತಿದ್ದಾರೆ. ಜನರ ಆಶೋತ್ತರಗಳನ್ನು ನಿಭಾಯಿಸುವಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಸಂಪೂರ್ಣ ನೆಲಕಚ್ಚಿದೆ ಎಂದರು.

ಮುಂಡಗೋಡಿನಲ್ಲಿ ನಡೆದ ದಲೈಲಾಮಾ ಅವರ 90ನೇ ಜನ್ಮದಿನಾಚರಣೆಯಲ್ಲಿ ಕಿರಣ್ ರಿಜಿಜು ಭಾಗಿ

ದಲೈಲಾಮ ದೇಶದಲ್ಲಿ ನೆಲೆಸಿರುವುದು ನಮ್ಮ ಸೌಭಾಗ್ಯ

ಕಾರವಾರ: ದಲೈಲಾಮಾ ಅವರು ಪ್ರಾಚೀನ ಭಾರತೀಯ ಜ್ಞಾನ ಮತ್ತು ಆಧುನಿಕ ಪ್ರಪಂಚದ ನಡುವಿನ ಜೀವಂತ ಸೇತುವೆ . ದಲೈಲಾಮಾ ಅವರು ಭಾರತವನ್ನು ತಮ್ಮ 'ಆರ್ಯಭೂಮಿ' ಎಂದು ಕರೆಯುತ್ತಾರೆ. ಅವರು ಭಾರತದಲ್ಲಿ ನೆಲೆಸಿರುವುದು ನಮಗೆ ಮತ್ತು ನಮ್ಮ ದೇಶಕ್ಕೆ ಸಿಕ್ಕಿರುವ ದೊಡ್ಡ ಸೌಭಾಗ್ಯ, ಹೆಮ್ಮೆ ಎಂದು ಕೇಂದ್ರ ಸಹಕಾರಿ ಸಚಿವ ಕಿರಣ್ ರಿಜಿಜು ಹೇಳಿದರು.

ಮುಂಡಗೋಡಿನಲ್ಲಿ ನಡೆದ ದಲೈಲಾಮಾ ಅವರ 90ನೇ ಜನ್ಮದಿನಾಚರಣೆ ಕಾರ್ಯಕ್ರಮಲ್ಲಿ ಕೇಂದ್ರ ಸಚಿವ ಕಿರಣ್ ರಿಜಿಜು ಪಾಲ್ಗೊಂಡು ಮಾತನಾಡಿದರು.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನ ಟಿಬೆಟ್ ಕಾಲೋನಿಯಲ್ಲಿ ಭಾನುವಾರ ಆಯೋಜಿಸಿದ್ದ 14ನೇ ದಲೈಲಾಮಾ ಅವರ 90ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಭಾರತದಲ್ಲಿ ಶಾಂತಿಯುತವಾಗಿ ನೆಲೆಸಿರುವ ಟಿಬೆಟಿಯನ್ ಸಮುದಾಯಕ್ಕೆ ಭಾರತ ಸರಕಾರದ ವಿವಿಧ ಕಲ್ಯಾಣ ಯೋಜನೆಗಳನ್ನು ತಲುಪಿಸಲು ಬದ್ಧ. ಹಿಂಸೆ ಮತ್ತು ಸಂಘರ್ಷಗಳಿಂದ ಕೂಡಿರುವ ಇಂದಿನ ಜಗತ್ತಿಗೆ ದಲೈಲಾಮಾ ಅವರ ಅಹಿಂಸೆ ಮತ್ತು ಕರುಣೆಯ ಸಂದೇಶಗಳು ಅತ್ಯಂತ ಅವಶ್ಯಕವಾಗಿವೆ.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ದಲೈಲಾಮಾ ಅವರು ಕೇವಲ ಟಿಬೆಟ್ ಸಮುದಾಯಕ್ಕೆ ಸೀಮಿತವಾದವರಲ್ಲ. ಇಡೀ ಜಗತ್ತಿಗೆ ಅವರು ಶಾಂತಿ ಮತ್ತು ಅಹಿಂಸೆಯ ಸಂದೇಶ ನೀಡುತ್ತಿರುವ ಮಹಾನ್ ಸಂತ. ಮುಂಡಗೋಡಿನಲ್ಲಿ ಟಿಬೆಟಿಯನ್ ಸಮುದಾಯವು ದಶಕಗಳಿಂದ ಶಾಂತಿಯುತವಾಗಿ ನೆಲೆಸಿದೆ. ಈ ಭಾಗದಲ್ಲಿ ದಲೈಲಾಮಾ ಅವರ ಉಪಸ್ಥಿತಿ ಮತ್ತು ಅವರ ಜನ್ಮದಿನಾಚರಣೆ ನಡೆಯುತ್ತಿರುವುದು ನಮ್ಮ ಜಿಲ್ಲೆಗೆ ಸಂದ ಗೌರವ. ಭಾರತ ಮತ್ತು ಟಿಬೆಟ್ ನಡುವೆ ಸಾಂಸ್ಕೃತಿಕ ಮತ್ತು ಧಾರ್ಮಿಕವಾಗಿ ಅವಿನಾಭಾವ ಸಂಬಂಧವಿದೆ. ದಲೈಲಾಮಾ ಅವರು ಭಾರತದ ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಪಸರಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಟಿಬೆಟಿಯನ್ ಹಿರಿಯ ಧರ್ಮಗುರು ಪೆನ್ಚೆನ್ ಲಾಮಾ ಮಾತನಾಡಿ, ಬೌದ್ಧ ಧರ್ಮದ ಅನುಯಾಯಿಗಳು ಕೇವಲ ಪೂಜೆ ಪುನಸ್ಕಾರಗಳಿಗೆ ಸೀಮಿತವಾಗದೆ, ಬುದ್ಧನ ಬೋಧನೆಯಾದ ಕರುಣೆ ಮತ್ತು ಶಾಂತಿ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಚೀನಾಗೆ ರಿಜಿಜು ಪರೋಕ್ಷ ಎಚ್ಚರಿಕೆ

ಉತ್ತರಕನ್ನಡ ಜಿಲ್ಲೆಯ ಮುಂಡಗೋಡಿನಲ್ಲಿ ನಡೆದ ದಲೈಲಾಮಾ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಕಿರಣ್ ರಿಜಿಜು ಪಾಲ್ಗೊಂಡು ಮಾತನಾಡಿದರು. ದಲೈಲಾಮಾ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಸಂಪೂರ್ಣ ಹಕ್ಕು ಕೇವಲ ದಲೈಲಾಮಾ ಅವರಿಗೆ ಮತ್ತು ಅವರ ಸಂಸ್ಥೆಗೆ ಮಾತ್ರ ಇದೆ. ಇದರಲ್ಲಿ ಬೇರೆ ಯಾವುದೇ ದೇಶ ಅಥವಾ ವ್ಯಕ್ತಿ ಹಸ್ತಕ್ಷೇಪ ಮಾಡುವಂತಿಲ್ಲ ಎಂದು ಅವರು ಚೀನಾಕ್ಕೆ ಪರೋಕ್ಷವಾಗಿ ಎಚ್ಚರಿಕೆ ನೀಡಿದರು.

ಮುಂಡಗೋಡಿನ ಸ್ಥಳೀಯರು ಮತ್ತು ಟಿಬೆಟಿಯನ್ ಸಮುದಾಯದವರು ಪರಸ್ಪರ ಸಹಬಾಳ್ವೆಯಿಂದ ಬದುಕುತ್ತಿರುವುದು ಮಾದರಿಯಾಗಿದೆ. ದಲೈಲಾಮಾ ಅವರು ನೂರು ಕಾಲ ಆರೋಗ್ಯದಿಂದ ಬಾಳಲಿ, ಅವರ ಮಾರ್ಗದರ್ಶನ ಇಡೀ ಮಾನವಕುಲಕ್ಕೆ ಸಿಗಲಿ.

– ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸದ

ಈ ವೇಳೆ ದಲೈಲಾಮಾ ಅವರ ಜೀವನ ಚರಿತ್ರೆ ಕುರಿತಾದ ಪುಸ್ತಕ ಬಿಡುಗಡೆ ಮಾಡಲಾಯಿತು. ವಿವಿಧ ಟಿಬೆಟಿಯನ್ ಪ್ರಾಂತಗಳ ಕಲಾವಿದರಿಂದ ಸಾಂಪ್ರದಾಯಿಕ ನೃತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಲಡಾಕ್ ಮತ್ತು ಸಿಕ್ಕಿಂ ರಾಜ್ಯಗಳ ಪ್ರಮುಖ ನಾಯಕರು ಕೂಡ ಈ ಸಂದರ್ಭದಲ್ಲಿ ದಲೈಲಾಮಾ ಅವರಿಗೆ ಗೌರವ ಸಲ್ಲಿಸಿದರು.

ಮಾನಸ, ನವ್ಯ, ರಶ್ಮಿ, ಬಿಂದು, ಗ್ರಿಯಾ ಮೃತದೇಹಗಳ ಹಸ್ತಾಂತರ

ಚಿತ್ರದುರ್ಗ: ಹಿರಿಯೂರು ಬಳಿ ನಡೆದ ಸೀಬರ್ಡ್ ಬಸ್ ದುರಂತದಲ್ಲಿ ಮೃತಪಟ್ಟ ಐವರ ಮೃತದೇಹದ ಗುರುತು ಡಿಎನ್‌ಎ ವರದಿಯಿಂದ ಪತ್ತೆಯಾಗಿದ್ದು, ಶವಗಳನ್ನು ಪೊಲೀಸರು ಕುಟುಂಬಸ್ಥರಿಗೆ ಹಸ್ತಾಂತರಿಸಿದ್ದಾರೆ.

ಡಿ.25ರಂದು ಬೆಂಗಳೂರಿನಿಂದ ಸೀಬರ್ಡ್ ಬಸ್‌ನಲ್ಲಿ ಗೋಕರ್ಣ ಶಿವಮೊಗ್ಗ ಹಾಗೂ ಕುಮಟಕ್ಕೆ ತೆರಳಲು ಒಟ್ಟು 32 ಜನ ಪ್ರಯಾಣಿಕರು ತೆರಳುತಿದ್ದರು. ಈ ಬಸ್‌ಗೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಗೊರ್ಲಡಕು ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಲಾರಿ ಡಿಕ್ಕಿಯಾಗಿತ್ತು. ಪರಿಣಾಮ ಬಸ್‌ನಲ್ಲಿದ್ದ ಐವರು ಪ್ರಯಾಣಿಕರು ಸುಟ್ಟು ಕರಕಲಾಗಿದ್ದರು. ಮೃತದೇಹ ಕರಕಲಾಗಿದ್ದು ಗುರುತು ಪತ್ತೆಯಾಗಿರಲಿಲ್ಲ. ಡಿಎನ್‌ಎಪರೀಕ್ಷೆ ನಡೆಸಲಾಗಿತ್ತು. ವರದಿ ಬಂದಿದ್ದು, ಕುಟುಂಬಸ್ಥರಿಗೆ ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ.

ದುರ್ಘಟನೆಯಲ್ಲಿ ಸಾವಿಗೀಡಾದ ರಶ್ಮಿ ಮಹಾಲೆ ಮೃತದೇಹವನ್ನು ಅವರ ಸಹೋದರ ವಿನಾಯಕಗೆ ಪೊಲೀಸರು ಹಸ್ತಾಂತರಿಸಿದ್ದಾರೆ. ಬೆಂಗಳೂರಿನ ಬಿಂದು ಹಾಗೂ ಅವರ ಪುತ್ರಿ ಗ್ರಿಯಾ ಮೃತದೇಹಗಳನ್ನು ಸಹ ಬಿಂದು ಪತಿ ದರ್ಶನ್ ಅವರಿಗೆ ಹಸ್ತಾಂತರಿಸಿದ್ದಾರೆ. ಮೃತದೇಹಗಳ ಮೇಲಿನ ಚಿನ್ನಾಭರಣಗಳನ್ನು ಹಿರಿಯೂರು ಪೊಲೀಸರು ಹಸ್ತಾಂತರಿಸಿದ್ದಾರೆ.

ಈ ವೇಳೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ರಶ್ಮಿ ಸಹೋದರ, ಯಾವ ಕಾರಣಕ್ಕೆ ಬಸ್ ದುರಂತ ಆಗಿದೆಯೆಂದು ಪತ್ತೆ ಆಗಬೇಕು. ಮುಂದೆ ಇಂತಹ ದುರ್ಘಟನೆ ನಡೆಯದಂತೆ ಕ್ರಮವಹಿಸಬೇಕು. ನನ್ನ ಸಹೋದರಿ ಬಗ್ಗೆ ಸೋಷಿಯಲ್ ಮಿಡಿಯಾದಲ್ಲಿ, ಮ್ಯಾನೇಜರ್ ಜತೆ ಗಲಾಟೆ ಮಾಡ್ಕೊಂಡು ರಜೆಗೆ ತೆರಳಿದ್ರು ಎಂದು ಸುಳ್ಳು ಪ್ರಚಾರ ಮಾಡಲಾಗ್ತಿದೆ. ಆದರೆ ಆಕೆ ಹಲ್ಲು ನೋವಿಗೆ ಚಿಕಿತ್ಸೆ ಪಡೆಯುತ್ತಿದ್ದರು. ಕ್ರಿಸ್‌ಮಸ್ ರಜೆ ಹಿನ್ನೆಲೆ ಊರಿಗೆ ಬರುತ್ತಿದ್ದಳೆಂದು ಸ್ಪಷ್ಟಪಡಿಸಿದ್ದಾರೆ.

ಮಾನಸ, ನವ್ಯ ಒಟ್ಟಿಗೆ ಅಂತ್ಯಸಂಸ್ಕಾರ

ಮೃತ ಮಾನಸ ಮತ್ತು ನವ್ಯ ಚಿಕ್ಕಂದಿನಿಂದಲೂ ಒಟ್ಟಾಗಿ ಬೆಳೆದಿದ್ದು, ನವ್ಯಾ ಮದುವೆ ಫಿಕ್ಸ್ ಆಗಿತ್ತು. ಮುಂದಿನ ಬದುಕಿನ ಬಗ್ಗೆ ಅಪಾರ ಕನಸು ಕಂಡಿದ್ದರು. ಆದರೆ ವಿಧಿಯಾಟವೇ ಬೇರೆ ಆಗಿದೆ. ಇಂತಹ ಸಾವು ಯಾವ ಶತ್ರುಗಳಿಗೂ ಬರಬಾರದು. ಅವರ ಅಗಲಿಕೆಯ ದುಃಖದಿಂದ ಹೊರಬರಲು ಸಾಧ್ಯವಾಗ್ತಿಲ್ಲ. ಒಟ್ಟಾಗಿ ಬೆಳೆದವರು, ಒಂದಾಗಿ ಕೊನೆಯುಸಿರು ಎಳೆದಿದ್ದಾರೆ. ಹೀಗಾಗಿ ಅವರ ಅಂತ್ಯಕ್ರಿಯೆಯನ್ನು ಚನ್ನರಾಯಪಟ್ಟಣದ ಹಿಂದೂ ರುದ್ರಭೂಮಿಯಲ್ಲಿ ಒಟ್ಟಿಗೆ ಮಾಡ್ತೇವೆ ಎಂದು ನವ್ಯ ತಂದೆ ತಿಳಿಸಿದ್ದಾರೆ.

ಗಾಂಧಿ ಪ್ರತಿಮೆಗೆ ಸಾಂತಾ ಕ್ಲಾಸ್ ಟೋಪಿ

ಬೆಳಗಾವಿ: ನಗರದ ಹೃದಯ ಭಾಗದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಗೆ ಸಾಂತಾ ಕ್ಲಾಸ್ ಕೆಂಪು ಟೋಪಿ ಹಾಕಿ ಅವಮಾನ ಮಾಡಿರುವ ಘಟನೆ ಭಾನುವಾರ ಬೆಳಗ್ಗೆ ನಡೆದಿದೆ. ನಗರದ ಹಿಂಡಲಗಾ ರಸ್ತೆಯ ಗಾಂಧಿ ಚೌಕ್‌ನಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಗೆ ಕಿಡಿಗೇಡಿಗಳು ಸಾಂತಾ ಕ್ಲಾಸ್ ಕೆಂಪು ಟೋಪಿ ಹಾಕುವ ಮೂಲಕ ಅವಮಾನ ಎಸಗಿದ್ದಾರೆ. ಸದ್ಯ ಈ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ. ಒಬ್ಬ ಮಹಾನ್ ಸ್ವಾತಂತ್ರ್ಯ ಹೋರಾಟಗಾರನಿಗೆ ಅವಮಾನ ಮಾಡಿದವರ ಮೇಲೆ ಸೂಕ್ತ ಕ್ರಮಕ್ಕೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಒಂದೇ ಗಂಟೆಯಲ್ಲಿ ಕೊಪ್ಪಳ ಟು ಹುಬ್ಬಳ್ಳಿ

ಮೆಡಿಕಲ್ ಎಮರ್ಜೆನ್ಸಿ | ಪೊಲೀಸ್ ಎಸ್ಕಾರ್ಟ್‌ನಲ್ಲಿ ಹುಬ್ಬಳ್ಳಿ ಕಿಮ್ಸ್‌ಗೆ ನವಜಾತ ಶಿಶು ರವಾನೆ

ಕೊಪ್ಪಳ: ಮೆಡಿಕಲ್ ಎಮರ್ಜೆನ್ಸಿ ಹಿನ್ನೆಲೆ ನವಜಾತ ಶಿಶುವನ್ನು ಆಂಬ್ಯುಲೆನ್ಸ್‌ನಲ್ಲಿ ಕೊಪ್ಪಳದಿಂದ ಹುಬ್ಬಳ್ಳಿಗೆ ಕೇವಲ 1 ಗಂಟೆಯಲ್ಲಿ ರವಾನಿಸಿದ ಅಪರೂಪದ ಪ್ರಕರಣ ಭಾನುವಾರ ನಡೆದಿದೆ. ಭಾನುವಾರ ಬೆಳಗ್ಗೆ 10.10ಕ್ಕೆ ಸರಿಯಾಗಿ ಕೊಪ್ಪಳದಿಂದ ಹೊರಟ ಆಂಬ್ಯುಲೆನ್ಸ್ ಬರೋಬ್ಬರಿ 120 ಕಿ.ಮೀ. ದೂರದ ಹುಬ್ಬಳ್ಳಿ ಆಸ್ಪತ್ರೆಯನ್ನು ಕೇವಲ 60 ನಿಮಿಷದಲ್ಲಿ ತಲುಪಿದೆ.

ಮೂರು ಖಾಸಗಿ ಆಂಬ್ಯುಲೆನ್ಸ್ ಜತೆಗೆ ಸರಕಾರಿ ಆಸ್ಪತ್ರೆಯ ಆಂಬ್ಯುಲೆನ್ಸ್ ಪೊಲೀಸ್ ಎಸ್ಕಾರ್ಟ್‌ನಲ್ಲಿ ಹುಬ್ಬಳ್ಳಿ ತಲುಪಿವೆ. ಕೊಪ್ಪಳ, ಗದಗ ಹಾಗೂ ಹುಬ್ಬಳ್ಳಿಯ ಸಂಚಾರ ಪೊಲೀಸರಿಗೆ ಮೊದಲೇ ಮಾಹಿತಿ ನೀಡಿದ್ದರಿಂದ ಪೊಲೀಸರು ಆಂಬ್ಯುಲೆನ್ಸ್ ಸರಾಗ ಸಂಚಾರಕ್ಕೆ ನೆರವಾದರು. ಕೊಪ್ಪಳ ಹಾಗೂ ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ಆಂಬ್ಯುಲೆನ್ಸ್ ರಸ್ತೆ ಸುರಕ್ಷತಾ ಸಂಘಟನೆ ಸದಸ್ಯರು ಕೂಡ ಈ ಮಾನವೀಯ ಕಾರ್ಯಕ್ಕೆ ಕೈ ಜೋಡಿಸಿದ್ದಾರೆ.

ಹುಟ್ಟಿನಿಂದಲೇ ಸಾವು: ಬದುಕಿನ ನಡುವೆ ಹೋರಾಟ ಮಾಡುತ್ತಿದ್ದ ಶಿಶುವಿಗೆ ತುರ್ತು ಚಿಕಿತ್ಸೆ ಅಗತ್ಯವಿತ್ತು. ಹಿನ್ನೆಲೆ ಕೊಪ್ಪಳದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಿಂದ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಆಸ್ಪತ್ರೆಗೆ ರೆಫರ್ ಮಾಡಲಾಗಿತ್ತು. ಈ ಹಿನ್ನೆಲೆ ಖಾಸಗಿ ಆಂಬ್ಯುಲೆನ್ಸ್ ಸೇವಾ ಸಂಸ್ಥೆ ಪೊಲೀಸ್ ಇಲಾಖೆಯೊಂದಿಗೆ ಸಂಪರ್ಕ ಸಾಧಿಸಿ, ಎಸ್ಕಾರ್ಟ್‌ನಲ್ಲಿ ಸುರಕ್ಷಿತವಾಗಿ ಹುಬ್ಬಳ್ಳಿ ತಲುಪಿದ್ದಾರೆ. ಕೊಪ್ಪಳ ನಗರದಲ್ಲಿ ಮತ್ತು ಹುಬ್ಬಳ್ಳಿ ಮಹಾ ನಗರದಲ್ಲಿ ಪೊಲೀಸ್ ಸಿಬ್ಬಂದಿ ಟ್ರಾಫಿಕ್ ಕ್ಲಿಯರ್ ಮಾಡುವ ಮೂಲಕ ಆಂಬ್ಯುಲೆನ್ಸ್ ತುರ್ತಾಗಿ ಹುಬ್ಬಳ್ಳಿ ತಲುಪಲು ಸಹಕರಿಸಿದ್ದಾರೆ.

ಏನಿದು ಪ್ರಕರಣ?: ಕೊಪ್ಪಳ ಜಿಲ್ಲೆ ಕುಕನೂರು ತಾಲೂಕು ಗುತ್ತೂರು ಗ್ರಾಮದ ವಿಜಯಲಕ್ಷ್ಮೀ ಎಂಬುವರಿಗೆ ಶನಿವಾರ ಮಧ್ಯರಾತ್ರಿ ಸಹಜ ಹೆರಿಗೆ ಆಗಿದೆ. ಕುಕನೂರು ತಾಲೂಕು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಆಗಿತ್ತು. ಹುಟ್ಟಿದ ಶಿಶುವಿನ ಹೊಟ್ಟೆ ಮೇಲೆ ಸರಿಯಾಗಿ ಚರ್ಮ ಬೆಳೆದಿಲ್ಲ. ಕಾರಣ ಶಿಶುವಿನ ಎಲ್ಲ ಕರಳುಗಳು ಹುಟ್ಟಿನಿಂದಲೇ ಹೊರಗಡೆ ಬಂದಿದ್ದವು. ಕೂಡಲೇ ತಾಯಿ- ಮಗುವನ್ನು ಕೊಪ್ಪಳದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಕರೆದುಕೊಂಡು ಬರಲಾಗಿತ್ತು. ಶಿಶುವಿಗೆ ಮಕ್ಕಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸೌಲಭ್ಯ ಅಗತ್ಯವಿತ್ತು. ಇದರಿಂದ ಕೊಪ್ಪಳದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹುಬ್ಬಳ್ಳಿಗೆ ರವಾನಿಸಲಾಗಿದೆ.

ಅಪರೂಪದ ಪ್ರಕರಣ: ಮಗು ಜೀವಂತವಾಗಿ ಜನಿಸಿದ್ದರೂ ಕರಳು ಸಂಪೂರ್ಣ ಹೊರಗೆ ಇದ್ದವು. ಜತೆಗೆ ಹುಟ್ಟಿದ ಮಗು ಸಾಮಾನ್ಯ ಮಗುವಿನಂತೆ ಅಳುತ್ತಿದೆ ಕೂಡ. ಇದು ತೀರಾ ಅಪರೂಪದ ಪ್ರಕರಣ ಆಗಿದ್ದು, ವೈದ್ಯಕೀಯ ಕ್ಷೇತ್ರಕ್ಕೂ ಸವಾಲು ಎನ್ನಬಹುದು. ಈ ಹಿನ್ನೆಲೆ ಈ ಪ್ರಕರಣದಲ್ಲಿ ಸಮಗ್ರ ಅಧ್ಯಯನದ ಅಗತ್ಯವೂ ಇದೆ ಎಂಬುದು ಹಿರಿಯ ವೈದ್ಯರ ಮಾತು.

ಕೊಪ್ಪಳದಿಂದ ಹೊರಟ ಆಂಬ್ಯುಲೆನ್ಸ್

ಆಸ್ಪತ್ರೆಯಿಂದ ಮಗುವನ್ನು ಕರೆದೊಯ್ಯಲಾಯಿತು.

ವೈದ್ಯಕೀಯ ಸಲಕರಣೆಗಳೊಂದಿಗೆ ಶಿಶುವನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಬರೋಬ್ಬರಿ ಒಂದು ಗಂಟೆಯಲ್ಲಿ ಹುಬ್ಬಳ್ಳಿ ತಲುಪಿದ್ದೇವೆ. ಚಾಲಕ ಪ್ರಕಾಶ ಕೂಡ ಸಮಯ ಪ್ರಜ್ಞೆಯಿಂದ ತೆರಳಿದ್ದರಿಂದ ಸರಿಯಾದ ಸಮಯಕ್ಕೆ ಹೋಗಲು ಸಾಧ್ಯವಾಯಿತು. ಹುಬ್ಬಳ್ಳಿಯಲ್ಲಿ ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ.

-ಮಂಜುನಾಥ ಗಾಡಿ ಕೊಪ್ಪಳ ಆಸ್ಪತ್ರೆ ಸಿಬ್ಬಂದಿ

ವಿಜಯಲಕ್ಷ್ಮಿ ಎಂಬುವರಿಗೆ ಕುಕನೂರು ಸರಕಾರಿ ಆಸ್ಪತ್ರೆಯಲ್ಲಿ ಸಾಮಾನ್ಯ ಹೆರಿಗೆ ಆಗಿತ್ತು. ಹುಟ್ಟುವಾಗಲೇ ಮಗುವಿನ ಕರುಳು ಹೊರಗೆ ಬಂದಿದ್ದವು. ಚಿಕಿತ್ಸೆಗೆ ಪೀಡಿಯಾಟ್ರಿಕ್ ಸೂಪರ್ ಸ್ಪೆಷಾಲಿಟಿ ಸೌಲಭ್ಯ ಅಗತ್ಯ ಇದ್ದ ಕಾರಣ ಹುಬ್ಬಳ್ಳಿ ಕಿಮ್ಸ್‌ಗೆ ರೆಫರ್ ಮಾಡಲಾಗಿತ್ತು.

-ವಿಜಯನಾಥ ಇಟಗಿ ನಿರ್ದೇಶಕರು, ಕಿಮ್ಸ್, ಕೊಪ್ಪಳ

ಎಲ್ಲವನ್ನೂ ಹೈಕಮಾಂಡ್ ನಿರ್ಧರಿಸಲಿದೆ: ತಿಮ್ಮಾಪುರ

ಸಿಎಂ ಬದಲಾವಣೆ ನನ್ನ ಕೈಯಲ್ಲಿಲ್ಲ

ಕಲಬುರಗಿ: ಸಿಎಂನ ಆಯ್ಕೆ ಮಾಡುವವನು ನಾನಲ್ಲ, ಆಗೋನು ನಾನಲ್ಲ. ಶಾಸಕರಿಗೆ ಹಾಗೂ ಅಭಿಮಾನಿಗಳಿಗೆ ತಮ್ಮ ನಾಯಕರು ಮುಖ್ಯಮಂತ್ರಿ ಆಗಬೇಕೆಂಬ ಆಸೆ ಇರುವುದು ಸಹಜ. ಆದರೆ, ಅಂತಿಮವಾಗಿ ಹೈಕಮಾಂಡ್ ಎಲ್ಲವನ್ನೂ ಸರಿಪಡಿಸಲಿದೆ ಎಂದು ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ, ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಚರ್ಚೆಗಳ ಕುರಿತು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲಗಳಿಲ್ಲ. ನಾಯಕತ್ವದ ಬಗ್ಗೆ ಹೈಕಮಾಂಡ್ ಮತ್ತು ಸಿಎಲ್‌ಪಿ ಸಭೆಯಲ್ಲಿ ತೀರ್ಮಾನವಾಗಲಿದೆ. ಅಭಿಮಾನಿಗಳು ಪ್ರೀತಿಯಿಂದ ತಮ್ಮ ನಾಯಕರ ಪರವಾಗಿ ಮಾತನಾಡುತ್ತಾರೆ ಅಷ್ಟೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ವಿರುದ್ಧ ವಾಗ್ದಾಳಿ: ಈಗ ಎಲೆಕ್ಷನ್ ನಡೆದರೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂಬ ವಿಜಯೇಂದ್ರ ಅವರ ಹೇಳಿಕೆಗೆ ತಿರುಗೇಟು ನೀಡಿದ ಸಚಿವರು, ಮೊದಲು ಅವರ ಪಕ್ಷದವರೇ ಅವರನ್ನು ಅಧ್ಯಕ್ಷ ಎಂದು ಒಪ್ಪಿಕೊಂಡಿದ್ದಾರೆಯೇ ಎಂಬುದು ಖಾತರಿಯಾಗಲಿ. ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿದ್ದನ್ನು ನೋಡಿದ್ದೇವೆ. ತಮ್ಮ ಪಕ್ಷದ ಒಳಗಿನ ಕಿತ್ತಾಟ ಬಿಡಿಸಿಕೊಳ್ಳಲಾಗದ ಇವರು, ಇನ್ನು ಅಧಿಕಾರಕ್ಕೆ ಬಂದರೆ ಆಡಳಿತ ನಡೆಸಲು ಸಾಧ್ಯವೇ ಎಂದು ವ್ಯಂಗ್ಯವಾಡಿದರು.

ಸದನದಲ್ಲಿ ಮಹದಾಯಿ ಚರ್ಚೆಗೆ ಸಿದ್ಧ: ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತು ಮಾತನಾಡಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆಯ ಸಂತ್ರಸ್ತರಿಗೆ ಎಕರೆಗೆ 40 ಲಕ್ಷ ರು. ಪರಿಹಾರ ಘೋಷಿಸಿದ್ದೇವೆ. ಜನವರಿ ತಿಂಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರೇ ಪರಿಹಾರ ವಿತರಿಸುವ ನಿರೀಕ್ಷೆ ಇದೆ. ಆದರೆ, ಮಹದಾಯಿ ಯೋಜನೆಯ ಪರಿಸರ ಅನುಮತಿ ನೀಡಲು ಕೇಂದ್ರ ಸರಕಾರ ವಿಳಂಬ ಮಾಡುತ್ತಿದೆ. ಸದನದಲ್ಲಿ ಚರ್ಚೆಗೆ ನಾವು ಸದಾ ಸಿದ್ಧರಿದ್ದೇವೆ, ಆದರೆ ವಿರೋಧ ಪಕ್ಷದವರು ಸರಿಯಾದ ವಿಷಯಗಳ ಮೇಲೆ ಆದ್ಯತೆ ನೀಡಿ ಪ್ರಶ್ನೆ ಮಾಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೊಸ ವರ್ಷದ ಆಚರಣೆಯ ಬಗ್ಗೆ ಸದ್ಯಕ್ಕೆ ರಾಜ್ಯ ಸರಕಾರದಿಂದ ಯಾವುದೇ ಹೊಸ ಗೈಡ್‌ಲೈನ್ಸ್ ಜಾರಿಯಾಗಿಲ್ಲ. ಆಯಾ ಜಿಲ್ಲೆಗಳ ಪರಿಸ್ಥಿತಿಗೆ ಅನುಗುಣವಾಗಿ ಸ್ಥಳೀಯ ಜಿಲ್ಲಾಡಳಿತವೇ ಅಗತ್ಯ ಕ್ರಮ ವಹಿಸಲಿದೆ.

-ಆರ್.ಬಿ.ತಿಮ್ಮಾಪುರ, ಸಚಿವ

ವಿಶ್ವವಾಣಿ

ಸಂಪಾದಕೀಯ

ಉಗ್ರರಿದ್ದಾರೆ, ನಿರ್ಲಕ್ಷ್ಯ ಸಲ್ಲ

ಪಾಕಿಸ್ತಾನ ಮೂಲದ 'ಲಷ್ಕರ್-ಎ-ತೈಬಾ' (ಎಲ್‌ಇಟಿ) ಉಗ್ರಗಾಮಿ ಸಂಘಟನೆಗೆ ಸೇರಿದ ಇಬ್ಬರು ಉಗ್ರರು ದಕ್ಷಿಣ ಕಾಶ್ಮೀರ ಭಾಗದಲ್ಲಿ ನಿರಾಳವಾಗಿ ಮತ್ತು ರಾಜಾರೋಷವಾಗಿ ಓಡಾಡಿಕೊಂಡಿರುವುದನ್ನು ವ್ಯಾಪಾರದ ಮಳಿಗೆಯೊಂದರ ಸಿಸಿಟಿವಿ ಕ್ಯಾಮೆರಾ ಸೆರೆಹಿಡಿದಿರುವ ಸುದ್ದಿ ಬಂದಿದೆ. 'ಮೀನಿನ ಹೆಜ್ಜೆಯ ಜಾಡನ್ನಾದರೂ ಕಂಡುಹಿಡಿಯಬಹುದು, ಆದರೆ ಕುತ್ಸಿತ ಜನರ ದುರಾಲೋಚನೆಗಳನ್ನು ಮುಂಚಿತವಾಗಿ ಲೆಕ್ಕಿಸುವುದು ಕಷ್ಟ' ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು, ಈ ಬೆಳವಣಿಗೆಯನ್ನು ಹದ್ದಿನ ಕಣ್ಣುಗಳಿಂದ ವಿಶ್ಲೇಷಿಸಬೇಕಾದ ಅಗತ್ಯವಿದೆ. ಏಕೆಂದರೆ, 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಅವಧಿಯಲ್ಲಿ, ಪಾಕಿಸ್ತಾನಕ್ಕೆ ಸಾಕಷ್ಟು ತಪರಾಕಿ ಬಿದ್ದಿರುವ ಮತ್ತು ಉಗ್ರರ ನೆಲೆಗಳು ನಾಶವಾಗಿರುವ ಕಹಿವಾಸ್ತವವು ಇಂಥ ಜನರನ್ನು ಕೆಂಡವಾಗಿಸಿರುವ ಸಾಧ್ಯತೆಯಿದೆ; ಅದು 'ಬೂದಿ ಮುಚ್ಚಿದ ಕೆಂಡ' ಆಗಿದ್ದಿರಲಿಕ್ಕೂ ಸಾಕು. ಹಾಗಾಗಿ, 'ಇದು ಬರಿಯ ಬೂದಿ' ಎಂದು ನಾವು ನಿರ್ಲಕ್ಷಿಸುವ ಹಾಗಿಲ್ಲ. ಜತೆಗೆ, ನಾವು ಇದುವರೆಗೆ ತರಿದುಹಾಕಿರುವುದು ಉಗ್ರವಾದ ಎಂಬ ವಿಷವೃಕ್ಷದ ರೆಂಬೆ-ಕೊಂಬೆಗಳನ್ನಷ್ಟೇ, ಅದರ ಮೂಲೋತ್ಪಾಟನೆ ಬಾಕಿಯಿದೆ. ಅದಕ್ಕೆ ಮಹತ್ತರ ಸಂಕಲ್ಪದ ಅಗತ್ಯವಿದೆ ಮತ್ತು ವಿಶ್ವದ ಮಿಕ್ಕ ರಾಷ್ಟ್ರಗಳ ಸಾಂಗತ್ಯವೂ ಬೇಕಾಗಿದೆ. ಇದು ತುರ್ತಾಗಿ ಆಗಬೇಕಿರುವ ಕೆಲಸ, ಇಲ್ಲವಾದಲ್ಲಿ ಉಗ್ರರದ್ದು ರಕ್ತಬೀಜಾಸುರನ ಸಂತತಿ ಆಗುವ ಅಪಾಯ ಇದ್ದೇ ಇದೆ. ವಿವಿಧ ದೇಶಗಳ ಆಳುಗರು ಮತ್ತು ಸಮಾನಮನಸ್ಕರು ಒಂದೆಡೆ ಕಲೆತು, ಈ ಮಹಾಯಜ್ಞಕ್ಕೆ ಸಂಬಂಧಿಸಿದಂತೆ ಒಂದು ನಿರ್ಣಾಯಕ ಠರಾವನ್ನು ಹೊಮ್ಮಿಸುವಂತಾಗಲಿ...

ಸೊಂಪಾದಕೀಯ

ಇದು ಕೋಡ್ ವರ್ಲ್ಡ್ ಕಥನ

ಇಂದಿನ ಮಕ್ಕಳಿಗೆ ವಿದ್ಯಾಭ್ಯಾಸ ಅನ್ನೋದು ಫುಲ್‌ಟೈಮ್ ಜಾಬ್ ಆಗಿಬಿಟ್ಟಿದೆ. ಇದು ಎಲ್ಲರಿಗೂ ಗೊತ್ತು. ತಂದೆ ತಾಯಂದಿರು ತಮ್ಮ ಮಕ್ಕಳನ್ನು ಪುರುಸೊತ್ತಿಲ್ಲದಂತೆ ಸ್ಕೂಲ್, ಟ್ಯೂಷನ್, ಕೋಚಿಂಗ್ ಕ್ಲಾಸ್ ಅಂತೆಲ್ಲ ಸಂಪೂರ್ಣವಾಗಿ ಬ್ಯುಸಿ ಇರುವಂತೆ ನೋಡಿಕೊಳ್ಳುತ್ತಿದ್ದಾರೆ. ಹಾಗಾಗಿ ಮಕ್ಕಳಿಗೆ ಆಟ ಆಡಲು ಕೂಡ ಸಮಯ ಸಿಗದೇ ಇರೋ ಥರ ಆಗಿದೆ. ಇನ್ನು ಇತ್ತೀಚಿಗೆ ಹುಟ್ಟಿಕೊಂಡಿರುವ ಇನ್ನೊಂದು ಎಜುಕೇಷನ್ ಭೂತ ಎಂದರೆ ಅದು 'ಕೋಡಿಂಗ್ ಕ್ಲಾಸ್'ಗಳದ್ದು. ನೆಟ್ಟಗೆ ಕಣ್ಣು ಬಿಟ್ಟಿಲ್ಲದ ಮಕ್ಕಳನ್ನೂ ಈಗ ಕೋಡಿಂಗ್ ಕಲಿಯಲು ಕಳಿಸಲಾಗುತ್ತಿದೆ. ಕೋಡಿಂಗ್ ಕಲಿತರೆ ಸಾಕು ತಮ್ಮ ಮಕ್ಕಳಿಗೆ ಎರಡು ಕೋಡು ಅಥವಾ ಕೊಂಬು ಮೂಡುತ್ತದೆ ಅನ್ನೋದು ಬಹುತೇಕ ಪೋಷಕರ ಅಭಿಪ್ರಾಯ. ಇದೆಲ್ಲವನ್ನು

ಗಮನಿಸಿರುವ ಸರಕಾರ ಮಕ್ಕಳ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಚಿಂತನೆ ನಡೆಸಿದೆ. ಅದರ ಪರಿಣಾಮವಾಗಿ ಈಗ 16 ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಕೋಚಿಂಗ್ ಕ್ಲಾಸ್‌ಗಳಿಗೆ ಸೇರಿಸದಂತೆ ಸರಕಾರ ನಿಯಮ ಜಾರಿ ಮಾಡಿದೆ. ಹಾಗಾಗಿ ಇನ್ನು ಮುಂದೆ ಮಣಭಾರದ ಪುಸ್ತಕಗಳನ್ನು ಶಾಲೆಗೆ ತೆಗೆದುಕೊಂಡು ಹೋಗುವುದಷ್ಟೇ ಮಕ್ಕಳ ಕೆಲಸ. ಅದನ್ನು ಬಿಟ್ಟು ಶಾಲೆಗೆ ಮುಗಿದ ನಂತರ ಆ ಟ್ಯೂಷನ್, ಈ ಟ್ಯೂಷನ್ ಎನ್ನುತ್ತಾ ಮಕ್ಕಳು ಅಲೆದಾಡುವುದನ್ನು ಬಿಟ್ಟು ಶಾಲೆ ಮುಗಿದ ನಂತರ ಆಟದ ಮೈದಾನದತ್ತ ಓಡಬಹುದು. ಆದರೆ ಇಂದಿನ ಮಕ್ಕಳು ಏನು ಕಮ್ಮಿ ಇಲ್ಲ ಟ್ಯೂಷನ್, ಕೋಚಿಂಗ್ ಇಲ್ಲ ಅಂದ ತಕ್ಷಣ ಮೊಬೈಲ್ ಹಿಡಿದುಕೊಂಡು ಊಟ-ತಿಂಡಿ-ನೀರು ಎಲ್ಲವನ್ನೂ ಮರೆತು ಅದರಲ್ಲಿ ಮುಳುಗಿಬಿಡುತ್ತಾರೆ. ಹಾಗಾಗಿ ಈ ಟ್ಯೂಷನ್ ಕ್ಯಾನ್ಸಲ್ ಆಗಿರುವ ವಿಷಯ ಮಕ್ಕಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂದು ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಸದ್ಯಕ್ಕೆ ಮಕ್ಕಳ ಮೇಲೆ ಹಾಕಲಾಗುತ್ತಿರುವ ಓದಿನ ಒತ್ತಡ ಕೊಂಚಮಟ್ಟಿಗೆ ತಗ್ಗಿದೆ ಅಂತಲೇ ಹೇಳಬಹುದು. ಸರಕಾರವೇನೋ ಸದ್ಯಕ್ಕೆ ಈ ನೀತಿಯನ್ನು ಜಾರಿಗೆ ತಂದಿದೆ. ಆದರೆ ಈ ನೀತಿಯನ್ನು ಅದೆಷ್ಟು ಸಮರ್ಪಕವಾಗಿ, ಪ್ರಾಕ್ಟಿಕಲ್ ಆಗಿ ಜಾರಿಗೆ ತರಲಾಗುತ್ತದೆ ಎಂಬುದಕ್ಕೆ ಕಾದು ನೋಡಲೇಬೇಕಿದೆ.

ಸಂಪಾದಕರ ಸದ್ಯಶೋಧನೆ

ಕಿಟಕಿಯ ರಂಧ್ರದ ಮಹತ್ವ

ವಿಮಾನದಲ್ಲಿ ಪ್ರಯಾಣಿಸುವಾಗ ಕಿಟಕಿಯ ಕೆಳಭಾಗದಲ್ಲಿ ಒಂದು ಪುಟ್ಟ ರಂಧ್ರವನ್ನು ನೀವು ಗಮನಿಸಿರಬಹುದು. ಇದನ್ನು ತಾಂತ್ರಿಕವಾಗಿ 'ಬ್ರೀದರ್ ಹೋಲ್' (Breather Hole) ಅಥವಾ 'ಬ್ಲೀಡ್ ಹೋಲ್' (Bleed Hole) ಎಂದು ಕರೆಯುತ್ತಾರೆ. ಇದು ನೋಡಲು ಅತ್ಯಂತ ಸಣ್ಣದಾಗಿ ಕಂಡರೂ, ವಿಮಾನದ ಸುರಕ್ಷತೆ ಮತ್ತು ಪ್ರಯಾಣಿಕರ ದೃಷ್ಟಿಕೋನದಲ್ಲಿ ಇದರ ಪಾತ್ರ ಬಹಳ ದೊಡ್ಡದು. ಬ್ರೀದರ್ ಹೋಲ್ ಏಕೆ ಬೇಕು ಎಂದು ತಿಳಿಯುವ ಮೊದಲು, ವಿಮಾನದ ಕಿಟಕಿಯನ್ನು ಹೇಗೆ ಮಾಡಲಾಗಿದೆ ಎಂದು ತಿಳಿಯುವುದು ಮುಖ್ಯ. ವಿಮಾನದ ಕಿಟಕಿಯು ಸಾಮಾನ್ಯವಾಗಿ ಮೂರು ಪದರಗಳ ಆಕ್ರಿಲಿಕ್ ಗಾಜಿನಿಂದ ಮಾಡಲ್ಪಟ್ಟಿರುತ್ತದೆ. ಹೊರಗಿನ ಪದರ ವಿಮಾನದ ಹೊರಭಾಗದ ತೀವ್ರ ಚಳಿ ಮತ್ತು ಒತ್ತಡವನ್ನು ತಡೆದುಕೊಳ್ಳುವ ಮುಖ್ಯ ಪದರ. ಮಧ್ಯದ ಪದರದಲ್ಲಿಯೇ ಆ 'ಸಣ್ಣ ರಂಧ್ರ'ವು ಕಾಣುತ್ತದೆ. ಇದು ತುರ್ತು ಸಂದರ್ಭದಲ್ಲಿ ಹೊರಗಿನ ಪದರಕ್ಕೆ ಬೆಂಬಲವಾಗಿ ನಿಲ್ಲುತ್ತದೆ. ಒಳಗಿನ ಪದರ ನಮಗೆ ಕಾಣಿಸುವ ತೀರಾ ಹತ್ತಿರದ ಪದರ. ಇದು ಪ್ರಯಾಣಿಕರು ಗಾಜನ್ನು ಗೀಚದಂತೆ ಅಥವಾ ಹಾನಿ ಮಾಡದಂತೆ ರಕ್ಷಿಸುತ್ತದೆ. ವಿಮಾನವು 35,000 ಅಡಿ ಎತ್ತರದಲ್ಲಿ ಹಾರುತ್ತಿರುವಾಗ, ವಿಮಾನದ ಹೊರಗಿನ ಗಾಳಿಯ ಒತ್ತಡವು ತುಂಬಾ ಕಡಿಮೆ ಇರುತ್ತದೆ. ಆದರೆ ವಿಮಾನದ ಒಳಗಡೆ ಪ್ರಯಾಣಿಕರ ಅನುಕೂಲಕ್ಕಾಗಿ ಕೃತಕವಾಗಿ ಹೆಚ್ಚಿನ ಒತ್ತಡವನ್ನು ಕಾಪಾಡಿಕೊಳ್ಳಲಾಗುತ್ತದೆ. ವಿಮಾನದ ಒಳಗಿನ ಹೆಚ್ಚಿನ ಒತ್ತಡವು ಕಿಟಕಿಯ ಮೇಲೆ ಬಿದ್ದಾಗ, ಆ ಒತ್ತಡವು ನೇರವಾಗಿ ಹೊರಗಿನ ಪದರದ ಮೇಲೆ ಬೀಳುವಂತೆ ಮಾಡಲು ಈ ರಂಧ್ರ ಸಹಾಯಕ. ಅದು ಹೇಗೆ ಕೆಲಸ ಮಾಡುತ್ತದೆ? ಮಧ್ಯದ ಪದರದಲ್ಲಿರುವ ಈ ಸಣ್ಣ ರಂಧ್ರವು, ಒಳಗಿನ ಕ್ಯಾಬಿನ್ ಗಾಳಿಯು ಹೊರಗಿನ ಮತ್ತು ಮಧ್ಯದ ಪದರಗಳ ನಡುವಿನ ಜಾಗಕ್ಕೆ (Air Gap) ಹೋಗಲು ಅನುವು ಮಾಡಿಕೊಡುತ್ತದೆ. ಇದರಿಂದಾಗಿ ಒಳಗಿನ ಹೆಚ್ಚಿನ ಒತ್ತಡವು ಮಧ್ಯದ ಪದರದ ಮೇಲೆ ಬೀಳುವ ಬದಲಿಗೆ ನೇರವಾಗಿ ಗಟ್ಟಿಯಾದ ಹೊರಗಿನ ಪದರದ ಮೇಲೆ ಬೀಳುತ್ತದೆ. ವಿಮಾನವು ಅತಿ ಎತ್ತರದಲ್ಲಿ ಹಾರುವಾಗ ಹೊರಗಿನ ತಾಪಮಾನವು ಸುಮಾರು -50 ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಕಿಟಕಿಯ ಒಳಗಡೆ ಪ್ರಯಾಣಿಕರ ಉಸಿರಾಟದಿಂದಾಗಿ ಬೆಚ್ಚಗಿನ ಗಾಳಿ ಇರುತ್ತದೆ. ತಾಪಮಾನದ ಈ ವಿಪರೀತ ವ್ಯತ್ಯಾಸದಿಂದಾಗಿ ಕಿಟಕಿಯ ಗಾಜಿನ ಮೇಲೆ ಮಂಜು ಅಥವಾ ತೇವಾಂಶ ಶೇಖರಣೆಯಾಗುವ ಸಾಧ್ಯತೆ ಇರುತ್ತದೆ. ಬ್ರೀದರ್ ಹೋಲ್ ಗಾಳಿಯ ಹರಿವನ್ನು ನಿಯಂತ್ರಿಸುವ ಮೂಲಕ ಎರಡು ಗಾಜಿನ ಪದರಗಳ ನಡುವೆ ತೇವಾಂಶ ಸೇರದಂತೆ ನೋಡಿಕೊಳ್ಳುತ್ತದೆ. ಇದರಿಂದಾಗಿ ಪ್ರಯಾಣಿಕರು ಯಾವುದೇ ಮಂಜು ಅಡ್ಡಿಯಿಲ್ಲದೇ ಹೊರಗಿನ ದೃಶ್ಯಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಾಗುತ್ತದೆ. ಒಂದು ವೇಳೆ ವಿಮಾನದ ಹೊರಗಿನ ಗಾಜು ಯಾವುದಾದರೂ ಹಕ್ಕಿ ಬಡಿದು ಅಥವಾ ಮೈಕ್ರೋ-ಕ್ರ್ಯಾಕ್‌ನಿಂದಾಗಿ ಒಡೆದುಹೋದರೆ ಏನು ಮಾಡುವುದು? ಅಂಥ ಅಪರೂಪದ ಸಂದರ್ಭದಲ್ಲಿ, ಮಧ್ಯದ ಪದರವು ಮುಖ್ಯ ರಕ್ಷಣಾ ಕವಚವಾಗಿ ಕಾರ್ಯನಿರ್ವಹಿಸುತ್ತದೆ. ಬ್ರೀದರ್ ಹೋಲ್ ಅತ್ಯಂತ ಚಿಕ್ಕದಾಗಿರುವುದರಿಂದ, ಕ್ಯಾಬಿನ್ ಒಳಗಿನ ಒತ್ತಡವು ತಕ್ಷಣವೇ ಹೊರಹೋಗದಂತೆ ತಡೆಯುತ್ತದೆ. ಪೈಲಟ್‌ಗಳು ವಿಮಾನವನ್ನು ಸುರಕ್ಷಿತ ಎತ್ತರಕ್ಕೆ ಇಳಿಸಲು ಬೇಕಾದ ಸಮಯವನ್ನು ಈ ಸಣ್ಣ ರಂಧ್ರವು ಒದಗಿಸುತ್ತದೆ. ಈ ರಂಧ್ರವು ಕೇವಲ ಒಂದು ಮಿಲಿಮೀಟರ್‌ಗಿಂತಲೂ ಚಿಕ್ಕದಾಗಿರುತ್ತದೆ. ಇದನ್ನು ಅಷ್ಟು ಚಿಕ್ಕದಾಗಿ ಇಡಲು ಕಾರಣವೆಂದರೆ, ಗಾಳಿಯ ಹರಿವು ಅತ್ಯಂತ ನಿಯಂತ್ರಿತವಾಗಿರಬೇಕು ಎಂಬುದು. ಈ ರಂಧ್ರವಿಲ್ಲದಿದ್ದರೆ, ಹೊರಗಿನ ಮತ್ತು ಮಧ್ಯದ ಪದರಗಳ ನಡುವಿನ ಗಾಳಿಯ ಒತ್ತಡಕ್ಕೆ ಸಿಲುಕಿ ಕಿಟಕಿಯೇ ಸೀಳಿಹೋಗುವ ಸಂಭವವಿರುತ್ತದೆ. ಒಟ್ಟಾರೆ, ವಿಮಾನದ ಕಿಟಕಿಯಲ್ಲಿರುವ ಆ ಪುಟ್ಟ ರಂಧ್ರವು ಮೂರು ಪ್ರಮುಖ ಕೆಲಸಗಳನ್ನು ಮಾಡುತ್ತದೆ. ಮೊದಲನೆಯದಾಗಿ, ಕ್ಯಾಬಿನ್ ಒತ್ತಡವನ್ನು ಹೊರಗಿನ ಗಾಜಿನ ಮೇಲೆ ಕೇಂದ್ರೀಕರಿಸುತ್ತದೆ. ಎರಡನೆಯದಾಗಿ, ಕಿಟಕಿಗಳ ನಡುವೆ ಮಂಜು ಮತ್ತು ತೇವಾಂಶ ಗಟ್ಟಿಯಾಗದಂತೆ ತಡೆಯುತ್ತದೆ ಹಾಗೂ ಮೂರನೆಯದಾಗಿ, ತುರ್ತು ಸಂದರ್ಭದಲ್ಲಿ ಒಂದು ಹೆಚ್ಚುವರಿ ರಕ್ಷಣಾ ಕವಚವಾಗಿ ಕೆಲಸ ಮಾಡುತ್ತದೆ.

ಜನವರಿ ಒಂಬತ್ತಕ್ಕೆ ದಿಲ್ಲಿಯಲ್ಲಿ ಫೈನಲ್

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ದಿಲ್ಲಿಗೆ ಹೋದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಇದಾದ ನಂತರ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಜತೆ ಮಾತನಾಡಿದ ಅವರು ಪ್ರಮುಖ ವಿಷಯವೊಂದನ್ನು ಪ್ರಸ್ತಾಪಿಸಿದ್ದಾರೆ. ಕರ್ನಾಟಕದಲ್ಲಿ ಹಲವು ದಿನಗಳಿಂದ ನನೆಗುದಿಗೆ ಬಿದ್ದಿರುವ ಸಚಿವ ಸಂಪುಟ ಪುನಾರಚನೆಗೆ ಗ್ರೀನ್ ಸಿಗ್ನಲ್ ಕೊಡಿ ಎಂಬುದು ಈ ಪ್ರಸ್ತಾಪ.

ವಾಸ್ತವವಾಗಿ ಹಲವು ದಿನಗಳ ಹಿಂದೆಯೇ ರಾಜ್ಯ ಸಚಿವ ಸಂಪುಟದ ಪುನಾರಚನೆ ಕಾರ್ಯ ಪೂರ್ಣವಾಗಬೇಕಿತ್ತು. ಆದರೆ ದಿಢೀರನೆ ಉದ್ಭವಿಸಿದ ಅಧಿಕಾರ ಹಂಚಿಕೆಯ ಬಿಕ್ಕಟ್ಟು ಇದಕ್ಕೆ ಬ್ರೇಕ್ ಹಾಕಿದ್ದಲ್ಲದೆ ಮುಂದೇನು ಎನ್ನುವ ಆತಂಕ ಸೃಷ್ಟಿಸುವಲ್ಲಿ ಯಶಸ್ವಿಯಾಗಿತ್ತು. ಈ ಹಂತದಲ್ಲಿ ಸಿಎಂ ಹುದ್ದೆ ತಮಗೆ ಬೇಕೇ ಬೇಕು ಅಂತ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದರೆ, ಯಾವ ಕಾರಣಕ್ಕೂ ಪಟ್ಟ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಅಂತ ಸಿದ್ದರಾಮಯ್ಯ ಪ್ರತಿಪಟ್ಟು ಹಾಕಿ ಕುಳಿತರು.

ಹೀಗೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ಪಟ್ಟು, ಪ್ರತಿಪಟ್ಟುಗಳ ನಡುವೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕಸಿವಿಸಿಗೊಂಡರೂ ಅಂತಿಮವಾಗಿ ಎರಡೂ ಅಭಿಪ್ರಾಯಗಳಿಗೆ ಕಿವಿ ತೆರೆದು ಕುಳಿತರು. ಮೊದಲನೆಯದು, ಈ ವಿಷಯದಲ್ಲಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಏನು ಹೇಳುತ್ತಾರೆ ಎಂಬುದಾದರೆ, ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ರಾಹುಲ್ ಗಾಂಧಿಯವರ ಪರ್ಸನಲ್ ಸರ್ವೆ ಟೀಮು ಏನು ಹೇಳುತ್ತದೆ ಎಂಬುದು ಮತ್ತೊಂದು. ಈ ಪೈಕಿ ಖರ್ಗೆಯವರು, ''ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟ ನೀಡುವುದು ನ್ಯಾಯವಾದರೂ ಅ ಪಟ್ಟವನ್ನು ಸಿದ್ದರಾಮಯ್ಯ ಅವರಿಂದ ಬಲವಂತವಾಗಿ ಕಿತ್ತುಕೊಳ್ಳುವುದು ಅಪಾಯಕಾರಿ'' ಎಂದಿದ್ದಾರೆ. ಎಷ್ಟೇ ಆದರೂ ಸಿದ್ದರಾಮಯ್ಯ ಟಫ್ ನಾಯಕ. ಅಂಥವರ ಜತೆ ವ್ಯವಹರಿಸುವಾಗ ಗೌರವಯುತ ಮಾರ್ಗದಲ್ಲೇ ಹೋಗಬೇಕು. ಅರ್ಥಾತ್, ಅಧಿಕಾರ ಹಂಚಿಕೆ ವಿಷಯದಲ್ಲಿ ಸಹಕಾರ ನೀಡುವಂತೆ ಅವರ ಮನವೊಲಿಸಬೇಕು. ಹೀಗೆ ಮಾಡದೆ ಮುಖ್ಯಮಂತ್ರಿ ಹುದ್ದೆಯನ್ನು ಕಿತ್ತುಕೊಳ್ಳುವುದು ದೀರ್ಘಕಾಲೀನ ಅಪಾಯಕ್ಕೆ ಕಾರಣವಾಗಬಹುದು ಎಂಬುದು ಮಲ್ಲಿಕಾರ್ಜುನ ಖರ್ಗೆಯವರ ವಾದ. ಇದೇ ರೀತಿ ಅಹಿಂದ ವರ್ಗಗಳ ಮತ ಹೆಚ್ಚಿರುವ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳದಂಥ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಹತ್ತಿರದಲ್ಲಿರುವಾಗ ಸಿದ್ದರಾಮಯ್ಯ ಅವರಂಥ ನಾಯಕರನ್ನು ಮುಟ್ಟುವುದು ಕಷ್ಟ. ಹೀಗಾಗಿ ಅವರ ಮನವೊಲಿಕೆ ಕಾರ್ಯ ಪೂರ್ಣವಾಗುವವರೆಗೆ ದುಡುಕುವ ಅಗತ್ಯವಿಲ್ಲ ಎಂಬುದು ಅವರ ಅಭಿಪ್ರಾಯ.

ಇದು ಒಂದು ಕಡೆಗಾದರೆ, ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಹುಲ್ ಗಾಂಧಿಯವರ ಪರ್ಸನಲ್ ಸರ್ವೆ ಟೀಮು ಕೂಡಾ ವಿವರವಾದ ವರದಿಯನ್ನು ಸಿದ್ಧಪಡಿಸಿತ್ತಲ್ಲದೆ, ಸಿದ್ದರಾಮಯ್ಯ ಅವರು ಪಟ್ಟ ಬಿಟ್ಟುಕೊಡಲು ಒಪ್ಪಿದರೆ ಮಾತ್ರ ಅಧಿಕಾರ ವರ್ಗಾವಣೆ ಪ್ರಕ್ರಿಯೆ ನಡೆಯಬೇಕು; ಇಲ್ಲದಿದ್ದರೆ ಯಥಾಸ್ಥಿತಿ ಮುಂದುವರಿಯಬೇಕು ಎಂದಿದೆ. ಅಷ್ಟೇ ಅಲ್ಲ, ಕರ್ನಾಟಕದ ಮತಬ್ಯಾಂಕ್ ಸ್ವರೂಪದ ಬಗ್ಗೆ ಸ್ಪಷ್ಟವಾಗಿ ವಿವರಿಸಿದೆ. ಇವತ್ತು ರಾಜ್ಯದ ಪ್ರತಿಕ್ಷೇತ್ರದಲ್ಲೂ ಪರಿಶಿಷ್ಟರಿದ್ದಾರೆ, ಮುಸ್ಲಿಮರಿದ್ದಾರೆ. ಕುರುಬರು ಇವರಷ್ಟು ಪ್ರಮಾಣದಲ್ಲಿಲ್ಲದಿದ್ದರೂ ಬಹುತೇಕ ಕ್ಷೇತ್ರಗಳಲ್ಲಿ ಸಾಲಿಡ್ಡಾಗಿದ್ದಾರೆ. ಇದರರ್ಥ, ಅಹಿಂದ ವರ್ಗದ ಮತಗಳು ಹೆಚ್ಚು ಕಡಿಮೆ ಎಲ್ಲ ಕ್ಷೇತ್ರಗಳಲ್ಲಿ ದಟ್ಟವಾಗಿವೆ. ಇಂಥ ಸ್ಥಿತಿಯಲ್ಲಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೆ ಮುಂದಿನ ದಿನಗಳಲ್ಲಿ ಪಕ್ಷದ ಸ್ಥಿತಿ ಸಂಕಷ್ಟಕ್ಕೆ ಸಿಲುಕುತ್ತದೆ.

ಅಂದ ಹಾಗೆ, 2029ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ವಿರುದ್ಧ ಹೋರಾಡಲು ಕಾಂಗ್ರೆಸ್ ಪಕ್ಷಕ್ಕಿರುವ ಪ್ರಬಲ ಸೇನಾನೆಲೆ ಎಂದರೆ ಕರ್ನಾಟಕ. ಇವತ್ತು ಸಿದ್ದರಾಮಯ್ಯ ಅವರನ್ನು ಬಲವಂತವಾಗಿ ಇಳಿಸಲು ಮುಂದಾದರೆ ಈ ಸೇನಾನೆಲೆ ಕುಸಿಯುವುದಷ್ಟೇ ಅಲ್ಲ, ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಸೈನ್ಯವನ್ನು ಮುನ್ನಡೆಸುವುದು ಕಷ್ಟಕರವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಾವು ಕರ್ನಾಟಕದ ಒಕ್ಕಲಿಗ ಮತಬ್ಯಾಂಕ್ ಅನ್ನು ಆಧರಿಸಬಹುದಾ ಎಂದರೆ ಅದೂ ಅಸಾಧ್ಯ. ಯಾಕೆಂದರೆ ಒಕ್ಕಲಿಗ ಮತಬ್ಯಾಂಕಿನ ಶೇಕಡಾ 50ರಷ್ಟು ಮತಗಳು ಕುಮಾರಸ್ವಾಮಿ-ದೇವೇಗೌಡರ ನೇತೃತ್ವದ ಜಾತ್ಯತೀತ ದಳದ ಜತೆ ನಿಂತರೆ, 25ರಷ್ಟು ಮತಗಳು ಬಿಜೆಪಿ ಜತೆಗಿವೆ.ಹೀಗಾಗಿ ಅಹಿಂದ ಮತಬ್ಯಾಂಕಿನಿಂದ ಬೀಳುವ ಹೊಡೆತವನ್ನು ಒಕ್ಕಲಿಗ ಮತಬ್ಯಾಂಕ್ ನೆರವಿನಿಂದ ತೂಗಿಸಲು ಸಾಧ್ಯವಿಲ್ಲ ಎಂದು ಈ ಟೀಮು ಸ್ಪಷ್ಟವಾಗಿ ಹೇಳಿದೆ.

ಯಾವಾಗ ಎರಡೂ ಕೋನಗಳಿಂದ ಬಂದ ಅಭಿಪ್ರಾಯ ಸಿದ್ದರಾಮಯ್ಯ ಅವರ ಪರವಾಗಿತ್ತೋ, ಅಗ ರಾಹುಲ್ ಗಾಂಧಿ ಸ್ಪಷ್ಟವಾದ ನಿಲುವಿಗೆ ಬಂದಿದ್ದಾರೆ. ಅಂದರೆ, ಸಿದ್ದರಾಮಯ್ಯ ಅವರು ಒಪ್ಪಿದರೆ ಮಾತ್ರ ಬೇರೊಬ್ಬರು ಮುಖ್ಯಮಂತ್ರಿ ಆಗಬಹುದು, ಇಲ್ಲದಿದ್ದರೆ ಇಲ್ಲ ಎಂಬುದು. ಯಾವಾಗ ಅವರ ನಿಲುವು ಸ್ಪಷ್ಟವಾಯಿತೋ, ಅಜ ಕರ್ನಾಟಕದಲ್ಲಿ ನಡೆಯುತ್ತಿದ್ದ ಅಧಿಕಾರ ಹಂಚಿಕೆಯ ಹಗ್ಗಜಗ್ಗಾಟಕ್ಕೆ ಬ್ರೇಕ್ ಬಿದ್ದಿದೆ. ಹೀಗೆ ಬ್ರೇಕ್ ಬಿದ್ದ ಬೆನ್ನಲ್ಲೇ ಶನಿವಾರ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ಹೋಗಿದ್ದ ಸಿದ್ದರಾಮಯ್ಯ ಅವರು ಸಭೆಯ ನಂತರ ರಾಹುಲ್ ಗಾಂಧಿಯವರ ಜತೆ ಮಾತುಕತೆ ನಡೆಸಿದ್ದಾರೆ. ಈ ವೇಳೆ ರಾಜ್ಯ ಸಚಿವ ಸಂಪುಟ ಪುನಾರಚನೆಯ ಬಗ್ಗೆ ಪ್ರಸ್ತಾಪಿಸಿದ ಸಿದ್ದರಾಮಯ್ಯನವರು, ''ಸರಕಾರಕ್ಕೆ ಶಕ್ತಿ ತುಂಬುವ ದೃಷ್ಟಿಯಿಂದ ಪುನಾರಚನೆ ಪ್ರಕ್ರಿಯೆ ಬೇಗ ಮುಗಿಯುವುದು ಒಳ್ಳೆಯದು'' ಎಂದಿದ್ದಾರೆ.

ಯಾವಾಗ ಸಿದ್ದರಾಮಯ್ಯನವರು ಈ ಪ್ರಸ್ತಾಪ ಮಂಡಿಸಿದರೋ, ಆಗ ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, ''ವೈ ನಾಟ್ ಸಿದ್ರಾಮಯ್ಯಾಜೀ? ಸಂಪುಟ ಪುನಾರಚನೆಯ ಸ್ವರೂಪ ಹೇಗಿರಬೇಕು? ಮಂತ್ರಿಮಂಡಲದಿಂದ ಹೊರಹೋಗಬೇಕಾದವರು ಯಾರು? ಸೇರ್ಪಡೆ ಅಗಬೇಕಾದವರು ಯಾರು? ಎಂಬ ಬಗ್ಗೆ ವಿವರವಾಗಿ ಚರ್ಚಿಸಿ ಜನವರಿ 9ರಂದು ದಿಲ್ಲಿಗೆ ಬನ್ನಿ. ಫೈನಲ್ ಮಾಡೋಣ'' ಎಂದಿದ್ದಾರೆ. ಮೂಲಗಳ ಪ್ರಕಾರ, ದಿಲ್ಲಿಯಿಂದ ವಾಪಸ್ಸಾದ ನಂತರ ಸಿದ್ದರಾಮಯ್ಯ ಅವರು ಸಂಪುಟ ಪುನಾರಚನೆಯ ಸ್ವರೂಪದ ಬಗ್ಗೆ ಚರ್ಚೆ ಆರಂಭಿಸಿದ್ದಾರೆ.

ಸಾವಂತ್ ಆಕ್ಟಿವ್ ಆಗಿದ್ದೇಕೆ?: ಇನ್ನು ಗೋವಾದ ಮುಖ್ಯಮಂತ್ರಿ, ಬಿಜೆಪಿ ನಾಯಕ ಪ್ರಮೋದ್ ಸಾವಂತ್ ಫುಲ್ಲು ಆಕ್ಟಿವ್ ಆಗಿದ್ದಾರೆ. ಹೀಗೆ ಅವರು ಆಕ್ಟಿವ್ ಆಗಿರುವುದು ಕರ್ನಾಟಕದ ರಾಜಕಾರಣದ ಬಗ್ಗೆ. ವಾಸ್ತವವಾಗಿ, ಕರ್ನಾಟಕದಲ್ಲಿ ನವೆಂಬರ್ ಹೊತ್ತಿಗೆ ಕ್ರಾಂತಿ ಸಂಭವಿಸುತ್ತದೆ. ಇದರ ಫಲವಾಗಿ ಕಾಂಗ್ರೆಸ್ ಹೈಕಮಾಂಡ್ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಗಾದಿಯ ಮೇಲೆ ಕೂರಿಸುತ್ತಾರೆ. ಹೀಗೆ ಸಿದ್ದರಾಮಯ್ಯ ಅವರು ಕೆಳಗಿಳಿದು ಶಿವಕುಮಾರ್ ಅವರು ಮುಖ್ಯಮಂತ್ರಿ ಪಟ್ಟಕ್ಕೆ ಏರಿದರೆ ರಾಜ್ಯ ಕಾಂಗ್ರೆಸ್‌ನ ಹಲವು ಮಂತ್ರಿಗಳು, ಶಾಸಕರನ್ನು ಒಳಗೊಂಡ ಪಡೆ ತಿರುಗಿಬೀಳುತ್ತದೆ. ಹೀಗೆ ತಿರುಗಿಬೀಳುವ ಪಡೆಯನ್ನು ಬಿಜೆಪಿಯ ಕಡೆ ಸೆಳೆದರೆ ಕರ್ನಾಟಕದ ಕಾಂಗ್ರೆಸ್ ಸರಕಾರ ಉರುಳುತ್ತದೆ ಎಂಬುದು ಪ್ರಮೋದ್ ಸಾವಂತ್ ಅವರ ಲೆಕ್ಕಾಚಾರವಾಗಿತ್ತು.

ತಮ್ಮ ಈ ಲೆಕ್ಕಾಚಾರಕ್ಕೆ ಪೂರಕವಾಗಿ ಮೋದಿ-ಅಮಿತ್ ಶಾ ಅವರಿಂದ ಸಿಗ್ನಲ್ಲು ಪಡೆದ ಪ್ರಮೋದ್ ಸಾವಂತ್ ಅವರು ಸಿದ್ದರಾಮಯ್ಯ ಅವರ ಸಂಪುಟದ ಬ್ರಿಗೇಡಿಯರ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಆ್ಯಂಡ್ ಗ್ಯಾಂಗಿನ ಸಂಪರ್ಕದಲ್ಲಿದ್ದರು ಎಂಬುದು ಮೂಲಗಳ ಹೇಳಿಕೆ. ಅಂದ ಹಾಗೆ, ಪ್ರಮೋದ್ ಸಾವಂತ್ ಅವರ ಲೆಕ್ಕಾಚಾರಕ್ಕೆ ನವೆಂಬರ್ ತಿಂಗಳಲ್ಲಿ ಬಲ ಸಿಕ್ಕಿದ್ದಷ್ಟೇ ಅಲ್ಲ, ಇನ್ನೇನು ಸಿದ್ದರಾಮಯ್ಯ ಕೆಳಗೆ ಇಳಿದು ಡಿ.ಕೆ.ಶಿವಕುಮಾರ್ ಪಟ್ಟಾಭಿಷೇಕದ ಮುಹೂರ್ತ ಫಿಕ್ಸಾಗಬಹುದು ಎಂಬ ಮಾತು ಕೇಳಿಬರತೊಡಗಿತು. ಒಂದು ಹಂತದವರೆಗೆ ಈ ಮಾತು ಪವರ್‌ಫುಲ್ಲಾಗಿ ಕೇಳಿಬಂತಾದರೂ ಡಿಸೆಂಬರ್ 4ನೇ ವಾರದ ಹೊತ್ತಿಗೆ ಕಾವು ಕಳೆದುಕೊಳ್ಳತೊಡಗಿತು.

ಯಾವಾಗ ಸಿದ್ದರಾಮಯ್ಯ ಅವರು ಕೆಳಗೆ ಇಳಿಯುವುದಿಲ್ಲ ಎಂಬುದು ನಿಕ್ಕಿಯಾಯಿತೋ, ಆಗ ಪ್ರಮೋದ್ ಸಾವಂತ್ ಅವರ ಗೇಮ್ ಪ್ಲಾನು ಬದಲಾಯಿತು. ಅರ್ಥಾತ್, ಮೊನ್ನೆ ಮೊನ್ನೆಯ ತನಕ ಸಿದ್ದರಾಮಯ್ಯ ಟೀಮಿನ ಸಂಪರ್ಕದಲ್ಲಿದ್ದ ಪ್ರಮೋದ್ ಸಾವಂತ್ ಇದ್ದಕ್ಕಿದ್ದಂತೆ ಸಿದ್ದರಾಮಯ್ಯ ವಿರೋಧಿ ಬಣದ ಪ್ರಮುಖ ನಾಯಕರೊಬ್ಬರನ್ನು ಭೇಟಿ ಮಾಡಿ ಚರ್ಚಿಸಿದರು. ಮೂಲಗಳ ಪ್ರಕಾರ, ಸಿದ್ದರಾಮಯ್ಯ ಅವರು ಪಟ್ಟ ಬಿಟ್ಟುಕೊಡದೆ ಇರುವುದರಿಂದ ಹತಾಶರಾಗಿರುವ ಕೆಲ ಶಾಸಕರನ್ನು ಹೊರಗೆಳೆಯುವುದು ಪ್ರಮೋದ್ ಸಾವಂತ್ ಲೆಕ್ಕಾಚಾರ. ಇದು ಎಷ್ಟರ ಮಟ್ಟಿಗೆ ಸಫಲವಾಗುತ್ತದೋ? ಅದು ಬೇರೆ ವಿಷಯ.

ಆದರೆ ಪ್ರಮೋದ್ ಸಾವಂತ್ ಇದ್ದಕ್ಕಿದ್ದಂತೆ ಆಕ್ಟಿವ್ ಆಗಿರುವ ಬೆಳವಣಿಗೆ ಬರೀ ಕಾಂಗ್ರೆಸ್ ಮಾತ್ರವಲ್ಲ, ಜೆಡಿಎಸ್ ಪಾಳಯವನ್ನೂ ಬಡಿದೆಬ್ಬಿಸಿದೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಮೊನ್ನೆ, ''ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜತೆ ಮೈತ್ರಿ ಇಲ್ಲ'' ಎಂದರಲ್ಲ? ಈ ಬೆಳವಣಿಗೆಗೂ, ವಿಜಯೇಂದ್ರ ಅವರ ಹೇಳಿಕೆಗೂ ಸಂಬಂಧವಿದೆ ಅಂತ ವಿಶ್ಲೇಷಿಸಲಾಗುತ್ತಿದೆಯಾದರೂ ಸಾವಂತ್‌ರ ಹೊಸ ಗೇಮಿನ ಪಾತ್ರ ಇದರಲ್ಲಿದೆ ಎಂಬ ಅನುಮಾನವೂ ಹಲವರಲ್ಲಿದೆ.

ಲಾಸ್ಟ್ ಸಿಪ್: ರಾಜ್ಯ ರಾಜಕಾರಣ ಪಡೆಯುತ್ತಿರುವ ತಿರುವು, ತಲುಪಿರುವ ಘಟ್ಟದಿಂದ ಕಿರಿಕಿರಿ ಅನುಭವಿಸುತ್ತಿರುವ ಹಲವು ನಾಯಕರು, ಶಾಸಕರು ಇಂಡಸ್ಟ್ರಿಯಲಿಸ್ಟುಗಳಾಗಲು ಹೊರಟಿದ್ದಾರೆ. ಈ ಪೈಕಿ ಚನ್ನಪಟ್ಟಣ ಕ್ಷೇತ್ರದ ಶಾಸಕ, ಮಾಜಿ ಸಚಿವ ಸಿ.ಪಿ.ಯೋಗೀಶ್ವರ್ ಅವರು ನೀರಾ ಫ್ಯಾಕ್ಟರಿ ಸ್ಥಾಪಿಸುವ ತಯಾರಿ ಮುಂದುವರಿಸಿದ್ದರೆ, ಕಾಂಗ್ರೆಸ್‌ನ ಮತ್ತೊಬ್ಬ ಅತಿರಥ ನಾಯಕರು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ತಯಾರಿ ನಡೆಸಿದ್ದಾರೆ. ಸವದತ್ತಿ-ಬೆಳಗಾವಿ ಮಾರ್ಗದಲ್ಲಿ ತಲೆ ಎತ್ತಲಿರುವ ಈ ಸಕ್ಕರೆ ಕಾರ್ಖಾನೆ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡ ಸಕ್ಕರೆ ಕಾರ್ಖಾನೆಯಾಗಲಿದೆ ಎಂಬುದು ಲೇಟೆಸ್ಟು ಸುದ್ದಿ.

ಕುವೆಂಪು: ಅಗ್ರಮಾನ್ಯ ಯುಗಪ್ರವರ್ತಕ ಕವಿ

ತನ್ನಿಮಿತ್ತ

ರವಿ ಕಂಗಳ
vveditoped@gmail.com

ಕುವೆಂಪು ಕನ್ನಡದ ಅಗ್ರಮಾನ್ಯ ಯುಗಪ್ರವರ್ತಕ ಕವಿ. 'ಶ್ರೀ ರಾಮಾಯಣ ದರ್ಶನಂ' ರಚಿಸುವ ಮೂಲಕ ಆಧುನಿಕ ಕಾಲದಲ್ಲಿ ಮಹಾಕಾವ್ಯ ರಚನೆಗೆ ನಾಂದಿ ಹಾಡಿದವರು. ಇವರೊಬ್ಬ ಶ್ರೇಷ್ಠ ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಮತ್ತು ಚಿಂತಕರಾಗಿ 20ನೇ ಶತಮಾನ ಕಂಡ ದೈತ್ಯ ಪ್ರತಿಭೆ. ಯುಗದ ಕವಿಗೆ ಜಗದ ಕವಿಗೆ ಶ್ರೀ ರಾಮಾಯಣ ದರ್ಶನ ದಿಂದಲೇ ಕೈ ಮುಗಿದ ಕವಿಗೆ ಮಣಿಯದವರು ಯಾರು? ಎಂದು ವರಕವಿ ಬೇಂದ್ರೆಯವರಿಂದ ಬಣ್ಣಿಸಿಕೊಂಡು ವಿಶ್ವಮಾನವ ಸಂದೇಶ ನೀಡಿದವರು. 'ಮಂತ್ರಮಾಂಗಲ್ಯ' ಎಂಬ ಸರಳ ವಿವಾಹ ಪದ್ಧತಿಯನ್ನು ರೂಢಿಗೆ ತಂದವರು. ಮೈಸೂರಿನಲ್ಲಿ 'ಮಾನಸ ಗಂಗೋತ್ರಿ'ಯನ್ನು ಕಟ್ಟಿ ಬೆಳೆಸಿದವರು. ದಲಿತ ಹಾಗೂ ಬಂಡಾಯ ಚಳವಳಿಗಳಿಗೆ ಸ್ಫೂರ್ತಿಯ ಸೆಲೆಯಾದವರು. ''ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವನಾಗಿರುತ್ತಾನೆ. ಮುಂದೆ ಅದು ಬೆಳೆಯುತ್ತಾ ಹೋದಂತೆ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ'' ಎಂದು ಹೇಳಿ, ''ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ನಮ್ಮೆಲ್ಲರ ಕರ್ತವ್ಯವಾಗಬೇಕು'' ಎಂದು ಸಾರಿದವರು. ಹುಟ್ಟುವಾಗ 'ವಿಶ್ವಮಾನವ'ನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು 'ಬುದ್ಧ'ನನ್ನಾಗಿ, ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೇ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಲೋಕ ಉಳಿದು, ಬಾಳಿ ಬದುಕಬೇಕಾದರೆ ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು ಎಂಬುದು ಅವರ ಘನ ಅಭಿಮತವಾಗಿತ್ತು.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; 'ಮನುಜಮತ'. ಆ ಪಥ ಈ ಪಥ ಅಲ್ಲ; 'ವಿಶ್ವಪಥ'. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ ಅದುವೇ 'ಸರ್ವೋದಯ'. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ 'ಪೂರ್ಣದೃಷ್ಟಿ'. ಬುದ್ಧ, ಬಸವರ ಹಾಗೆ ಸಮಾಜದಲ್ಲಿ ವ್ಯಕ್ತಿ ಸ್ವತಂತ್ರವಾಗಿ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕೆಂದು ಅವರು ಹೇಳುತ್ತಿದ್ದರು. ಮತ 'ಮನುಜಮತ'ವಾಗಬೇಕು, ಪಥ 'ವಿಶ್ವಪಥ'ವಾಗಬೇಕು, ಮನುಷ್ಯ 'ವಿಶ್ವಮಾನವ'ನಾಗಬೇಕು ಎಂಬ ಸದಾಶಯವೇ ವಿಶ್ವಮಾನವ ಸಂದೇಶವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು 2015ರಿಂದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವಾದ ಡಿಸೆಂಬರ್ 29ರಂದು 'ವಿಶ್ವಮಾನವ ದಿನ'ವಾಗಿ ಆಚರಿಸುತ್ತ, ವಿಶ್ವಮಾನವತಾವಾದ ಮತ್ತು ಸರ್ವೋದಯದ ತತ್ವಗಳನ್ನು ಪ್ರಚುರಪಡಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ.

ಕುವೆಂಪು ಅವರು ತಮ್ಮ ತಾಯಿಯ ತವರೂರಾದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಹಿರೇಕೊಡಿಗೆ ಎಂಬಲ್ಲಿ 1904ರ ಡಿಸೆಂಬರ್ 29ರಂದು ಜನಿಸಿದರು. ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ತಂದೆಯ ಊರಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ ಬಾಲ್ಯವನ್ನು ಕಳೆದ ಕುವೆಂಪು ಅವರ ಆರಂಭಿಕ ವಿದ್ಯಾಭ್ಯಾಸ ಕೂಲಿಮಠದಲ್ಲಿ, ಮಾಧ್ಯಮಿಕ ಶಿಕ್ಷಣ ತೀರ್ಥಹಳ್ಳಿಯಲ್ಲಿ ನಡೆಯಿತು. ನಂತರ ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಶಿಕ್ಷಣ ಮುಂದುವರಿಸಿ, ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿಯನ್ನೂ, ಕನ್ನಡದಲ್ಲಿ ಎಂ.ಎ. ಪದವಿಯನ್ನೂ ಪಡೆದರು. ಟಿ.ಎಸ್. ವೆಂಕಣ್ಣಯ್ಯನವರು ಇವರಿಗೆ ಗುರುಗಳಾಗಿದ್ದರು.

ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರೂ, ಪ್ರಾಂಶುಪಾಲರೂ ಆಗಿದ್ದ ಕುವೆಂಪು, ನಂತರ ಉಪಕುಲಪತಿಗಳಾದರು. ತಮ್ಮ ಕಲ್ಪನೆಯ ಕೂಸಾದ 'ಮಾನಸ ಗಂಗೋತ್ರಿ'ಯನ್ನು ಕಟ್ಟಿ ಬೆಳೆಸಿದರು. ವಿಶ್ವವಿದ್ಯಾಲಯವನ್ನು ಅಧ್ಯಯನಾಂಗ, ಸಂಶೋಧನಾಂಗ ಹಾಗೂ ಪ್ರಸಾರಾಂಗ ಎಂಬುದಾಗಿ ವಿಭಾಗಿಸಿದರು. ಕಡಿಮೆ ಅವಧಿಯಲ್ಲಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಬರೆಸಿ ಕನ್ನಡ ಮಾಧ್ಯಮದ ತರಗತಿಗಳನ್ನು ಆರಂಭಿಸಿದರು. 1937ರ ಎಪ್ರಿಲ್ 30ರಂದು ಹೇಮಾವತಿಯವರನ್ನು ಕೈ ಹಿಡಿದರು. ಪೂರ್ಣಚಂದ್ರ ತೇಜಸ್ವಿ ಮತ್ತು ಕೋಕಿಲೋದಯ ಚೈತ್ರ ಎಂಬ ಪುತ್ರರು, ಇಂದುಕಲಾ ಮತ್ತು ತಾರಿಣಿ ಎಂಬ ಇಬ್ಬರು ಪುತ್ರಿಯರಿದ್ದಾರೆ. ರಾಮಕೃಷ್ಣ ಪರಮಹಂಸರ ಜೀವನದಿಂದ ಪ್ರಭಾವಿತರಾದ ಕುವೆಂಪುರವರು ಸ್ವಾಮಿ ಶಿವಾನಂದರಿಂದ ದೀಕ್ಷೆ ಪಡೆದರು.



''ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಮಾಂತ್ರಿಕ ಲೇಖನಿ ಅಲಂಕರಿಸದ ಸಾಹಿತ್ಯ ಪ್ರಕಾರವಿಲ್ಲ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಹೆಚ್ಚು ಕಡಿಮೆ ಒಂದೇ ಬಗೆಯ ಯಶಸ್ಸನ್ನು ಗಳಿಸಿದ ಲೇಖಕರು ಯಾವುದೇ ಭಾಷೆಯಲ್ಲಾದರೂ ಹೆಚ್ಚಾಗಿ ಸಿಕ್ಕುವುದಿಲ್ಲ. ಆ ಬಗೆಯ ವಿರಳರ ಪಂಕ್ತಿಯಲ್ಲಿ ಕನ್ನಡದ ಕುವೆಂಪು ಒಬ್ಬರೆನ್ನುವುದು ಅಭಿಮಾನದ ಸಂಗತಿ'' ಎಂದು ಹಾ.ಮಾ.ನಾಯಕ ಅಭಿಪ್ರಾಯಪಟ್ಟಿದ್ದಾರೆ. ಸ್ವಾಭಿಮಾನಿ ಸಂಸ್ಕೃತಿಯ ಪ್ರತೀಕವಾಗಿದ್ದ ಕುವೆಂಪು ಅವರ ವೈಚಾರಿಕ ಸಾಹಿತ್ಯ ಕೃಷಿ ಬಹುದೊಡ್ಡ ಕ್ರಾಂತಿ ಉಂಟುಮಾಡಿದೆ.

ಕನ್ನಡದ ಎರಡನೆಯ 'ರಾಷ್ಟ್ರಕವಿ'. ಜ್ಞಾನಪೀಠ ಪ್ರಶಸ್ತಿಯನ್ನೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು, ಕರ್ನಾಟಕ ಸರಕಾರ ಕೊಡಮಾಡುವ 'ಕರ್ನಾಟಕ ರತ್ನ' ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿಗಳನ್ನು ಮೊದಲ ಬಾರಿಗೆ ಪಡೆದವರು ಕುವೆಂಪು. ''ಪುಟ್ಟಪ್ಪನವರಂತೆ ಕಾವ್ಯವನ್ನು ಯಾರು ಬರೆಯಬಲ್ಲರು? ಅವರ ಕಾವ್ಯದಲ್ಲಿ ಕಾಣುವ ಮೃದು ಮಧುರ ಪದಬಂಧ, ಬಗೆಯ ಭಾವದ ಐಸಿರಿ, ಭಾವದ ರಸಪ್ರವಾಹ, ಕಾವ್ಯಾಲಂಕಾರ, ಉಕ್ತಿ ಚಮತ್ಕಾರಗಳ ವೈಭವವು ಸಹೃದಯರನ್ನು ರೋಮಾಂಚನಗೊಳಿಸಿ ಸಂತೋಷದ ಕಣ್ಣೀರನ್ನು ಕೋಡಿವರಿಸುತ್ತದೆ. ಪಾಶ್ಚಿಮಾತ್ಯ ಕಾವ್ಯ ವಿಮರ್ಶಕ ಮಾನದಂಡದಿಂದ ಅಳೆದು ನೋಡಿದರೂ ಪುಟ್ಟಪ್ಪನವರು ಮಹಾಕವಿಗಳಾಗಿ ತೇರ್ಗಡೆ ಹೊಂದುತ್ತಾರೆ'' ಎಂದು ಡಿ.ಎಲ್.ನರಸಿಂಹಾಚಾರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಕುವೆಂಪು ಅವರು 1994ರ ನವೆಂಬರ್ 11ರಂದು ಮೈಸೂರಿನಲ್ಲಿ ನಿಧನರಾದರು. ಹುಟ್ಟೂರು ಕುಪ್ಪಳಿಯಲ್ಲಿ ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು. ಕುವೆಂಪು ರಾಷ್ಟ್ರೀಯ ಪ್ರತಿಷ್ಠಾನದವರು ಇವರು ಜನಿಸಿದ ಮನೆಯನ್ನು 'ಕವಿಮನೆ' ಹೆಸರಿನ ಮ್ಯೂಸಿಯಂ ಮಾಡಿದ್ದಾರೆ. ಕುವೆಂಪು ಸಮಾಧಿ ಸ್ಥಳವಾದ 'ಕವಿಶೈಲ' ಒಂದು ವಿಶಿಷ್ಟ ಸ್ಮಾರಕವಾಗಿದೆ. 1987ರಲ್ಲಿ ಶಿವಮೊಗ್ಗದಲ್ಲಿ ಕುವೆಂಪುರವರ ಗೌರವಾರ್ಥವಾಗಿ 'ಕುವೆಂಪು ವಿಶ್ವವಿದ್ಯಾಲಯ'ವನ್ನು ಸ್ಥಾಪಿಸಲಾಯಿತು. ಮೈಸೂರು ವಿಶ್ವವಿದ್ಯಾಲಯದಲ್ಲಿರುವ ಕನ್ನಡ ಅಧ್ಯಯನ ಸಂಸ್ಥೆಗೆ ಕುವೆಂಪು ಅವರ ಹೆಸರಿಡಲಾಗಿದೆ. ಅನುವಾದ ಕಾರ್ಯವನ್ನು ಪ್ರೋತ್ಸಾಹಿಸಲು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿರುವ ಭಾಷಾ ಭಾರತಿ ಸಂಸ್ಥೆಗೆ ಕುವೆಂಪು ಅವರ ಹೆಸರಿಡಲಾಗಿದೆ. ಮೈಸೂರಿನ ಕುವೆಂಪು ನಗರದಲ್ಲಿರುವ ರಸ್ತೆಗಳಿಗೆ ಕುವೆಂಪು ಅವರ ಪರಿಕಲ್ಪನೆಗಳ, ಪಾತ್ರಗಳ ಹೆಸರುಗಳನ್ನು ಇಡುವುದರ ಮೂಲಕ ಅವರ ಹೆಸರನ್ನು ಚಿರಸ್ಥಾಯಿಯಾಗಿಸಲಾಗಿದೆ.

ಇಂದಿನ ವಿದ್ಯಾರ್ಥಿಗಳು, ರಾಷ್ಟ್ರಕವಿ ಕುವೆಂಪು ಅವರ 'ನಿರಂಕುಶ ಮತಿಗಳಾಗಿ ಆತ್ಮಶ್ರೀಗಾಗಿ' ಎಂಬ ಧ್ಯೇಯವನ್ನು ಮೈಗೂಡಿಸಿಕೊಳ್ಳಬೇಕು. ಇಂದಿನ ಯುವಜನತೆ ಯಾವ ಅಂಕುಶಕ್ಕೂ ಬೀಳದೆ ಆತ್ಮಸಾಕ್ಷಿಯಿಂದ ಬದುಕಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ಗೌರವ ತಪಸ್ವಿ ಎಂದು ಹೇಳುತ್ತಿದ್ದ ಕುವೆಂಪು ಅವರು ''ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆ ಆಗಬೇಕೆ ಹೊರತು ಭತ್ತ ತುಂಬುವ ಚೀಲ ಆಗಬಾರದು'' ಎಂದು ಹೇಳುತ್ತಿದ್ದರು. ಅಂದರೆ ವಿದ್ಯಾರ್ಥಿಗಳು ತಾವೇ ಜ್ಞಾನಾರ್ಜನೆಯಲ್ಲಿ ತೊಡಗಬೇಕೆ ಹೊರತು ಬೇರೆಯವರು ಹೇಳಿದ್ದನ್ನಷ್ಟೆ ತಲೆಗೆ ತುಂಬಿಕೊಳ್ಳಬಾರದು ಎಂದರ್ಥ.

''ಕಣ್ಣಿನ ಕಾಂತಿ, ಮನಸ್ಸಿನ ಶಾಂತಿ, ಮುಖದ ತೇಜಸ್ಸು, ಆತ್ಮದ ಓಜಸ್ಸು, ದೇಹದ ಉಲ್ಲಾಸ, ಹೃದಯದ ಉತ್ಸಾಹ ಎಲ್ಲವನ್ನೂ ಕಳೆದುಕೊಂಡು ಜೀವಂತ ಶವಗಳಂತೆ ಇರುವವರಿಂದ ನಾಡಿಗಾದರೂ ಜನರಿಗಾದರೂ ಏನು ಉಪಯೋಗವಾದೀತು?'' ಎಂದು ಪ್ರಶ್ನಿಸುತ್ತ ಮಕ್ಕಳಿಗೆ ತಮ್ಮ ಬುದ್ಧಿಶಕ್ತಿ ತಕ್ಕಂತೆ ಕ್ಷೇತ್ರ ಆಯ್ದುಕೊಳ್ಳುವ ಅವಕಾಶ ನೀಡಿದಾಗ ಮಾತ್ರ ವಿದ್ಯಾರ್ಥಿ ದೆಸೆಯಿಂದ ಬಹುತ್ವವನ್ನು ಸಾಧಿಸಲು ಸಾಧ್ಯ ಎಂದಿದ್ದಾರೆ ಕುವೆಂಪು. ''ಉತ್ಸಾಹ ಎಂಬುದು ಹುಲ್ಲಿನ ಬೆಂಕಿಯಾಗದೆ ಕಲ್ಲಿದ್ದಿಲಿನ ಕಾವಾಗಬೇಕು'' ಎನ್ನುತ್ತ ನಮ್ಮಲ್ಲಿನ ಉತ್ಸಾಹವು ಎಂದಿಗೂ ಬತ್ತಬಾರದು ಎನ್ನುತ್ತಿದ್ದರು. ಕುವೆಂಪು ಅವರಿಗೆ ನಿಸರ್ಗದ ಮೇಲೆ ಅಪಾರ ಪ್ರೀತಿ ಇತ್ತು. ಅವರ ಕನ್ನಡ ಭಾಷೆಯ ಪ್ರೇಮ ಎಷ್ಟರಮಟ್ಟಿಗೆ ಇತ್ತೆಂದರೆ ಕನ್ನಡ ಆಯ್ಕೆಯೇ ಅವರ ಪ್ರಾಶಸ್ತ್ಯವಾಗಿತ್ತು. 'ಜಯ ಭಾರತ ಜನನಿಯ ತನುಜಾತೆ', 'ಎಲ್ಲಾದರು ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು', 'ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯಶಿವ' ಎಂದು ಕನ್ನಡದ ಅಸ್ಮಿತೆಗಾಗಿ ಕುವೆಂಪು ಅಹರ್ನಿಶಿ ಶ್ರಮಿಸಿದ್ದಾರೆ. 'ನೇಗಿಲ ಹಿಡಿದ ಹೊಲದೊಳು ಹಾಡುತ ಉಳುವಾ ಯೋಗಿಯ ನೋಡಲ್ಲಿ' ಎಂದು ಪದ ಕಟ್ಟಿ, ಕಷ್ಟಪಟ್ಟು ದುಡಿಯುವ ರೈತನ ಶ್ರೇಷ್ಠತೆಯನ್ನು ಜಗತ್ತಿಗೆ ತೋರಿದವರು ಕುವೆಂಪು. 'ಓ ನನ್ನ ಚೇತನ ಆಗು ನೀ ಅನಿಕೇತನ' ಎಂದು ಸಂದೇಶ ಸಾರಿದ ಈ 'ಯುಗದ ಕವಿ ಜಗದ ಕವಿ'ಗೆ, ಮಹಾನ್ ಚೇತನಕ್ಕೆ ಗೌರವ ನಮನಗಳನ್ನು ಸಲ್ಲಿಸೋಣ.

(ಲೇಖಕರು ಶಿಕ್ಷಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತರಬೇತಿ ಬೇಕಿದೆ

ವಿಶ್ವವಾಣಿ' ಪತ್ರಿಕೆಯನ್ನು ತಪ್ಪದೇ ಓದುತ್ತಿದ್ದವರಿಗೆ ಇತ್ತೀಚಿನ 'ಭಟ್ಟರ್ ಸ್ನಾಕ್' ಪ್ರಶ್ನೋತ್ತರಗಳನ್ನು ಓದಿದಾಗ, 'ಇದೇನು, ವಿಶ್ವೇಶ್ವರ ಭಟ್ಟರು ಎಲ್ಲಾ ಬಿಟ್ಟು ಯಕ್ಷ ಗಾನ ತಾಳ ಮದ್ದಲೆಯ ಹಿಂದೇಕೆ ಬಿದ್ದಿದ್ದಾರೆ?' ಅಂತ ಅನಿಸಿರ ಲೇಬೇಕು ಮತ್ತು ಅದಕ್ಕೆ ಸೂಕ್ತ ಉತ್ತರವು ಭಟ್ಟರ 'ನೂರೆಂಟು ವಿಶ್ವ' (ಡಿ.25) ಅಂಕಣದಲ್ಲೇ ಅಡಗಿರುವುದು ಅನುಭವಕ್ಕೆ ಬಂದಿರಲೂ ಸಾಕು.

ಮಾತಾಡುವ ವಿಶ್ವಕೋಶ ಎನ್ನಲಾಗುವ 'ತಾಳಮದ್ದಳೆ ಅರ್ಥಗಾರಿಕೆ'ಯ ಬಗೆಗಿನ ಬಹಳಷ್ಟು ಉಪಯುಕ್ತ ಮಾಹಿತಿ ಈ ಅಂಕಣದಲ್ಲಿದೆ. ಇಲ್ಲಿ ಇರಬೇಕಾದ್ದು ಪದಗಳ ನರ್ತನ, ಅಧ್ಯಯನ, ಸಂಶೋಧನೆಯೇ ಹೊರತು ಶುಷ್ಕ ಪಾಂಡಿತ್ಯವಲ್ಲ; ವಾಕ್ಚಾತುರ್ಯ, ತರ್ಕಬದ್ಧ ಮಾತುಗಾರಿಕೆ, ಶಬ್ದಜೋಡಣೆ, ಕನ್ನಡ ಭಾಷೆಯ ಹಿರಿಮೆಯನ್ನು ಎತ್ತಿಹಿಡಿಯುವ ಭದ್ರಬುನಾದಿ ಎಂದೆಲ್ಲ ಹೇಳಿ, ಕೇವಲ 5-10 ನಿಮಿಷಗಳಲ್ಲಿ ಹೇಳಬೇಕಾದ್ದನ್ನು ತಾಸುಗಟ್ಟಲೆ ಎಳೆಯುತ್ತ ಕಂಠಶೋಷಣೆ ಮಾಡಿಕೊಳ್ಳುವುದಲ್ಲ, ತೀಟೆ ಅಥವಾ ತಲಬು ತೀರಿಸಿಕೊಳ್ಳುವ ವೇದಿಕೆಯೂ ಅಲ್ಲ ಎಂಬುದನ್ನೂ ಈ ಬರಹ ಸ್ಪಷ್ಟಪಡಿಸಿದೆ. ಇಲ್ಲಿ ಅರ್ಥಧಾರಿಗಳು ಅಹಂಕಾರಕ್ಕೆ ಆಸ್ಪದ ನೀಡದೆ ವಿನಯಪೂರ್ವಕವಾಗಿ ಮಾತನಾಡಬೇಕು. ಆದರೆ ಇಂದು ಆಗುತ್ತಿರುವುದೇನು? ಅರ್ಥಗಾರಿಕೆ ಅಂದರೆ ಪ್ರೇಕ್ಷಕರ ಎದುರು 'ಉದ್ದಾಮ ಪಂಡಿತ' ಎಂದು ಬಿಂಬಿಸಿಕೊಳ್ಳುವುದು, ಡಬಲ್ ಮೀನಿಂಗ್ ಅರ್ಥ ಹೇಳುವುದು, ಪೌರಾಣಿಕ ಪ್ರಸಂಗಗಳ ಪಾತ್ರಗಳನ್ನೂ ಸಮಕಾಲೀನ ವಿದ್ಯಮಾನಗಳಿಗೆ ಹೋಲಿಸಿ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿಕೊಳ್ಳುವುದು ಎಂಬಂತೆ ಆಗಿಬಿಟ್ಟಿದೆ ಇಂದು! ಇದರರ್ಥ, ನಾವು ಪ್ರೇಕ್ಷಕರೂ ಸುಧಾರಿಸಬೇಕು; ಅಂದಾಗ ಮಾತ್ರವೇ ಇದೊಂದು ಹೆಮ್ಮೆಯ ಮಾತಿನ ಮಂಟಪವಾದೀತು.

ಹೌದು, ಇಂದು ಕೆಲವರು 'ಸುಪ್ರಸಿದ್ಧ' ಅರ್ಥಧಾರಿಗಳ ಸಾಲಿಗೆ ಸೇರಿಬಿಟ್ಟಿರುವುದರಿಂದ, ಅವರೇನು ಹೇಳಿದರೂ ಅದನ್ನೇ ಕೇಳುತ್ತಿರುವಂತೆ ಆಗಿಬಿಟ್ಟಿದೆ. ಇಲ್ಲಿ ಅಧ್ಯಯನಶೀಲತೆಯ ಕೊರತೆ ಎದ್ದುಕಾಣುತ್ತಿದೆ. ಒಂದಂತೂ ನಿಜ, ಯಕ್ಷಗಾನದಂತೆ ಇಂದು ತಾಳಮದ್ದಳೆಗೆ ಸರಿಯಾದ ತರಬೇತಿ ಕೇಂದ್ರ ಎಂಬುದೇ ಇಲ್ಲ, ಭಾಗವತರು ಹಾಡುವ ಪದ್ಯವನ್ನೇ ಗದ್ಯದ ರೂಪದಲ್ಲಿ ಹೇಳಿಬಿಟ್ಟರೆ ಅದೇ ಅರ್ಥಗಾರಿಕೆ ಅಂತ ತಿಳಿದವರೂ ಇದ್ದಾರೆ. ನಮ್ಮಲ್ಲಿ 'ಹವ್ಯಾಸಿ' ಅರ್ಥಧಾರಿಗಳಿಗೇನೂ ಕೊರತೆಯಿಲ್ಲ; ಆದರೆ ದಿನಗಳೆದಂತೆ ಅವರಾರೂ ವೃತ್ತಿಪರರಾಗುತ್ತಿಲ್ಲ ಎಂಬುದೇ ಬೇಸರದ ಸಂಗತಿ. ತಿಳಿದವರು ಹೇಳಿದ ಮಾತುಗಳನ್ನೇ ಅಲ್ಲಲ್ಲಿ ಪ್ರಸ್ತಾಪಿಸಿ, ತಾವೂ ಕೆಲ ಸಮಕಾಲೀನ ವಿಷಯಗಳನ್ನು ತಮ್ಮ ಮಾತಿನಲ್ಲಿ ಎಳೆದು ತರುವ ಸಂಪ್ರದಾಯವಿದೆ; ಹೀಗಾಗಿ ಹೊಸ ಪೀಳಿಗೆಯ ಅರ್ಥಧಾರಿಗಳು ತಯಾರಾಗುತ್ತಿಲ್ಲ. ನಿಜ ಹೇಳಬೇಕೆಂದರೆ, ತಾಳಮದ್ದಳೆ ಕಲೆಗೆ ಯಕ್ಷಗಾನದಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಿನ ಮಾನ್ಯತೆ ಇದೆ; ಆದರೇನು ಮಾಡುವುದು, ಪೂರಕ ವಾತಾವರಣದ ಕೊರತೆಯಿದೆ. ಒಂದೊಮ್ಮೆ ಇಲ್ಲೂ ಸರಿಯಾದ ತರಬೇತಿ ಸಿಗುವಂತಾದರೆ, 'ಐಟಂ ಸಾಂಗ್ ಡಾನ್ಸರ್' ಅರ್ಥಧಾರಿಗಳ ಸಂಖ್ಯೆ ಕಡಿಮೆಯಾದೀತು!

- ಶಂಕರನಾರಾಯಣ ಭಟ್, ಮಾಡಗೇರಿ

ಎಚ್ಚೆತ್ತುಕೊಳ್ಳುವುದು ಸೂಕ್ತ

ಪ್ರಧಾನ ಸಂಪಾದಕರು ತಮ್ಮ 'ನೂರೆಂಟು ವಿಶ್ವ' ಅಂಕಣದಲ್ಲಿ (ಡಿ.25) ಯಕ್ಷಗಾನ ಮತ್ತು ತಾಳಮದ್ದಲೆಯ ಕುರಿತು ಸುದೀರ್ಘವಾಗಿ ಚರ್ಚಿಸುತ್ತಾ, ಯಕ್ಷಗಾನದ ಔನ್ನತ್ಯವನ್ನು ವಿವರಿಸಿದ್ದಾರೆ. ಜತೆಗೆ, ಇಂದು ಕೆಲವು ಅರ್ಥಧಾರಿಗಳು ಕಲೆಯ ಘನತೆಯನ್ನು ತಮ್ಮ ಮಾತಿನ ಭರಾಟೆ ಹಾಗೂ ಪಾಂಡಿತ್ಯ ಪ್ರದರ್ಶನಕ್ಕೆ ಒತ್ತೆಯಿಟ್ಟು, ಪತನಕ್ಕೆ ಒಯ್ಯುತ್ತಿರುವ ಬಗ್ಗೆಯೂ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇದು ಒಪ್ಪುವ ವಿಚಾರವೇ ಸರಿ. ಈ ಲೋಪಗಳು ತಾಳಮ ದ್ದಲೆಗಷ್ಟೇ ಸೀಮಿತವಾಗಿಲ್ಲ, ಯಕ್ಷಗಾನದ ದೃಶ್ಯವೈಭವಕ್ಕೂ ಇವು ಅನ್ವಯವಾಗುತ್ತವೆ. ಅರ್ಥಹೀನ ಪದ್ಯಗಳ ಸೇರ್ಪಡೆ, ಅನುಚಿತ ಅಭಿನಯ, ದೀರ್ಘ ಸಂಭಾಷಣೆ, ಪದ್ಯ-ಪ್ರಲಾಪ ಇವು ಕಲೆಗೆ ಮಾರಕವಾಗಿ ಪರಿಣಮಿಸುವ ಆತಂಕವಿದೆ. ಲೇಖನದಲ್ಲಿ ಸೂಚಿಸಿರುವಂತೆ ಇಂದಿನ ಅರ್ಥಧಾರಿಗಳು, ಪಾತ್ರಧಾರಿಗಳು, ಪ್ರಸಂಗಕರ್ತರು ಎಚ್ಚೆತ್ತುಕೊಳ್ಳುವುದು ಸೂಕ್ತ. ಸಕಾಲಿಕ-ಸಮುಚಿತ ಅಭಿಪ್ರಾಯ ಬರಹವನ್ನು ನೀಡಿದ್ದಕ್ಕೆ ಭಟ್ಟರಿಗೆ ಧನ್ಯವಾದಗಳು.

-ರಾಮಚಂದ್ರ ಐ.ಎಂ., ದಾವಣಗೆರೆ

ಸವಿಸ್ತಾರ ಮಾಹಿತಿ

ವಿನಾಯಕ ಭಟ್ಟ ಅವರು ತಮ್ಮ 'ವಿದ್ಯಮಾನ' ಅಂಕಣದಲ್ಲಿ (ಡಿ.28), ದೇಶದ ಸದ್ಯದ ವಿಪಕ್ಷ ನಾಯಕರ ಮನಸ್ಥಿತಿ ಕುರಿತು ಸವಿಸ್ತಾರ ಮಾಹಿತಿ ನೀಡಿದ್ದಾರೆ ಮತ್ತು ಅದನ್ನು ಪ್ರಶ್ನಿಸಿದ್ದಾರೆ ಕೂಡ!

ದೇಶದ ನಾಮಾಂಕಿತ ರಾಜಕೀಯ ಕುಲೀನ ಮನೆತನದಲ್ಲಿ ಹುಟ್ಟಿ, ಶಿಕ್ಷಿತನಾಗಿ, ದೇಶ-ವಿದೇಶಗಳ ಸಂಪೂರ್ಣ ಪರಿಚಯವಿದ್ದ, ಅರ್ಧ ಶತಮಾನದ ವಯಸ್ಸು ದಾಟಿದ ಮತ್ತು ರಾಜಕೀಯ ರಕ್ತಗತವಾದ, ಒಂದು ಕಾಲಕ್ಕೆ ತಮ್ಮ ತಂದೆ, ಅಜ್ಜಿ ಹಾಗೂ ಮುತ್ತಜ್ಜ ಮೂವರೂ ದೇಶದ ಪ್ರಧಾನಿ ಹುದ್ದೆ ಅಲಂಕರಿಸಿದ್ದ ಅರಿತ ವ್ಯಕ್ತಿಯೊಬ್ಬರು ಪ್ರಸಕ್ತ ವಿರೋಧ ಪಕ್ಷದ ನಾಯಕನ ಜವಾಬ್ದಾರಿ ಪಟ್ಟದಲ್ಲಿ ಕೂತು, ಹೊರದೇಶಕ್ಕೆ ಹೋದಾಗ ದೇಶದ ಆಂತರಿಕ ವಿಷಯಗಳ ಬಗ್ಗೆ ಅಲ್ಲಿನ ಜನರ ಎದುರು ಅಪಸ್ವರ ಎತ್ತುವ ಕೆಲಸ ತೀರಾ ಸಣ್ಣ. ಇನ್ನು ವಿದೇಶಕ್ಕೆ ಹೋದಾಗಲೆಲ್ಲ ಭಾರತದ ವಿರೋಧಿಗಳ ಭೇಟಿ ಆಗಿ ಅವರೆದುರು ದೇಶದ ವ್ಯವಸ್ಥೆಯ ಬಗ್ಗೆ ಚರ್ಚಿಸುವುದು ಕೂಡ ಅಕ್ಷಮ್ಯ. ಲೇಖಕರು ಹೇಳಿದಂತೆ ಇದು ಆ ವ್ಯಕ್ತಿಯ ಮನಸ್ಥಿತಿಯನ್ನು ತೋರುತ್ತದೆ. ಇದನ್ನು, 'ಕೈಲಾಗದವ ಮೈ ಪರಚಿಕೊಂಡಂತೆ' ಅಂತಲೂ ಅನ್ನಬಹುದು.

ಪ್ರಪಂಚದ ಯಾವುದೇ ರಾಷ್ಟ್ರದ ವಿರೋಧ ಪಕ್ಷದ ನಾಯಕರು ಈ ರೀತಿ ಹೊರದೇಶಕ್ಕೆ ಹೋದಾಗ ತಮ್ಮ ದೇಶದ ವಿಚಾರಗಳನ್ನು ಹಂಚಿ ಕೊರಗುವುದನ್ನು, ಸ್ವಂತ ದೇಶಕ್ಕೆ ಮಸಿ ಬಳಿಯುವ ಕೆಲಸ ಮಾಡಿದ್ದನ್ನು ನಾವು ನೋಡಿಯೇ ಇಲ್ಲ. ದೇಶದ ಹಿತ ಕಾಪಾಡುವ ಮನಸ್ಸಿದ್ದಲ್ಲಿ ಆಡಳಿತ ಪಕ್ಷದ ಪ್ರತಿಯೊಂದು ತಪ್ಪು, ಹುಳುಕು ಹುಡುಕಿ ನೇರವಾಗಿ ಪ್ರಶ್ನಿಸುವ ಗುಣ ರೂಢಿಸಿಕೊಂಡು, ಸರಕಾರಕ್ಕೆ ಯೋಗ್ಯ ಸಲಹೆ ನೀಡಿ ತಾವೊಬ್ಬ ಸಮರ್ಥ ನಾಯಕ ಎಂಬುದನ್ನು ನಿರೂಪಿಸುವುದು ಅವರಿಗೆ ಶ್ರೇಯ. ಇನ್ನೂ ಕಾಲ ಮಿಂಚಿಲ್ಲ, ವಯಸ್ಸೂ ಜಾಸ್ತಿ ಆಗಿಲ್ಲ. ಅಂತೆಯೇ ವಿರೋಧಿಗಳಿಗೆ ತಮ್ಮ ಮೇಲಿದ್ದ ಅಭಿಪ್ರಾಯವನ್ನು ಸುಳ್ಳು ಅಂತ ಸಾಧಿಸಲು, ಅವರ ಬಾಯಿ ಮುಚ್ಚಿಸಲು ಮತ್ತು ತಮ್ಮ ಅಭಿಮಾನಿ ಬಳಗ ತಮ್ಮ ಮೇಲೆ ಇಟ್ಟಿರುವ ನಂಬಿಕೆ, ಅಪೇಕ್ಷೆಗಳಿಗೆ ತಾವು ಸೂಕ್ತ, ಯೋಗ್ಯ ಎಂದು ದೃಢಪಡಿಸಲು ಇದು ಸಕಾಲ. ಸಾಂದರ್ಭಿಕ ವಿಷಯದ ಆಯ್ಕೆ ಮಾಡಿ ಉತ್ತಮ ರೀತಿಯಲ್ಲಿ ಅದನ್ನು ಮಂಡಿಸಿದ ಲೇಖಕರಿಗೆ ಹಾಗೂ ಪ್ರಕಟಿಸಿದ ಪತ್ರಿಕೆಗೆ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಹೃದಯಸ್ಪರ್ಶಿ ಬರಹ

ಶ್ರೀವತ್ಸ ಜೋಶಿ ಅವರ, 'ಪರೋಪಕಾರಿ ಪುಣ್ಯವಂತೆಗೆ ಪಿಎಚ್‌ಡಿ ಪದವಿ ಪುರಸ್ಕಾರ' ಶೀರ್ಷಿಕೆಯ ಲೇಖನ (ಡಿ.28) ಉತ್ತಮವಾಗಿ ಮೂಡಿ ಬಂದಿದೆ. ಮನೆಯಲ್ಲಿ ಮಗನ ಸಾವಿನ ದುಃಖವು ಮಡುಗಟ್ಟಿದ್ದರೂ, ''ನಾನೇ ಕುಸಿದರೆ ನನ್ನ ಪ್ರೀತಿಯ ಸಮುದಾಯಕ್ಕೆಲ್ಲ ಆಘಾತವಾಗುತ್ತದೆ; ಈ ಗಳಿಗೆಯಲ್ಲಿ ನಾನು ಧೈರ್ಯದಿಂದಿರಬೇಕು. ಎಲ್ಲ ದೈವೇಚ್ಛೆ, ಏನೂ ಮಾಡಲಿಕ್ಕಾಗದು'' ಎಂದ ಸರೋಜ್ ಶರ್ಮ ಅವರ ಮಾತು ಕಣ್ಣೀರು ತರಿಸಿತು.

- ರಾಘವೇಂದ್ರ, ನಾಗಲಾಪುರ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- ಸುಬ್ರಾಯ ಹೆಗಡೆ, ಸಿದ್ದಾಪುರ
ಭಟ್ರೇ, ಎಲೆ-ಅಡಕೆ ಪತ್ರಕರ್ತನ ಪ್ರಕಾರ, ಭಾರತದಲ್ಲಿ ಪತ್ರಿಕೋದ್ಯಮ ಸತ್ತುಹೋಗಿದೆಯಂತೆ?
– **ಆತನಲ್ಲಿರುವ ಪತ್ರಕರ್ತ ಎಂದೋ ಸತ್ತುಹೋಗಿದ್ದಾನೆ ಎಂಬುದನ್ನು ಹಾಗೆ ಹೇಳಿರಬಹುದು!**

- ವಿಶ್ವನಾಥ ಬಾಳಿಗ, ಕೊಪ್ಪ
ಭಟ್ರೇ, ಸುದ್ದಿಗಿಂತ ಸ್ಪಷ್ಟನೆಯೇ ದೊಡ್ಡ ಸುದ್ದಿ ಮಾಡುತ್ತಿದೆಯಲ್ಲ?
– **ಅಂಗಿಗಿಂತ ಬನಿಯನ್ನೇ ದೊಡ್ಡದಾಯಿತು ಅಂದಂತಾಯ್ತು!**

- ಸಂಪಿಗೆ ಶ್ರೀಧರ, (ಇಮೇಲ್ ಮೂಲಕ)
ಭಟ್ರೇ, ನೀವು ವಿದೇಶಕ್ಕೆ ಹೋಗದೇ ಒಂದು ತಿಂಗಳಾಯ್ತಲ್ಲ?
– **ಹಾಗೇನಿಲ್ಲ, ತಾಷ್ಕೆಂಟ್ ವಿಮಾನದಲ್ಲಿ ಕುಳಿತು ಇದನ್ನು ಬರೆಯುತ್ತಿದ್ದೇನೆ!**

- ಸಂತೋಷ ವೈದ್ಯ, ಶಿರಸಿ
ಭಟ್ರೇ, 'ವಿಶ್ವವಾಣಿ' ಪತ್ರಿಕೆ ಜತೆಜತೆಗೆ 'ಲೋಕಧ್ವನಿ'ಯೂ ನಿಮ್ಮದೇನಾ?
– **ಹೂಂ.. ವಿಶ್ವ = ಲೋಕ, ವಾಣಿ = ಧ್ವನಿ.. ಎರಡೂ ಒಂದೇ ಆಯ್ತಲ್ಲ?!**

- ನಾರಾಯಣ ಹೆಗಡೆ, ಕುಮಟಾ
ಭಟ್ರೇ, 'ಲೋಕಧ್ವನಿ' ಪತ್ರಿಕೆ ಒಂದು ಸಣ್ಣ ಸುದ್ದಿಯಿಂದ ಬಹಳ ಪ್ರಚಾರ ಗಿಟ್ಟಿಸಿಕೊಂಡಿತಲ್ಲ?
– **ನನ್ನದೊಂದು ನಿಯಮವಿದೆ- ಪತ್ರಿಕೆ ಸುದ್ದಿ ನೀಡಬೇಕು, ಅದಕ್ಕಿಂತ ಹೆಚ್ಚಾಗಿ ಪತ್ರಿಕೆಯೇ ಸುದ್ದಿಯಾಗಬೇಕು!**

- ಪರಮೇಶ್ವರ ಅಡಿಗ, ಕೋಟೇಶ್ವರ
ಭಟ್ರೇ, ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯಿಂದ ಸರಿಯಾದ ಮಾಹಿತಿ ಸಿಗುತ್ತದಾ?
– **ಒಮ್ಮೊಮ್ಮೆ ಸುದ್ದಿ ಪ್ರಕಟವಾದಾಗ ಎಲ್ಲ ಮಾಹಿತಿ ಸಿಗಲಿಕ್ಕಿಲ್ಲ, ಆದರೆ ಸ್ಪಷ್ಟನೆ ಕೊಟ್ಟಾಗ ಅಸಲಿ ಸುದ್ದಿ ಏನು ಎಂಬುದು ಗೊತ್ತಾಗುತ್ತದೆ!**

- ಗಿರಿಧರ ಪಾವಂಜೆ, ಬೆಂಗಳೂರು
ಭಟ್ರೇ, 'ಲೋಕಧ್ವನಿ' ವರದಿಗೆ ಸ್ಪಷ್ಟನೆ ಕೊಡಬೇಕಾಗಿದ್ದು ಯಾವ ಸಂಗತಿ ಬಗ್ಗೆ?
– **ಭೇಟಿಯ ಅವಧಿ ಇಷ್ಟೇ ಎಂದು ಹೇಳಿದ್ದರೆ ಮುಗಿತಿತ್ತಪ್ಪಾ!**

- ರಮೇಶ ಗೌಡ, ಮಳವಳ್ಳಿ
ಭಟ್ರೇ, 'ಲೋಕಧ್ವನಿ' ಪತ್ರಿಕೆಯೂ ನಿಮ್ಮದೇನಾ?
– **ಈ ಪ್ರಶ್ನೆ ಕೇಳುತ್ತಿರುವವರಲ್ಲಿ ನೀವು ಸಾವಿರದಾ ಒಂಬತ್ತನೆಯವರು, ಗೌಡ್ರೇ!**

- ವೀಣಾ ಹೆಗಡೆ, ಶಿರಸಿ
ಭಟ್ರೇ, ಸ್ಪಷ್ಟನೆ ಕೊಟ್ಟ ನಂತರ ವಿವಾದ ಮುಗಿಯಬೇಕಿತ್ತಲ್ಲವಾ?
– **ಸ್ಪಷ್ಟನೆಯೇ ದೊಡ್ಡ ಸುದ್ದಿಯಾದರೆ ಹೇಗೆ ಮುಗಿಯುತ್ತದೆ?!**

ತಾಳಮದ್ದಳೆ ಬಾಲಿವುಡ್, ಅರ್ಥಧಾರಿಗಳು ಐಟಂ ಡಾನ್ಸರ್‌ಗಳಾಗಬಾರದು

ಯಾವ ಕ್ಷೇತ್ರವೂ ವಿಮರ್ಶೆಗೆ ಹೊರತಾದದ್ದಲ್ಲ. ವಿಜ್ಞಾನ, ಇತಿಹಾಸ, ಗಣಿತದಂಥ ವಿಷಯಗಳೇ ವಿಮರ್ಶೆಗೆ ಒಳಗಾಗಿರುವಾಗ, ನಾಟಕ, ನೃತ್ಯ, ಯಕ್ಷಗಾನ, ತಾಳಮದ್ದಳೆಯಂಥ ವಿಷಯಗಳು ಖಂಡಿತವಾಗಿಯೂ ವಿಮರ್ಶೆಗೆ ಅತೀತವಲ್ಲ. ವಿಮರ್ಶೆಗಳು ಈ ಹಿಂದೆಯೂ ಇದ್ದವು, ಇನ್ನು ಮುಂದೆಯೂ ಇರುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಇದನ್ನು ಕಳೆದ ಗುರುವಾರದ ಅಂಕಣದಲ್ಲಿ ವಿಶ್ವೇಶ್ವರ ಭಟ್ಟರು ಬರೆದ ''ಇದು ತಾಳಮದ್ದಳೆಯ 'ಐಟಮ್ ಸಾಂಗ್ ಡಾನ್ಸರ್'ಗಳಂತೆ ಇರುವ ಅರ್ಥಧಾರಿಗಳನ್ನು ತಿರಸ್ಕರಿಸುವ ಕಾಲ!'' ಶೀರ್ಷಿಕೆಯ ಅಂಕಣಕ್ಕೆ ಸಂಬಂಧಿಸಿದಂತೆ ನನ್ನ ಅನಿಸಿಕೆ ಅಂದುಕೊಳ್ಳಿ ಅಥವಾ ಅದಕ್ಕೆ ಬಂದ ಪ್ರತಿಕ್ರಿಯೆಗಳಿಗೆ ನನ್ನ ಅಭಿಪ್ರಾಯ ಅಂದುಕೊಳ್ಳಿ. ಯಾರ ಅಭಿಪ್ರಾಯ ಹೇಗೇ ಇರಲಿ, ಸಂದರ್ಭ ಸಿಕ್ಕಾಗೆಲ್ಲ 'ಕರ್ನಾಟಕದ ಗಂಡುಕಲೆ' ಎಂದು ಕರೆಸಿಕೊಳ್ಳುವ ಯಕ್ಷಗಾನ ಮತ್ತು ತಾಳಮದ್ದಳೆಯ ಕುರಿತಂತೆ, ಎರಡು ಪ್ರಮುಖ ಸಂಗತಿಗಳಿಗಾಗಿ ಇದು ಬೇಕಿತ್ತು. ಒಂದು, ಐದು ಶತಮಾನಕ್ಕಿಂತಲೂ ಹೆಚ್ಚಿನ ಇತಿಹಾಸವಿದ್ದರೂ ಮೂರೂವರೆ ಜಿಲ್ಲೆಗೆ ಮಾತ್ರ ಸೀಮಿತವಾಗಿರುವ ಈ ಕಲೆಯನ್ನು ರಾಜ್ಯದ ಬೀದರಿನ ಮೂಲೆಯಲ್ಲೋ, ಚಾಮರಾಜನಗರದ ಕೊನೆಯಲ್ಲೋ ಕುಳಿತ ಕನ್ನಡಿಗನಿಗೂ ತಲುಪಿಸುವುದಕ್ಕಾಗಿ. ಇನ್ನೊಂದು, ಈ ಕಲೆಯಲ್ಲಿ ಇತ್ತೀಚೆಗೆ ಆಗುತ್ತಿರುವ ಬದಲಾವಣೆ, ಬೆಳವಣಿಗೆಯನ್ನು ಆ ಕ್ಷೇತ್ರದ ಹೊರತಾದವರೂ ಗಮನಿಸುತ್ತಿದ್ದಾರೆ, ತಮ್ಮನ್ನೂ ವಿಮರ್ಶೆಗೆ ಒಳಪಡಿಸುತ್ತಾರೆ ಎನ್ನುವುದನ್ನು ತಿಳಿಸಿಕೊಡುವುದಕ್ಕಾಗಿ. ಇಂದು ಯಕ್ಷಗಾನಕ್ಕೆ ಹೋಲಿಸಿದರೆ, ತಾಳಮದ್ದಳೆಯಲ್ಲಿ ಭಾಗವಹಿಸುವವರ ಸಂಖ್ಯೆಯೂ ಕಡಿಮೆ, ಪ್ರೇಕ್ಷಕರ ಸಂಖ್ಯೆಯೂ ಕಡಿಮೆ. ಆದರೆ ಇವೆರಡೂ ಕಲೆಗಳು ಒಂದೇ ಕುಟುಂಬದ ಎರಡು ಕವಲುಗಳಿದ್ದಂತೆ. ಇಂದಿಗೂ ಒಂದಕ್ಕೊಂದು ಪೂರಕವಾಗಿವೆ, ಹಾಸುಹೊಕ್ಕಾಗಿವೆ. ಒಂದು ಕಾಲದಲ್ಲಿ, ನಾಟ್ಯ ಗೊತ್ತಿಲ್ಲದವರು, ವಯಸ್ಸಾಗಿ ಕುಣಿಯಲಾಗದವರು, ಮುಖವರ್ಣಿಕೆ ಮಾಡಿಕೊಳ್ಳಲಾಗದವರು, ವೇಷ ಕಟ್ಟಿ ಕುಣಿಯಲಾಗದವರು ತಾಳಮದ್ದಳೆಯಲ್ಲಿ ಅರ್ಥ ಹೇಳುತ್ತಾರೆ ಎಂಬ ಮಾತಿತ್ತು. ಅದು ಎಷ್ಟು ಸರಿ, ಎಷ್ಟು ತಪ್ಪು ಎನ್ನುವುದಕ್ಕಿಂತ, ಅದು ಅವರವರ ಆಸಕ್ತಿಗೆ, ಇಷ್ಟಕ್ಕೆ ಸಂಬಂಧಿಸಿದ ವಿಷಯ ಎನ್ನುವ ಅಭಿಪ್ರಾಯ ನನ್ನದು. ಮಾತಾಡಲು ಸಿದ್ಧತೆ ಮಾಡಿಕೊಳ್ಳುವವರು ನಾಟ್ಯ ಕಲಿಯಲಾರರು, ಬಣ್ಣ ಹಚ್ಚಲಾರರು ಎಂದರೆ ನಂಬಿಕೆ ಸಾಲುವುದಿಲ್ಲ. ತಾಳಮದ್ದಳೆಯ ಅರ್ಥಧಾರಿಗಳು ಯಕ್ಷಗಾನದಲ್ಲಿ ಪಾತ್ರಮಾಡಿ ರಂಗಸ್ಥಳ ಪುಡಿ ಮಾಡಬೇಕೆಂದೇನೂ ಇಲ್ಲ. ತಕ್ಕಮಟ್ಟಿನ ತಾಳ, ನಾಟ್ಯ ಕಲಿಯಲು ಹೆಚ್ಚಿನ ಸಮಯವೇನೂ ಬೇಕಾಗುವುದಿಲ್ಲ. ಅದರಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ ಎನ್ನುವುದಷ್ಟೇ ಸತ್ಯ. ಆ ಕಾರಣಕ್ಕಾಗಿ ಯಾರನ್ನಾದರೂ ದೂಷಿಸುವುದೋ, ಟೀಕಿಸುವುದೋ ಸರಿಯಲ್ಲ.

ಈಗ ವಿಷಯ ಅದಲ್ಲ. ನಮ್ಮ ಪರಂಪರೆಯ ಪ್ರತಿರೂಪವಾಗಿರುವ ಈ ಕಲೆ ಯಾವ ದಿಕ್ಕಿನಲ್ಲಿ ಸಾಗುತ್ತಿದೆ? ಕಲಾವಿದರ ಸಿದ್ಧತೆ ಹೇಗಿದೆ? ಕಾರ್ಯಕ್ರಮದ ಆಯೋಜಕರ ಆಸೆಗಳೇನು? ಪ್ರೇಕ್ಷಕರ ನಿರೀಕ್ಷೆಗಳೇನು? ಇತ್ಯಾದಿಗಳು ಕಾಲಕಾಲಕ್ಕೆ ಕೇಳಿಕೊಳ್ಳಬೇಕಾದ ಪ್ರಶ್ನೆಗಳು. ಹೊಸ ಪ್ರಸಂಗಗಳು, ಅದರಲ್ಲಿ ಬರುವ ಹಾಸ್ಯ ಪಾತ್ರಗಳು, ಹೊಸ ಗಾಯನ ಶೈಲಿ, ಅನುಕರಣೆ, ಅದರ ಒಳಿತು-ಕೆಡುಕುಗಳು, ಅದರ ಪರಿಣಾಮ, ಈ ಕ್ಷೇತ್ರಕ್ಕೆ ಹೊಸತನ ಬೇಕೇ? ಬೇಕು ಎಂದಾದರೆ ಎಷ್ಟು ಮತ್ತು ಹೇಗೆ? ಇವನ್ನೆಲ್ಲ ಚರ್ಚಿಸಲೇಬಾರದೇ? ಆಕ್ಷೇಪಿಸಲೇಬಾರದೇ? ವಿಮರ್ಶೆ ಮಾಡಬಾರದೇ?

ಮೊದಲಾಗಿ, ಯಾವ ಕ್ಷೇತ್ರವೂ ವಿಮರ್ಶೆಗೆ ಹೊರತಾದದ್ದಲ್ಲ. ವಿಜ್ಞಾನ, ಇತಿಹಾಸ, ಗಣಿತದಂಥ ವಿಷಯಗಳೇ ವಿಮರ್ಶೆಗೆ ಒಳಗಾಗಿರುವಾಗ, ನಾಟಕ, ನೃತ್ಯ, ಯಕ್ಷಗಾನ, ತಾಳಮದ್ದಳೆಯಂಥ ವಿಷಯಗಳು ಖಂಡಿತವಾಗಿಯೂ ವಿಮರ್ಶೆಗೆ ಅತೀತವಲ್ಲ. ವಿಮರ್ಶೆಗಳು ಈ ಹಿಂದೆಯೂ ಇದ್ದವು, ಇನ್ನು ಮುಂದೆಯೂ ಇರುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ತಾನು ವಿಮರ್ಶೆಗೆ ಒಳಪಡಬಾರದು ಎನ್ನುವ ಮನಸ್ಸಿದ್ದವರು ಆ ಕ್ಷೇತ್ರ ಬಿಡುವುದು ಒಳ್ಳೆಯದು. ಅದು ಖಾಸಗಿ ಅಥವಾ ಸರಕಾರಿ ನೌಕರರಾದರೂ ಸರಿ, ಕೃಷಿಕ, ಕಲಾವಿದನಾದರೂ ಸರಿ. ಏಕೆಂದರೆ, ನೌಕರನಿಗೆ ಭಡ್ತಿ ಸಿಗುವುದಾಗಲಿ, ಕೃಷಿಕನ ಬೆಳೆಗೆ ಬೆಲೆ ಕಟ್ಟುವುದಾಗಲೀ ವಿಮರ್ಶೆ ಮಾಡಿಯೇ. ವಿಮರ್ಶೆಗೆ ಯಾವುದೇ ರೀತಿಯ ಪರಿಮಿತಿ ಅಥವಾ ಚೌಕಟ್ಟಿಲ್ಲ, ಯಾರು ಬೇಕಾದರೂ, ಯಾರ ಕುರಿತಾಗಿ ಆದರೂ ವಿಮರ್ಶೆ ಮಾಡಬಹುದು. ಆದರೆ ಯಾವ ವಿಮರ್ಶೆಯನ್ನು ಪರಿಗಣಿಸಬೇಕು, ಯಾರ ಟೀಕೆಯನ್ನು ಗಣನೆಗೆ ತೆಗೆದುಕೊಳ್ಳಬೇಕು ಎನ್ನುವುದು ಪ್ರಮುಖವಾಗುತ್ತದೆ. ಯಕ್ಷಗಾನ, ತಾಳಮದ್ದಳೆಯ ಬಗ್ಗೆ ತಿಳಿದವರು ಮಾತ್ರ ಅದರ ವಿಮರ್ಶೆ ಮಾಡಬೇಕು, ಪತ್ರಕರ್ತರು ವಿಮರ್ಶೆ ಮಾಡಬಾರದು, ಪತ್ರಕರ್ತರಿಗೆ ಯಕ್ಷಗಾನದ ಬಗ್ಗೆ ಏನು ಗೊತ್ತು ಎನ್ನುವ



ವಾದ ಸರಿ ಎಂದಾದರೆ, ಅರ್ಥದಾರಿಗಳು ರಾಜಕೀಯದ, ಸಿನಿಮಾದ ಅಥವಾ ಪತ್ರಿಕೋದ್ಯಮದ ಬಗ್ಗೆಯೂ ವಿಮರ್ಶೆ ಮಾಡಬಾರದು. ತಾವು ಮಾತ್ರ ಒಂದು ವೇದಿಕೆಯಲ್ಲಿ ಕುಳಿತು ಸಾವಿರಾರು ಜನರ ಎದುರು ಇನ್ನೊಬ್ಬರ ಕುರಿತು ಮಾತನಾಡಬಹುದು, ಕಥೆಗೆ ಸಂಬಂಧವಿಲ್ಲದಿದ್ದರೂ, ಕವಿ ಅದಕ್ಕೆ ಪೂರಕವಾದ ಪದ್ಯ ಬರೆಯದಿದ್ದರೂ, ತಮ್ಮ ಬಾಯಿಚಪಲ ತೀರಿಸಿಕೊಳ್ಳಲು ಸಮಯ ಹೊಂದಾಣಿಕೆ ಮಾಡಿಕೊಂಡು, ಸಂಬಂಧವಿಲ್ಲದ ಸಂಗತಿ, ಸಂಬಂಧವಿಲ್ಲದವರ ವಿಷಯವನ್ನು ಅದರಲ್ಲಿ ಎಳೆದು ತಂದು ಚರ್ಚಿಸಬಹುದು, ಉಳಿದವರು ತಮ್ಮ ಬಗ್ಗೆ ಮಾತನಾಡಬಾರದು ಎಂದರೆ ಅದು ಅಹಂಕಾರದ ಪರಮಾವಧಿಯೇ ಹೊರತು ಮತ್ತೇನೂ ಅಲ್ಲ.

ಅಷ್ಟಕ್ಕೂ ವಿಮರ್ಶೆ ಎಂದರೆ ಒಂದು ವಿಷಯದ ಕುರಿತಾಗಿ ಅವರ ಅಭಿಪ್ರಾಯವೇ ಹೊರತು ಯುದ್ಧವಲ್ಲ. ಒಂದು ವಿಷಯದ ಕುರಿತು ಚರ್ಚೆಯೇ ನಡೆಯಬಾರದು ಎಂದಾದರೆ ತಾಳಮದ್ದಳೆ ಮೊದಲು ಖೈದಾಗಬೇಕು. ಏಕೆಂದರೆ ತಾಳಮದ್ದಳೆಗೆ ಮೂಲ ಧಾತು, ಅಧಾರ ಸ್ಥಂಭವೇ ಚರ್ಚೆ. ಯಕ್ಷಗಾನದಲ್ಲಾದರೆ, ನಾಟ್ಯ, ವೇಷಭೂಷಣಗಳೂ ಪ್ರಮುಖವೆನಿಸುತ್ತವೆ. ತಾಳಮದ್ದಳೆಯಲ್ಲಿ ಇವೆರಡಕ್ಕೂ ಅವಕಾಶವಿಲ್ಲ. ಹೆಸರಿಗೆ 'ತಾಳಮದ್ದಳೆ'ಯಾದರೂ, ಭಾಗವತ ಮತ್ತು ಮದ್ದಳೆಗಾರರಿಗೆ ಹೆಚ್ಚಿನ ಪ್ರಾಮುಖ್ಯ ಇರಬೇಕಾಗಿತ್ತಾದರೂ, ಇಂದು ಅರ್ಥಧಾರಿಗಳಿಗೂ ಇದರಲ್ಲಿ ಪ್ರಮುಖ ಪಾತ್ರವಿದ್ದು, ಎಲ್ಲವೂ ಸೇರಿ ಮನರಂಜನೆಯೊಂದಿಗೆ ತಲೆಗೆ ಕೆಲಸ ಕೊಡುವ ಕಲೆಯಾಗಿದೆ. ಆದರೂ ಆಗಾಗ ಯಕ್ಷಗಾನದ ಪ್ರಾತ್ಯಕ್ಷಿಕೆ, ವಿಮರ್ಶೆ, ಚರ್ಚೆ ಯಾಕೆ ಬೇಕು ಎಂದರೆ, ಕಲೆಯ ಒಳಿತಿಗಾಗಿ, ಸರಿಯಾದದ್ದನ್ನು ಉಳಿಸಿಕೊಳ್ಳುವುದಕ್ಕಾಗಿ. ಹಾಗಾಗಿ ವಿಮರ್ಶೆ ಅಥವಾ ಚರ್ಚೆಯನ್ನು ವೈಯಕ್ತಿಕ ಎಂದು ಪರಿಗಣಿಸಬಾರದು.

ಯಕ್ಷಗಾನ ಮತ್ತು ತಾಳಮದ್ದಳೆಯ ಬಗ್ಗೆ ವಿಶ್ವೇಶ್ವರ ಭಟ್ಟರಿಗೆ ಏನು ಗೊತ್ತು ಎನ್ನುವುದಕ್ಕೆ ಸಮರ್ಪಕ ಉತ್ತರ ನನಗೆ ಗೊತ್ತು, ಅವರೂ ಕೊಡಬಲ್ಲರು. ಅಂಥ ಪ್ರಶ್ನೆ ಕೇಳುವವರಲ್ಲಿ ನನ್ನದೊಂದು ಪ್ರಶ್ನೆ, ಅರ್ಥಧಾರಿಗಳು ದೇಶದ ರಾಜಕೀಯದ ಕುರಿತಾಗಿ, ಪ್ರಧಾನ ಮಂತ್ರಿ, ಮುಖ್ಯಮಂತ್ರಿ, ರಾಜಕೀಯ ಪಕ್ಷದ ಬಗ್ಗೆ ಮಾತನಾಡುವಾಗ ಇವರೆಲ್ಲ ರಾಜ್ಯಶಾಸ್ತ್ರ ಓದಿಕೊಂಡಿದ್ದಾರೆಯೇ ಎಂದು ಕೇಳಿದರೆ? ಅರ್ಥಶಾಸ್ತ್ರ, ಸಮಾಜಶಾಸ್ತ್ರದ ಪ್ರವೀಣರೆ ಎಂದರೆ? ಹೋಗಲಿ, ಯಕ್ಷಗಾನವನ್ನೇ ಕಸುಬಾಗಿ ಮಾಡಿಕೊಂಡವರಾಗಿ, ಬ್ರಹ್ಮನ ಪಾತ್ರ ಮಾಡುವವ ಅಥವಾ ಅರ್ಥ ಹೇಳುವವ ವೇದಗಳ ಬಗ್ಗೆ ಎಷ್ಟು ತಿಳಿದುಕೊಂಡಿದ್ದಾನೆ ಎಂದರೆ? ಅವೆಲ್ಲ ವಿತಂಡವಾದಗಳಾಗುತ್ತವೆಯೇ ಹೊರತು ಸರಿಯಾದ ವಾದವಾಗುವುದಿಲ್ಲ. ಅಷ್ಟಕ್ಕೂ ಲೇಖನದ ಉದ್ದೇಶ ಅದಲ್ಲ. ಪತ್ರಿಕೋದ್ಯಮದಲ್ಲಿ ಎಷ್ಟೇ ಹೆಸರು ಮಾಡಿದವರಾದರೂ ಅವರ ಬರಹಗಳು ಹೇಗೆ ವಿಮರ್ಶೆಗೆ ಅರ್ಹವೋ, ಹಾಗೆಯೇ ತಾಳಮದ್ದಳೆಯ ಅಥವಾ ಯಕ್ಷಗಾನದ ಪಾತ್ರಧಾರಿಗಳು ಆಡಿದ, ಆಡುವ ಮಾತುಗಳೂ, ಭಾಗವತರು ಹಾಡುವ ಪದ್ಯಗಳೂ ವಿಮರ್ಶೆಗೆ ಅರ್ಹ. ಆದ್ದರಿಂದ ಇದರಲ್ಲಿ ಖಾಲಿಪೀಲಿ ಯಾರದ್ದೋ ವೈಯಕ್ತಿಕ ವಿಷಯಗಳನ್ನು ಎಳೆದು ತರುವುದು ಯೋಗ್ಯವಲ್ಲ.

ನನ್ನ ದೃಷ್ಟಿಯಲ್ಲಿ ಯಕ್ಷಗಾನ-ತಾಳಮದ್ದಳೆಯ ಪ್ರತಿಯೊಬ್ಬ ಪ್ರೇಕ್ಷಕನೂ ಒಳ್ಳೆಯ ವಿಮರ್ಶಕ. ನಾಟಕದಂತೆ ಯಾವುದೇ ರಂಗಸಜ್ಜಿಕೆ, ಪರದೆ ಇಲ್ಲದಿದ್ದರೂ ಅರಮನೆಯ ದೃಶ್ಯವನ್ನಾಗಲಿ, ರಣರಂಗದ, ವನವಿಹಾರದ ಸನ್ನಿವೇಶವನ್ನಾಗಲಿ ಕಲ್ಪಿಸಿಕೊಳ್ಳುತ್ತಾನೆ. ಪ್ರತಿಯೊಂದು ಪಾತ್ರದ ಮಾತನ್ನೂ ಕೇಳುತ್ತಾನೆ. ಎಲ್ಲವನ್ನೂ ತನ್ನೊಳಗೇ ವಿಮರ್ಶೆ ಮಾಡಿಕೊಂಡು, ಬೇಕಾದದ್ದನ್ನು ಮಾತ್ರ ಮನೆಗೆ ಕೊಂಡೊಯ್ಯುತ್ತಾನೆ. ಸುಮ್ಮನೇ ಯೋಚಿಸಿ, 'ಭಕ್ತಪ್ರಹ್ಲಾದ' ಪ್ರಸಂಗದಲ್ಲಿ ಹಿರಣ್ಯಕಶಿಪು ಒಳ್ಳೆಯ ವಾಗ್ಮಿ, ಪ್ರಹ್ಲಾದ ಮತ್ತು ಕಯಾದುವಿನ ಪಾತ್ರಧಾರಿಗಳಿಗೆ ಮಾತು ಹೊರಡುವುದಿಲ್ಲ ಅಂದುಕೊಳ್ಳಿ. ತಾನು ಮೇಲುಗೈ ಸಾಧಿಸಬೇಕೆಂದು ಅರ್ಥಧಾರಿ ಹಿರಣ್ಯಕಶಿಪುವನ್ನು ಸಮರ್ಥಿಸಿಕೊಳ್ಳುತ್ತಾ ಹೋದರೆ? ಗದಾಯುದ್ಧದ ಕೌರವ, ದೇವಿ ಮಹಾತ್ಮೆಯ ರಕ್ತಬೀಜಾಸುರ, ವಾಲಿವಧೆಯ ವಾಲಿ, ಹೀಗೆ ಅನೇಕ ಪಾತ್ರಗಳನ್ನು ಹೇಳಬಹುದು. ದಿ. ಕೆ.ಎಸ್. ನಾರಾಯಣಾಚಾರ್ಯರು ಒಂದು ಕಡೆ ಹೇಳುತ್ತಾರೆ, ''ಪುರಾಣಗಳಲ್ಲಿ ಬರುವ ಕೆಟ್ಟ ಪಾತ್ರಗಳನ್ನು ವೈಭವೀಕರಿಸುವ ಅವಶ್ಯಕತೆ ಇಲ್ಲ. ಅವರಲ್ಲಿಯ ಗುಣಗಳಿಂದಾಗಿ, ಅವರ ವರ್ತನೆಯಿಂದಾಗಿ ಅವರನ್ನು ರಾಕ್ಷಸರ ಪಟ್ಟಿಗೆ ಸೇರಿಸಲಾಗಿದೆ, ಅವರನ್ನು ಯಾಕೆ ಸಮರ್ಥಿಸಿಕೊಳ್ಳಬೇಕು?''. ಇದು ನಮ್ಮ ಯಕ್ಷಗಾನ-ತಾಳಮದ್ದಳೆಯ ಪ್ರೇಕ್ಷಕರಿಗೆ ಗೊತ್ತು. ಆದ್ದರಿಂದಲೇ ಇಂದಿಗೂ ರಾಮ-ಕೃಷ್ಣರೇ ನಮಗೆ ಆರಾಧ್ಯ ದೈವವಾಗಿ ಉಳಿದುಕೊಂಡಿದ್ದಾರೆ. ದೇವಿಯ ದೇವಸ್ಥಾನಗಳು ಉಳಿದುಕೊಂಡಿವೆಯೇ ವಿನಾ ಕಂಸ, ರಕ್ತಬೀಜಾಸುರ, ಚಂಡ-ಮುಂಡ, ಕೌರವ, ಕೊನೆ ಪಕ್ಷ ಕರ್ಣನ ದೇವಸ್ಥಾನವೂ ನಿರ್ಮಾಣವಾಗಲಿಲ್ಲ, ಯಾರ ಮನೆಯಲ್ಲಿಯೂ ಅಂಥವರದ್ದೊಂದು ಚಿತ್ರವೂ ಕಾಣುವುದಿಲ್ಲ.

ಈ ಕಲೆ ಬದುಕಿದ್ದೇ ಚರ್ಚೆಯಿಂದ, ವಿಮರ್ಶೆಯಿಂದ. ಏಕೆಂದರೆ ಯಕ್ಷಗಾನ ಅಥವಾ ತಾಳಮದ್ದಳೆಯಲ್ಲಿ ತಾಳ, ರಾಗ, ವೇಷಭೂಷಣ ಹೀಗೆ ಕೆಲವೊಂದು ವಿಷಯಕ್ಕೆ ಹೊರತುಪಡಿಸಿ ಉಳಿದವುಗಳಿಗೆ ಯಾವುದೇ ಪಠ್ಯಕ್ರಮ ಇಲ್ಲ. ಆಯುರ್ವೇದ, ಯೋಗ ಇತ್ಯಾದಿಗಳಿಗೆ ಇದ್ದಂತೆ, ಕಾಲೇಜ್ ಆಗಲಿ, ವಿಶ್ವವಿದ್ಯಾಲಯವಾಗಲಿ ಇಲ್ಲ. ಯಾವ ಕ್ರಮ ಸರಿ, ಯಾವ ಕ್ರಮ ತಪ್ಪು ಎನ್ನುವುದನ್ನು 'ಇದಮಿತ್ಥಂ' ಎಂದು ತಿಳಿಸಿಕೊಡುವ ಶಾಸನವಿಲ್ಲ, ಬರಹಗಳಿಲ್ಲ. ಬಹುತೇಕ ಪುಸ್ತಕಗಳೆಲ್ಲ ಅವರವರ ಚಿಂತನೆಗೆ ತಕ್ಕಂತೆ ಬರೆದದ್ದೇ ವಿನಾ ಅವುಗಳಿಗೆ 'ಇದೇ ಸರಿ' ಎನ್ನುವ ಯಾವ ರಾಜಮುದ್ರೆಯೂ ಬಿದ್ದಿಲ್ಲ. ಇಂದಿನವರೆಗೂ, ಅಧಿಕೃತವಾಗಿ ಮುದ್ರೆ ಒತ್ತುವ ಒಂದೇ ಒಂದು ಸಂಸ್ಥೆ ಇಲ್ಲ. ಹಾಗಾದರೆ, ಐದುನೂರಕ್ಕೂ ಹೆಚ್ಚು ವರ್ಷದ ಇತಿಹಾಸವಿರುವ ಈ ಕಲೆ ಇಂದೂ ಜೀವಂತವಾಗಿ, ಲವಲವಿಕೆಯಿಂದ ಇರುವುದಕ್ಕೆ ಕಾರಣ, ಹಳೆಯವರು ಹಾಕಿಕೊಟ್ಟ ಚೌಕಟ್ಟು, ತೋರಿಸಿಕೊಟ್ಟ ದಾರಿ. ಇನ್ನು ಮುಂದೆಯೂ ಇದು ಹೀಗೆಯೇ ನಡೆದುಕೊಂಡು ಹೋಗಬೇಕೇ ವಿನಾ ಬೇರೆ ಮಾರ್ಗ ಕಾಣುವುದಿಲ್ಲ.

ವಿಶ್ವೇಶ್ವರ ಭಟ್ಟರ ಲೇಖನಕ್ಕೆ ಕೆಲವು ಪ್ರತಿಕ್ರಿಯೆಗಳನ್ನು ನಾನು ನೋಡುತ್ತಿದ್ದೆ. ಅದರಲ್ಲಿ ಅರ್ಥಧಾರಿಗಳ ಪಟ್ಟಿಯಲ್ಲಿ ಕೆಲವು ಹೆಸರು ತಪ್ಪಿ ಹೋಗಿವೆ, ಕೆಲವು ಹೆಸರು ಸೇರಿಸಬಹುದಾಗಿತ್ತು, ಇತ್ಯಾದಿ ಅಭಿಪ್ರಾಯಗಳಿವೆ. ಯಕ್ಷಗಾನ ಬಿಡಿ, ತಾಳಮದ್ದಳೆಯ ಅರ್ಥಧಾರಿಗಳಲ್ಲಿ ಉತ್ತಮರು ಎಂದು ಕರೆಸಿಕೊಂಡವರ ಹೆಸರನ್ನೆಲ್ಲ ಹಾಕಿದರೆ ಲೇಖನ ಒಂದು ಪುಟವಲ್ಲ, ಪತ್ರಿಕೆಯ ಹದಿನಾರು ಪುಟಗಳೂ ಸಾಲುವುದಿಲ್ಲ. ಒಬ್ಬ ಲೇಖಕ ಸಂದರ್ಭಕ್ಕೆ ಬೇಕಾಗಿ ಪದಗಳ ಮಿತಿಗೆ ತಕ್ಕಂತೆ ಎಷ್ಟು ಬೇಕೋ ಅಷ್ಟನ್ನು ಬಳಸಿಕೊಳ್ಳುತ್ತಾನೆ. ಎಲ್ಲರ ಹೆಸರನ್ನೂ ಬರೆಯಬೇಕಾಗಿತ್ತು ಎಂದರೆ, ಕೌರವನ ಪಾತ್ರ ಮಾಡಿದವ ತಮ್ಮಂದಿರ ಹೆಸರು ಹೇಳುವಾಗ ನೂರು ಮಂದಿಯ ಹೆಸರನ್ನೂ ಹೇಳಬೇಕಿತ್ತು, ಕೃಷ್ಣ ತನ್ನ ಪತ್ನಿಯರ ಹೆಸರು ಹೇಳುವಾಗ ಹದಿನಾರು ಸಾವಿರದ ಎಂಟು ಹೆಸರನ್ನು ಹೇಳಬೇಕಿತ್ತು ಎಂದಂತಾಗುತ್ತದೆ!

ಭಟ್ಟರನ್ನು ಟೀಕಿಸುವ ಭರದಲ್ಲಿ ಕೆಲವರು ಭಟ್ಟರ ಬಗ್ಗೆ ಪ್ರತಾಪ ಸಿಂಹ ಏನೋ ಹೇಳಿದ್ದ ಎಂದು ಬರೆದದ್ದು ತೀರಾ ವೈಯಕ್ತಿಕ. ಅಂದು ಪ್ರತಾಪ ಸಿಂಹ ಹೇಳಿದ್ದಾಗಲಿ, ಅದನ್ನು ಪುನಃ ಬರೆದದ್ದಾಗಲಿ, ಅಥವಾ ಇತ್ತೀಚೆಗೆ 'ಚಿಂತಕರು' ಎಂದು ಕರೆಸಿಕೊಳ್ಳುವವರು ಯಕ್ಷಗಾನ ಕಲಾವಿದರ ಕುರಿತು ಹೇಳಿದ್ದಾಗಲಿ, ಎಲ್ಲವೂ ಖಂಡನೀಯವೇ. ನಾಳೆ ಯಾರಾದರೂ ಪಾತ್ರಧಾರಿಗಳು, ಅರ್ಥಧಾರಿಗಳೆಲ್ಲರೂ ವ್ಯಸನ ಮುಕ್ತರೇ ಎಂದು ಕೇಳಿದರೆ? ಅದೂ ಅನಾವಶ್ಯಕ.

ಇತ್ತೀಚೆಗೆ ಬಾಲಿವುಡ್‌ನಲ್ಲಿ ಒಂದು ಹೊಸ ಬೆಳವಣಿಗೆ ಕಾಣಬಹುದು. ತಮ್ಮ ತಮ್ಮ ಸಿನಿಮಾಕ್ಕಾಗಿ ಮಾತನಾಡುವ ತಾರೆಯರು, ದೇಶದ ವಿಷಯ ಬಂದಾಗ, ಧರ್ಮದ ವಿಷಯ ಬಂದಾಗ, ಕೊನೆ ಪಕ್ಷ ಅವರ ಕ್ಷೇತ್ರದಲ್ಲಿಯೇ ವಿವಾದ ಉಂಟಾದಾಗ, ಒಬ್ಬರೂ ಮಾತನಾಡುವುದಿಲ್ಲ. ಧ್ವನಿ ಎತ್ತುವುದಿಲ್ಲ. ಅದೇ ಒಂದು ಸಿನಿಮಾ ಬಿಡುಗಡೆಯಾಗಲಿ, ಅದು ಎಷ್ಟು ಕೆಟ್ಟ ಚಿತ್ರವಾದರೂ ಅದನ್ನು ಹೊಗಳಿ ಅಟ್ಟಕ್ಕೇರಿಸುತ್ತಾರೆ. ಆ ಚಿತ್ರದ ಐಟಮ್ ಸಾಂಗ್‌ಗಳು ಜನಪ್ರಿಯವಾಗುತ್ತವೆ ಅಥವಾ ಅದನ್ನೇ ವೈಭವೀಕರಿಸುತ್ತಾರೆ. ಹಾಗಾದರೆ ಅದೇ ಸರಿಯೇ ಅಂದರೆ, ಖಂಡಿತ ಅಲ್ಲ. ಯಾಕೋ ಇತ್ತೀಚೆಗೆ ಯಕ್ಷಗಾನ, ತಾಳಮದ್ದಳೆಗಳೂ ಇದೇ ಹಾದಿಯಲ್ಲಿ ಸಾಗುತ್ತಿರುವಂತೆ ಕಾಣುತ್ತಿದೆ. ಯಕ್ಷಗಾನ ಎಂದರೆ ಮಾಸ್ ಸಿನಿಮಾ ಇದ್ದಂತೆ, ತಾಳಮದ್ದಳೆ ಎಂದರೆ ಕ್ಲಾಸ್ ಸಿನಿಮಾ ಇದ್ದಂತೆ. ಎರಡನ್ನೂ ನೋಡುವ, ಇಷ್ಟಪಡುವವರ, ಅರ್ಥಮಾಡಿಕೊಳ್ಳುವ ಜನರ ಸಮೂಹ ಬೇರೆಯದ್ದೇ ಆಗಿರುತ್ತದೆ. ತಾಳಮದ್ದಳೆಯ ಪ್ರೇಕ್ಷಕರು ಹೆಚ್ಚು ಪ್ರಾಜ್ಞರು ಎಂದು ಪರಿಗಣಿಸಲಾಗುವುದರಿಂದ, ಅಲ್ಲಿ ಸಣ್ಣ ತಪ್ಪಾದರೂ ದೊಡ್ಡದಾಗಿ ಕಾಣುತ್ತದೆ. 'ಅಂಥವರೇ ತಪ್ಪು ಮಾಡಿದರೆ ಹೇಗೆ?' ಎಂಬ ಕಳಕಳಿಯೂ ಇರುತ್ತದೆ. ಅರ್ಥಧಾರಿಗಳು ಅರ್ಥವಿಲ್ಲದೇ ಬಾಯಿ ಹರಿಬಿಟ್ಟರೆ ಪ್ರಸಂಗ ಒಳಿತಿಗಿಂತ ಕೊಳಕೇ ಹೆಚ್ಚಾಗುತ್ತದೆ. ಅಂಥ ಸಂದರ್ಭದಲ್ಲಿ ಅದೇ ಕ್ಷೇತ್ರದ ಹಿರಿಯರಾದಿಯಾಗಿ, ಪ್ರೇಕ್ಷಕರೂ ಅದನ್ನು ಖಂಡಿಸುವುದನ್ನೋ, ವಿಮರ್ಶಿಸುವುದನ್ನೋ ಮಾಡದಿದ್ದರೆ, ಆ ಕ್ಷೇತ್ರವೂ ಬಾಲಿವುಡ್‌ನಂತಾಗುತ್ತದೆ. ಪಾತ್ರಧಾರಿ, ಅರ್ಥಧಾರಿಗಳು ಐಟಮ್ ಡಾನ್ಸರ್‌ಗಳಂತೆ ಕಾಣುತ್ತಾರೆ. ಹಾಗಾಗಬಾರದು ಎಂಬುದು ಈ ಕಲೆಯ ಅಭಿಮಾನಿಗಳ ಮನದ ಮಾತು.

ಕೊನೆಯದಾಗಿ, ಸಾರ್ವಜನಿಕ ಜೀವನದಲ್ಲಿ ಯಾರೂ ಪ್ರಶ್ನಾತೀತರಲ್ಲ. ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲು, ಸರಿಯಾದ ವಿಮರ್ಶೆ ಸ್ವೀಕರಿಸಲು, ಏನೂ ಬೇಡ, ಸಾಮಾನ್ಯ ಚರ್ಚೆಗೆ (ವೈಯಕ್ತಿಕ ವಿಷಯವನ್ನು ಹೊರತುಪಡಿಸಿ) ಯಾರೇ ಆದರೂ ಸಿದ್ಧರಾಗಿರಬೇಕು. ನಾನು ದೊಡ್ಡ ನಟ, ನಾನು ದೊಡ್ಡ ರಾಜಕಾರಣಿ, ನಾನು ದೊಡ್ಡ ಅರ್ಥಧಾರಿ, ನಾನು ದೊಡ್ಡ ವೇಷಧಾರಿ, ನನಗೆ ಎಲ್ಲವೂ ಗೊತ್ತು, ಇಡೀ ಜಗತ್ತಿಗೇ ನಾನು ಗೊತ್ತು ಎಂದು ತಿಳಿದರೆ ಅಂಥವರು ಬಾವಿಯಲ್ಲಿನ ಕಪ್ಪೆ ಮಾತ್ರ. ಅಷ್ಟಕ್ಕೂ ವಿದ್ಯೆ ಶೋಭಿಸುವುದು ವಿನಯದಿಂದಲೇ ಹೊರತು ಅಹಂಕಾರದಿಂದಲ್ಲ ಎನ್ನುವುದನ್ನು ಕಲಾವಿದ ತಿಳಿದಿರಬೇಕು.

ಇಂದಿನ ತಾಳಮದ್ದಳೆಯೆಂದರೆ ಸೂತ್ರವಿಲ್ಲದ ಗಾಳಿಪಟದಂತೆ

ತಾಳ-ಮೇಳ

ಗ.ನಾ.ಭಟ್ಟ
vveditoped@gmail.com

ನಮಸ್ತ್ರೈಲೋಕ್ಯನಿರ್ಮಾಣಕವಯೇ ಶಂಭವೇ ಯತಃ ।
ಪ್ರತಿಕ್ಷಣಂ ಜಗನ್ನಾಟ್ಯಪ್ರಯೋಗರಸಿಕೋ ಜನಃ ॥

ನಮ್ಮ ಮನಸ್ಸಿಗೆ ಕಣ್ಣು, ಕಿವಿ ಮೊದಲಾದ ಇಂದ್ರಿಯಗಳ ಮೂಲಕ ಒಂದು ಸೌಂದರ್ಯವನ್ನೋ, ಒಂದು ಮಹತ್ತ್ವವನ್ನೋ, ಒಂದು ಗಂಭೀರ ವಿಚಾರವನ್ನೋ ಅನುಭವ ಮಾಡಿಸಿಕೊಬಲ್ಲ ಕುಶಲ ಕರ್ಮವನ್ನು 'ಕಲೆ'ಯೆಂದು ಕರೆಯುತ್ತಾರೆ. ಅಂಥ ಕಲೆಗಳಲ್ಲಿ ತಾಳಮದ್ದಳೆಯೂ ಒಂದು. ತಾಳಮದ್ದಳೆ ಒಂದು ಸುಂದರ 'ಕಲಾಕೃತಿ'-Artifact-, Excellent Preformance. ಗ್ರೀಕರಲ್ಲಿ ಯಾವ ವಾಕ್‌ಶಾಸ್ತ್ರವನ್ನು -'Rheotoric ಅಂತ ಕರೆಯುತ್ತಾರೋ ಅದು ಸಂಪೂರ್ಣ ಮೈದಳೆದಿದ್ದು ತಾಳಮದ್ದಳೆಯಲ್ಲಿ. ಈ 'ರೆಟ್ಟರಿಕ್ -ವಾಕ್‌ಶಾಸ್ತ್ರ' ಅನ್ನುವುದು ನಮ್ಮಲ್ಲೂ ಇತ್ತು. ಅದು ವೇದಕಾಲದಷ್ಟು ಪ್ರಾಚೀನ. ''ದೇವೀಂ ವಾಚಮಜನಯಂತ ದೇವಾಃ'', ''ಮೊದಲು ದೇವತೆಗಳು ವಾಗ್ದೇವತೆಗೆ ಜನ್ಮವಿತ್ತರು'' ಎಂಬ ಮಾತನ್ನು ನಾವು ತೈತ್ತಿರೀಯ ಬ್ರಾಹ್ಮಣದಲ್ಲಿ ನೋಡುತ್ತೇವೆ. ಇಂಥ ವಾಕ್‌ಶಾಸ್ತ್ರವನ್ನು, ವಾಗ್ವೈಭವವನ್ನು, ವಚೋವಿಲಾಸವನ್ನು ಹುಲುಸಾಗಿ, ಸಮೃದ್ಧವಾಗಿ ಬಳಸಿಕೊಂಡ ಕಲೆ ತಾಳಮದ್ದಳೆ.

ಆಂಗಿಕೋ ವಾಚಿಕಶ್ಚೈವ ಆಹಾರ್ಯಃ ಸಾತ್ತ್ವಿಕಸ್ತಥಾ ।
ಚತ್ವಾರೋಭಿನಯಾ ಹ್ಯೇತೇ ವಿಜ್ಞೇಯಾ ನಾಟ್ಯಸಂಶ್ರಯಾಃ ॥

'ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ತ್ವಿಕ' ಎಂದು ನಾಟ್ಯಶಾಸ್ತ್ರಜ್ಞರು ಗುರುತಿಸಿದ ನಾಲ್ಕು ವಿಧದ ಅಭಿನಯಗಳಲ್ಲಿ 'ವಾಚಿಕ'ವೇ ಪ್ರಧಾನವಾಗಿರುವ ಕಲಾಪ್ರಕಾರ 'ತಾಳಮದ್ದಳೆ'. 'ಹೃದಯದ ಕಾವಿನಿಂದ ಕಾವ್ಯ; ಅಲ್ಲಿಯ ಕಲಕಿನಿಂದ ಕಲೆ' ಎಂಬ ಮಾತೊಂದು ಇದೆ. ಯಾವ ಕಲಾಕೃತಿಯು ನಮ್ಮ ಮನಸ್ಸನ್ನು ಕಲಕುತ್ತದೆಯೋ, ನಮ್ಮ ಹೃದಯದಲ್ಲಿ ಒಂದು ಶೋಕ, ಕನಿಕರ, ಒಲವು, ಮುನಿಸು, ಛಲ, ವಿಷಾದ, ಆಸೆ, ನಿರಾಸೆ ಮೊದಲಾದ ಭಾವಗಳನ್ನು ಉಂಟುಮಾಡುತ್ತದೆಯೋ ಅಂಥ ಕಲಾಪ್ರಕಾರಕ್ಕೆ ಸಲ್ಲುತ್ತದೆ ನಾಟ್ಯ, ಶಿಲ್ಪ, ಸಂಗೀತ, ಯಕ್ಷಗಾನ, ತಾಳಮದ್ದಳೆ ಮೊದಲಾದ ಹೆಸರುಗಳು. ಪ್ರಕೃತ ತಾಳಮದ್ದಳೆ ಪಾತ್ರಗಳ ಅಂತರಂಗಗಳೇನು? ಅವುಗಳ ಒಳತೋಟಿ-ಸಂಘರ್ಷ-ಸಂಕೀರ್ಣತೆ-ದ್ವಂದ್ವಗಳೇನು? ಅವುಗಳ ರಸ-ಭಾವಗಳೇನು? ಜೀವನಮೌಲ್ಯ-ಸಿದ್ಧಾಂತಗಳು ಯಾವವು? ಅವು ಸಾರುವ ಸಂದೇಶಗಳೇನು? ಎಂಬಿತ್ಯಾದಿ ವಿಷಯಗಳ ಬಗ್ಗೆ ವಿರಳವಾದರೂ ಅಲ್ಲಲ್ಲಿ ಕೆಲವು ಕೃತಿಗಳು ಬಂದಿವೆ.

ತಾಳಮದ್ದಳೆ ಮುಖ್ಯವಾಗಿ ರಾಮಾಯಣ, ಮಹಾಭಾರತ, ಪುರಾಣಗಳನ್ನು ಆಧರಿಸಿ ಪ್ರದರ್ಶನಗೊಳ್ಳುವಂಥದು. ಇದರಲ್ಲಿ ಬರುವ ಯಾವುದೇ ಪಾತ್ರಗಳು ಒಂದೋ ಜೀವನಮೌಲ್ಯಗಳನ್ನು ಹೊಂದಿರುತ್ತವೆ, ಇಲ್ಲವೇ ಅಪಮೌಲ್ಯಗಳನ್ನು ಹೊಂದಿರುತ್ತವೆ. ಅವುಗಳಲ್ಲಿ ಧರ್ಮ, ನ್ಯಾಯ, ಸತ್ಯ, ಶೀಲ, ಸಂಸ್ಕೃತಿ, ಚಾರಿತ್ರ್ಯ, ತ್ಯಾಗ, ಸಂಯಮ, ಉದಾತ್ತತೆ, ವಿನಯ, ವಿವೇಕ, ವಿರಕ್ತಿ, ಕೈಂಕರ್ಯ, ಭಕ್ತಿ- ಹೀಗೆ ಜೀವನಮೌಲ್ಯಗಳು ಸಾವಿರಾರು. ಇವೆಲ್ಲದರ ಜತೆಗೆ ಅಧರ್ಮ, ಅನ್ಯಾಯ, ಅನೃತ, ಅವಿವೇಕ, ಅನಾಚಾರ, ಅತ್ಯಾಚಾರ, ಅಸೂಯೆ, ಮನೆಹಾಳುಗೆಡುಕುತನ ಮೊದಲಾದ ಅಪಮೌಲ್ಯಗಳೂ ಇರುತ್ತವೆ. ಆಯಾ ಪಾತ್ರಗಳ ಮೂಲಕ ಅವೆಲ್ಲವನ್ನೂ ಪ್ರತ್ಯಕ್ಷೀಕರಿಸುವಲ್ಲಿ ತಾಳಮದ್ದಳೆಯ ಪಾತ್ರ ಹಿರಿದಾದುದು. ತಾಳಮದ್ದಳೆಯೆಂದರೆ ಅದೊಂದು ವಚೋವಿಲಾಸ; ವಾಗ್ವೈಭವದ ಉತ್ತುಂಗ ಶಿಖರ; ಮಾತಿನ ಮರ್ಮದ ಸಲಾಕೆ; ಮಾತಿನ ಸೌಂದರ್ಯದ ನೆಲೆವೀಡು. ಅದು ಒಮ್ಮೊಮ್ಮೆ 'ಪುರಾಣಪ್ರವಚನ'ವಾಗಿಯೂ, 'ವಿಚಾರಗೋಷ್ಠಿ'ಯಾಗಿಯೂ, 'ನಿರ್ಣಾಯಕ ತತ್ತ್ವಾರ್ಥಹೇತು'ವಾಗಿಯೂ, 'ಪೌರಾಣಿಕ ಪರಿಷತ್' ಆಗಿಯೂ, ಒಂದು ಉತ್ತಮ 'ಸಂವಹನದ ಕಣ'ವಾಗಿಯೂ, ಒಂದು ರೋಚಕ-ಹೃದಯಂಗಮ 'ಸಂವಾದ'ದ ವೇದಿಕೆಯಾಗಿಯೂ, ವಾದ-ಪ್ರತಿವಾದದ 'ಜಂಝಾವಾತ'ವಾಗಿಯೂ ರಂಜಿಸಬಲ್ಲದು. ಹಿಮ್ಮೇಳದ ಹಿನ್ನೆಲೆಯಲ್ಲಿ ಅದನ್ನು ನೋಡುವುದಾದರೆ ಅದೊಂದು 'ಗಾನಗೋಷ್ಠಿ'ಯಾಗಿಯೂ, 'ವಾದನಗೋಷ್ಠಿ'ಯಾಗಿಯೂ ಜನಮನವನ್ನು ಸೆಳೆಯಬಲ್ಲದು.

ಪಾತ್ರಗಳ ಅವತರಣಿಕೆಯಲ್ಲಿ ಅದನ್ನು ಅವಲೋಕಿಸುವುದಾದರೆ ಅದು ಆಯಾ ಪಾತ್ರಗಳ ಗುಣ-ದೋಷಗಳನ್ನೂ, ಪತನೋತ್ಕರ್ಷಗಳನ್ನೂ, ದೇವಾಸುರ ಗುಣಗಳನ್ನೂ, ಒಳಿತು-ಕೆಡುಕುಗಳನ್ನೂ, ಪಾತ್ರಗಳ ನೀಚೋಚ್ಚ ಭಾವಗಳನ್ನೂ ತೋರಿಸಬಲ್ಲದು. ಪಾತ್ರಗಳ ಸಂಘರ್ಷ, ಸಂಕೀರ್ಣತೆ, ಒಳತೋಟಿ, ಸುಖ-ದುಃಖ, ಕೋಮಲತೆ, ಕಾಠಿಣ್ಯ, ಔದಾರ್ಯ, ಮುಗ್ಧತೆ, ಸಿದ್ಧಾಂತ, ಜೀವನಾದರ್ಶ, ಧ್ಯೇಯ ಮೊದಲಾದವನ್ನು ವೇದಿಕೆಯಲ್ಲಿ ಸುಂದರವಾಗಿ ಸಾಕಾರಗೊಳಿಸಬಲ್ಲದು. ಜತೆಗೆ ಕಲೆಯ ಜೀವಾಳವಾದ ರಸನಿಷ್ಪತ್ತಿಗೆ ಕಾರಣವಾಗಿ ಜನಮನವನ್ನು ತಣಿಸಬಲ್ಲದು. ಭಾವದ ಹೊಳೆಯಲ್ಲಿ ಮೀಯಿಸಬಲ್ಲದು. ವಿಚಾರದೀಪ್ತಿಯಲ್ಲಿ ನಮ್ಮ ಮನಸ್ಸು-ಬುದ್ಧಿಯನ್ನು ಅರಳಿಸಬಲ್ಲದು. ಯಾವ ಭವ್ಯರಂಗಸಜ್ಜಿಕೆಯೂ ಇಲ್ಲದೇ, ಬಣ್ಣಗಾರಿಕೆಯೂ ಇಲ್ಲದೇ, ವೇಷಭೂಷಣವೂ ಇಲ್ಲದೇ, ನೃತ್ತ-ನೃತ್ಯವೂ ಇಲ್ಲದೇ, ನಿಯತವಾದ ಸ್ಥಳವೊಂದರಲ್ಲಿ, ನಿತ್ಯ ಉಡುಪಿನಲ್ಲಿ ಹೆಚ್ಚು ಎಂದರೆ ಒಂದು ಪಂಚೆ-ಜುಬ್ಬಾ-ಶಲ್ಯದಲ್ಲಿ ಮಾತಿನ ಮಂಟಪವನ್ನು ಕಟ್ಟಿ ಇವೆಲ್ಲವನ್ನೂ ಪ್ರೇಕ್ಷಕರಿಗೆ ತಲುಪಿಸುವಲ್ಲಿ ತಾಳಮದ್ದಳೆಯ ಪಾತ್ರ ಬಹಳ ದೊಡ್ಡದು.

ಆದರೆ ಇಂಥ ತಾಳಮದ್ದಳೆಯೆಂಬ ಅಪೂರ್ವ ಕಲಾಕೃತಿಯ ಸ್ಥಿತಿ ಏನಾಗಿದೆಯೆಂದರೆ- ಸುಶಿಕ್ಷಿತ, ಪ್ರಜ್ಞಾವಂತ ಪ್ರೇಕ್ಷಕನೊಬ್ಬ ಅದನ್ನು ನೋಡದ ಸ್ಥಿತಿಯುಂಟಾಗಿದೆ. ಇದನ್ನು ಕುರಿತು 'ವಿಶ್ವವಾಣಿ' ಸಂಪಾದಕ ಮತ್ತು ಪ್ರಖರ ಚಿಂತಕ ವಿಶ್ವೇಶ್ವರ ಭಟ್ಟರು ತಮ್ಮ ಗುರುವಾರದ (ಡಿ.18) ಅಂಕಣ ಬರಹದಲ್ಲಿ ತಾಳಮದ್ದಳೆ ಕಲಾವಿದರು ತಾವು ನಡೆಯುತ್ತಿರುವ ಹಾದಿಯನ್ನು ಒಮ್ಮೆ ತಿರುಗಿ ನೋಡುವಂತೆ, ಆತ್ಮಾವಲೋಕನ ಮಾಡಿಕೊಳ್ಳುವಂತೆ, ಕಣ್ಣು ತೆರೆಸುವ ಒಂದು ಅದ್ಭುತ ಲೇಖನವನ್ನು ಬರೆದಿದ್ದಾರೆ. ಇಂದು ನಡೆಯುತ್ತಿರುವ ತಾಳಮದ್ದಳೆಯ ಓರೆ-ಕೋರೆಗಳನ್ನು, ವೈಚಿತ್ರ್ಯಗಳನ್ನು, ವಿಕೃತಿಗಳನ್ನು ಸೋದಾಹರಣವಾಗಿ ವಿವರಿಸುತ್ತಾ ತಾಳಮದ್ದಳೆಯೆಂಬ ಸುಂದರ ಕಲಾಕೃತಿ ಹೇಗೆ ತನ್ನ ಸೊಗಡು, ಸೌಂದರ್ಯವನ್ನು ಕಳೆದುಕೊಳ್ಳುತ್ತಾ ವ್ಯಕ್ತಿಪ್ರತಿಷ್ಠಿತರ, ಪಟ್ಟಭದ್ರ ಹಿತಾಸಕ್ತಿಯವರ, ಗುಂಪುಗಾರಿಕೆಯವರ ಆಡುಂಬೊಲವಾಗಿದೆ ಅನ್ನುವುದರ ಬಗ್ಗೆ ಬೆಳಕು ಚೆಲ್ಲಿದ್ದಾರೆ. ತಾಳಮದ್ದಳೆಯ ಬಗ್ಗೆ ಕಾಳಜಿಯುಳ್ಳ, ಪ್ರಜ್ಞಾವಂತ ಪ್ರೇಕ್ಷಕನ ಮನಸ್ಸಿನಲ್ಲಿ ಕುದಿಯುತ್ತಿರುವ ಸಂಕಟ, ವೇದನೆಗಳಿಗೆ ಧ್ವನಿಯಾಗಿದ್ದಾರೆ. ಅವರು ಹೇಳಿದ್ದರಲ್ಲಿ ಸುಳ್ಳಿನ ಅಂಶ ಒಂದಿನಿತೂ ಇಲ್ಲ. ತಾಳಮದ್ದಳೆ ಸಾಗುತ್ತಿರುವುದು ಹಾಗೆಯೇ.

ಇದರ ಬಗ್ಗೆ ಎಚ್ಚರಿಸುವ ಯಾವ ಕೆಲಸವೂ ಆಗುತ್ತಿಲ್ಲ. ಯಕ್ಷಗಾನ ಕಲಾವಿಮರ್ಶೆ ಎಂಬುದು ಸಂಪೂರ್ಣ ಸತ್ತುಹೋಗಿದೆ. ಯಕ್ಷಗಾನಕ್ಕಾಗಿಯೇ ಒಂದೆರಡು ಪತ್ರಿಕೆಗಳಿದ್ದರೂ ಅವು ವಿಮರ್ಶೆಯನ್ನು ಪ್ರಕಟಿಸುವುದಿಲ್ಲ. ಪ್ರಕಟಿಸಿದರೆ ಕೆಲವು ಕಲಾವಿದರು ಮತ್ತು ಅವರ ಅಭಿಮಾನಿಗಳು ಪತ್ರಿಕಾ ಸಂಪಾದಕರ ಮೇಲೆ ಮತ್ತು ಅದನ್ನು ಬರೆದವನ ಮೇಲೆ ಇಲ್ಲಸಲ್ಲದ ಆಪಾದನೆ ಮಾಡುವುದಕ್ಕೂ, ಹಲ್ಲೆ ಮಾಡುವುದಕ್ಕೂ ಹೇಸದ ಸ್ಥಿತಿ ಉಂಟಾಗಿದೆ. ಯಕ್ಷಗಾನ ವಾತಾವರಣವನ್ನೇ ಮತ್ತಷ್ಟು ಕಲುಷಿತಗೊಳಿಸುವ ದೌಷ್ಟ್ಯ ಎಲ್ಲೆಂದರಲ್ಲಿ ತಾಂಡವವಾಡುತ್ತಿದೆ. ಇದಕ್ಕೆಲ್ಲ ಕಾರಣ- ಕಲಾವಿದನೆಂದರೆ ಆತ ಪ್ರಶ್ನಾತೀತ, ಪರಿಪೂರ್ಣ, ಸರ್ವಜ್ಞ ಎಂಬ ಮನೋಭಾವವೇ ಆಗಿದೆ. ಇದನ್ನು ಬೆಳೆಸುವ ಅಂಧಾಭಿಮಾನದ ಪ್ರೇಕ್ಷಕರೂ, ಸಂಘಟಕರೂ, ಅಜ್ಞರೂ, ಮುಗ್ಧರೂ ಕಡಿಮೆಯಿಲ್ಲ. ಇಂಥವರಿಂದಾಗಿಯೇ ತಾಳಮದ್ದಳೆ ಕ್ಷೇತ್ರದಲ್ಲಿ ಒಂದು ಬಗೆಯ ಶೂನ್ಯ ಆವರಿಸಿದೆ (ತಾಳಮದ್ದಳೆ ಪ್ರದರ್ಶನದ ಸಂಖ್ಯೆ ಹೆಚ್ಚಿದ್ದರೂ ಅವುಗಳ ಗುಣಮಟ್ಟ ಇಲ್ಲ ಎಂಬ ಅರ್ಥದಲ್ಲಿ ಶೂನ್ಯ ಎಂಬ ಪದವನ್ನು ಬಳಸಿದ್ದೇನೆ). ವಿಕೃತಿ, ಅಸಂಬದ್ಧತೆ, ಬೌದ್ಧಿಕದಾರಿದ್ರ್ಯಗಳಿಗೆ ಲೆಕ್ಕವಿಲ್ಲ. ಉದಾಹರಣೆಗೆ- ಹತ್ತು ದಿನದ ತಾಳಮದ್ದಳೆಯ ಒಂದು ಉಪಶೀರ್ಷಿಕೆ ಹೇಗಿರುತ್ತದೆಯೆಂದರೆ 'ದಶಕಂ ಧರ್ಮಲಕ್ಷಣಮ್' ಎಂದಿರುತ್ತದೆ. ಐದು ದಿನದ ಕಾರ್ಯಕ್ರಮಕ್ಕೆ 'ಪಂಚಾಮೃತಮ್' ಎಂದಿರುತ್ತದೆ. ಇದಕ್ಕೆ ಏನಾದರೂ ಅರ್ಥವಿದೆಯೆ? 'ದಶಕಮ್ ಧರ್ಮಲಕ್ಷಣಮ್' ಧರ್ಮದ ಹೆಗ್ಗುರುತನ್ನು ಹೇಳುವಾಗ ಬಂದ ಮಾತಿದು.

ಧೃತಿಃ ಕ್ಷಮಾ ದಮೋಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

ಇಲ್ಲಿ 'ದಶಕಂ' ಎಂಬ ಪದ 'ಹತ್ತರ ಗುಚ್ಛ' ಅಂತ ಹೇಳುವುದನ್ನು ಬಿಟ್ಟರೆ ಇತರ ಯಾವ ಸಾಮ್ಯತೆಯೂ ಈ ಪದಕ್ಕೆ ಇಲ್ಲ. ಇದು ತಾಳಮದ್ದಳೆಯ ಪ್ರದರ್ಶನಕ್ಕೆ ಯಾವ ರೀತಿಯಲ್ಲೂ ಹೊಂದಾಣಿಕೆಯಾಗುದಿಲ್ಲ, ಅನ್ವಯವಾಗುವುದಿಲ್ಲ. ಹಾಗೆಯೇ 'ಪಂಚಾಮೃತಮ್' ಎಂಬ ಪದ ಕೂಡಾ. ದೇವತಾರ್ಚನೆಯಲ್ಲಿ ದೇವರಿಗೆ ಹಾಲು, ತುಪ್ಪ ಇತ್ಯಾದಿ ಐದು ದ್ರವ್ಯಗಳಿಂದ ಅಭಿಷೇಕ ಮಾಡಿ, ನಂತರ ಅವನ್ನು ಒಟ್ಟುಗೂಡಿಸಿ, ತೀರ್ಥವೆಂದು ಭಾವಿಸಿ, ಸ್ವೀಕರಿಸುವ ಒಂದು ಅಮೃತಸಮಾನವಾದ ತೀರ್ಥ ಅದು. 'ಐದು ತಾಳಮದ್ದಳೆ' ಒಟ್ಟಿಗೆ ಪ್ರದರ್ಶನಗೊಳ್ಳುತ್ತದೆಯೆಂದು ಅದನ್ನು 'ಪಂಚಾಮೃತಮ್' ಅಂತ ಹೇಳಿದರೆ ಆಭಾಸವಲ್ಲವೆ? ಯಾವುದೇ ಒಂದು ಪದಕ್ಕೆ ಅದರದ್ದೇ ಆದ ಅರ್ಥ, ಸಾಂಸ್ಕೃತಿಕ, ಸಾಮಾಜಿಕ, ಆಧ್ಯಾತ್ಮಿಕ, ವ್ಯಾವಹಾರಿಕ ಹಿನ್ನೆಲೆಯಿರುತ್ತದೆ. ಒಂದು ಪದವನ್ನು ಕೇಳಿದ ಕೂಡಲೆ ಅದಕ್ಕಿರುವ ಯಾವ ಪ್ರಚಲಿತ ಅರ್ಥ ಸ್ಫುರಿಸುತ್ತದೆಯೋ ಅದೇ ಅದರ ಜೀವಾಳ. ಅದನ್ನು ಕೊಂದರೆ ಅಥವಾ ಯದ್ವಾತದ್ವಾ ಬಳಸಿದರೆ ಇಂಥ ಅಪಸವ್ಯಗಳೇ ಉಂಟಾಗುತ್ತವೆ.

ತಾಳಮದ್ದಳೆಯ ಸಂಘಟಕರು ಇದನ್ನೆಲ್ಲ ಯೋಚಿಸುವುದಿಲ್ಲ. ಇಂಥದ್ದನ್ನು ಪ್ರಸಿದ್ಧ ಕಲಾವಿದನೊಬ್ಬನಿಗೆ ವಹಿಸಿ ತಾವು ಎಲೆ-ಅಡಕೆ ಜಗಿಯುತ್ತಾ ತೆಪ್ಪಗೆ ಕೂತುಕೊಳ್ಳುತ್ತಾರೆ. ಆತ ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಾನೆ. ದುಡ್ಡು ಮತ್ತು ವೇದಿಕೆ ಸಂಘಟಕನದು, ದರಬಾರು ಇವನದು. ಇದು ಎಲ್ಲಿಯವರೆಗೆ ಹೋಗಿದೆಯೆಂದರೆ ತಾಳಮದ್ದಳೆಯ ಪ್ರಸಿದ್ಧ ಪ್ರಸಂಗಗಳ ಹೆಸರನ್ನೂ ಬದಲಾಯಿಸುವವರೆಗೆ ಹೋಗಿದೆ. ಉದಾಹರಣೆಗೆ- ಹರಿಭಕ್ತಿಶ್ರೇಷ್ಠ, ಶೀಲಸೌಂದರ್ಯ, ಸಂಗ್ರಾಮ ಸತ್ತ್ವ, ಧರ್ಮ ಸತ್ತ್ವ, ಹನೂಮ ಶೌಚ, ವೀರ ವಾನರ, ಧರ್ಮ ಧೀ, ಜ್ಞಾನಪದ, ವಸಿಷ್ಠ ಕ್ಷಮೆ ಇತ್ಯಾದಿ. ಇವು ಯಾರಿಗಾದರೂ ಅರ್ಥವಾಗುತ್ತದೆಯೇ? ಹೀಗೆಂದರೆ ಏನು ಎಂದು ಅವರನ್ನೇ ಕೇಳಿ ತಿಳಿದುಕೊಳ್ಳಬೇಕು. ಇಂಥ ಹುಚ್ಚು, ವಿಪರೀತಗಳು ತಾಳಮದ್ದಳೆಯಲ್ಲಿ ದಾಂಗುಡಿಯಿಟ್ಟಿವೆ. ಹೇಳುವವರಿಲ್ಲ-ಕೇಳುವವರಿಲ್ಲ ಎಂಬ ಅನಾಥ ಸ್ಥಿತಿ ತಾಳಮದ್ದಳೆಯದು ಅಥವಾ ದಾರಿದ್ರ್ಯ ಸ್ಥಿತಿ ಅದರದ್ದು.

ಇನ್ನು ಅರ್ಥಗಾರಿಕೆಯಲ್ಲಂತೂ ಕೇಳುವುದೇ ಬೇಡ. ಪ್ರತಿಶತ 95ರಷ್ಟು ಕಲಾವಿದರಿಗೆ ಪುರಾಣಪ್ರಜ್ಞೆ, ಔಚಿತ್ಯಪ್ರಜ್ಞೆ ಸುತರಾಂ ಇಲ್ಲ. ಬರೀ ಪ್ರಸಂಗಪದ್ಯವನ್ನಷ್ಟೇ ಆಧರಿಸಿ ದೈನಂದಿನ ವಿಚಾರಗಳನ್ನೇ ತುರುಕುತ್ತಾ, ಶುಷ್ಕವಾದವನ್ನು ಮಾಡುತ್ತಾ, ಕಾಲಹರಣ ಮಾಡುವ ಕಲಾವಿದರು ಹೆಜ್ಜೆ ಹೆಜ್ಜೆಗೂ ಸಿಗುತ್ತಾರೆ. ದುರ್ವಾದ, ವಿತಂಡವಾದ, ಕುತರ್ಕ ಇವೇ ಮೊದಲಾದವು ಇವರ ಮೇಲ್ಮೆಯನ್ನು ಸಾರುವ ಸಂಗತಿಯಾದುದು ದಿಟಕ್ಕೂ ತಾಳಮದ್ದಳೆಯ ದುರ್ದೈವವೇ ಹೌದು.

ಇವರಿಗೆ ಔಚಿತ್ಯಪ್ರಜ್ಞೆ ಇಲ್ಲ ಅನ್ನುವುದಕ್ಕೆ ಒಂದು ಉದಾಹರಣೆ ನೀಡಬಯಸುತ್ತೇನೆ. 'ಸುಧನ್ವಾರ್ಜುನ ಪ್ರಸಂಗ'ದಲ್ಲಿ ಸುಧನ್ವನ ಪದ್ಯ 'ಸೃಷ್ಟಿಗರ್ಜುನನೆಂಬವನೆ ನೀನು' ಎಂಬುದಕ್ಕೆ ಸುಧನ್ವ ಏನು ಹೇಳಬೇಕು? ಪದ್ಯದ ಆಶಯದಂತೆ ಅರ್ಜುನನ ಪ್ರತಾಪಾತಿಶಯವನ್ನೋ, ಅವನ ಬಿಲ್ವಿದ್ಯೆಯ ಕೌಶಲವನ್ನೋ ಎತ್ತಿ ಆಡಬೇಕು. ಜತೆಗೆ ಅವನು ಧನುರ್ವಿದ್ಯೆಯಲ್ಲಿ ಸೃಷ್ಟಿಸಿದ (ಸೃಷ್ಟಿ ಎಂದರೆ ನೂತನ ಆವಿಷ್ಕಾರ) ಚಮತ್ಕಾರವನ್ನು ಹೇಳಬೇಕು. ಅದರ ಬದಲಿಗೆ ಕೌರವರ ಗೋಗ್ರಹಣದ ಪ್ರಕರಣವನ್ನು ಎತ್ತಿಕೊಂಡು ನನಗೆ 'ಗೋವು' ಬೇಕಿಲ್ಲ. ಗೋವತ್ಸ ಬೇಕಿಲ್ಲ. ಬದಲಿಗೆ 'ದೋಗ್ಧಾ' ಬೇಕು ಎಂದರೆ ಏನಾಗುತ್ತದೆ? ಭಗವದ್ಗೀತೆಯ 'ಸರ್ವೋಪನಿಷದೋ ಗಾವೋ' ಧ್ಯಾನಶ್ಲೋಕ ತನಗೂ ಗೊತ್ತು ಎಂದು ತೋರಿಸಿಕೊಳ್ಳುವ ಚಪಲವಾಗುತ್ತದೆ ಅಲ್ಲವೆ? ಇದು ಅನೌಚಿತ್ಯ ಮತ್ತು ಪಾಂಡಿತ್ಯಪ್ರದರ್ಶನವಲ್ಲದೆ ಇನ್ನೇನು?

ಇಡೀ ರಾಮಾಯಣದಲ್ಲಿ ವಾಲ್ಮೀಕಿ 'ಸಾಕೇತ' ಎಂಬ ಪದವನ್ನೇ ಬಳಸುವುದಿಲ್ಲ. ಅಲ್ಲಿ ಬರುವುದು 'ಅಯೋಧ್ಯೆ' ಎಂಬ ಪದ ಮಾತ್ರ. ಈ ಕಲಾವಿದರನೇಕರು ಸಾಕೇತ ಅಂತಲೇ ಬಳಸುತ್ತಾರೆ. ಇದು ಬೌದ್ಧರ ಕಾಲದಲ್ಲಿ ಆ ಪ್ರಾಂತಕ್ಕೆ ಬಳಸಲ್ಪಟ್ಟ ಪದ. ಇದನ್ನು ಬಳಸುವುದರಿಂದ ನಾವು ಬುದ್ಧನ ಕಾಲಕ್ಕೆ ಹೋಗುತ್ತವೆಯೇ ಹೊರತು ಅಯೋಧ್ಯೆಗೆ ಹೋಗುವುದಿಲ್ಲ. ಇದನ್ನು ಕಲಾವಿದರು ಯೋಚಿಸುವುದಿಲ್ಲ.

'ಪಟ್ಟಾಭಿಷೇಕ'ದ ದಶರಥ-ಕೈಕೇಯಿಯರ ಸಂಭಾಷಣೆ ಎಲ್ಲಿಂದ ಎಲ್ಲಿಗೋ ಹೋಗುವದು ಸರ್ವೇಸಮಾನ್ಯವಾಗಿದೆ. ಕೈಕೇಯಿಯ ಪ್ರಶ್ನೆಗೆ ತಾಳಮದ್ದಳೆಯ ದಶರಥ ಹೇಳುತ್ತಾನೆ- ''ರಾಜಾರಿಷ್ಟವೊಂದು ಬಂದಿದ್ದರಿಂದ ಮತ್ತು ನನಗೆ ದುಃಸ್ವಪ್ನ ಬಿದ್ದಿದ್ದರಿಂದ ಆದಷ್ಟು ಬೇಗ ರಾಮನಿಗೆ ಪಟ್ಟಾಭಿಷೇಕ ಮಾಡಿಬಿಡಬೇಕೆಂದು ನಿರ್ಣಯಿಸಿ ಹೀಗೆ ಆತುರಾತುರದಲ್ಲಿ ಕ್ರಮಕ್ಕೈಗೊಂಡೆ'' ಎಂದು. ವಾಸ್ತವವಾಗಿ ರಾಮಾಯಣದಲ್ಲಿ ಮತ್ತು ಪದ್ಯದಲ್ಲಿ 'ರಾಜಾರಿಷ್ಟದ ಪ್ರಸಕ್ತಿ'ಯೂ ಇಲ್ಲ; 'ದುಃಸ್ವಪ್ನದ ಪ್ರಕರಣ'ವೂ ಇಲ್ಲ (ದಶರಥ ತನ್ನ ಯೌವನ ಕಾಲದಲ್ಲಿ ಮಾಡಿದ ಒಂದು ತಪ್ಪಿಗಾಗಿ ಮತ್ತು ಅದನ್ನು ಮರೆಮಾಚಲು ಹಾಗೆ ನಡೆದುಕೊಳ್ಳುತ್ತಾನೆ). ಹೀಗೆ ಹೇಳುವುದರಿಂದ ರಾಮಾಯಣದ ಆ ಸನ್ನಿವೇಶಕ್ಕೆ ತಪ್ಪು ವ್ಯಾಖ್ಯಾನ ಮಾಡಿದಂತಾಗಲಿಲ್ಲವೆ? ತಪ್ಪು ಸಂದೇಶವನ್ನು ಕಳುಹಿಸಿದಂತಾಗಲಿಲ್ಲವೆ? ಕಲಾವಿದರು ಇಂಥದ್ದರ ಬಗ್ಗೆ ಕಿಂಚಿತ್ತೂ ಯೋಚಿಸುವುದಿಲ್ಲ.

ಇನ್ನೊಬ್ಬ ಕಲಾವಿದರು ಕೆರೆಯೊಂದನ್ನು 'ಕೈ'ಯಾಗಿಯೂ, ಕಾಲಾಗಿಯೂ, ಕಣ್ಣಾಗಿಯೂ, ಸಂದರ್ಭ ಬಂದರೆ ಅದನ್ನೇ ಸಮುದ್ರವಾಗಿಯೂ, ನದಿಯಾಗಿಯೂ ಮಾಡಿ, ಅದನ್ನು ವೈಭವೀಕರಿಸಿ, ಉತ್ಪ್ರೇಕ್ಷಿಸಿ ಸದಾ ಅದರಲ್ಲೇ (ಆ ಕೆರೆಯಲ್ಲೇ) ಈಜುತ್ತಾ, ದಡ್ಡ ಪ್ರೇಕ್ಷಕರನ್ನು ತಬ್ಬಿಬ್ಬುಗೊಳಿಸುತ್ತಾ, ದೊಡ್ಡ ಈಜುಗಾರನೆನಿಸಿಕೊಂಡಿದ್ದು ತಾಳಮದ್ದಳೆಯ ವಿಪರ್ಯಾಸದಲ್ಲಿ ಒಂದು. 'ವೀರಮಣಿ ಕಾಳಗ'ದಲ್ಲಿ ವೀರಮಣಿಯು 'ಹರನು ಬ್ರಹ್ಮಾಂಡಕೊಡೆಯ' ಅಂತ ಹೇಳಿದರೆ ಇವರು ಹನುಮಂತನಾಗಿ ''ಹರನು ನಿನಗೆ ಮಾತ್ರ ಒಡೆಯನಲ್ಲ. ನನಗೂ ಒಡೆಯ. ಅವನೇ ಮನೋಹರ'' ಎಂದು ವಿರೋಧಾಭಾಸದ ಮಾತನ್ನಾಡುತ್ತಾರೆ. ವೀರಮಣಿಗೂ ಹನುಮಂತನಿಗೂ ನಡೆಯುವ ವಿಸಂಗತ ಸಂಭಾಷಣೆಯಲ್ಲಿ (ವೀರಮಣಿ ಒಬ್ಬ ಮೂರ್ಖ ಅನ್ನುವುದನ್ನು ಮರೆಯಬಾರದು. 'ಯಾತಕೆಂತುನುಡಿವೆ ಮೂರ್ಖನೆ' ಅಂತ ಪದ್ಯದಲ್ಲೇ ಇದೆ.) ಇವರು ಇಂಥ ಅಬದ್ಧ ಮಾತುಗಳನ್ನಾಡಿದ್ದಕ್ಕೆ ಸಾಕ್ಷಿಯಿದೆ.

ಇನ್ನೊಬ್ಬರು ಶೋಕವೇ ಇಲ್ಲದೆ ಸದಾ ಆನಂದದಲ್ಲಿರುವವರು! ಯಾವುದೇ ಪ್ರಸಂಗ ಇರಲಿ, ಅದರಲ್ಲಿ ಅವರು ಸಪಾದಭಕ್ಷ್ಯ, ಕಾಳುಮೆಣಸು, ಉಪ್ಪಿನಕಾಯಿ, ಹಾಗಲಕಾಯಿ ಗೊಜ್ಜು, ಕೇಸರಿಬಾತು ಮುಂತಾದುವನ್ನು ತಂದು ಮೃಷ್ಟಾನ್ನಭೋಜನ ಮಾಡಿಸುತ್ತಾರೆ. ಇನ್ನೊಬ್ಬ ಮಹನೀಯರು ಯಾವುದೇ ಪಾತ್ರವಿರಲಿ, ಸದಾ ವೈದಿಕ ಪರಿಭಾಷೆಯಲ್ಲೇ ಮಾತನಾಡುತ್ತಾರೆ. ಒಬ್ಬ ಸಂಕ್ಷಿಪ್ತವಾಗಿ, ಇನ್ನೊಬ್ಬ ದೀರ್ಘವಾಗಿ, ಮಗದೊಬ್ಬ ಪರ್ಯಾಯಪದಗಳನ್ನೇ ಉದುರಿಸುತ್ತಾ ಅರ್ಥ ಹೇಳುತ್ತಾನೆ. ಇಂಥವರಿಂದಲೇ ಈ ರಂಗ ತುಂಬಿಕೊಂಡಿದೆ. ಇದರ ಬಗೆಗೆ ಹೇಳಹೋದರೆ ಒಂದು ಪುಸ್ತಕವೇ ಆದೀತು!

ಒಟ್ಟಿನಲ್ಲಿ ಕೊನೆಯದಾಗಿ ಹೇಳುವುದಾದರೆ- ವಿಶ್ವೇಶ್ವರ ಭಟ್ಟರು ತಮ್ಮ ಲೇಖನದಲ್ಲಿ ಅರ್ಥಧಾರಿಗಳನ್ನು 'ಐಟಮ್ ಸಾಂಗ್ ಡಾನ್ಸರ್'ಗಳಂತೆ ಇರುವವರೆಂದು ಹೇಳಿದ್ದರಲ್ಲಿ ಯಾವ ತಪ್ಪೂ ಇಲ್ಲ. ತಾಳಮದ್ದಳೆಯಿಂದು ಸೂತ್ರವಿಲ್ಲದ ಗಾಳಿಪಟದಂತಾಗಿದೆ. ಎಲ್ಲೆಲ್ಲೋ ಹಾರಿ ಎಲ್ಲೆಲ್ಲೋ ಬೀಳುವ ದಯನೀಯ ಪರಿಸ್ಥಿತಿ ಇದರದ್ದು. ಇದು ಸರಿಯಾಗಿ ಹಾರಬೇಕಾದರೆ ಇದಕ್ಕೆ ನಿರ್ದೇಶಕನೆಂಬ ಸೂತ್ರ, ಸೂತ್ರಧಾರಿ ಬೇಕೇ ಬೇಕು. ಅದನ್ನು ಕಾಣುವವರೆಗೆ ಈ ದುರವಸ್ಥೆ ತಪ್ಪಿದ್ದಲ್ಲ.

ಅರ್ಥಧಾರಿಗಳಿಗೆ ಇದರಿಂದ ಸಿಗುವ ಸಂಭಾವನೆ, ಕೀರ್ತಿ, ಪ್ರಸಿದ್ಧಿ ಎಲ್ಲಾ ಬೇಕು. ಇತರರ ತೇಜೋವಧೆಯೂ ಆಗಬೇಕು. ಆದರೆ ಈ ಪವಿತ್ರ, ಸಮೃದ್ಧ ಕಲೆಯ ವಾಚಿಕ ವೈಭವ, ರಸ, ಭಾವ, ಸೌಂದರ್ಯ, ಪೌರಾಣಿಕ ಹಿನ್ನೆಲೆ, ಪಾತ್ರಗಳ ವೈವಿಧ್ಯ, ಪ್ರಸಂಗದ ಸೊಗಸು, ಒಟ್ಟಂದ, ಪ್ರೇಕ್ಷಕರನ್ನು ಮೇಲೆತ್ತುವ ಕೆಲಸ ಯಾವುದೂ ಬೇಡವಾಗಿದೆ.

(ಲೇಖಕರು ಹಿರಿಯ ಸಾಹಿತಿ)

ಚರ್ಚೆಗೆ ಹೀಗೊಂದು ಮುಕ್ತವೇದಿಕೆ

ಕೆಲ ದಿನಗಳಿಂದ ತೀವ್ರ ಚರ್ಚೆಗೆ ಗ್ರಾಸವಾಗುತ್ತಿರುವ ತಾಳಮದ್ದಳೆ ವಿಷಯಕ್ಕೆ ಸಂಬಂಧಿಸಿದಂತೆ ಮುಕ್ತ ಅಭಿಪ್ರಾಯಗಳನ್ನು ಪ್ರಕಟಿಸಲು 'ವಿಶ್ವವಾಣಿ' ವೇದಿಕೆಯಾಗುತ್ತಿದೆ. ಈ ಕುರಿತಾದ ಪರ ಮತ್ತು ವಿರೋಧ ಅಭಿಪ್ರಾಯಗಳನ್ನು 800 ಪದಗಳಿಗೆ ಮಿತಿಗೊಳಿಸಿ ಕಳುಹಿಸಿ.

ಇ-ಮೇಲ್ : vveditoped@gmail.com

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:348

ಸಮಾಚಾರ ಸಣ್ಣದಲ್ಲ

ಶ್ರೀರಾಮಮಂದಿರಕ್ಕೆ ಚಂದ್ರಬಾಬು ಭೇಟಿ

ಅಯೋಧ್ಯೆ: ಉತ್ತರ ಪ್ರದೇಶದಲ್ಲಿನ ಅಯೋಧ್ಯೆಯಲ್ಲಿರುವ ಶ್ರೀರಾಮಲಲ್ಲಾ ಮಂದಿರಕ್ಕೆ ಆಂಧ್ರಪ್ರದೇಶದ ಸಿಎಂ ಎನ್. ಚಂದ್ರಬಾಬು ನಾಯ್ಡು ಭಾನುವಾರ ಭೇಟಿ ನೀಡಿದ್ದಾರೆ. ಬಾಲರಾಮ ಮೂರ್ತಿಯ ದರ್ಶನ ಪಡೆದು ಕೆಲಕಾಲ ಕೈಮುಗಿದು ನಿಂತು ಪ್ರಾರ್ಥನೆ ಮಾಡಿದರು. 3 ಗಂಟೆಗಳ ಕಾಲ ರಾಮಮಂದಿರದಲ್ಲಿಯೇ ನಾಯ್ಡು ಕಾಲ ಕಳೆದರು. ಕಳೆದ ವರ್ಷದ ದೇವಾಲಯದ ಪವಿತ್ರೀಕರಣ ಸಮಾರಂಭದಲ್ಲಿ ಭಾಗವಹಿಸಿದ್ದ ನಾಯ್ಡು, ಆ ನಂತರ ಈಗ ಭೇಟಿ ನೀಡಿ ಶ್ರೀರಾಮಲಲ್ಲಾ ದೇವರ ದರ್ಶನ ಪಡೆದಿದ್ದಾರೆ. ಚಂದ್ರಬಾಬು ನಾಯ್ಡು ಅವರನ್ನು ಉತ್ತರ ಪ್ರದೇಶದ ಅಧಿಕಾರಿಗಳು, ರಾಮ ಮಂದಿರದ ಆಡಳಿತಾಧಿಕಾರಿಗಳು ಮತ್ತು ಸಿಬ್ಬಂದಿ ಸ್ವಾಗತಿಸಿದರು. ಶ್ರೀರಾಮಮಂದಿರಕ್ಕೆ ಭೇಟಿ ನೀಡಿ ಶ್ರೀರಾಮಲಲ್ಲಾನ ದರ್ಶನ ಪಡೆದ ದಕ್ಷಿಣ ಭಾರತದ ಮೊದಲ ಮುಖ್ಯಮಂತ್ರಿ ಎಂಬ ದಾಖಲೆಯೂ ಚಂದ್ರಬಾಬು ನಾಯ್ಡು ಅವರದ್ದಾಗಿದೆ.

ಸೋಮಾಲಿ ಲ್ಯಾಂಡ್ ಸಾರ್ವಭೌಮ ರಾಷ್ಟ್ರ

ಹರ್ಗೀಸಾ: ಸೊಮಾಲಿಲ್ಯಾಂಡ್ ತನ್ನನ್ನು 'ಸ್ವತಂತ್ರ ದೇಶ' ಎಂದು 1991ರಲ್ಲಿ ಘೋಷಿಸಿಕೊಂಡಿದೆ. ಅದರದ್ದೇ ಸ್ವಂತ ಸರಕಾರ, ಸಂವಿಧಾನ, ಕರೆನ್ಸಿ, ಪಾಸ್‌ಪೋರ್ಟ್, ಭದ್ರತಾ ಪಡೆ ಇವೆ. ಆದರೆ, ಯಾವುದೇ

ದೇಶ ಅದು ಸ್ವತಂತ್ರ ದೇಶ ಎಂಬುದನ್ನು ಒಪ್ಪಿ ಕೊಂಡಿರಲಿಲ್ಲ. ಈಗ ಇಸ್ರೇಲ್, ಆಫ್ರಿಕಾ ಖಂಡದ ಸೋಮಾಲಿ ಲ್ಯಾಂಡ್ ಪ್ರದೇಶವನ್ನು ಸ್ವತಂತ್ರ ಮತ್ತು ಸಾರ್ವಭೌಮ ರಾಷ್ಟ್ರ ಎಂದು ಅಧಿಕೃತವಾಗಿ ಘೋಷಿಸಿದೆ. ಆ ಮೂಲಕ 'ಸೋಮಾಲಿ ಲ್ಯಾಂಡ್'ಗೆ ರಾಜತಾಂತ್ರಿಕ ಮಾನ್ಯತೆ ನೀಡಿದ ವಿಶ್ವದ ಮೊದಲ ರಾಷ್ಟ್ರ ಎಂಬ ದಾಖಲೆಗೆ ಇಸ್ರೇಲ್ ಪಾತ್ರವಾಗಿದೆ. ಡಿ.25ರಂದು ನಡೆದ ವರ್ಚುವಲ್ ಸಭೆಯಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಸೋಮಾಲಿ ಲ್ಯಾಂಡ್ ಅಧ್ಯಕ್ಷ ಅಬ್ದಿರಹಮಾನ್ ಮೊಹಮ್ಮದ್ ಅಬ್ದುಲ್ಲಾಹಿ ಅವರು ಪರಸ್ಪರ ಶೇಕ್ ಹ್ಯಾಂಡ್ ಮಾಡುವ ಮೂಲಕ ಈ ಐತಿಹಾಸಿಕ ಮೈತ್ರಿಗೆ ಸಾಕ್ಷಿಯಾದರು. ಇಸ್ರೇಲ್ ಘೋಷಣೆ ಬೆನ್ನಲ್ಲೇ ಸೋಮಾಲಿ ಲ್ಯಾಂಡ್‌ಗೆ ಮಾನ್ಯತೆ ನೀಡುವುದನ್ನು ಅಮೆರಿಕ ವಿರೋಧಿಸಿದೆ. ಆಫ್ರಿಕನ್ ಯೂನಿಯನ್ ಮತ್ತು ಟರ್ಕಿ ಕೂಡಾ ಇಸ್ರೇಲ್ ಕ್ರಮಕ್ಕೆ ವಿರೋಧಿಸಿವೆ. ಕಾನೂನು ಸಮಸ್ಯೆ ಉಲ್ಲೇಖಿಸಿ ಈ ಕ್ರಮವನ್ನು ತಿರಸ್ಕರಿಸಿವೆ. 1991ರಲ್ಲಿ ಸೊಮಾಲಿಯಾ ಬಿಕ್ಕಟ್ಟಿನ ವೇಳೆ ಪ್ರತ್ಯೇಕಗೊಂಡ ಪ್ರದೇಶವೇ ಸೊಮಾಲಿಲ್ಯಾಂಡ್ ಎಂದಾಗಿದೆ.

ಎಸ್‌ಐಆರ್: ಅಸ್ಸಾಂನಲ್ಲಿ 10.56ಲಕ್ಷ ಹೆಸರು ರದ್ದು

ಗುವಾಹಟಿ: ಸದ್ಯದಲ್ಲೇ ರಾಜ್ಯ ವಿಧಾನಸಭೆಗೆ ಚುನಾವಣೆ ಎದುರಿಸಲಿರುವ ಅಸ್ಸಾಂ ರಾಜ್ಯದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್)ಯ ಒಂದು ಹಂತ ಪೂರ್ಣಗೊಂಡಿದ್ದು, ಮತದಾರರ ಪಟ್ಟಿಯಿಂದ 10.56 ಲಕ್ಷ ಹೆಸರುಗಳನ್ನು ಅಳಿಸಲಾಗಿದೆ. ಚುನಾವಣೆ ಆಯೋಗಕ್ಕೆ ನೀಡಿರುವ ನೊಂದಾಯಿತ ವಿಳಾಸದಲ್ಲಿ ವಾಸ ಇರದೇ ಇರುವ ವರು, ಶಾಶ್ವತವಾಗಿ ಸ್ಥಳಾಂತರಗೊಂಡವರು, ಒಂದಕ್ಕಿಂತ ಹೆಚ್ಚು ಮತಕ್ಷೇತ್ರಗಳಲ್ಲಿ ಹೆಸರು ನೋಂದಾಯಿಸಿರುವವರು, ಸೂಕ್ತ ದಾಖಲೆ ಪತ್ರಗಳನ್ನು ಅರ್ಜಿ ಜತೆ ಸಲ್ಲಿಸದವರು ಮತ್ತು ಕಳೆದ ಬಾರಿಯ ಎಸ್‌ಐಆರ್ ನಂತರದಲ್ಲಿ ಮೃತಪಟ್ಟವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ನ.22ರಿಂದ ಡಿ.20ರವರೆಗೆ ಮನೆ-ಮನೆ ಪರಿಶೀಲನೆ ನಡೆಸಿ, ನ.22ರಿಂದ ಡಿ.20ರವರೆಗೆ ವಿಶೇಷ ಪರಿಷ್ಕರಣೆ ಕೈಗೊಂಡು ಕರಡು ಪಟ್ಟಿ ಸಿದ್ಧಪಡಿಸಲಾಗಿದೆ. ಹಳೆಯ ಪಟ್ಟಿ ಪ್ರಕಾರ ರಾಜ್ಯದಲ್ಲಿ 2,51,09,754 ಮತದಾರರಿದ್ದರು. ಅವರಲ್ಲಿ 4,78,992 ಮತದಾರರು ನಿಧನರಾಗಿದ್ದಾರೆ. 5,23,680 ಮತದಾರರು ನೋಂದಾಯಿತ ವಿಳಾಸದಿಂದ ಸ್ಥಳಾಂತರಗೊಂಡಿದ್ದಾರೆ. ಕೆಲವರು 2-3 ಮತ ಕ್ಷೇತ್ರಗಳಲ್ಲಿ ಹೆಸರು ನೋಂದಾಯಿಸಿದ್ದಾರೆ. 93,021 ದಾಖಲೆ ಸಲ್ಲಿಸುವುದಕ್ಕೆ ವಿಫಲರಾಗಿದ್ದು ಅವರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರ ನಾಯಕರಿಗೆ ಮತ್ತೆ ಗೃಹ ಬಂಧನ

ಶ್ರೀನಗರ: ಜಮ್ಮು-ಕಾಶ್ಮೀರದ ರಾಜಕೀಯದಲ್ಲಿ ಮತ್ತೆ ಸಂಚಲನ ಸೃಷ್ಟಿಯಾಗಿದೆ. ಪಿಡಿಪಿ ಅಧ್ಯಕ್ಷೆ-ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ

ಅವರನ್ನು ಗೃಹಬಂಧನದಲ್ಲಿ ಇರಿಸಲಾಗಿದೆ. ವಿದ್ಯಾರ್ಥಿಗಳು ರಾಜ್ಯದಲ್ಲಿ ಸದ್ಯ ಜಾರಿಯಲ್ಲಿರುವ ಮೀಸಲಾತಿ ನೀತಿಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದು, ಮುಫ್ತಿ ಅವರು ಅದಕ್ಕೆ ಬೆಂಬಲ ಘೋಷಿಸಿದ್ದರಿಂದಲೇ ಗೃಹ ಬಂಧನದಲ್ಲಿರಿಸಲಾಗಿದೆ. ಪ್ರತಿಭಟನೆಯಲ್ಲಿ ತಾವೂ ಭಾಗವಹಿಸುವುದಾಗಿ ಮೆಹಬೂಬಾ ಮುಫ್ತಿ ಘೋಷಿಸಿದ್ದರು. ಶಾಂತಿಗೆ ಧಕ್ಕೆಯಾಗಲಿದೆ ಎಂಬ ಕಾರಣಕ್ಕೆ ಅಧಿಕಾರಿಗಳು ಭಾನುವಾರ ಬೆಳಗ್ಗೆಯೇ ಮುಫ್ತಿ ನಿವಾಸಕ್ಕೆ ಭದ್ರತೆ ಹೆಚ್ಚಿಸಿ, ಹೊರಬರದಂತೆ ತಡೆದರು. ಮುಫ್ತಿ ಅವರ ಪುತ್ರಿ ಇಲ್ತಿಜಾ ಮುಫ್ತಿ, ಸಂಸದ ರುಹುಲ್ಲಾ ಮೆಹದಿ ಮತ್ತು ಪಿಡಿಪಿ ನಾಯಕ ವಹೀದ್ ಪಾರಾ ಅವರನ್ನೂ ಗೃಹಬಂಧನದಲ್ಲಿರಿಸಲಾಗಿದೆ. ಒಮರ್ ಅಬ್ದುಲ್ಲಾ ನೇತೃತ್ವದ ಮೈತ್ರಿ ಸರಕಾರದ ವಿರುದ್ಧ ವಿದ್ಯಾರ್ಥಿಗಳ ನೇತೃತ್ವದಲ್ಲಿ ಭಾನುವಾರ ಪ್ರತಿಭಟನೆ ಆಯೋಜಿಸಲಾಗಿತ್ತು.

ವರ್ಷಾಂತ್ಯ ಸುದ್ದಿಗೋಷ್ಠಿ: ಅರೆಸತ್ಯ ಬಾಯ್ಬಿಟ್ಟ ಪಾಕ್ ಉಪ ಪ್ರಧಾನಿ ಇಶಾಕ್ ಧರ್ | ಗುರಿ ಮುಟ್ಟಿದ್ದು 1 ಡ್ರೋನ್

ನೂರ್‌ಖಾನ್ ವಾಯುನೆಲೆಗೆ ಭಾರತ ವೈಮಾನಿಕ ದಾಳಿ ನಿಜ

ಇಸ್ಲಾಮಾಬಾದ್: ಪಾಕಿಸ್ತಾನದ ಉಪ ಪ್ರಧಾನಿ ಇಶಾಖ್ ಧರ್, 2025ನೇ ವರ್ಷಾಂತ್ಯದ ಸುದ್ದಿಗೋಷ್ಠಿಯನ್ನು ಇಸ್ಲಾಮಾಬಾದ್‌ನಲ್ಲಿ ಶನಿವಾರ ನಡೆಸಿದ್ದು, ಭಾರತದ ಸೇನಾಪಡೆಗಳು ಮೇ ತಿಂಗಳಲ್ಲಿ ಕೈಗೊಂಡ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ಕುರಿತು ಕೆಲವು ಸತ್ಯಗಳನ್ನು ಒಪ್ಪಿಕೊಂಡಿದ್ದಾರೆ,

ಕೆಲವು ವಿಚಾರಗಳಲ್ಲಿ ಸುಳ್ಳು ಹೇಳಿದ್ದಾರೆ.

ಮೇ 7ರಿಂದ 10ರವರೆಗೆ ವೈಮಾನಿಕ ದಾಳಿ ನಡೆಸಿದ ಭಾರತದ ವಾಯುಪಡೆಯು ಪಾಕಿಸ್ತಾನದ ರಾವಲ್ ಪಿಂಡಿಯ ಛಕಾಲಾದಲ್ಲಿರುವ 'ನೂರ್‌ಖಾನ್ ವಾಯುನೆಲೆ' ಮೇಲೆ ಗುರಿಯಿಟ್ಟು ಕ್ಷಿಪಣಿಗಳ ದಾಳಿ ನಡೆಸಿತು. ಅಲ್ಲದೇ, 36 ಗಂಟೆಗಳ ಅವಧಿಯಲ್ಲೇ 80ಕ್ಕೂ ಅಧಿಕ ಡ್ರೋನ್‌ಗಳನ್ನು ಪಾಕಿಸ್ತಾನದ ಮೇಲಿನ ದಾಳಿಗೆ ಬಳಸಿಕೊಂಡಿತು. ಅದರಲ್ಲಿ ಒಂದು ಮಾತ್ರ ಸೇನಾನೆಲೆ ಮೇಲೆ ದಾಳಿ ನಡೆಸಿತು. ಉಳಿದ 79 ಡ್ರೋನ್‌ಗಳನ್ನು ಪಾಕ್ ಸೇನೆ ಹೊಡೆದುರುಳಿಸಿತು ಎಂದು ಅರ್ಧ ಸತ್ಯ ಹೇಳಿದ್ದಾರೆ.

ಮೂರು ದಿನಗಳ ಕಾಲ ಭಾರತ ಸತತ ದಾಳಿ ಮಾಡಿದ ಬಳಿಕ ಪ್ರಧಾನಿ ಶೆಹಬಾಜ್ ಷರೀಫ್ ನೇತೃತ್ವದಲ್ಲಿ ಪಾಕಿಸ್ತಾನ ಸರಕಾರ ಮತ್ತು ಸೇನಾಪಡೆಗಳ ಮುಖ್ಯಸ್ಥರು ಮೇ 9ರ ರಾತ್ರಿ ಸಭೆ ಸೇರಿ ಭಾರತಕ್ಕೆ ಹೇಗೆಲ್ಲಾ ಪ್ರತ್ಯುತ್ತರ ನೀಡಬಹುದೆಂದು ಚರ್ಚಿಸಿದೆವು. ನಾವೂ ಕೂಡಾ ಪ್ರಬಲ ರೀತಿಯಲ್ಲಿ ವೈಮಾನಿಕ ದಾಳಿ ನಡೆಸಬೇಕೆಂದು ರಾತ್ರಿ 1ರ ವೇಳೆಗೆ ನಿರ್ಧರಿಸಿದೆವು ಎಂದರು. ನಾವು ಭಾರತದ ಮೇಲೆ 4 ಗಂಟೆ ಬಳಿಕ ದಾಳಿ ನಡೆಸುವುದೆಂದು ಅಂದುಕೊಂಡಿದ್ದೆವು. ಆದರೆ, ನಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ವೇಳೆಗೇ ಭಾರತ ನೂರ್‌ಖಾನ್ ವಾಯುನೆಲೆ ಮೇಲೆ ಮೇ 10ರ ಮುಂಜಾನೆ 3 ಗಂಟೆಗೇ ತೀವ್ರ ಸ್ವರೂಪದಲ್ಲಿ ವೈಮಾನಿಕ ದಾಳಿ ನಡೆಸಿತು. ಆ ದಾಳಿಯಿಂದ ನೂರ್‌ಖಾನ್ ವಾಯುನೆಲೆಗೆ ಸಣ್ಣ ಪ್ರಮಾಣದ ಹಾನಿ ಆಗಿದ್ದು ನಿಜ. ಮುಷಾಫ್, ಭೊಲಾರಿ ಮತ್ತಿತರ ಕಡೆಗಳಲ್ಲಿನ ವಾಯುನೆಲೆಗಳಲ್ಲಿಯೂ ಭಾರತ ದಾಳಿ ನಡೆಸಿತು. ನಮ್ಮ ಸೇನಾಪಡೆಗಳ ವಿವಿಧ ನೆಲೆಗಳಲ್ಲಿ ಅಲ್ಪ ಪ್ರಮಾಣದ ಹಾನಿಯಾಯಿತು. ಕೆಲ ಯೋಧರು ಗಾಯಗೊಂಡರು ಎಂದು ಅರೆಬರೆ ಸತ್ಯವನ್ನಷ್ಟೇ ಹೊರಹಾಕಿದ್ದಾರೆ.

ಅಷ್ಟರಲ್ಲೇ ಸೌದಿ ಅರೇಬಿಯಾದ ಪ್ರಿನ್ಸ್ ಪ್ರಧಾನಿ ಶೆಹಬಾಜ್ ಅವರಿಗೆ ಕರೆ ಮಾಡಿ, ತಾವು ಮಧ್ಯಪ್ರವೇಶಿಸಬಹುದೇ ಎಂದು ಕೇಳಿದರು. ನಾವು ಅವರ ಆಯ್ಕೆಗೇ ಬಿಟ್ಟೆವು. ಅವರು ವಾಷಿಂಗ್ಟನ್‌ಗೆ ಕರೆ ಮಾಡಿ ವಸ್ತುಸ್ಥಿತಿ ತಿಳಿಸಿದರು. ಬಳಿಕ ಮೇ 10ರಂದು ಅಮೆರಿಕದ ವಿದೇಶಾಂಗ ಇಲಾಖೆ, ಭಾರತದ ವಿದೇಶಾಂಗ ಸಚಿವರಿಗೆ ಕರೆ ಮಾಡಿ ಮಾತನಾಡಿದರು. ಅಲ್ಲಿಗೆ ಕೊನೆಗೊಂಡಿತು ಎಂದು ಇಶಾಕ್ ಧರ್ ಹೇಳಿದರು. ನಮ್ಮ ವಾಯುಪಡೆ ಭಾರತದ ಹಲವು ವಿಮಾನಗಳನ್ನೂ ಹೊಡೆದುರುಳಿಸಿತು ಎಂಬ ದೊಡ್ಡ ಸುಳ್ಳನ್ನೂ ಇಶಾಕ್ ಧರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪಾಕ್‌ನ ಭೋಲಾರಿ ವಾಯುನೆಲೆಯ ಚಿತ್ರ, ದಾಳಿಗೆ ಮುನ್ನ-ನಂತರದ ಹೋಲಿಕೆ.

ಸೇನೆ ನನಗೆ ಬಂಕರ್‌ನಲ್ಲಿ ಅಡಗಿಕೊಳ್ಳಲು ಹೇಳಿತ್ತು



'ಭಾರತ ಮೇ 7ರಿಂದ 10ರವರೆಗೆ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ನಡೆಸಿದಾಗ ನಮ್ಮ ಸೇನಾಪಡೆಯೇ ನನ್ನನ್ನು ಸುರಕ್ಷತೆಗಾಗಿ ಬಂಕರ್‌ನಲ್ಲಿ ಅಡಗಿಕೊಳ್ಳುವಂತೆ ಹೇಳಿತ್ತು' ಎಂದು ಪಾಕ್ ಅಧ್ಯಕ್ಷ ಆಸಿಫ್ ಆಲಿ ಝರ್ದಾರಿ ತಮ್ಮ ಪತ್ನಿ ಬೆನಜೀರ್ ಭುಟ್ಟೊ ಸ್ಮರಣೆಯ ಕಾರ್ಯಕ್ರಮದಲ್ಲಿ ಹೇಳಿಕೊಂಡಿದ್ದಾರೆ. 'ಆದರೆ ನಾನು ಸೇನೆಯ ಸಲಹೆಯನ್ನು ನಿರಾಕರಿಸಿದೆ' ಎಂದೂ ಹೇಳಿದ್ದಾರೆ. ಭಾರತ ಆರ್ಥಿಕವಾಗಿ ಬಲಿಷ್ಠವಾಗಿರಬಹುದು, ಗಾತ್ರದಲ್ಲಿ ದೊಡ್ಡದಾಗಿರಬಹುದು. ಆದರೆ, ಪಾಕ್ ಮೇಲೆ ಯುದ್ಧ ಮಾಡುವ ಧೈರ್ಯ ಆ ದೇಶಕ್ಕಿಲ್ಲ' ಎಂದೂ ಜಂಬ ಕೊಚ್ಚಿಕೊಂಡಿದ್ದಾರೆ.

138 ಯೋಧರ ಸಾವು: ಇಶಾಕ್ ದೊಡ್ಡ ಸುಳ್ಳ

ದೆಹಲಿ: ಇಶಾಕ್ ಧರ್ ಸದಾ ಸುಳ್ಳು ಹೇಳುವ ವ್ಯಕ್ತಿ. ಆದರೆ, ಶನಿವಾರದ ಸುದ್ದಿಗೋಷ್ಠಿಯಲ್ಲಿ ಆಪರೇಷನ್ ಸಿಂಧೂರ ಕುರಿತು ಕೆಲವು ಸತ್ಯಗಳನ್ನೂ ಒಪ್ಪಿಕೊಂಡಿದ್ದಾನೆ.

ನೂರ್‌ಖಾನ್ ವಾಯುನೆಲೆಗೆ ಭಾರತದ ವೈಮಾನಿಕ ದಾಳಿ ಆಗಿದ್ದು ನಿಜ. ಆದರೆ, ಅಲ್ಪ ಹಾನಿಯಾಗಿದೆ, ಕೆಲ ಸೈನಿಕರು ಗಾಯ ಗೊಂಡರು ಎಂದಿದ್ದಾನೆ. ಈಗಾಲಾದರೂ ಸತ್ಯದ ಒಂದು ಅಂಶವನ್ನಾದರೂ ಒಪ್ಪಿಕೊಂಡಿದ್ದಾನಲ್ಲಾ ಎಂಬುದು ಗಮನಿಸಬೇಕಾದ ಅಂಶ ಎಂದು ಭಾರತೀಯ ಸೇನೆಯ ನಿವೃತ್ತ ಲೆಫ್ಟಿನೆಂಟ್ ಜನರಲ್ ಕೆ.ಜೆ.ಎಸ್.ಧಿಲ್ಲೋನ್ ಭಾನುವಾರ ಹೇಳಿದ್ದಾರೆ.

'ರಾವಲ್‌ಪಿಂಡಿ ವಾಯುನೆಲೆ ಮೇಲೆ ಭಾರತ 80 ಡ್ರೋನ್ ಹಾರಿಸಿತ್ತು. 79 ಅನ್ನು ಹೊಡೆದುರುಳಿಸಿದೆವು' ಎಂಬ ಇಶಾಕ್ ಹೇಳಿಕೆ ಮಾತ್ರ ಶುದ್ಧ ಸುಳ್ಳು ಎಂದು ಧಿಲ್ಲೋನ್ ದೃಢವಾಗಿ ಹೇಳಿದ್ದಾರೆ.

ಪಾಕಿಸ್ತಾನದ 'ಸಮಾ ಟಿವಿ'ಯ ವೆಬ್‌ಸೈಟ್‌ನಲ್ಲೇ 'ಆಪರೇಷನ್ ಸಿಂಧೂರ್' ವೇಳೆ ಭಾರತದ ದಾಳಿಯಿಂದ 138 ಯೋಧರು ಹುತಾತ್ಮರಾಗಿದ್ದು, ಅವರಿಗೆಲ್ಲಾ ಮರಣೋತ್ತರ ಪದಕಗಳನ್ನು ಪ್ರದಾನ ಮಾಡಲಾಗಿದೆ ಎಂದು ಆ.14ರಂದೇ(ಪಾಕ್ ಸ್ವಾತಂತ್ರ್ಯ ದಿನ) ಪ್ರಕಟಿಸಲಾಗಿದೆ. ಯೋಧರೇ 138 ಮಂದಿ ಹುತಾತ್ಮರಾಗಿದ್ದಾರೆ ಎನ್ನುವುದಾದರೆ, ಉಳಿದಂತೆ ಉಗ್ರರು ಸೇರಿ ಕನಿಷ್ಠ 400-500 ಜನರಾದರೂ ಆಪರೇಷನ್ ಸಿಂಧೂರ್ ವೇಳೆ ಹತರಾಗಿದ್ದಾರೆ ಎನ್ನಬಹುದಾಗಿದೆ ಎಂದೂ ಧಿಲ್ಲೋನ್ ವಿಶ್ಲೇಷಣೆ ಮಾಡಿದ್ದಾರೆ. ವಾಸ್ತವದಲ್ಲಿ ಪಾಕ್‌ನ 11 ವಾಯುನೆಲೆಗಳಿಗೆ ಆಪರೇಷನ್ ಸಿಂಧೂರ್ ವೇಳೆ ಹಾನಿಯಾಗಿದೆ. ನೂರ್‌ಖಾನ್ ವಾಯುನೆಲೆಯಂತೂ ಹೊತ್ತಿ ಉರಿದಿದ್ದು, ತೀವ್ರ ಸ್ವರೂಪದಲ್ಲಿ ಹಾನಿಗೊಳಗಾಗಿದೆ ಎಂದು ಧಿಲ್ಲೋನ್ ದೃಢವಾಗಿ ಹೇಳಿದರು. ಆದರೆ, ಇಶಾಕ್ ಧರ್ ಸುಳ್ಳು ಹೇಳುವುದನ್ನೆಂದೂ ಬಿಡುವುದಿಲ್ಲ ಎಂದು ವ್ಯಂಗ್ಯವಾಡಿದರು. ಧಿಲ್ಲೋನ್, 'ಆಪರೇಷನ್ ಸಿಂಧೂರ್: ದ ಅನ್‌ಟೋಲ್ಡ್ ಸ್ಟೋರಿ ಆಫ್ ಇಂಡಿಯಾಸ್ ಡೀಪ್ ಸ್ಟ್ರೈಕ್ ಇನ್‌ಸೈಡ್ ಪಾಕಿಸ್ತಾನ' ಕೃತಿಯನ್ನೂ ರಚಿಸಿದ್ದಾರೆ ಎಂಬುದು ಉಲ್ಲೇಖಾರ್ಹ.

ಎನ್‌ಎಲ್‌ಡಿ ಮಾನ್ಯತೆ ರದ್ದು | ಸೆರೆವಾಸದಲ್ಲಿ ಸೂ ಕಿ | 22 ಸಾವಿರ ರಾಜಕೀಯ ಖೈದಿಗಳು

ಮ್ಯಾನ್ಮಾರ್‌ನಲ್ಲಿ ಚುನಾವಣೆ ಎಂಬ ಪ್ರಹಸನ

ನೈಪ್ಯೆದಾ: ಶತಮಾನ ಹಿಂದೆ ಭಾರತದ ಭಾಗವೇ ಆಗಿದ್ದ ಬರ್ಮಾ ಬಳಿಕ ಪ್ರತ್ಯೇಕಗೊಂಡಿತು. ದಶಕಗಳ ಹಿಂದೆಯೇ ಮ್ಯಾನ್ಮಾರ್ ಆಗಿ ಹೆಸರು ಬದಲಿಸಿಕೊಂಡು ಸದ್ಯ ನಾಲ್ಕೂವರೆ ವರ್ಷಗಳಿಂದ ಸೇನೆಯ ಆಡಳಿತದಲ್ಲಿದೆ.

ಪಿಪಿ ಪಕ್ಷದ ನಾಯಕ ಕೊಕೊ ಗೈ

ಮರಳಿ ಪ್ರಜಾಪ್ರಭುತ್ವದೆಡೆ ಮುಖ ಮಾಡಿರುವ 'ಬೌದ್ಧ ಧರ್ಮೀಯರೇ ಅಧಿಕ'ವಾಗಿರುವ ದೇಶ ಮ್ಯಾನ್ಮಾರ್‌ನಲ್ಲಿ ಭಾನುವಾರ ಕಡೆಗೂ ಚುನಾವಣೆ ನಡೆದಿದೆ. 3 ಹಂತಗಳಲ್ಲಿ ನಡೆಯಬೇಕಿರುವ ಮತದಾನದ ಮೊದಲ ಹಂತ ಭಾನುವಾರ ಜರುಗಿದ್ದು, ಸೇನಾಪಡೆಗಳ ಮುಖ್ಯಸ್ಥ ಮಿನ್ ಆಂಗ್ ಹಯಾಂಗ್ ಸೇರಿದಂತೆ ಹಲವು ಕ್ಷೇತ್ರಗಳ ಜನತೆ ಶಾಂತರೀತಿಯಿಂದ ಮತದಾನ ಮಾಡಿದ್ದಾರೆ.

2020ರಲ್ಲಿ ಪ್ರಜಾಪ್ರಭುತ್ವದ ಮಾರ್ಗದಲ್ಲೇ ನಡೆದಿದ್ದ ಚುನಾವಣೆಯಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆಯಾಗಿದ್ದ ಆಂಗ್‌ಸಾನ್ ಸೂಕಿ ನೇತೃತ್ವದ 'ನ್ಯಾಷನಲ್ ಲೀಗ್ ಫಾರ್ ಡೆಮಾಕ್ರೆಸಿ'(ಎನ್‌ಎಲ್‌ಡಿ) ಪಕ್ಷ ಬಹುಮತ ಗಳಿಸಿದ್ದು, ದೇಶದ ಪ್ರಧಾನಿ ಹುದ್ದೆಗೆ ಸೂ ಕಿ ಅವರೇ ಆಯ್ಕೆಯಾಗಿದ್ದರು. ಆನಂತರದ ಒಂದು ವರ್ಷದಲ್ಲೇ(2021) ಕ್ಷಿಪ್ರಗತಿಯಲ್ಲಿ ನಡೆದ ಸೇನಾ ದಂಗೆಯಲ್ಲಿ ಸೂ ಕಿ ಅಧಿಕಾರ ಮೊಟಕುಗೊಂಡಿತು. ದೇಶದಲ್ಲಿ ಸೇನೆಯ ಆಡಳಿತ ಶುರುವಾಯಿತು. ಸೂ ಕಿ ಮತ್ತೊಮ್ಮೆ ಜೈಲು ಸೇರಬೇಕಾಯಿತು. ಅವರ ಎನ್‌ಎಲ್‌ಡಿ ಪಕ್ಷದ ಮಾನ್ಯತೆಯನ್ನೂ ರದ್ದುಗೊಳಿಸಲಾಯಿತು.

5 ವರ್ಷಗಳ ಬಳಿಕ ಈಗ ಮತ್ತೊಮ್ಮೆ ಚುನಾವಣೆ ನಡೆಯುತ್ತಿದ್ದು, ದೇಶದ 330 ಟೌನ್‌ಷಿಪ್‌ಗಳಲ್ಲಿ ಭಾನುವಾರ ಬಿಗಿಭದ್ರತೆಯ ಮಧ್ಯೆ ಮತದಾನವಾಗಿದೆ. ಭಾನುವಾರ ಬೆಳಗ್ಗೆ 6 ಗಂಟೆಗೇ ಮತಕೇಂದ್ರಗಳು ಕಾರ್ಯಾರಂಭ ಮಾಡಿದ್ದು, ನಿಧಾನಗತಿಯಲ್ಲಿ ಮತದಾನ ನಡೆಯಿತು. 2 ಮತ್ತು 3ನೇ ಹಂತದ ಮತದಾನ ಹೊಸ ವರ್ಷದ ಜ.11 ಮತ್ತು 25ರಂದು ನಡೆಯಲಿದೆ. ಈ ಮಧ್ಯೆ, 65 ಟೌನ್‌ಷಿಪ್‌ಗಳಲ್ಲಿ ಮತದಾನ ರದ್ದುಗೊಳಿಸಲಾಗಿದೆ.

ಸಮವಸ್ತ್ರ ಧರಿಸದೇ ಮತಗಟ್ಟೆಗೆ ಭಾನುವಾರ ಬೆಳಗ್ಗೆ ಬಂದ ಮ್ಯಾನ್ಮಾರ್ ಸೇನಾಪಡೆಗಳ ಮುಖ್ಯಸ್ಥ ಮಿನ್ ಆಂಗ್ ಹಯಾಂಗ್, ಮತದಾನ ಮಾಡಿದ್ದಕ್ಕೆ ಸಾಕ್ಷಿಯಾಗಿ ಶಾಯಿ ಹಚ್ಚಿದ ಕಿರುಬೆರಳು ಎತ್ತಿ ತೋರಿದ್ದಾರೆ.

ಯುಎಸ್‌ಡಿಪಿ ಗೆಲ್ಲುವ ಸಾಧ್ಯತೆ

'ಎನ್‌ಎಲ್‌ಡಿ' ಪಕ್ಷದ ಮಾನ್ಯತೆ ರದ್ದಾಗಿರುವುದರಿಂದ ಈ ಚುನಾವಣೆಯಲ್ಲಿ ಸ್ಪರ್ಧೆಯಲ್ಲಿಲ್ಲ. ಸೇನೆಯ ಬೆಂಬಲ ಹೊಂದಿರುವ 'ಯೂನಿಯನ್ ಸಾಲಿಡಾರಿಟಿ ಅಂಡ್ ಡೆವಲಪ್‌ಮೆಂಟ್ ಪಾರ್ಟಿ'(ಯುಎಸ್‌ಡಿಪಿ) ಬಿಟ್ಟರೆ ಕೊ ಕೊ ಗೈ ನೇತೃತ್ವದ 'ಪೀಪಲ್ಸ್ ಪಯನೀರ್ ಪಾರ್ಟಿ'(ಪಿಪಿಪಿ) ಚುನಾವಣಾ ಕಣದಲ್ಲಿದೆ. ಸದ್ಯ ಎನ್‌ಎಲ್‌ಡಿ ಪಕ್ಷದ ನಾಯಕರು, ಕಾರ್ಯಕರ್ತರು ಸೇರಿದಂತೆ 22 ಸಾವಿರ ಮಂದಿಯನ್ನು ರಾಜಕೀಯ ಕೈದಿಗಳನ್ನಾಗಿಸಿ ಸೆರೆಯಲ್ಲಿಡಲಾಗಿದೆ. 'ಎನ್‌ಎಲ್‌ಡಿ' ಪಕ್ಷದ ಗೈರಿನಲ್ಲಿ ಮ್ಯಾನ್ಮಾರ್ ಮತದಾರರಿಗೆ ತಮ್ಮಿಷ್ಟದ ಪಕ್ಷವನ್ನು ಅಧಿಕಾರಕ್ಕೆ ತರಲು ಆಯ್ಕೆಗೆ ಹೆಚ್ಚು ಅವಕಾಶಗಳಿಲ್ಲದಂತಾಗಿದೆ. ಹಾಗಾಗಿ ಸದ್ಯ ನಡೆದಿರುವ ಚುನಾವಣೆಯಲ್ಲಿ ಸೇನೆಯ ಪರವಾಗಿರುವ 'ಯೂನಿಯನ್ ಸಾಲಿಡಾರಿಟಿ ಅಂಡ್ ಡೆವಲಪ್‌ಮೆಂಟ್ ಪಾರ್ಟಿ'(ಯುಎಸ್‌ಡಿಪಿ)ಯೇ ಗೆದ್ದು ಅಧಿಕಾರಕ್ಕೇರುವ ಸಾಧ್ಯತೆ ಇದೆ ಎನ್ನಲಾಗಿದೆ.

ಮೋದಿ ವರ್ಷದ ಕಡೆಯ 'ಮನ್ ಕಿ ಬಾತ್' ಆಪರೇಷನ್ ಸಿಂಧೂರ್, ಕ್ರಿಕೆಟ್ ಉಲ್ಲೇಖ

ದೇಶದ ಯುವ ನಾಯಕರ ಜತೆ ಸಂವಾದಕ್ಕಾಗಿ ಕಾತುರ

ದೆಹಲಿ: 'ವಿಕಸಿತ ಭಾರತ' ಅಭಿಯಾನದಲ್ಲಿ 'ಯುವ ನಾಯಕರ ಜತೆಗಿನ ಸಂವಾದ 2.0'ಗಾಗಿ ಬಹಳ ನಿರೀಕ್ಷೆಗಳೊಂದಿಗೆ ಕಾಯುತ್ತಿರುವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ರೇಡಿಯೊದಲ್ಲಿ ಪ್ರಸಾರವಾದ ವರ್ಷದ ಕೊನೆಯ 'ಮನ್ ಕಿ ಬಾತ್'ನಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ), ದುಬೈನಲ್ಲಿ ಕಂಡುಬರುವ ಕನ್ನಡಾಭಿಮಾನ, ಆಪರೇಷನ್ ಸಿಂಧೂರ್, ಕ್ರಿಕೆಟ್, ಶುಭಾಂಶು ಶುಕ್ಲಾ ಸಾಧನೆಗಳ ಕುರಿತು ಪ್ರಧಾನಿ ಮೋದಿ ಮಾತನಾಡಿದ್ದಾರೆ.

ಹೊಸ ವರ್ಷದಲ್ಲಿ 'ಯುವ ನಾಯಕರ ಜತೆಗಿನ ಸಂವಾದ 2.0' ದೆಹಲಿಯಲ್ಲಿನ ಭಾರತ್ ಮಂಟಪಂನಲ್ಲಿ ಜ.10ರಿಂದ 12ರವರೆಗೆ ನಡೆಯಲಿದೆ. ಅದರಲ್ಲಿ ಭಾಗಿಯಾಗಲು ಕಾತುರದಿಂದ ಕಾಯುತ್ತಿರುವೆ ಎಂದು ಮೋದಿ ಹೇಳಿದ್ದಾರೆ. ಜ.12ರಂದು ಸ್ವಾಮಿ ವಿವೇಕಾನಂದರ ಜನ್ಮ ದಿನ ಆಚರಣೆ. ಅಂದು ರಾಷ್ಟ್ರೀಯ ಯುವ ದಿನ ಆಚರಿಸಲಾಗುವುದು. ಅದೇ ದಿನ ಯುವ ನಾಯಕರ ಸಂವಾದವನ್ನು ಸಹ ಆಯೋಜಿಸಲಾಗಿದೆ ಎಂದಿದ್ದಾರೆ. ರಾಷ್ಟ್ರೀಯ ಭದ್ರತೆ ವಿಚಾರದಿಂದ ಕ್ರೀಡಾ ಕ್ಷೇತ್ರದ ಸಾಧನೆವರೆಗೆ, ವಿಜ್ಞಾನದ ಪ್ರಯೋಗಾಲಯಗಳಿಂದ ವಿಶ್ವದ ಅತಿದೊಡ್ಡ ವೇದಿಕೆಗಳವರೆಗೆ ಭಾರತದ ದೊಡ್ಡ ಹೆಜ್ಜೆಗುರುತುಗಳು ಮೂಡಿವೆ. ಹೀಗೆ, 2025ನೇ ಸಾಲಿನಲ್ಲಿ ಪ್ರತಿ ಭಾರತೀಯನೂ ಹೆಮ್ಮೆಪಡುವ ಹಲವು ಕ್ಷಣಗಳನ್ನು ನಮಗೆ ಸಿಕ್ಕಿವೆ ಎಂದು ದೇಶವಾಸಿಗಳು ಸಂಭ್ರಮಿಸಬೇಕಾದ ಕುರಿತು ಗಮನ ಸೆಳೆದರು.

ಆಪರೇಷನ್ ಸಿಂಧೂರ್ ಪ್ರತಿ ಭಾರತೀಯನ ಹೆಮ್ಮೆಯ ಸಂಕೇತ. ಭಾರತ ಭದ್ರತೆ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಇಡೀ ಜಗತ್ತು ಕಂಡಿದೆ. ವಂದೇ ಮಾತರಂ 150 ವರ್ಷಗಳನ್ನು ಪೂರೈಸಿದಾಗಲೂ ಇದೇ ಭಾವನೆ ಒಡಮೂಡಿದೆ ಎಂದು ಮೋದಿ ಹೇಳಿದ್ದಾರೆ,ಪುರುಷರ ಕ್ರಿಕೆಟ್ ತಂಡ ಐಸಿಸಿ ಚಾಂಪಿಯನ್ಸ್ ಟ್ರೋಫಿ ಗೆದ್ದಿದೆ. ಮಹಿಳಾ ಕ್ರಿಕೆಟ್ ತಂಡ ಮೊದಲ ಬಾರಿಗೆ ವಿಶ್ವಕಪ್ ಗೆದ್ದು ದೇಶದ ಕೀರ್ತಿ ಪತಾಕೆ ಹಾರಿಸಿದೆ ಎಂದರು.

ತಮಿಳು ಕರಕಲಂ

ವಾರಾಣಸಿಯಲ್ಲಿ ನಡೆದ 'ಕಾಶಿ ತಮಿಳು ಸಮಾಗಮ' ಸಂದರ್ಭ ತಮಿಳು ಕಲಿಕೆಗೆ ವಿಶೇಷ ಒತ್ತು ನೀಡಲಾಯಿತು. ತಮಿಳು ಕಲಿಯಿರಿ - ತಮಿಳು ಕರಕಲಂ' ಎಂಬ ವಿಷಯದಡಿ ವಾರಣಾಸಿಯ 50ಕ್ಕೂ ಹೆಚ್ಚು ಶಾಲೆಗಳಲ್ಲಿ ವಿಶೇಷ ಅಭಿಯಾನ ನಡೆಸಲಾಯಿತು. ತಮಿಳು ವಿಶ್ವದ ಅತ್ಯಂತ ಹಳೆಯ ಭಾಷೆ. ಇಂದು, ದೇಶದ ಇತರ ಭಾಗಗಳಲ್ಲಿ, ಯುವಕರು ಮತ್ತು ಮಕ್ಕಳಲ್ಲಿ ತಮಿಳು ಕಡೆಗೆ ಹೊಸ ಆಕರ್ಷಣೆ ಕಾಣುತ್ತಿದೆ ಎಂದು ನನಗೆ ಸಂತೋಷವಾಗಿದೆ. ಇದು ಭಾಷೆಯ ಶಕ್ತಿ. ಇದು ಭಾರತದ ಏಕತೆ ಎಂದರು.

ಚೀನಾ ಗಡಿಯಲ್ಲಿ ಭಾರತದ ನಾರಿಯರ ಕಟ್ಟೆಚ್ಚರ ಕಾವಲು

ಭಾರತ-ಚೀನಾದ ಗಡಿ ಭಾಗದ ಕಾವಲು 'ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್'(ಐಟಿಬಿಪಿ) ಕರ್ತವ್ಯವಾಗಿದೆ. ಈವರೆಗೂ ಐಟಿಬಿಪಿಯ ಪುರುಷ ಸಿಬ್ಬಂದಿಗಳೇ ಈ ಕರ್ತವ್ಯ ನಿರ್ವಹಿಸು ತ್ತಿದ್ದರು. ಇದೇ ಮೊದಲ ಬಾರಿಗೆ 'ಮಹಿಳಾ ಬೆಟಾಲಿಯನ್' ನಿಯೋಜನೆ ಮಾಡಲಾಗಿದೆ. ಐಟಿಬಿಪಿ 10 ಮಹಿಳಾ ಬೆಟಾಲಿಯನ್‌ನ 4 ಸಾವಿರ ಕಾನ್‌ಸ್ಟೆಬಲ್‌ಗಳು ಮತ್ತು ಅಧಿಕಾರಿಗಳು ಹಿಮಚ್ಛಾಧಿತ ಭಾರತ-ಚೀನಾ ಗಡಿ ಪ್ರದೇಶದಲ್ಲಿ ಲಡಾಕ್, ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ ಭಾಗದಲ್ಲಿ ಗಡಿ ಕಾಯುವ ಕೆಲಸ ಮಾಡಲಿದ್ದಾರೆ.

32 ಗಡಿ ಠಾಣೆಗಳ ಉದ್ದಕ್ಕೂ ಪುರುಷ ಐಟಿಬಿಪಿ ಸಿಬ್ಬಂದಿಗೆ ಸಮಾನ ರೀತಿ ಯಲ್ಲೇ ಗಡಿಯ ಉದ್ದಕ್ಕೂ ಹೆಜ್ಜೆ ಹಾಕುತ್ತಾ, ಕಾವಲು ಕಾಯುವ ಕೆಲಸ ಮಾಡಲಿದ್ದಾರೆ. ಅವರಿಗಾಗಿಯೇ 'ವಾಸ್ತವ ಗಡಿ ರೇಖೆ'(ಎಲ್‌ಎಸಿ) ಬಳಿ 32 ಮಹಿಳಾ ಬ್ಯಾರಕ್‌ಗಳನ್ನು ವಿಶೇಷ ರೀತಿಯಲ್ಲಿ ರಚಿಸಿಕೊಡಲಾಗಿದೆ. ಈ ಬ್ಯಾರಕ್‌ಗಳಲ್ಲಿ ಡಾರ್ಮಿಟರಿ ರೀತಿಯಲ್ಲಿ ಮಲಗಲು ವ್ಯವಸ್ಥೆ, 2-3 ಮಂದಿ ಲೆಕ್ಕದಲ್ಲಿ ಹಂಚಿಕೊಳ್ಳಬಹುದಾದ ಕೊಠಡಿಗಳು, ಪ್ರತಿ ಕಟ್ಟಡದಲ್ಲೂ 30 ಮಹಿಳೆಯರು ತಂಗಲು ಸ್ಥಳಾವಕಾಶ, ಅಡುಗೆ ಕೋಣೆ, ಆಧುನಿಕ ಶೈಲಿ ಸ್ನಾನಗೃಹಗಳು, ಸೌರಶಕ್ತಿ ಫಲಕಗಳಿಂದ ವಿದ್ಯುತ್ ಉತ್ಪಾದನೆ ವ್ಯವಸ್ಥೆ ಎಲ್ಲವನ್ನೂ ಒಳಗೊಂಡಿರುತ್ತದೆ.

ಅಸ್ಸಾಂನಲ್ಲಿ ಬಾಂಗ್ಲಾದೇಶಿ ಮುಸ್ಲಿಂ ಸಂಖ್ಯೆ ಶೇ.40ಕ್ಕೆ!

ಅಸ್ಸಾಂ: ಸ್ಥಳೀಯ ಸಮುದಾಯಗಳ ಸಂಖ್ಯೆ, ರಾಜ್ಯದ ಒಟ್ಟು ಜನಸಂಖ್ಯೆಯ ಶೇ.60ಕ್ಕಿಂತ ಕಡಿಮೆ ಇರುವ ಯಾವುದೇ ರಾಜ್ಯ ಜಗತ್ತಿನಲ್ಲಿಲ್ಲ. ಆದರೆ, ಕೆಲ ವರ್ಷಗಳಲ್ಲೇ ಅಸ್ಸಾಂ ರಾಜ್ಯ ಆ

ಪಟ್ಟಿಗೆ ಮೊದಲಿಗನಾಗಿ ಸೇರಿಕೊಳ್ಳಲಿದೆ. ಏಕೆಂದರೆ, 2027ರಲ್ಲಿ ಜನಗಣತಿ ವರದಿ ಪ್ರಕಟವಾದಾಗ ಅಸ್ಸಾಂನಲ್ಲಿ ಅಕ್ರಮ ವಲಸಿಗ ಬಾಂಗ್ಲಾದೇಶಿ ಮುಸ್ಲಿಮರ ಸಂಖ್ಯೆಯೇ ಶೇ.40ಕ್ಕೆ ಮುಟ್ಟಿರುತ್ತದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಕಳವಳ ವ್ಯಕ್ತಪಡಿಸಿದ್ದಾರೆ.

ಗುವಾಹಟಿಯಲ್ಲಿ ಪಕ್ಷದ ಕಾರ್ಯಕ್ರಮದಲ್ಲಿ ಮಾತನಾಡಿದ ಶರ್ಮಾ, ನಾನು 'ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್' ಮೂಲಕ ವಿದ್ಯಾರ್ಥಿ ರಾಜಕೀಯಕ್ಕೆ ಸೇರಿದಾಗ ಅಸ್ಸಾಂನಲ್ಲಿ ಬಾಂಗ್ಲಾದೇಶಿ ಮುಸ್ಲಿಂ ಸಂಖ್ಯೆ ಶೇ.21ರಷ್ಟಿತ್ತು. 2011ರ ಜನಗಣತಿ ವೇಳೆಗೆ ಶೇ. 34ಕ್ಕೇರಿತು. 2027ರ ಜನಗಣತಿ ವರದಿ ಪ್ರಕಟವಾಗುವ ವೇಳೆಗೆ ಬಾಂಗ್ಲಾದೇಶಿ ಮುಸ್ಲಿಮರ ಸಂಖ್ಯೆಯೇ ಶೇ.40ಕ್ಕೆ ಮುಟ್ಟಿರುತ್ತದೆ. ಅದೇ ವೇಳೆ, ಮೂಲ ಅಸ್ಸಾಮಿ ಜನತೆ ತಮ್ಮ ಸಂಖ್ಯೆ ಶೇ.30-35ಕ್ಕೆ ಕುಸಿಯುವುದನ್ನು ಈಗಿನ ಪೀಳಿಗೆಯೇ ನೋಡಲಿದೆ ಎಂದು ಆತಂಕ ತೋಡಿಕೊಂಡರು.

ಕಾಂಗ್ರೆಸ್‌ನ ದೌರ್ಬಲ್ಯ, ಮತಬ್ಯಾಂಕ್ ರಾಜಕಾರಣದಿಂದಾಗಿಯೇ ಅಸ್ಸಾಂ ರಾಜ್ಯಕ್ಕೆ ಈ ಗತಿ ಬಂದಿದೆ ಎಂದೂ ದೂಷಿಸಿದರು. ಅಸ್ಸಾಮಿ ಮೂಲದ ಜನತೆ ಹೋರಾಡುತ್ತಾ ಇರುವವರೆಗೆ ಅಸ್ಸಾಂನಲ್ಲಿ ಬದುಕುಳಿಯುತ್ತಾರೆ ಎಂದು ಹತಾಶೆ ವ್ಯಕ್ತಪಡಿಸಿದರು.

ದಿಗ್ವಿಜಯ್ ಮಾತಿಗೆ ಶಶಿತರೂರ್ ಸಹಮತ

ದೆಹಲಿ: ಬಿಜೆಪಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದಲ್ಲಿ ತಳಮಟ್ಟದ ಕಾರ್ಯಕರ್ತರು ಉನ್ನತ ಹುದ್ದೆವರೆಗೂ ಪ್ರಗತಿ ಕಾಣುವ ಬಗೆಯನ್ನು ಹೊಗಳಿದ ಕಾಂಗ್ರೆಸ್ ಸಂಸದ ದಿಗ್ವಿಜಯ್

ಸಿಂಗ್, ಕಾಂಗ್ರೆಸ್ ಪಕ್ಷದೊಳಗೂ ಹೀಗೆಯೇ ಸುಧಾರಣೆ ತರಬೇಕೆಂದು ಸಲಹೆ ನೀಡಿರುವುದನ್ನು ಕಾಂಗ್ರೆಸ್‌ನ ಮತ್ತೊಬ್ಬ ಸಂಸದ ಶಶಿ ತರೂರ್ ಬೆಂಬಲಿಸಿ ಮಾತನಾಡಿದ್ದಾರೆ.

ದಿಗ್ವಿಜಯ್ ಸಿಂಗ್ ಜತೆ ಈ ವಿಚಾರವಾಗಿ ಮಾತನಾಡಿದಿರಾ? ಎಂಬ ಸುದ್ದಿಗಾರರ ಪ್ರಶ್ನೆಗೆ, 'ನಾವು ಸ್ನೇಹಿತರು. ಸಹಜವಾಗಿಯೆ ಮಾತನಾಡುತ್ತೇವೆ. ಅವರು ಹೇಳಿರುವುದು ಸರಿಯಾಗಿಯೇ ಇದೆ. ಪಕ್ಷದೊಳಗಿನ ಸಂಘಟನೆ ಬಲಪಡಿಸಬೇಕು. ಆ ಬಗ್ಗೆ ಸಂದೇಹವೇ ಇಲ್ಲ' ಎಂದು ಶಶಿ ತರೂರ್ ಉತ್ತರಿಸಿದ್ದಾರೆ. 'ನಮ್ಮ ಪಕ್ಷಕ್ಕೆ 140 ವರ್ಷಗಳ ಇತಿಹಾಸವಿದೆ. ಹಾಗಿದ್ದೂ ನಾವು ಕಲಿಯಬೇಕಿರುವುದು ಬಹಳಷ್ಟಿದೆ. ಪಕ್ಷದೊಳಗೆ ಸಂಘಟನೆಯೂ ಬಲವಾಗಿರಬೇಕೆಂದು ನಾವು ಬಯಸುತ್ತೇವೆ. ಶಿಸ್ತು ಅತ್ಯಗತ್ಯ. ಅದು ತಾರ್ಕಿಕ. ನಮ್ಮ ಸಂಘಟನೆಯೊಳಗೆ ಶಿಸ್ತು ಇರಬೇಕು' ಎಂದು ತರೂರ್ ಹೇಳಿದರು.ತರೂರ್ ಮಾತ್ರವಲ್ಲದೇ ಕಾಂಗ್ರೆಸ್ ಪಕ್ಷದಲ್ಲಿನ ಹೆಚ್ಚಿನ ಸಂಖ್ಯೆಯ ನಾಯಕರು ದಿಗ್ವಿಜಯ್ ಸಿಂಗ್ ಪರವಾಗಿಯೇ ಮಾತನಾಡಿದ್ದು, ಪಕ್ಷ ದೊಳಗೆ ಸುಧಾರಣೆ ತರಬೇಕಾದ ಅಂಶಕ್ಕೆ ಒತ್ತು ನೀಡಿದ್ದಾರೆ. ತಮ್ಮ ಹೇಳಿಕೆ ವಿವಾದವಾಗಿರುವ ಬಳಿಕ ಭಾನುವಾರ ಮಾಧ್ಯಮಗಳಿಗೆ ಪ್ರತಿ ಕ್ರಿಯಿಸಿದ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್, 'ನಾನು ಸಂಘಟನಾ ವಿಧಾನವನ್ನಷ್ಟೇ ಹೊಗಳಿದ್ದೇನೆ. ಆದರೆ, ನಾನು ಆರ್‌ಎಸ್‌ಎಸ್-ಬಿಜೆಪಿಯ ಕಟ್ಟಾ ವಿರೋಧಿಯಾಗಿದ್ದೇನೆ' ಎಂದು ದಾಟಿ ಬದಲಿಸಿದ್ದಾರೆ.

ಹಿಂದೂ ಮೇಲೆ ಬಾಂಗ್ಲಾ ಧರ್ಮನಿಂದನೆ ಆರೋಪ

ಢಾಕಾ: ಮಧ್ಯಂತರ ಸರಕಾರ ರಚನೆಯಾದ ನಂತರದಲ್ಲಿ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಯುವುದು ಸಾಮಾನ್ಯ ಎನ್ನುವಂತಾಗಿದೆ. 2024ರ ಡಿಸೆಂಬರ್‌ನಿಂದ 2025ರ ಜೂನ್‌ವರೆಗೆ ಅಲ್ಪಸಂಖ್ಯಾತ ಹಿಂದೂಗಳ ವಿರುದ್ಧ ಧರ್ಮನಿಂದನೆ ಆರೋಪ ಹೊರಿಸಿ 71 ಬಾರಿ ದಾಳಿ ನಡೆಸಲಾಗಿದೆ. ಇಂಥ ಹಲ್ಲೆ ಪ್ರಕರಣಗಳು ರಂಗಪುರ, ಚಾಂದಪುರ, ಚಟ್ಟೋಡಗ್ರಾಮ, ದಿನಾಜ್‌ಪುರ, ಲಾಲ್ ಮೋನಿರ್‌ಹತ್, ಸುನಾಮ್‌ಗಂಜ್, ಖುಲನಾ, ಕಾಮಿಲ್ಲಾ, ಗಾಜಿಪುರ, ತಾಂಗೇಲ್, ಸೈಲತ್ ಸೇರಿದಂತೆ 30ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ನಡೆದಿವೆ. ಹೆಚ್ಚಿನವು ಸುಳ್ಳು ಆರೋಪಗಳೇ ಆಗಿವೆ ಎಂದು ದೇಶದ ಅಲ್ಪಸಂಖ್ಯಾತ ಮಾನವ ಹಕ್ಕು ಸಂಸ್ಥೆ 'ಎಚ್‌ಆರ್‌ಸಿಬಿಎಂ' ವರದಿ ಪ್ರಕಟಿಸಿದೆ.

ದೇಶದ ಹೆಚ್ಚಿನ ಪ್ರದೇಶಗಳಲ್ಲಿ ಪದೇ ಪದೇ ಹಿಂದೂ ಸಮುದಾ ಯದವರ ಮೇಲೆ ಹಲ್ಲೆಗಳಾಗಿವೆ. ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾ ತರಿಗೆ ಅಭದ್ರತೆ ಉಂಟಾಗಿದೆ ಎಂಬುದು ಎದ್ದು ಕಾಣುತ್ತದೆ ಎಂದು ಮಾನವ ಹಕ್ಕುಗಳ ವರದಿಯು ವಿವರಿಸಿದೆ. ಇತ್ತೀಚೆಗೆ ದೀಪ್ ಚಂದ್ರ ದಾಸ್ ಎಂಬಾತನನ್ನು ಇಸ್ಲಾಂ ಧರ್ಮನಿಂದನೆ ಮಾಡಿದ್ದಾನೆಂದು ಆರೋಪಿಸಿ ಉದ್ರಿಕ್ತ ಗುಂಪು ಹಲ್ಲೆ ಮಾಡಿ, ಹೊಡೆದು ಸಾಯಿಸಿ ಮರಕ್ಕೆ ನೇತುಹಾಕಿ ಸುಟ್ಟು ಹಾಕಿತು. ಆದರೆ, ದೀಪು ಧರ್ಮನಿಂದನೆ ಮಾಡಿಲ್ಲ ಎಂಬುದು ನಂತರ ದೃಢಪಟ್ಟಿತು. ಇತರೆ 71 ಪ್ರಕರಣಗಳ ಲ್ಲಿಯೂ ಹೆಚ್ಚಿನವು ಇಂಥವೇ ಸುಳ್ಳು ಆರೋಪಗಳಾಗಿವೆ ಎಂದು ವರದಿ ಬೆಳಕು ಚೆಲ್ಲಿದೆ. ಇದೇ ವೇಳೆ, ಬಾಂಗ್ಲಾ ಹಿಂದೂಗಳ ಮೇಲಿನ ಹಿಂಸಾಚಾರವನ್ನು ಮಲೇಷ್ಯಾ ದೇಶದ ಸಂಸದರು ಖಂಡಿಸಿದ್ದಾರೆ.

ಕಾಂಗ್ರೆಸ್ 140ನೇ ಸಂಸ್ಥಾಪನಾ ದಿನ

ದೆಹಲಿ: ಕಾಂಗ್ರೆಸ್ ಒಂದು ಸಿದ್ಧಾಂತವಾಗಿದೆ. ಸಿದ್ಧಾಂತಗಳು ಎಂದಿಗೂ ಸಾಯುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಪಕ್ಷದ ಪ್ರಧಾನ ಕಚೇರಿ

'ಇಂದಿರಾ ಭವನ್'ನಲ್ಲಿ ಕಾಂಗ್ರೆಸ್‌ನ 140ನೇ ಸಂಸ್ಥಾಪನಾ ದಿನದ ಆಚರಣೆಯಲ್ಲಿ ಮಾತನಾಡಿದ ಖರ್ಗೆ, ಕಾಂಗ್ರೆಸ್ ಪಕ್ಷದ ಮಹಾನ್ ನಾಯಕರಿಂದಾಗಿಯೇ ಭಾರತ ಈಗಲೂ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿ ಉಳಿದಿದೆ ಎಂದರು. 'ಕಾಂಗ್ರೆಸ್ ಅಧ್ಯಾಯ ಮುಗಿದಿದೆ' ಎಂದು ಟೀಕಿಸುವವರಿಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ, ನಮ್ಮ ಶಕ್ತಿ ಕಡಿಮೆಯಾಗಿರಬಹುದು. ಆದರೆ, ಬೆನ್ನುಮೂಳೆ ಇನ್ನೂ ನೇರವಾಗಿಯೇ ಇದೆ. ನಾವು ಸಂವಿಧಾನದೊಂದಿಗೆ, ಜಾತ್ಯತೀತತೆಯೊಂದಿಗೆ ಮತ್ತು ಬಡವರ ಹಕ್ಕುಗಳೊಂದಿಗೆ ರಾಜಿ ಮಾಡಿಕೊಂಡಿಲ್ಲ. ನಾವು ಅಧಿಕಾರದಲ್ಲಿ ಇಲ್ಲದೇ ಇರಬಹುದು, ಆದರೆ ನಾವು ಚೌಕಾಶಿ ಮಾಡುವುದಿಲ್ಲ' ಎಂದು ಬಿಜೆಪಿಯತ್ತ ಟೀಕಾಸ್ತ್ರ ಪ್ರಯೋಗಿಸಿದರು. 'ಕಾಂಗ್ರೆಸ್ ಎಂದೂ ಧರ್ಮದ ಹೆಸರಿನಲ್ಲಿ ಮತ ಕೇಳಿಲ್ಲ. ದೇಗುಲ-ಮಸೀದಿ ಎಂದು ಎಂದೂ ದ್ವೇಷ ಹರಡಿಲ್ಲ. ಬದಲಾಗಿ ಕಾಂಗ್ರೆಸ್ ಒಗ್ಗೂಡಿಸುವ ಕೆಲಸ ಮಾಡುತ್ತದೆ. ಆದರೆ, ಬಿಜೆಪಿ ವಿಭಜನೆ ಮಾಡುತ್ತದೆ ಎಂದು ಮಾತಿನಲ್ಲೇ ಕುಟುಕಿದರು. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ಅಜಯ್ ಮಾಕನ್ ಸೇರಿದಂತೆ ಹಲವು ನಾಯಕರು ಕಾರ್ಯಕ್ರಮದಲ್ಲಿದ್ದರು.

ಸಮಾಚಾರ ಸಣ್ಣದಲ್ಲ

ವೈದ್ಯರ ಸಲಹೆಯನ್ನು ಪಡೆಯದೇ ಮಾತ್ರೆಗಳ ಸೇವನೆ ಬೇಡ: ಮೋದಿ

ದೆಹಲಿ: ಭಾರತೀಯರಲ್ಲಿ ಅನೇಕ ಜನರಿಗೆ ಆರೋಗ್ಯ ಕೆಟ್ಟಾಗ ಸ್ವತಃ ವೈದ್ಯ ಮಾಡಿಕೊಳ್ಳುವ ರೂಢಿ ಇದೆ. ಅದಿ ಬಹಳ ಅಪಾಯಕಾರಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಎಚ್ಚರಿಸಿದ್ದಾರೆ. ಕೆಲವರು ಆರೋಗ್ಯ ಕೆಟ್ಟಾಗಲೆಲ್ಲಾ ಮೆಡಿಕಲ್ ಸ್ಟೋರ್‌ಗೆ ಹೋಗಿ ತಾವೇ ಒಂದು ಮಾತ್ರೆ ಖರೀದಿಸಿ ಸೇವಿಸುವ ಅಭ್ಯಾಸ ರೂಢಿಸಿಕೊಂಡಿರುತ್ತಾರೆ. ವೈದ್ಯರ ಬಳಿ ಏಕೆ ಹೋಗಬೇಕು ಎಂಬ ಉಡಾಫೆ ಅವರದು ಎಂದು ಮೋದಿ ಹೇಳಿದ್ದಾರೆ. ನ್ಯುಮೋನಿಯಾ ಮತ್ತು ಮೂತ್ರನಾಳದ ಸೋಂಕು ರೋಗಗಳ ವಿರುದ್ಧ ಪ್ರತಿಜೀವಕಗಳು (ಆ್ಯಂಟಿಬಯೋಟಿಕ್) ಕಡಿಮೆ ಪರಿಣಾಮಕಾರಿ ಆಗುತ್ತಿವೆ ಎಂದು ಎಚ್ಚರಿಸುವ ಇತ್ತೀಚಿನ ಐಸಿಎಂಆರ್ ವರದಿಯತ್ತ ಪ್ರಧಾನಿ ಮೋದಿ ದೇಶವಾಸಿಗಳ ಗಮನ ಸೆಳೆದಿದ್ದಾರೆ. ವೈದ್ಯರ ಸಲಹೆ ಪಡೆಯದೇ ಆ್ಯಂಟಿಬಯೋಟಿಕ್‌ಗಳನ್ನು ಬಳಸದಂತೆ ಜನರ ಬಳಿ ಮನವಿ ಮಾಡಿ ದ್ದಾರೆ. ಈ ಮಾತ್ರೆಗಳ ಅತಿಯಾದ ಬಳಕೆ ಅಥವಾ ಯಾವುದೇ ವೈದ್ಯಕೀಯ ಸಲಹೆಯಿಲ್ಲದ ಬಳಕೆ ಔಷಧದ ಪರಿಣಾಮಕಾರಿ ಅಂಶವನ್ನು ದುರ್ಬಲ ಗೊಳಿಸುತ್ತಿದೆ ಎಂದು ಹೇಳಿದ್ದಾರೆ. ಆ್ಯಂಟಿಬಯೋ ಟಿಕ್ ಔಷಧಿಯನ್ನು ತೆಗೆದುಕೊಳ್ಳುವ ಮುನ್ನ ವೈದ್ಯರ ಸಲಹೆ ಪಡೆಯಲೇಬೇಕು ಎಂದು ಅವರು ಎಚ್ಚರಿಸಿದ್ದಾರೆ.

ಬೆಳ್ಳಿ ಬೆಲೆ ದಾಖಲೆ

ದೆಹಲಿ: ಚಿನ್ನದ ಬೆಲೆ ಏರಿಕೆಯಾದಂತೆ ಬೆಳ್ಳಿ ಬೆಲೆ ಇದೀಗ ಸಾರ್ವಕಾಲಿಕ ದಾಖಲೆ ಬರೆದಿದೆ. ಒಂದು ಕೆ.ಜಿ ಬೆಳ್ಳಿ ಬೆಲೆ 2.5 ಲಕ್ಷ ರು.ಗೆ ಹೆಚ್ಚಾಗಿದ್ದು, ಹಿಂದಿನ ದಾಖಲೆಗಳನ್ನೆಲ್ಲ ಮುರಿದಿದೆ. ಬೆಂಗಳೂರಿನಲ್ಲಿ ಭಾನುವಾರ ಒಂದು ಕೆ.ಜಿ ಬೆಳ್ಳಿಗೆ 2,50,200 ರು.ಯಾಗಿದ್ದು, ಈ ಮೊದಲು ಏರಿಕೆಯಾಗಿದ್ದ ಎಲ್ಲಾ ಬೆಲೆಗಳನ್ನು ಬ್ರೇಕ್ ಮಾಡುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದೆ. ಈ ಮೊದಲು ಸಂಕ್ರಾಂತಿ ನಂತರ 2.5 ಲಕ್ಷ ರು.ಗೆ ಏರಿಕೆಯಾಗುತ್ತದೆ ಎಂದು ಅಂದಾಜಿಸಲಾಗಿತ್ತು. ಮುಖ್ಯ ವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿನ್ನ ಹಾಗೂ ಬೆಳ್ಳಿ ಮೇಲೆ ಹೆಚ್ಚಿನ ಹೂಡಿಕೆ ಮಾಡುತ್ತಿರುವುದು ಹಾಗೂ ಎಲೆಕ್ಟ್ರಿಕ್ ವೆಹಿಕಲ್ ಸೇರಿದಂತೆ ಹಲವೆಡೆ ಬೆಳ್ಳಿ ಬಳಕೆ ಹೆಚ್ಚಳವಾಗುತ್ತಿರುವುದು ಬೆಲೆ ಏರಿಕೆಗೆ ಕಾರಣವಾಗಿದೆ.

ಪ.ಬಂಗಾಳ ಚುನಾವಣೆ ಅಧಿಕಾರಿಗೆ ಭದ್ರತೆ

ದೆಹಲಿ: ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಮನೋಜ್ ಅಗರ್ವಾಲ್ ಅವರ ಭದ್ರತೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯ ಅವರಿಗೆ ವೈ-ಪ್ಲಸ್ ಕೆಟಗರಿ ಭದ್ರತೆ ಒದಗಿಸಲು ಅನುಮೋದನೆ ನೀಡಿದೆ. ಈ ನಿರ್ಧಾರದಡಿಯಲ್ಲಿ ಅವರ ಮತ್ತು ಕಚೇರಿ ರಕ್ಷಣೆಗೆ ಸುಮಾರು 20 ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಇತ್ತೀಚಿನ ತಿಂಗಳುಗಳಲ್ಲಿ ಉದ್ಭವಿಸಿರುವ ಭದ್ರತಾ ಕಾಳಜಿಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಸುಮಾರು ಒಂದು ತಿಂಗಳ ಹಿಂದೆ ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯಲ್ಲಿನ ಭದ್ರತಾ ವ್ಯವಸ್ಥೆಗಳ ಬಗ್ಗೆ ಚುನಾವಣಾ ಆಯೋಗವು ಗಂಭೀರ ಕಳವಳ ವ್ಯಕ್ತಪಡಿಸಿತು, ಇದರ ನಂತರ ಕೋಲ್ಕತ್ತಾದಲ್ಲಿರುವ ಸಿಇಒ ಕಚೇರಿಗೆ ಕೇಂದ್ರ ಭದ್ರತಾ ಪಡೆಗಳನ್ನು ಒದಗಿಸುವಂತೆ ಆಯೋಗವು ನಿರ್ದೇಶಿಸಿತು. ಕಚೇರಿಯ ಎರಡನೇ ಮತ್ತು ಮೂರನೇ ಮಹಡಿಗಳಲ್ಲಿ ಕೇಂದ್ರ ಭದ್ರತಾ ಪಡೆಗಳನ್ನು ನಿಯೋಜಿಸಬೇಕು ಎಂದು ಸ್ಪಷ್ಟಪಡಿಸುವ ಪತ್ರವನ್ನು ಚುನಾವಣಾ ಆಯೋಗವು ಕೇಂದ್ರ ಗೃಹ ಸಚಿವಾಲಯಕ್ಕೆ ಕಳುಹಿಸಿತ್ತು.

{ – ಡಿ.ಕೆ.ಶಿವಕುಮಾರ್ } ಉಪಮುಖ್ಯಮಂತ್ರಿ

ಕಾಂಗ್ರೆಸ್ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತನ ಹೆಗಲ ಮೇಲೆ ರಾಷ್ಟ್ರಧ್ವಜವಿದೆ. ಬಿಜೆಪಿಯವರಿಗೆ ಇದು ಸಾಧ್ಯವಿಲ್ಲ. ಒಬ್ಬ ಕಾರ್ಯಕರ್ತ ಸತ್ತರೆ ರಾಷ್ಟ್ರಧ್ವಜ ಪ್ರತಿನಿಧಿಸುವ ನೂಲನ್ನು ಹಾಕಿ ಗೌರವ ಸಲ್ಲಿಸುವ ಅವಕಾಶವಿದೆ. ತಳ ಮಟ್ಟದಲ್ಲಿ ನಾಯಕರನ್ನು ಸೃಷ್ಟಿ ಮಾಡಲು ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಅವಕಾಶ ನೀಡಿದೆ. ಇಲ್ಲಿ ಶೇ.50ರಷ್ಟು ಹೆಣ್ಣು ಮಕ್ಕಳಿಗೆ ಮೀಸಲಾತಿ ನೀಡಲಾಗಿದೆ. ದೇಶಾದ್ಯಂತ ಮಹಿಳೆಯರಿಗೆ ಶೇ33ರಷ್ಟು ಮೀಸಲಾತಿ ನೀಡುವ ಬಿಲ್ ಅನ್ನು ರಾಜ್ಯ ಸಭೆಯಲ್ಲಿ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಮಂಡಿಸಲಾಯಿತು.

ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ | ಕಾಂಗ್ರೆಸ್ ಕೇವಲ ಪಕ್ಷವಲ್ಲ, ನಿರಂತರ ಚಳುವಳಿ ಮತ್ತು ಸಿದ್ಧಾಂತ: ಸಿದ್ದರಾಮಯ್ಯ

ಬಿಜೆಪಿ ಪಿತೂರಿಯನ್ನು ಸೋಲಿಸೋಣ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಎಂದರೆ ಕೇವಲ ಒಂದು ರಾಜಕೀಯ ಪಕ್ಷವಲ್ಲ, ಅದೊಂದು ಚಳುವಳಿ ಮತ್ತು ಸಿದ್ಧಾಂತ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಭಾರತ್ ಜೋಡೋ ಭವನದಲ್ಲಿ ಆಯೋಜಿಸಲಾಗಿದ್ದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಾವೆಲ್ಲರೂ ಚಳವಳಿಯಲ್ಲಿದ್ದೇವೆ. ಸಮಾನತೆ, ಸಮಾನ ಅವಕಾಶಗಳನ್ನು ಎಲ್ಲರಿಗೂ ಕೊಡಬೇಕು ಎನ್ನುವ ಸಿದ್ಧಾಂತ ನಮ್ಮದಾಗಿದೆ. ರಾಷ್ಟ್ರಪಿತನ ಹೆಸರನ್ನೇ ಅಳಿಸಲು ಹೊರಟಿರುವ ಪ್ರಯತ್ನವನ್ನು ವಿಫಲಗೊಳಿಸಬೇಕು. ಗ್ರಾಮ ಪಂಚಾಯಿತಿಯಿಂದ ರಾಜ್ಯ ಮಟ್ಟದವರೆಗೆ ಜನವರಿ 5ರಿಂದ ನಿರಂತರವಾಗಿ ಆಂದೋಲನವನ್ನು ಪ್ರಾರಂಭಿಸಲು ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ. ಇದಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳೀದರು.

ರಾಷ್ಟ್ರಪಿತನ ಹೆಸರನ್ನೇ ಅಳಿಸಲು ಹೊರಟಿರುವ ಪ್ರಯತ್ನವನ್ನು ವಿಫಲಗೊಳಿಸಬೇಕು. ಗ್ರಾಮೀಣ ಆರ್ಥಿಕತೆಯನ್ನೇ ಹಾಳು ಮಾಡುವ ಹುನ್ನಾರ ಬಿಜೆಪಿಯದ್ದಾಗಿದೆ. ನರೇಗಾ ಕಾರ್ಯಕ್ರಮದಲ್ಲಿ ದಲಿತರು, ಹಿಂದುಳಿದವರಿಗೆ ಹೆಚ್ಚಾಗಿ ಕೆಲಸ ದೊರಕುತ್ತಿತ್ತು . ಕೇಂದ್ರ ಸರಕಾರ ರಾಜ್ಯಗಳ ಅನುದಾನವನ್ನು ಕೊಡುತ್ತಿತ್ತು. ಈಗ ಹೊಸ ಕಾಯ್ದೆ ಜಾರಿಗೆ ತಂದು, 60% ಕೇಂದ್ರ, 40% ರಾಜ್ಯ ಸರ್ಕಾರ ಕೊಡಬೇಕು ಎಂದು ತೀರ್ಮಾನಿಸಿದ್ದಾರೆ.

ಭಾರತ್ ಜೋಡೋ ಭವನದಲ್ಲಿ ಆಯೋಜಿಸ ಲಾಗಿದ್ದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಮಹಾತ್ಮಾ ಗಾಂಧಿ ಫೋಟೊಗೆ ಪುಷ್ಪನಮನ ಸಲ್ಲಿಸಿದರು.

ರಾಜ್ಯಗಳ ಮೇಲೆ ಭಾರಿ ಹೊರೆಯನ್ನೇ ಹೊರಿಸುತ್ತಿದ್ದಾರೆ, ಇದನ್ನು ವಿಫಲಗೊಳಿಸಬೇಕು ಎಂದು ಹೇಳಿದರು.

ವಿಶ್ವದಲ್ಲಿಯೇ ಭಾರತ ಅತಿದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ದೇಶ. ಅಸಹಕಾರ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭವಾದಾಗಲೂ ಬಿಜೆಪಿ ಇದರಲ್ಲಿ ಪಾಲ್ಗೊಳ್ಳಲಿಲ್ಲ. ಬ್ರಿಟಿಷರೊಂದಿಗೆ ಸೇರಿಕೊಂಡಿದ್ದ ಬಿಜೆಪಿ ನಮಗೆ ದೇಶಭಕ್ತಿಯ ಪಾಠವನ್ನು ಹೇಳಿಕೊಡುತ್ತಾರೆ. ಅವರು ದೇಶಭಕ್ತರಂತೂ ಅಲ್ಲ ಎಂದರು. ದೇಶಭಕ್ತಿಯ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಬಿಜೆಪಿಯ ಒಬ್ಬ ನಾಯಕರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲಿಲ್ಲ. ಈಗ ಮಹಾತ್ಮಾ ಗಾಂಧಿಯವರನ್ನು ದ್ವೇಷಿಸಲು ಪ್ರಾರಂಭಿಸಿದ್ದಾರೆ. ಗಾಂಧಿಯವರನ್ನು ಕೊಂದವರು ನಾಥುರಾಮ್ ಗೋಡ್ಸೆ. ಬಿಜೆಪಿ ಕಚೇರಿಯ ಮೇಲೆ ಇತ್ತೀಚಿನವರೆಗೆ ಭಾರತದ ಧ್ವಜವೂ ಹಾರಾಡುತ್ತಿರಲಿಲ್ಲ ಎಂದರು. ಇವರಿಗೆ ದೇಶಕ್ಕೆ ಸ್ವಾತಂತ್ರ್ಯ ಬರುವುದೇ ಇಷ್ಟವಿರಲಿಲ್ಲ ಎಂದು ಸಿಎಂ ವಾಗ್ದಾಳಿ ನಡೆಸಿದರು.

ವಿಬಿ ಜಿ ರಾಮ್ ಜಿ ಯೋಜನೆ ಜಾರಿ ಎಲ್ಲೂ ಅಸಾಧ್ಯ: ಕಾರ್ಯಕ್ರಮದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಸರಕಾರ ಗ್ರಾಮೀಣ ಭಾಗದಲ್ಲಿ ಬಡವರಿಗೆ ಉದ್ಯೋಗ ನೀಡುವ ಮನರೇಗಾ ಯೋಜನೆ ತಂದಿತ್ತು. ಕೇಂದ್ರ ಬಿಜೆಪಿ ಸರಕಾರ ಈ ಯೋಜನೆಯನ್ನು ಹತ್ಯೆ ಮಾಡಲು ಮುಂದಾಗಿದೆ. ಈ ಯೋಜನೆಯಲ್ಲಿ 60:40 ಅನುಪಾತದಲ್ಲಿ ಅನುದಾನ ಹಂಚಿಕೆ ಮಾಡಿಕೊಳ್ಳುವ ಬದಲಾವಣೆ ತಂದಿದ್ದಾರೆ. ಬರಗಾಲ ಪ್ರದೇಶದಲ್ಲಿ ವರ್ಷಕ್ಕೆ 150 ಮಾನವ ದಿನಗಳ ಉದ್ಯೋಗ ನೀಡಲು ಕಾನೂನಿನಲ್ಲಿ ಸೂಚಿಸಲಾಗಿತ್ತು, ಆದರೆ ಅವರು ನಮ್ಮ ರಾಜ್ಯಕ್ಕೆ ಬರಗಾಲ ಇದ್ದಾಗಲೂ ನೀಡಲಿಲ್ಲ, ಕೋವಿಡ್ ಸಮಯದಲ್ಲೂ ನೀಡಲಿಲ್ಲ ಎಂದರು.

ಇಂದು ನಾವೆಲ್ಲರೂ ಕಾಂಗ್ರೆಸಿಗರೆಂದು ಗುರುತಿಸಿಕೊಳ್ಳುತ್ತೇವೆ. ನಾವು ಈ ದೇಶಕ್ಕೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಹುಟ್ಟುಕೊಂಡ ಪಕ್ಷ. ಈ ದೇಶದ ಇತಿಹಾಸ, ದೇಶಗ್ರದ ಒಗ್ಗಟ್ಟಿಗೆ ಶ್ರಮಿಸಿರುವ ಪಕ್ಷ. ವಿವಿಧ ಭಾಷೆ, ಸಮುದಾಯಗಳನ್ನು ತ್ರಿವರ್ಣ ಧ್ವಜದ ಕೆಳಗೆ ಒಂದಾಗಿ ಇಟ್ಟ ಪಕ್ಷ ಕಾಂಗ್ರೆಸ್. ಇಂತಹ ಇತಿಹಾಸವನ್ನು ಕಾಂಗ್ರೆಸಿಗರು ಮಾತ್ರ ಹೇಳಲು ಸಾಧ್ಯವೇ ಹೊರತು, ಬಿಜೆಪಿಯವರಿಗೆ ಇತಿಹಾಸ ಹೇಳಲು ಸಾಧ್ಯವಿಲ್ಲ ಎಂದರು.

ಅಧಿಕಾರ ಯಾರಿಗೂ ಶಾಶ್ವತವಲ್ಲ: ಡಿಕೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡುತ್ತಾ, ಮಹಾತ್ಮ ಗಾಂಧೀಜಿ ಅವರ ಹೆಸರನ್ನು ಈ ದೇಶದ ಇತಿಹಾಸದಿಂದ ಅಳಿಸಿಹಾಕಲು ಯಾರಿಗೂ ಸಾಧ್ಯವಿಲ್ಲ. ಬಿಜೆಪಿ ಹಾಗೂ ಅವರ ಅಧಿಕಾರ ಯಾವುದೂ ಶಾಶ್ವತವಲ್ಲ. ಆ ಪಕ್ಷ ಇನ್ನೆಷ್ಟು ದಿನ ಇರುತ್ತದೆ? ಎಲ್ಲದಕ್ಕೂ ಕೊನೇ ಎಂಬುದು ಇರಲೇ ಬೇಕಲ್ಲವೇ? ಎಂತೆಂತಹ ಚಕ್ರವರ್ತಿಗಳೇ ಮೂಲೆಗುಂಪಾಗಿ ಹೋಗಿದ್ದಾರೆ. ಅಲೆಗ್ಸಾಂಡರ್ ದಿ ಗ್ರೇಟ್ ಇಡೀ ಪ್ರಪಂಚದ ಮುಕ್ಕಾಲು ಪಾಲು ಗೆದ್ದವರೇ ಶಾಶ್ವತವಲ್ಲ. ಸದ್ದಾಂ ಹುಸೇನ್ ಕೊನೆಗಾಲದಲ್ಲಿ ಅವಿತುಕೊಳ್ಳಬೇಕಾಯಿತು. ಇನ್ನು ಬೇರೆಯವರದು ಯಾವ ಲೆಕ್ಕ? ಮನರೇಗಾ ಹೆಸರು ಬದಲಾವಣೆ ವಿರೋಧಿಸಿ 2026ರ ಜನವರಿ 5ನೇ ತಾರೀಕಿನಿಂದ ಹೊಸ ಹೋರಾಟ ರೂಪಿಸಲಾಗುವುದು. ಪಂಚಾಯತಿ ಮಟ್ಟದಿಂದ ಈ ಹೋರಾಟ ಆರಂಭಿಸಲಾಗುವುದು ಎಂದು ಉಪಮುಖ್ಯಮಂತ್ರಿ ತಿಳಿಸಿದರು.

ಜಿಬಿಎ ಟಿಕೆಟ್ ಆಕಾಂಕ್ಷಿಗಳಿಗೆ ಶುಲ್ಕ ನಿಗದಿ

ಜ.15ರವರೆಗೆ ಅರ್ಜಿ ಪಡೆಯಲು ಅವಕಾಶ | ಸಾಮಾನ್ಯ ವರ್ಗ 50, ಎಸ್‌ಸಿ, ಎಸ್‌ಟಿ 25 ಸಾವಿರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ವಿಧಾನಸಭಾ ಚುನಾವಣೆ ವೇಳೆ ಟಿಕೆಟ್ ಆಕಾಂಕ್ಷಿ ಗಳಿಂದ ಶುಲ್ಕ ಸಂಗ್ರಹಿಸಿದ ರೀತಿಯಲ್ಲಿಯೇ ಇದೀಗ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಗೂ ಶುಲ್ಕ ವಿಧಿಸಿ ಸಂಗ್ರಹಿಸಲು ಕಾಂಗ್ರೆಸ್ ಮುಂದಾಗಿದೆ.

ಕೆಪಿಸಿಸಿ ಕಚೇರಿಯ ಭಾರತ ಜೋಡೋ ಭವನದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೀಸಲು ನಿಗದಿಯಾದ ಮೇಲೆ ಜಿಬಿಎ ಚುನಾವಣೆಗೆ ತಯಾರಿ ನಡೆಸಿದರಾಯಿತು ಎಂದುಕೊಂಡರೆ ನೀವುಗಳು ಗೆಲ್ಲಲು ಸಾಧ್ಯವಿಲ್ಲ. ಏಕೆಂದರೆ ನೀವು ಎಷ್ಟೇ ದೊಡ್ಡ ನಾಯಕರಾದರೂ, ಎಲ್ಲ ನಿಗದಿಯಾದ ಬಳಿಕ ಟಿಕೆಟ್ ಕೇಳಿದರೆ ಡಿ.ಕೆ.ಶಿವಕುಮಾರ್ ನಿಮ್ಮನ್ನು ಗುರುತಿಸು ವುದಿಲ್ಲ. ಭಾನುವಾರದಿಂದಲೇ ಆಕಾಂಕ್ಷಿ ಅಭ್ಯರ್ಥಿಗಳ ಅರ್ಜಿಯನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದರು.

ಸಾಮಾನ್ಯ ಅಭ್ಯರ್ಥಿಗಳಿಗೆ 50 ಸಾವಿರ, ಪರಿಶಿಷ್ಟ ಅಭ್ಯರ್ಥಿಗಳಿಗೆ 25 ಸಾವಿರ ನಿಗದಿಪಡಿಸಲಾಗಿದೆ. ಈ ಹಣವು ಕಟ್ಟಡ ನಿಧಿಗೆ ಹೋಗಲಿದೆ. ಏಕೆಂದರೆ ಜಿಲ್ಲಾ ಕಚೇರಿ ನಿರ್ಮಾಣಕ್ಕೆ 20 ಕೋಟಿ, ರಾಜ್ಯ ಕಚೇರಿ ನಿರ್ಮಾಣಕ್ಕೆ 60 ಕೋಟಿ ರು. ಖರ್ಚಾಗಲಿದೆ. ತಾಲೂಕು ಕಚೇರಿಗಳ ನಿರ್ಮಾಣಕ್ಕೂ ಕೆಪಿಸಿಸಿಯಿಂದ ಹಣ ನೀಡಬೇಕಲ್ಲವೇ? ಎಂಎಲ್‌ಎ ಚುನಾವಣೆ ವೇಳೆ 2 ಲಕ್ಷ ರು. ಹಣ ನಿಗದಿ ಮಾಡಲಾಗಿತ್ತು. ಇದರಿಂದ 20 ಕೋಟಿ ರೂ. ಹಣ ಸಂಗ್ರಹವಾಯಿತು. ಇದರಿಂದ ಪಕ್ಷದ ಪರವಾಗಿ ಜಾಹೀರಾತು ನೀಡಲು ಸಾಧ್ಯವಾಯಿತು. ಮಹಿಳೆಯರಿಗೆ ರಿಯಾಯಿತಿ ಇಲ್ಲ, ಒಂದು ಚುನಾ ವಣೆಗೆ ಎಷ್ಟು ಖರ್ಚಾಗುತ್ತದೆ ಎಂದು ನನಗೆ ತಿಳಿದಿದೆ ಎಂದು ಹೇಳಿದರು.

ಮಹಿಳೆಯರಿಗೆ ಹಾಗೂ ಒಬಿಸಿಗಳಿಗೆ ರಿಯಾಯಿತಿ ನೀಡಿ ಎಂದು ಸಭಿಕರು ಕೂಗಿದ ವೇಳೆಯಲ್ಲಿ, ಈಗಾಗಲೇ ಮಹಿಳೆಯರಿಗೆ ತಿಂಗಳಿಗೆ ಎರಡು ಸಾವಿರ, ಉಚಿತ ಬಸ್ ಪ್ರಯಾಣ ನೀಡಲಾಗುತ್ತಿದೆ. ಈ ತೀರ್ಮಾನದಲ್ಲಿ ಯಾವುದೇ ಬದಲಾವಣೆ ಇಲ್ಲ. ನಾನು ಸಹ ಒಬಿಸಿ, ಒಕ್ಕಲಿಗರು ಒಬಿಸಿ ಎಂದು ತಿಳಿದಿದೆಯೇ? ಲಿಂಗಾಯತರು ಒಬಿಸಿ, ಆದಾಯ ಇಲ್ಲದ ಬ್ರಾಹ್ಮಣರು ಒಬಿಸಿ ಎಂದು ಹೇಳಿದರು.

ಎರಡು ಮೂರು ತಿಂಗಳಿನಲ್ಲಿ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳನ್ನು ನಡೆಸ ಬೇಕಿದೆ. ಅದಕ್ಕೂ ಈಗಿನಿಂದಲೇ ತಯಾರಿ ಮಾಡಿ ಕೊಳ್ಳ ಬೇಕು ಎಂದು ಸೂಚನೆ ನೀಡಿದ್ದೇನೆ. ಪ್ರಿಯಾಂಕ್ ಖರ್ಗೆ ಅವರಿಗೂ ಇದರ ಬಗ್ಗೆ ತಿಳಿಸಿದ್ದು, ಮೀಸಲಾತಿ ವಿಚಾರವಾಗಿ ನ್ಯಾಯಾಲಯಗಳಲ್ಲಿ ಇರುವ ಕಂಟಕಗಳನ್ನು ಬಗೆಹರಿಸಿ, ಇನ್ನೆರಡು ತಿಂಗ ಳಲ್ಲಿ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಬೇಕು.

– ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ

ಮಹಿಳೆಯರಿಗೆ 25,000 ಶುಲ್ಕ

ಇದೇ ವೇಳೆ ವೇದಿಕೆಯಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಿಳೆಯರಿಗೆ 25 ಸಾವಿರ ಇರಲಿ ಎಂದರು. ಆಗ ಡಿಸಿಎಂ ಶಿವಕುಮಾರ್ ಅವರು, ಸಿಎಂ ಹಾಗೂ ಜಾರ್ಜ್ ಹೇಳುತ್ತಿದ್ದಾರೆ ಎಂದು ಮಹಿಳೆಯರಿಗೆ 25 ಸಾವಿರ ರು.ನಿಗದಿ ಮಾಡಲಾಗುತ್ತಿದೆ. ನಿಮ್ಮ ದುಡ್ಡು ನನಗೆ ಬೇಡ, ಮುಂದಿನ ಜನವರಿ 15ನೇ ತಾರೀಕಿನ ಒಳಗೆ ಅರ್ಜಿ ಹಾಕಬೇಕು. 369 ವಾರ್ಡ್‌ಗಳಿಂದ ಶೇ.50ರಷ್ಟು ಮೀಸಲಾತಿ ನೀಡಲಾಗಿದೆ. ಒಂದೊಂದು ಕ್ಷೇತ್ರದಿಂದ 10 ಮಂದಿ ಮಹಿಳೆಯರಾದರೂ ಅರ್ಜಿ ಸಲ್ಲಿಕೆ ಮಾಡಬೇಕು. ಯಾರೇ ಆದರೂ ಚೆನ್ನಾಗಿ ಕೆಲಸ ಮಾಡಿರಬೇಕು. ಅಂತಹವರಿಗೆ ಪ್ರಾಮುಖ್ಯತೆ ನೀಡಲಾಗುವುದು. ಯಾರು ಬೂತ್ ಮಟ್ಟದಲ್ಲಿ ಕೆಲಸ ಮಾಡುತ್ತಾರೋ ಅವರಿಗೆ ಅವಕಾಶ. ಸಿದ್ದರಾಮಯ್ಯ, ಶಿವಕುಮಾರ್ ಹಿಂದೆ ತಿರುಗಿದರೆ ಅವಕಾಶವಿಲ್ಲ. ಕೆಲಸ ಮಾಡಿದವರಿಗೆ ಹೆಚ್ಚು ಆದ್ಯತೆ ಎಂಬ ಸಂದೇಶವನ್ನು ಡಿಕೆಶಿ ತಿಳಿಸಿದರು.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಸತತವಾಗಿ ಮುಂದುವರಿಯುತ್ತಿರುವ ದೌರ್ಜನ್ಯವನ್ನು ಖಂಡಿಸಿ ಹಿಂದೂರಾಷ್ಟ್ರ ಸಮನ್ವಯ ಸಮಿತಿಯ ಕಾರ್ಯಕರ್ತರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು. ಫೋಟೋ: ಸುಧಾಕರ್ ದೇವರಾಜ್

ಭಾರತ ವಿಶ್ವಗುರು ಆಗುವುದು ಜಗತ್ತಿಗೆ ಅವಶ್ಯಕ

ಹೈದರಾಬಾದ್: ಭಾರತವು ವಿಶ್ವಗುರು ಆಗುವುದು ನಮ್ಮ ಮಹತ್ವಾಕಾಂಕ್ಷೆ ಏನಲ್ಲ, ಆದರೆ ನಮ್ಮ ದೇಶ ವಿಶ್ವಗುರು ಆಗುವುದು ಜಗತ್ತಿಗೆ ಅವಶ್ಯಕ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಡಾ.ಮೋಹನ್ ಭಾಗವತ್ ಹೇಳಿದರು.

ತೆಲಂಗಾಣದ ರಂಗಾ ರೆಡ್ಡಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿ, ಹಿಂದೂ ಮತ್ತು ಭಾರತೀಯ ನಾಗರಿಕತೆಯು ಸಾವಿರಾರು ವರ್ಷಗಳಿಂದ ಜಗತ್ತಿಗೆ ಮಾರ್ಗ ದರ್ಶನ ನೀಡಿದೆ. ಹಿಂದೂಗಳು ಪ್ರಪಂಚದಾದ್ಯಂತ ಪ್ರಯಾಣಿಸಿದರು. ಆದರೆ ಯಾರ ಧರ್ಮವನ್ನೂ ಎಂದಿಗೂ ಬದಲಾಯಿಸಲಿಲ್ಲ. ಪ್ರಪಂಚದಾದ್ಯಂತದ ದೇಶಗಳು ಬಹಳಷ್ಟು ಶಕ್ತಿ ಪ್ರದರ್ಶಿಸಿದರೂ ತಮ್ಮ ಅಪೇಕ್ಷಿತ ಗುರಿಗಳನ್ನು ತಲುಪಲು ವಿಫಲ ವಾಗಿವೆ ಎಂದು ಭಾಗವತ್ ಹೇಳಿದರು. ಭಾರತ ಮಾತ್ರ ಇದನ್ನು ಸಾಧಿಸಬಹುದು, ಆದ್ದರಿಂದ, ನಮ್ಮ ದೇಶ ವಿಶ್ವಗುರು ಜಾಗತಿಕ ಅವಶ್ಯಕತೆಯಾಗಿದೆ ಎಂದರು.

ಟಾಟಾ ಜನ್ಮದಿನಾಚರಣೆ: ಗೌರವ ಸಲ್ಲಿಕೆ

ಹೈದರಾಬಾದ್: ಟಾಟಾ ಗ್ರೂಪ್ ಅಧ್ಯಕ್ಷ ದಿವಂಗತ ರತನ್ ನವಲ್ ಟಾಟಾ ಅವರ 88ನೇ ಜನ್ಮ ದಿನಾಚರಣೆಯಾದ ಭಾನುವಾರದಂದು ದೇಶದ ಹಲವೆಡೆ ಅವರನ್ನು ಗೌರವದಿಂದ ಸ್ಮರಿಸಿ, ಗೌರವ ನಮನ ಸಲ್ಲಿಸಲಾಯಿತು.



ಟಾಟಾ ಗ್ರೂಪ್ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರು ಬಾಂಬೆ ಹೌಸ್‌ನಲ್ಲಿ ದಿ.ಕೈಗಾರಿಕೋದ್ಯಮಿ ರತನ್ ಟಾಟಾ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ಈ ಕುರಿತು ಟಾಟಾ ಟ್ರಸ್ಟ್‌ನ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, 'ನಿಜವಾದ ಲೋಕೋಪಕಾರ ಎಂದಿಗೂ ವೈಯಕ್ತಿಕವಲ್ಲ ಮತ್ತು ನಾಯಕತ್ವದ ಪ್ರಭಾವವು ಸಕಾರಾತ್ಮಕ ಬದಲಾವಣೆಯಾಗಿ ಪರಿವರ್ತಿಸುವ ಜವಾಬ್ದಾರಿಯಾಗಿದೆ. ಅವರ ಮಾರ್ಗದರ್ಶನದಲ್ಲಿ ಲೋಕೋಪಕಾರ ದಾನದಿಂದ ಆರೋಗ್ಯ ರಕ್ಷಣೆ, ಶಿಕ್ಷಣ, ಜೀವನೋಪಾಯ, ಮಹಿಳಾ ಸಬಲೀಕರಣ ಮತ್ತು ಇನ್ನೂ ಹೆಚ್ಚಿನದನ್ನು ಉದ್ದೇಶಿಸಿ ಕೇಂದ್ರೀಕರಿಸಿದೆ' ಎಂದು ಹೇಳಿದೆ.

ಉತ್ತಮ ಮಾರ್ಗದರ್ಶಕ : ಕೇಂದ್ರ ಸಚಿವ ಪಿಯೂಷ್ ಗೋಯಲ್ ಗುಣಗಾನ ಮಾಡಿದ್ದು, 'ಟಾಟಾ ಅವರ ನಾಯಕತ್ವವು ಸಹಾನುಭೂತಿಯೊಂದಿಗೆ ನಾವೀನ್ಯತೆಯನ್ನು ಸರಾಗವಾಗಿ ಬೆರೆಸಿತು. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಭಾರತೀಯ ಉದ್ಯಮದ ಪಾತ್ರವನ್ನು ಮರುವ್ಯಾಖ್ಯಾನಿಸಿತು. ಅವರು ಪೋಷಿಸಿದ ಸಂಸ್ಥೆಗಳು ಮತ್ತು ಅವರು ಪ್ರತಿಪಾದಿಸಿದ ಮೌಲ್ಯಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡಲಿವೆ' ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ.

ಅಮಿತ್ ಶಾ ಗುಣಗಾನ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರತನ್ ಟಾಟಾ ಅವರ ಜಯಂತಿಯಂದು ಅವರಿಗೆ ಗೌರವ ಸಲ್ಲಿಸುತ್ತಾ, 'ದಿವಂಗತ ಕೈಗಾರಿಕೋದ್ಯಮಿ ಭಾರತೀಯ ಉದ್ಯಮವನ್ನು ಸಮಗ್ರತೆ ಮತ್ತು ಸಹಾನುಭೂತಿಯಿಂದ ಮರುರೂಪಿಸಿದವರು' ಎಂದು ಹೇಳಿದರು. 'ಸ್ಥಳೀಯ ಕೈಗಾರಿಕೆಗಳನ್ನು ನಿರ್ಮಿಸುವುದರಿಂದ ಹಿಡಿದು ನಿಸ್ವಾರ್ಥ ಲೋಕೋಪಕಾರದವರೆಗೆ, ನಿಜವಾದ ಯಶಸ್ಸು ರಾಷ್ಟ್ರದ ಸೇವೆಯಲ್ಲಿದೆ ಎಂದು ಅವರು ತೋರಿಸಿದರು. ಅವರ ಪರಂಪರೆ ಸ್ವಾವಲಂಬಿ ಭಾರತಕ್ಕೆ ಸ್ಫೂರ್ತಿ ನೀಡುತ್ತದೆ' ಎಂದು ಶಾ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಮಹಾರಾಷ್ಟ್ರದ ಚಂದ್ರಾಪುರದಲ್ಲಿ ನಡೆದ ಮೂತ್ರಪಿಂಡ ಅಕ್ರಮ ಮಾರಾಟ

ಮೂತ್ರಪಿಂಡ ಮಾರಾಟ ಜಾಲಕ್ಕೆ ಚೀನಾ ನಂಟು

ಮುಂಬೈ: ಮಹಾರಾಷ್ಟ್ರದ ಚಂದ್ರಾಪುರದಲ್ಲಿ ರೈತನ ಮೂತ್ರಪಿಂಡದ ಅಕ್ರಮ ಮಾರಾಟದ ತನಿಖೆ ನಡೆಸುತ್ತಿರುವ ಎಸ್‌ಐಟಿ, ಚೀನಾದೊಂದಿಗೆ ಮೂತ್ರಪಿಂಡ ಮಾರಾಟ ಜಾಲದ ನೇರ ಸಂಪರ್ಕ ಇದೆ ಎನ್ನುವ ಮಹತ್ವದ ಸಂಗತಿ ಬಹಿರಂಗಪಡಿಸಿದೆ. ಚೀನಾದ ಶಸ್ತ್ರಚಿಕಿತ್ಸಕ ಡಾ. ಚಿಯಾಂಗ್, ಕಾಂಬೋಡಿಯಾದಲ್ಲಿ ಕಸಿ ಶಸ್ತ್ರಚಿಕಿತ್ಸೆಗಳನ್ನು ನಡೆಸಿ ತನ್ನ ತಾಯ್ನಾಡಿನ ಗ್ರಾಹಕರಿಗೆ ಅಂಗಾಂಗ ಪೂರೈಸಿದ್ದಾರೆ ಎನ್ನುವ ಸಂಗತಿಯನ್ನು ವಿಶೇಷ ತನಿಖಾ ತಂಡ ಬಹಿರಂಗ ಪಡಿಸಿದೆ.

ವಿಚಾರಣೆಯ ಸಮಯದಲ್ಲಿ ಇಬ್ಬರು ಪ್ರಮುಖ ಆರೋಪಿಗಳ ಹೇಳಿಕೆಗಳನ್ನು ಆಧರಿಸಿದ ಅಂತಾರಾಷ್ಟ್ರೀಯ ಜಾಲಗಳ ವಿಚಾರಣೆಯ ವ್ಯಾಪ್ತಿಯನ್ನು ವಿಸ್ತರಿಸಲು ಅಧಿಕಾರಿಗಳನ್ನು ಪ್ರೇರೇಪಿಸಿದ್ದು, ಈ ಸಂಬಂಧ ಹೆಚ್ಚಿನ ವಿಚಾರಣೆ ನಡೆಯಲಿದೆ. ಚಿಯಾಂಗ್ ಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದಾನಲ್ಲದೆ, ಖರೀದಿಸಿದ ಎಲ್ಲಾ ಮೂತ್ರಪಿಂಡಗಳನ್ನು ಚೀನಾದ ಸ್ವೀಕರಿಸುವವರಿಗೆ ರವಾನಿಸಲಾಗಿದೆ ಎನ್ನುವ ಸಂಗತಿಯನ್ನು ಪೊಲೀಸರು ತಿಳಿಸಿದ್ದಾರೆ. ಮಿಂಥೂರ್ ಗ್ರಾಮದ ಬಡ ರೈತ ರೋಷನ್ ಕುಲೆ ಅವರ ಅಂಗಾಂಗ ಮಾರಾಟದ ಆಮಿಷಕ್ಕೆ ಒಳಗಾಗಿ, ಅವರ ಮೂತ್ರಪಿಂಡವನ್ನು ತೆಗೆದ 12 ಗಂಟೆಗಳ ಒಳಗೆ ಚೀನಾದ ರೋಗಿಗೆ ಕಸಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಧ್ಯವರ್ತಿಗಳನ್ನು ನೇಮಿಸಿಕೊಳ್ಳುವಲ್ಲಿ ಚಿಯಾಂಗ್ ಪ್ರಮುಖ ಪಾತ್ರ ವಹಿಸಿದ್ದಾನೆ ಎನ್ನುವ ಸಂಗತಿಯನ್ನು ತನಿಖಾಧಿಕಾರಿಗಳು ಬಯಲು ಮಾಡಿದ್ದು, ದಾನಿಗಳನ್ನು ಪೂರೈಸಲು ಗಮನಾರ್ಹ ನಗದನ್ನು ನೀಡುವ ಮೂಲಕ ಆಮಿಷವೊಡ್ಡಿದ್ದಾರೆ ಎಂದು ಆರೋಪಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಈ ಜಾಲದ ಮೂರನೇ ಆರೋಪಿಯನ್ನು ಪೊಲೀಸರು ಹುಡುಕುತ್ತಿದ್ದು, ಇನ್ನೂ ತಲೆಮರೆಸಿಕೊಂಡಿದ್ದಾನೆ.

ಸಿಂಧೂ ಜಲ ಒಪ್ಪಂದದ ಬಳಿಕ ಪಾಕಿಸ್ತಾನಕ್ಕೆ ಭಾರತದಿಂದ ಮತ್ತೊಮ್ಮೆ ಮರ್ಮಾಘಾತ

ದುಲ್ಹಸ್ತಿ-2 ಜಲವಿದ್ಯುತ್ ಯೋಜನೆಗೆ ಒಪ್ಪಿಗೆ

ದೆಹಲಿ: ಪಹಲ್ಗಾಮ್ ದಾಳಿಯ ನಂತರ ಭಾರತ ಸರಕಾರವು ಪಾಕಿಸ್ತಾನದೊಂದಿಗಿನ ಸಿಂಧೂ ಜಲ ಒಪ್ಪಂದವನ್ನು ರದ್ದುಗೊಳಿಸಿದ ಬಳಿಕ, ಈಗ ಮತ್ತೊಂದು ಯೋಜನೆಗೆ ಅನುಮೋದನೆ ನೀಡಿದೆ. ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ಚೆನಾಬ್ ನದಿಯಲ್ಲಿ 260 ಮೆಗಾವ್ಯಾಟ್ ದುಲ್ಹಸ್ತಿ ಜಲವಿದ್ಯುತ್ ಯೋಜನೆಯ ಎರಡನೇ ಹಂತಕ್ಕೆ ಪರಿಸರ ಸಚಿವಾಲಯ ಸಮಿತಿ ಅನುಮೋದನೆ ನೀಡಿದೆ.

ಜಲವಿದ್ಯುತ್ ಯೋಜನೆಗಾಗಿ ತಜ್ಞರ ಮೌಲ್ಯಮಾಪನ ಸಮಿತಿ (ಇಎಸಿ) ತನ್ನ 45ನೇ ಸಭೆಯಲ್ಲಿ ಈ ಯೋಜನೆಯನ್ನು ಅನುಮೋದಿಸಿದೆ. ಇದರ ವೆಚ್ಚ ಸುಮಾರು 3,200 ಕೋಟಿ ರು. ಈ ಯೋಜನೆಯು ನದಿಯ ಮೂಲಕ ಹರಿಯುವ ಯೋಜನೆಯಾಗಲಿದ್ದು, ನದಿ ನೀರನ್ನು ನಿಲ್ಲಿಸದೆ ನೀರಿನ ಜಲವಿದ್ಯುತ್ ಉತ್ಪಾದನೆಯಾಗಲಿದೆ.

ಸಿಂಧೂ ಜಲ ಒಪ್ಪಂದದ ಪ್ರಕಾರ, ಪಾಕಿಸ್ತಾನವು ಸಿಂಧೂ, ಝೀಲಂ ಮತ್ತು ಚೆನಾಬ್ ನದಿಗಳ ಮೇಲೆ ಹಕ್ಕುಗಳನ್ನು ಹೊಂದಿದ್ದರೆ, ಭಾರತವು ರವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ಮೇಲೆ ಹಕ್ಕುಗಳನ್ನು ಹೊಂದಿತ್ತು. ಒಪ್ಪಂದದ ಮುಕ್ತಾಯದ ನಂತರ, ಕೇಂದ್ರ ಸರಕಾರವು ಸಿಂಧೂ ಜಲಾನಯನ ಪ್ರದೇಶದಲ್ಲಿ ಹಲವಾರು ಜಲವಿದ್ಯುತ್ ಯೋಜನೆಗಳನ್ನು ಅನುಸರಿಸುತ್ತಿದೆ. ಇವುಗಳಲ್ಲಿ ಸಾವಲ್ಕೋಟ್, ರಾಟ್ಲೆ, ಬರ್ಸರ್, ಪಕಲ್ ದುಲ್, ಕ್ವಾರ್, ಕಿರು ಮತ್ತು ಕೀರ್ಥೈ ಹಂತ 1 ಮತ್ತು ಹಂತ 2 ಸೇರಿವೆ.

ಏಪ್ರಿಲ್ 22, 2025ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯ ಬೆನ್ನೆಲುಬನ್ನು ಮುರಿಯಲು ಭಾರತ ಸಿಂಧಿ ಜಲ ಒಪ್ಪಂದವನ್ನು ರದ್ದುಗೊಳಿಸಿತ್ತು.

ಏನಿದು ಯೋಜನೆ?

ದುಲ್ಹಸ್ತಿ ಹಂತ-2 ಯೋಜನೆಯು ಅಸ್ತಿತ್ವದಲ್ಲಿರುವ 390 ಮೆಗಾವ್ಯಾಟ್ ದುಲ್ಹಸ್ತಿ ಹಂತ-1 ಜಲವಿದ್ಯುತ್ ಯೋಜನೆಯ (ದುಲ್ಹಸ್ತಿ ವಿದ್ಯುತ್ ಕೇಂದ್ರ) ವಿಸ್ತರಣೆಯಾಗಿದ್ದು, ಇದು 2007ರಲ್ಲಿ ರಾಷ್ಟ್ರೀಯ ಜಲವಿದ್ಯುತ್ ನಿಗಮ ಲಿಮಿಟೆಡ್ (ಎನ್‌ಎಚ್‌ಪಿಸಿ) ಕಾರ್ಯಾರಂಭ ಮಾಡಿದಾಗಿನಿಂದ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಯೋಜನೆಯ ಪ್ರಕಾರ, ಹಂತ-1 ವಿದ್ಯುತ್ ಸ್ಥಾವರದಿಂದ ನೀರನ್ನು 3,685 ಮೀಟರ್ ಉದ್ದ ಮತ್ತು 8.5 ಮೀಟರ್ ವ್ಯಾಸದ ಪ್ರತ್ಯೇಕ ಸುರಂಗದ ಮೂಲಕ ತಿರುಗಿಸಿ, ಹಂತ-2ಕ್ಕೆ ಕುದುರೆ ಲಾಳದ ಆಕಾರದ ಕೊಳವನ್ನು ರಚಿಸಲಾಗುತ್ತದೆ. ಜಲವಿದ್ಯುತ್ ಯೋಜನೆಗೆ ಒಟ್ಟು ಅಂದಾಜು ಭೂಪ್ರದೇಶ 60.3 ಹೆಕ್ಟೇರ್ ಆಗಿದೆ. ಈ ಯೋಜನೆಗೆ ಕಿಶ್ತ್ವಾರ್ ಜಿಲ್ಲೆಯ ಬೆಂಜ್ವಾರ್ ಮತ್ತು ಪಾಲ್ಮರ್ ಎಂಬ ಎರಡು ಗ್ರಾಮಗಳಿಂದ 8.27 ಹೆಕ್ಟೇರ್ ಖಾಸಗಿ ಭೂಮಿ ಬೇಕಾಗುತ್ತದೆ.

ಭಾರತದ ಜತೆಗಿನ ಎಫ್‌ಟಿಎ ನ್ಯೂಜಿಲೆಂಡ್‌ಗೆ ಲಾಭ: ಪಿಎಂ

ವೆಲ್ಲಿಂಗ್ಟನ್: ಭಾರತ-ನ್ಯೂಜಿಲೆಂಡ್ ಹೊಸದಾಗಿ 'ಮುಕ್ತ ವ್ಯಾಪಾರ ಒಪ್ಪಂದ' ಮಾಡಿಕೊಂಡಿವೆ. ಅಂದುಕೊಂಡಿದ್ದನ್ನು ಸಾಧಿಸಲಾಗಿದೆ. ಇದು ಎರಡೂ ದೇಶಗಳಿಗೂ ಅತ್ಯುನ್ನತ ಭವಿಷ್ಯ ರೂಪಿಸಿಕೊಳ್ಳಲು ಸಹಾಯಕವಾಗಲಿದೆ ಎಂದು ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸನ್ ಶ್ಲಾಘಿಸಿದ್ದಾರೆ.

ಮುಂದಿನ 15 ವರ್ಷಗಳಲ್ಲಿ ನ್ಯೂಜಿಲೆಂಡ್ ಭಾರತದಲ್ಲಿ 2000 ಕೋಟಿ ಅಮೆರಿಕನ್ ಡಾಲರ್‌ಗಳಷ್ಟು ಬಂಡವಾಳ ಹೂಡಿಕೆ ಮಾಡಲಿದ್ದು, ಆ ಹೂಡಿಕೆಯ ಚೌಕಟ್ಟು ಯುರೋಪಿಯನ್ ಮುಕ್ತ ವ್ಯಾಪಾರ ಸಂಘದ ವಿಧಾನವನ್ನು ಹೋಲುತ್ತದೆ.

ಮೊದಲ ಅಧಿಕಾರಾವಧಿಯಲ್ಲಿ ಭಾರತದ ಜತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಾಗಿ ಹೇಳಿದ್ದೆ. ಅದನ್ನೀಗ ಸಾಧಿಸಿದ್ದೇವೆ. ಭಾರತದ 140 ಕೋಟಿ ಗ್ರಾಹಕರ ವಿಶಾಲ ಮಾರುಕಟ್ಟೆಗೆ ಪ್ರವೇಶ ಪಡೆಯುವುದೇ ಪ್ರಮುಖ ಆರ್ಥಿಕ ಪ್ರಗತಿಗೆ ಕಾರಣವಾಗಲಿದೆ. ಈ ಒಪ್ಪಂದವು ನ್ಯೂಜಿಲೆಂಡ್‌ನಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿ, ಆದಾಯ ಗಳಿಕೆ, ಬಲವಾದ ರಫ್ತು ಬೆಳವಣಿಗೆಗೆ ಕಾರಣವಾಗಲಿದೆ ಎಂದು 'ಎಕ್ಸ್'ನಲ್ಲಿ ಬರೆದುಕೊಂಡಿ ದ್ದಾರೆ. ಈ ಒಪ್ಪಂದವನ್ನು 'ಕೆಟ್ಟ ಒಪ್ಪಂದ' ಎಂದು ನ್ಯೂಜಿಲೆಂಡ್ ವಿದೇಶಾಂಗ ಸಚಿವ ವಿನ್ಸ್ಟನ್ ಪೀಟರ್ ಟೀಕಿಸಿದ 2 ದಿನಗಳ ಬಳಿಕ ಲುಕ್ಸನ್ ಪ್ರತಿಕ್ರಿಯೆ ಹೊರಬಿದ್ದಿದೆ.

ಪ್ರಧಾನಿ ಲುಕ್ಸನ್ ಅವರ ಭಾರತ ಭೇಟಿ ವೇಳೆ ಮಾರ್ಚ್‌ನಲ್ಲಿ ಶುರುವಾದ ಎರಡೂ ದೇಶಗಳ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಗಳು ಡಿಸೆಂಬರ್‌ನಲ್ಲಿ ಪೂರ್ಣಗೊಂಡು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಇದು ಭಾರತದಲ್ಲಿ ಅತ್ಯಂತ ಕ್ಷಿಪ್ರಗತಿಯಲ್ಲಿ ನಡೆದು ಪೂರ್ಣಗೊಂಡ ವ್ಯಾಪಾರ ಒಪ್ಪಂದವಾಗಿದೆ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ನೇಣಿಗೆ ಶರಣಾದ ಚಾಲಕ

ಗುಡಿಬಂಡೆ: ಪಟ್ಟಣದ ಬಾಪೂಜಿ ನಗರದ ನಿವಾಸಿ ಬಾಲಾಜಿ ಸಿಂಗ್ (32) ರಾತ್ರಿ ಸಮಯದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಾವಿನ ಬಗ್ಗೆ ಮೃತನ ಪೋಷಕರು ಅನುಮಾನ ವ್ಯಕ್ತಪಡಿಸಿದ್ದು, ಸೂಕ್ತ ತನಿಖೆಗೆ ಒತ್ತಾಯಿಸಿದ್ದಾರೆ. ಮೃತ ಬಾಲಾಜಿ ಸಿಂಗ್ ಚಾಲಕನಾಗಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಮನೆಯಲ್ಲಿ ಹೆಂಡತಿ, ಮಗು ಹಾಗೂ ತಾಯಿಯೊಂದಿಗೆ ಸಂತೋಷವಾಗಿಯೇ ಇರುತ್ತಿದ್ದನಂತೆ, ಕಳೆದ ರಾತ್ರಿ ಏನಾಯ್ತೋ ಏನೋ ಮನೆಗೆ ಹೋಗಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಕುರಿತು ಮೃತನ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದು, ಪಟ್ಟಣದ ಬೇರೊಬ್ಬ ಯುವತಿಯೊಂದಿಗೆ ಬಾಲಾಜಿಗೆ ಸಂಪರ್ಕವಿತ್ತು ಎನ್ನಲಾಗಿದೆ. ಇದೇ ವಿಚಾರವಾಗಿ ಪತಿ-ಪತ್ನಿ ನಡುವೆ ಆಗಾಗ ಜಗಳ ನಡೆಯುತ್ತಿತ್ತು. ಈ ಬಗ್ಗೆ ರಾಜಿ ಪಂಚಾಯ್ತಿ ಎಲ್ಲಾ ಮಾಡಿ ಅವಳಿಂದ ದೂರ ಮಾಡಿದ್ದೆವು. ಆದರೆ ಅವಳು ನನ್ನ ಮಗನಿಗೆ ಫೋನ್ ಮಾಡಿ ಕಾಟ ಕೊಡ್ತಾ ಇದ್ದಳು. ಅವಳ ಮೇಲೆ ನಮಗೆ ಅನುಮಾನ ಇದೆ ಎಂದು ಮೃತನ ತಾಯಿ ಆರೋಪಿಸಿದ್ದಾರೆ. ವಿಷಯ ತಿಳಿದ ಕೂಡಲೇ ಗುಡಿಬಂಡೆ ಪೊಲೀಸ್ ಠಾಣೆಯ ಪಿಎಸ್ಐ ಗಣೇಶ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದು, ತನಿಖೆಯ ನಂತರವೇ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬರಬೇಕಿದೆ.

ವೈಕುಂಠ ಏಕಾದಶಿ ನಾಳೆ: ವಿಶೇಷ ಪೂಜೆ



ಕೆ ಆರ್‌ಪೇಟೆ: ಡಿ 30 ರಂದು ವೈಕುಂಠ ಏಕಾದಶಿ ಯಂದು ಪಟ್ಟಣದ ಹೇಮಗಿರಿ ರಸ್ತೆಯಲ್ಲಿರುವ ಶ್ರೀ ಮುತ್ತುರಾಯಸ್ವಾಮಿ ದೇವಾಲಯದದಲ್ಲಿ ವಿಶೇಷ ಪೂಜೆ ಮುತ್ತುರಾಯಸ್ವಾಮಿ ದೇವಾಲ ಯದಲ್ಲಿ ದ್ವಾರದಲ್ಲಿ ಸ್ವರ್ಗದ ಬಾಗಿಲು ತೆರೆದಿದೆ. ಭಕ್ತರುಗಳು ಸ್ವರ್ಗದ ಬಾಗಿಲು ಮೂಲಕ ದೇವಾ ಲಯಕ್ಕೆ ಪ್ರವೇಶ ಮಾಡುವುದರಿಂದ ಇಷ್ಟಾರ್ಥ ಗಳು ವೃದ್ಧಿ ಆಗುತ್ತವೆ ಎಂದು ನಂಬಿಕೆ ಇದೆ ಎಂದು ಗ್ರಾಮದ ಮುಖಂಡ ದೇವರ ಭಕ್ತ ಕೃಷ್ಣಪ್ಪ ತಿಳಿಸಿದರು.ಅಲ್ಲದೇ ಬರುವ ಭಕ್ತಾದಿಗಳಿಗೆ ಸುಮಾರು ರು10 ಸಾವಿರ ಲಡ್ಡು ಪ್ರಸಾದ ಏರ್ಪಡಿಸ ಲಾಗಿದೆ. ಬೆಳಗ್ಗೆ6ರಿಂದ ರಾತ್ರಿ10ರವರೆಗೆ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯುತ್ತದೆ ಎಂದರು. ಈ ಸಂದರ್ಭದಲ್ಲಿ ದೇವಾಲಯದ ಪ್ರಧಾನ ಅರ್ಚ ಕರು ಮುತ್ತುರಾಜ್ ಹಾಗೂ ವಕೀಲ ಚಟ್ಟಂಗೆರೆ ನಾಗೇಶ್ ಇದ್ದರು.

ಮಕ್ಕಳಿಗೆ ಸಂಸ್ಕಾರದ ಶಿಕ್ಷಣವೂ ಮುಖ್ಯ

ಶಿಡ್ಲಘಟ್ಟ : ಶೈಕ್ಷಣಿಕ ಬೆಳವಣಿಗೆಗೆ ಶಾಲೆಯಲ್ಲಿ ಸಿಗುವ ಪಠ್ಯ ಶಿಕ್ಷಣದ ಜತೆಗೆ ಮನೆಯಲ್ಲಿ ಪಾಲಕರು ನೀಡುವ ಸಂಸ್ಕಾರದ ಶಿಕ್ಷಣವೂ ಬಹಳ ಮುಖ್ಯ ಎಂದು ಸಿಟಿಜನ್ ಶಾಲೆ ಸಂಸ್ಥಾಪಕ ಅಧ್ಯಕ್ಷರು ಹಾಗೂ ಶಿಡ್ಲಘಟ್ಟ ಖಾಸಗೀ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ರಾಮಚಂದ್ರಾರೆಡ್ಡಿ ತಿಳಿಸಿದರು. ತಾಲೂಕಿನ ಹಂಡಿಗನಾಳ ಗ್ರಾಮದಲ್ಲಿರುವ ಬಾಲಾಜಿ ಕನ್ವೆನ್ಷನ್ ಹಾಲ್ ನಲ್ಲಿ ಸಿಟಿಜನ್ ಶಾಲೆ ಶಿಡ್ಲಘಟ್ಟ ಹಮ್ಮಿಕೊಂಡಿದ್ದ ಏರ್ಪಡಿಸಿದ್ದ ದಶಮನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನೆಯೇ ಮೊದಲ ಪಾಠಶಾಲೆ ಮತ್ತು ಪಾಲಕರು ಮೊದಲ ಶಿಕ್ಷಕರು. ಸಂಸ್ಕಾರಯುತ ಶಿಕ್ಷಣವು ಮಗುವಿನ ನಡವಳಿಕೆ, ಮೌಲ್ಯಗಳು ಮತ್ತು ಸಾಮಾಜಿಕ ಕೌಶಲಗಳನ್ನು ರೂಪಿಸುತ್ತದೆ. ಶಾಲೆಯಲ್ಲಿ ಪಠ್ಯ ಶಿಕ್ಷಣವು ಜ್ಞಾನವನ್ನು ನೀಡಿದರೆ, ಮನೆಯಲ್ಲಿ ಸಂಸ್ಕಾರದ ಶಿಕ್ಷಣವು ಮಗುವಿನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಶಾಲೆಯಲ್ಲಿ ಕಲಿತ ಜ್ಞಾನವನ್ನು ಸಮಾಜದಲ್ಲಿ ಅನ್ವಯಿಸಲು ಮತ್ತು ಉತ್ತಮ ನಾಗರಿಕರಾಗಲು ಸಂಸ್ಕಾರದ ಶಿಕ್ಷಣವು ಸಹಾಯ ಮಾಡುತ್ತದೆ ಎಂದರು. ಈ ಸಂದರ್ಭದಲ್ಲಿ ಶ್ರೀಮತಿ ಮಂಗಳಮ್ಮ,ರಂಗಾರೆಡ್ಡಿ, ಅನಿಲ್ ಚೌರಿ, ಭವ್ಯ, ಡಾ ಅಜಯ್ ಶೇಖರ್,ಶ್ವೇತಾ, ಮದನಗೋಪಾಲ್, ಅಕ್ಷರ ಪಿ ಯು ಕಾಲೇಜು ಪ್ರಕಾಶ್, ಮುಖ್ಯ ಶಿಕ್ಷಕ ಎನ್ ಸತೀಶ್,ಕ್ರೆಸೆಂಟ್ ಶಾಲೆಯ ತಮಿಮ್ ಪಾಶಾ, ಡಾಲ್ಫಿನ್ ಶಾಲೆಯ ಅಶೋಕ್, ಸೇರಿದಂತೆ ಶಿಕ್ಷಕರ ಸಿಬ್ಬಂದಿ ಪೋಷಕರು ಮಕ್ಕಳು ಹಾಜರಿದ್ದರು.

ವೆಳಪಿ ಗ್ರಾಮದಲ್ಲಿ ಹನುಮ ಜಯಂತಿ

ಗೌರಿಬಿದನೂರು: ವೆಳಪಿ ಗ್ರಾಮದಲ್ಲಿ ಗ್ರಾಮಸ್ಥರು ಹಾಗೂ ಭಕ್ತಾಧಿಗಳು ಅತ್ಯಂತ ಶ್ರದ್ಧಾಭಕ್ತಿಯಿಂದ ಹನುಮ ಜಯಂತಿಯನ್ನು ನೆರವೇರಿಸಿದರು. ಕ್ಷೇತ್ರದ ಶಾಸಕ ಕೆಎಚ್.ಪುಟ್ಟಸ್ವಾಮಿಗೌಡರು ವೆಳಪಿ ಗ್ರಾಮದ ಹನುಮ ದೇವಸ್ಥಾನಕ್ಕೆ ಬೇಟಿ ನೀಡಿ ವಿಶೇಷ ಪೂಜೆ ಯನ್ನು ಸಲ್ಲಿಸುವ ಮೂಲಕ ಕ್ಷೇತ್ರದ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದರು. ದೇವಾಲಯದಲ್ಲಿ ಪುರೋಹಿತರಿಂದ ದೇವತಾ ಕಾರ್ಯಗಳು ನೆರವೇರಿದವು, ಮುಂಜಾನೆ ದೇವಸ್ಥಾನದಲ್ಲಿ ಹೋಮ ಹವನಗಳನ್ನು ನೆರವೇರಿಸಲಾಯಿತು. ಭಕ್ತಾಧಿಗಳಿಗೆ ತೀರ್ಥ ಪ್ರಸಾದ ವಿನಿಯೋಗಜಅನ್ನ ಸಂತರ್ಪಣೆ ನೆರವೇರಿಸಲಾಯಿತು.

{ ಬಸವರಾಜ ಬೊಮ್ಮಾಯಿ } ಸಂಸದ

ಡ್ರಗ್ಸ್ ಬಳಕೆ ಕರ್ನಾಟಕದಲ್ಲಿ ಅತಿ ಹೆಚ್ಚಿದೆ. ಅದನ್ನು ನಿಯಂತ್ರಿಸಲು ಸರಕಾರ ಸ್ಪೆಷಲ್ ಸ್ಕ್ವಾಡ್ ಮಾಡಿದ್ದಾರೆ. ಆದರೆ, ಪೊಲೀಸರ ಭಯ ಇಲ್ಲ. ಹಲವಾರು ಪ್ರಸಂಗಗಳಲ್ಲಿ ಪೊಲೀಸರು ಕೆಲವರನ್ನು ಬಂಧಿಸಿದ್ದಾರೆ. ಇದಕ್ಕಾಗಿ ವಿಶೇಷ ಕಾನೂನಿದೆ. ಅದನ್ನು ಬಳಕೆ ಮಾಡುತ್ತಿಲ್ಲ.

ಜೀವನದಲ್ಲಿ ಒಳ್ಳೆಯ ತೀರ್ಮಾನಗಳಿಂದ ಮಾತ್ರ ಮುಂದೆ ಬರಲು ಸಾಧ್ಯ: ಶಾಸಕ

ಕೆಟ್ಟವರ ಸಹವಾಸದಿಂದ ದೂರವಿರಿ

ಬಾಗೇಪಲ್ಲಿ: ಸಾಧಿಸಬೇಕು ಎನ್ನುವ ಛಲ ಇದ್ದರೆ ಯಾವುದೇ ಕ್ಷೇತ್ರದಲ್ಲಿ ಸಾಧಿಸಬಹುದು ಎಂದರಲ್ಲದೆ ಕೆಟ್ಟ ಸಹವಾಸದಿಂದ ದೂರ ಸರಿಯುವಂತೆ ಶಾಂತಿ ನಿಕೇತನ್ ವಿದ್ಯಾ ಸಂಸ್ಥೆ ಟ್ರಸ್ಟ್ ನ ಕಾರ್ಯದರ್ಶಿ ಹಾಗೂ ಬಾಗೇಪಲ್ಲಿ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಪಟ್ಟಣದ ಶಾಂತಿ ನಿಕೇತನ್ ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ಶಾಲೆಯ 26ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಜೀವನದಲ್ಲಿ ನಿಧಿಷ್ಟವಾದಂತಹ ಕಠಿಣವಾದಂತಹ ನಿಲುವು ನಿಮ್ಮಲಿರಬೇಕು. ನಿಮ್ಮದೆ ಆದಂತಹ ತೀರ್ಮಾನ ಇರಬೇಕು ಆದರೆ ಯಾವುದೇ ಒಂದು ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ನಮ್ಮ ತೀರ್ಮಾನವೇ ಅಂತಿಮವಾಗಿರಬೇಕು. ಆಗ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪರೀಕ್ಷೆಯಲ್ಲಿ ಅಂಕಗಳಿಗೆ ಮಾತ್ರ ಸೀಮಿತಗೊಳಿಸದೆ ಮಕ್ಕಳ ಚಲನವಲನಗಳ ಬಗ್ಗೆ ಕಾಳಜಿವಹಿಸಬೇಕಾದ ಅಗತ್ಯವಿದೆ. ಕೇವಲ ಅಂಕ ಪಡೆದರೆ ಸಾಲದು, ಕೆಟ್ಟ ಸಹವಾಸಗಳಿಂದ ದೂರ ಮಾಡುವ ಮೂಲಕ ಮಕ್ಕಳನ್ನ ಸರಿದಾರಿಗೆ ತಂದು ಅಡ್ಡ ದಾರಿ ಹಿಡಿಯುವುದನ್ನು ತಪ್ಪಿಸುವಂತಹ ಕೆಲಸ ಮಾಡಬೇಕಾಗಿರುವುದು ಪೋಷಕರ ಜವಾಬ್ದಾರಿ ಎಂದು ಪೋಷಕರಿಗೆ ಕಿವಿಮಾತು ಹೇಳಿದರು.

ಶಾಂತಿ ನಿಕೇತನ್ ವಿದ್ಯಾ ಸಂಸ್ಥೆಯ ಅಧ್ಯಕ್ಷರು ಹಾಗೂ ಮಾಜಿ ಜಿ.ಪಂ ಅಧ್ಯಕ್ಷ ಎಂ.ಬಿ.ಚಿಕ್ಕನರಸಿಂಹಯ್ಯ ಮಾತನಾಡಿ, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ವಿಚಾರದಲ್ಲಿ ಶಾಲೆಯಲ್ಲಿ ಶಿಕ್ಷಕರ ಪಾತ್ರ ಎಷ್ಟು ಮುಖ್ಯವೋ ಮನೆಯಲ್ಲಿ ಪೋಷಕರ ಪಾತ್ರವೂ ಸಹ ಅಷ್ಟೇ ಮುಖ್ಯವಾಗಿರುತ್ತೆ. ಪೋಷಕರು ತಮ್ಮ ಮಕ್ಕಳ ಚಲನವಲನಗಳ ಬಗ್ಗೆ ಗಮನಹರಿಸಬೇಕು. ನಮ್ಮ ಶಾಲೆಯಲ್ಲಿ 10ನೇ ತರಗತಿ ಪರೀಕ್ಷೆಯಲ್ಲಿ ಕಳೆದ ವರ್ಷ ನೂರಕ್ಕೆ ನೂರರಷ್ಟು ಫಲಿತಾಂತ ಬಂದಿದೆ. ಈ ವರ್ಷವೂ ಸಹ ಇದೇ ರೀತಿಯ ಫಲಿತಾಂಶ ತರುವಲ್ಲಿ ಶಿಕ್ಷಕರು ಪ್ರಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ ಎಂದ ಅವರು ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡುವುದು ಸುಲಭದ ಮಾತಲ್ಲ, ಸಾಧನೆ ಮಾಡಬೇಕಾದರೆ ಕಠಿಣ

ಪರಿಶ್ರಮ, ಸಾಧಿಸಬೇಕು ಎನ್ನುವ ಛಲ ಇದ್ದರೆ ಮಾತ್ರ ಗುರಿಯನ್ನು ತಲುಪಲು ಸಾಧ್ಯ ಎಂದರು.

ಅರಣ್ಯ ಇಲಾಖೆಯ ಪ್ರಿನ್ಸಿಪಲ್ ಸೆಕ್ರೇಟರಿ ಮನೋಜ್ ಕುಮಾರ್‌ಮಾತನಾಡಿ, ಮಕ್ಕಳನ್ನು ಯಾವುದೇ ಕಾರಣಕ್ಕೂ ನಕಾರತ್ಮಕವಾಗಿ ಮಾತನಾಡುವುದರಿಂದ ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕೆ ತೊಂದರೆ ಆಗುತ್ತೆ ಎಂದು ತಾಯಂದಿರಿಗೆ ಕಿವಿಮಾತು ಹೇಳಿದರು. ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಬೇಕು ಎನ್ನುವುದನ್ನು ಬಾಲ್ಯದಿಂದಲ್ಲೇ ಕಲಿಬೇಕಾಗಿದೆ. ಜೀವನ ಒಂದು ನಾಟಕ. ನಾಟಕದಲ್ಲಿ ಕಥೆಯನ್ನು ಬೆರೆಯವರು ಬರೆಯಬೇಕು ಆದರೆ ನಿಜಜೀವನದಲ್ಲಿ ನಮ್ಮ ಕಥೆಯನ್ನು ನಾವೇ ಬರೆದುಕೊಳ್ಳಬೇಕು. ನಾವು ಮಾಡುವ ಕೆಲಸದಲ್ಲಿ ನಂಭಿಕೆ ಇದ್ದರೆ ಮಾತ್ರ ಯಾವುದೇ ಕ್ಷೇತ್ರದಲ್ಲಿ ಸಾಧಿಸಲು ಸಾಧ್ಯವಾಗುತ್ತೆ ಎಂದರು.

ಈ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳಿಂದ ನಾಟಕ, ನೃತ್ಯ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅಲ್ಲದೆ ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿ ವಿ.ರಮೇಶ್, ಎಸ್.ಪಿ.ಡಿ ಅಧಿಕಾರಿ ಕೆ.ವೆಂಕಟೇಶ್, ಶಾಂತಿ ನಿಕೇತನ್ ಶಾಲೆಯ ಪ್ರಿನ್ಸಿಪಾಲ್ ನವೀನ್ ಕುಮಾರ್,ಶಾಲೆಯ ಮುಖ್ಯಸ್ಥ ಡಿ.ಎನ್.ರಘುನಾಥ್ ಸೇರಿದಂತೆ ಶಾಲೆಯ ಶಿಕ್ಷಕರು ಮತ್ತಿತರರು ಇದ್ದರು.

ಶಾಂತಿ ನಿಕೇತನ್ ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ಶಾಲೆಯ 26ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಉದ್ಘಾಟಿಸಿದರು.

> **ಕಷ್ಟಪಟ್ಟು ಓದುವ ಬದಲಿಗೆ ಇಷ್ಟಪಟ್ಟು ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು, ಚೆನ್ನಾಗಿ ಓದಿ ವಿದ್ಯಾವಂತರಾಗಿ ಉನ್ನತ ಸ್ಥಾನಮಾನಗಳನ್ನು ಅಲಂಕರಿಸಬೇಕು, ಯಾವುದೇ ಕಾರಣಕ್ಕೂ ಹೆತ್ತ ತಂದೆ ತಾಯಿ, ಹುಟ್ಟಿದ ಊರು, ವಿದ್ಯೆ ಕಲಿಸಿದ ಗುರುಗಳನ್ನು ಯಾವುದೇ ಕಾರಣಕ್ಕೂ ಮರೆಯಬಾರದು ಅಲ್ಲದೆ ತಂದೆ ತಾಯಿ, ಗುರು ಹಿರಿಯರನ್ನು ಗೌರವಿಸುವುದನ್ನು ಬಾಲ್ಯದಿಂದಲ್ಲೇ ಜೀವನದಲ್ಲಿ ಅಳವಡಿಸಿಕೊಳ್ಳಬೇಕು**
> **- ಎಸ್.ಎನ್. ಸುಬ್ಬಾರೆಡ್ಡಿ,** ಶಾಸಕ,ಬಾಗೇಪಲ್ಲಿ

ಸೇತುವೆ ನಿರ್ಮಾಣಕ್ಕೆ ಚಾಲನೆ

ಗುಡಿಬಂಡೆ: ತಾಲೂಕಿನ ಹಂಪಸಂದ್ರ ಗ್ರಾಪಂ ವ್ಯಾಪ್ತಿಯ ನಲ್ಲಗೊಂಡಯ್ಯಗಾರಿ ಹಳ್ಳಿ ಹಾಗೂ ಪುಲಸಾನಿವೊಡ್ಡು ಮಾರ್ಗದ ಮಧ್ಯೆ 5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಸುಬ್ಬಾರೆಡ್ಡಿ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಲ್ಲಗೊಂಡಯ್ಯಗಾರಿ ಹಳ್ಳಿ ಹಾಗೂ ಪುಲಸಾನಿವೊಡ್ಡು ಗ್ರಾಮದ ಜನತೆಗೆ ಈ ಮಾರ್ಗದಲ್ಲಿ ಸಂಚರಿಸಲು ತುಂಬಾ ಸಮಸ್ಯೆಯಾಗಿತ್ತು, ಅದರಲ್ಲೂ ಮಳೆಗಾಲದಲ್ಲಿ ಈ ಮಾರ್ಗದಲ್ಲಿ ಓಡಾಡುವುದೇ ಕಷ್ಟಕರವಾಗಿತ್ತು. ಈ ಭಾಗದಲ್ಲಿ ಒಂದು ಕಾಲುವೆ ಹರಿಯುತ್ತಿದ್ದು ಅದರ ಮೇಲೆ ಸೇತುವೆ ನಿರ್ಮಾಣ ಮಾಡಿಕೊಡಲು ಗ್ರಾಮಸ್ಥರು ಮನವಿ ಮಾಡಿದ್ದರು. ಅವರ ಮನವಿಯಂತೆ ಇಂದು 5 ಕೋಟಿ ಅನುದಾನದಲ್ಲಿ ಸೇತುವೆ ಕಾಮಗಾರಿ ನಿರ್ಮಾಣವಾಗಲಿದೆ. ಇದರ ಜೊತೆಗೆ ಗುಂಡ್ಲಹಳ್ಳಿ, ಭತ್ತಲಹಳ್ಳಿ ಭಾಗದಲ್ಲೂ ಸಹ ಸೇತುವೆ ನಿರ್ಮಾಣ ಮಾಡಲು ಅನುದಾನಕ್ಕಾಗಿ ಮನವಿ ಮಾಡಲಾಗಿದೆ. ಅದಷ್ಟು ಶೀಘ್ರ ಆ ಕಾಮಗಾರಿಗಳಿಗೂ ಚಾಲನೆ ನೀಡಲಾಗುವುದು ಎಂದರು.

ಇನ್ನೂ ಗ್ರಾಮಸ್ಥರು ಈ ಕಾಮಗಾರಿ ನಡೆಯುವಾಗ ಪರಿಶೀಲಿಸಬೇಕು. ಕಾಮಗಾರಿಯಲ್ಲಿ ಏನಾದರೂ ಲೋಪ ಕಂಡುಬಂದರೇ ಕೂಡಲೇ ನನಗೆ ಮಾಹಿತಿ ನೀಡಬೇಕು. ಗುಣಮಟ್ಟದ ಕಾಮಗಾರಿ ನಿರ್ವಹಿಸದೇ ಇದ್ದರೇ ಕಾಮಗಾರಿಯ ಬಿಲ್ ಮಾಡಲು ಬಿಡುವುದಿಲ್ಲ. ಜನರೂ ಸಹ ಕಾಮಗಾರಿಯ ಗುಣಮಟ್ಟವನ್ನು ಆಗಿದ್ದಾಂಗೆ ಪರಿಶೀಲನೆ ಮಾಡುತ್ತಿರಬೇಕು. ಇನ್ನೂ ಗುಡಿಬಂಡೆ ಕೆರೆ ಕಟ್ಟೆಯ ಅಲ್ಲಲ್ಲಿ ರಸ್ತೆ ಕುಸಿದಿರುವ ಬಗ್ಗೆ ವರದಿಯಾಗಿತ್ತು. ಈಗಾಗಲೇ ಈ ಕುರಿತು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳಿಗೂ ತಿಳಿಸಿದ್ದು, ಅನುದಾನಕ್ಕಾಗಿ ಮನವಿ ಸಲ್ಲಿಸಿದ್ದಾರೆ. ಒಂದು ವಾರದಲ್ಲಿ ಅನುದಾನ ಬಿಡುಗಡೆಯಾಗುವ ಮಾಹಿತಿಯಿದ್ದು, ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದರು.

ಈ ಸಮಯದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆದಿರೆಡ್ಡಿ, ಸಣ್ಣ ನೀರಾವರಿ ಇಲಾಖೆಯ ಸುನೀಲ್, ಮುಖಂಡ ಲಕ್ಷ್ಮೀನಾರಾಯಣ, ಆದಿನಾರಾಯಣಪ್ಪ, ಬಾಲಕೃಷ್ಣಾರೆಡ್ಡಿ, ನಾರಾಯಣಸ್ವಾಮಿ ಸೇರಿದಂತೆ ಹಲವರು ಇದ್ದರು.

ಗುಡಿಬಂಡೆ ತಾಲೂಕಿನ ಹಂಪಸಂದ್ರ ಗ್ರಾಪಂ ವ್ಯಾಪ್ತಿಯ ನಲ್ಲಗೊಂಡಯ್ಯಗಾರಿ ಹಳ್ಳಿ ಹಾಗೂ ಪುಲಸಾನಿವೊಡ್ಡು ಮಾರ್ಗದ ಮಧ್ಯೆ 5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಸುಬ್ಬಾರೆಡ್ಡಿ ಭೂಮಿ ಪೂಜೆ ನೆರವೇರಿಸಿದರು.

ಸೈನಿಕ ಶಾಲೆಗೆ ಸಂಸದ ಯದುವೀರ್ ಭೇಟಿ

ಮಡಿಕೇರಿ: 2007 ರಿಂದ ರಕ್ಷಣಾ ಸಚಿವಾಲಯದ ಅಧೀನದಲ್ಲಿರುವ ಪ್ರಖ್ಯಾತ ವಸತಿ ಶಿಕ್ಷಣ ಸಂಸ್ಥೆಯಾದ ಕೊಡಗು ಸೈನಿಕ ಶಾಲೆ ತನ್ನ ಶೈಕ್ಷಣಿಕ ಹಾಗೂ ಸರ್ವಾಂಗೀಣ ಅಭಿವೃದ್ಧಿಯಲ್ಲಿ ನಿರಂತರವಾಗಿ ಮಹತ್ವದ ಪ್ರಗತಿ ಸಾಧಿಸುತ್ತಿದೆ.

ಶಾಲೆಯ ಪ್ರಾಂಶುಪಾಲರಾದ ಕರ್ನಲ್ ಅಮರ್‌ಜೀತ್ ಸಿಂಗ್ ಶಾಲೆಯ ಸ್ಥಳೀಯ ಆಡಳಿತ ಮಂಡಳಿಯ ಸದಸ್ಯರೂ ಹಾಗೂ ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್‌ಅವರನ್ನು ಭೇಟಿಯಾಗಿ, ಶಾಲೆಯ ಸಾಧನೆಗಳು ಹಾಗೂ ಗಣನೀಯ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲರು, ಶಾಲೆಯ ಪರಿಣಾಮಕಾರಿ ಕಾರ್ಯನಿರ್ವಹಣೆ, ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್ಡಿಎ) ಹಾಗೂ ನೌಕಾ ಅಕಾಡೆಮಿ(ಐಎನ್ಎ)ಗೆ ಸೇರ್ಪಡೆಯಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯ ಏರಿಕೆ ಹಾಗೂ ನಾಗರಿಕ ಸೇವೆಗಳನ್ನೂ ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರಾದ್ಯಂತ ದೇಶಸೇವೆ ಯಲ್ಲಿ ತೊಡಗಿರುವ ಹಳೆಯ ವಿದ್ಯಾರ್ಥಿಗಳ ಸಾಧನೆಗಳನ್ನು ವಿವರಿಸಿದರು.

ಜೊತೆಗೆ, ಸಿಬಿಎಸ್ಸಿ ಬೋರ್ಡ್ ಪರೀಕ್ಷೆಗಳಲ್ಲಿ ಶಾಲೆಯ ನಿರಂತರ ಶೈಕ್ಷಣಿಕ ಸಾಧನೆ ಹಾಗೂ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ತೋರಿದ ಹಿರಿಮೆ ಯನ್ನು ಕುರಿತು ಮಾಹಿತಿ ಹಂಚಿಕೊಂಡರು.

ಈ ಸಂದರ್ಭ ಮಾತನಾಡಿದ ಸಂಸದರು, ಶಾಲೆಯ ಬೆಳವಣಿಗೆ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಕುರಿತು ಸಂತಸ ವ್ಯಕ್ತಪಡಿಸಿದರು. ಶಾಲೆಯನ್ನು ಇನ್ನಷ್ಟು ಬಲಪಡಿಸಿ, ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯಲು ಸಂಪೂರ್ಣ ಬೆಂಬಲ ನೀಡುವುದಾಗಿ ಸಂಸದರು ಭರವಸೆ ನೀಡಿದರು.

ಶಾಲೆಯ ಪ್ರಾಂಶುಪಾಲರಾದ ಕರ್ನಲ್ ಅಮರ್ ಜೀತ್ ಸಿಂಗ್ ಶಾಲೆಯ ಸ್ಥಳೀಯ ಆಡಳಿತ ಮಂಡಳಿಯ ಸದಸ್ಯರೂ ಹಾಗೂ ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿಮಾಡಿದರು.

ಹನುಮ ಜಯಂತಿ: ಐಕ್ಯತೆ ಮೆರೆದ ಶೋಭಾಯಾತ್ರೆ

ಚಾಮರಾಜನಗರ: ಶ್ರೀ ಹನುಮ ಜಯಂತ್ಯುತ್ಸವ ಸಮಿತಿ ವತಿಯಿಂದ ಹನುಮ ಜಯಂತಿ ಹಾಗೂ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ಶ್ರೀಅಭಯ ಕಾರ್ಯ ಸಿದ್ದಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಬೆಳಗ್ಗೆ ಹೋಮ, ಹವನ, ವಿಶೇಷ ಪೂಜಾ ಕಾರ್ಯಗಳು ನೆರವೇರಿತು. ನಗರದ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿರುವ ಶ್ರೀ ಅಭಯ ಕಾರ್ಯ ಸಿದ್ದಿ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಶ್ರೀರಾಮ ಹಾಗೂ ಶ್ರೀ ಆಂಜನೇಯ ಸ್ವಾಮಿಯ ಬೃಹತ್

ಭವ್ಯ ಮೆರವಣಿಗೆ ಚಾಲನೆಗೊಂಡು ನಗರದ ಚಿಕ್ಕಂಗಡಿ ಬೀದಿ, ಭುವನೇಶ್ವರಿ ವೃತ್ತ, ಸಂತೇಮರಹಳ್ಳಿ ವೃತ್ತ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ವಿವಿಧ ಸಾಂಸ್ಕೃತಿಕ ಹಾಗೂ ಕಲಾ ತಂಡಗಳೊಂದಿಗೆ ಸಂಚರಿಸಿತು.

ಮಾಜಿ ಸಂಸದ ಪ್ರತಾಪಸಿಂಹ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, ಹುಣಸೂರಿನಲ್ಲಿ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಹನುಮ ಜಯಂತಿ ಇಂದು ಬೃಹತ್ತಾಕಾರವಾಗಿ ಬೆಳೆಯಿತು. ಹನುಮ ಜಯಂತಿ ಸಂದರ್ಭದಲ್ಲಿ ನನ್ನ ಮೇಲೆ ಎರಡು ಕ್ರಿಮಿನಲ್ ಪ್ರಕರಣ ದಾಖಲಾಗಿತು. ನನ್ನ ಬಂಧಿಸಿದ್ದರು ಎಂದರು. ಹನುಮ ಜಯಂತಿ ಎಲ್ಲ ಸಮುದಾಯದವರನ್ನು ಒಂದುಗೂಡಿಸುವ ಐಕ್ಯತೆಯ ಸಂಕೇತವಾಗಿ ಹಿಂದುಗಳನ್ನು ಒಗ್ಗೂಡಿಸಿದೆ ಮೈಸೂರು, ಚಾಮರಾಜನಗರ ಹೋಬಳಿ ಮಟ್ಟದಲ್ಲಿ ಹನುಮ ಜಯಂತಿ ಆಚರಣೆ ಮಾಡುತ್ತಿರುವುದನ್ನು ನೋಡಿದರೆ ನಮ್ಮ ಜನರಲ್ಲಿ ಧಾರ್ಮಿಕ ಜಾಗೃತಿ, ಬದ್ದತೆ. ಅರಿವು ಮೂಡುತ್ತಿರುವ ಸಂಕೇತವಾಗಿದೆ.ಹಳೇ ಮೈಸೂರು ಭಾಗದಲ್ಲಿ ರಾಜಕಾಲದಲ್ಲಿ ಹನುಮ ಜಯಂತಿ ಆಗಬೇಕಿತ್ತು. ಮಹಾರಾಜರು ಕುಸ್ತಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರು.

ಇವತ್ತಿಗೆ ದಸರಾದಲ್ಲಿ ಕುಸ್ತಿ ಪಂದ್ಯಾವಳಿ ನಡೆಯುತ್ತದೆ. ಈ ಭಾಗದಲ್ಲಿ ಬಹಳಷ್ಟು ಕಡೆ ಗರಡಿ ಮನೆಗಳಿವೆ. ಅಲ್ಲಿ ರಾಮಮಂದಿರ, ಗರಡಿಗಳು ಸಾಮಾನ್ಯವಾಗಿ ಹನುಮ ಗರಡಿಗಳಾಗಿರುತ್ತದೆ ಎಂದರು. ಭಕ್ತ ಪೈಲ್ವಾನ್ ಆಗಿದ್ದಾರೆ ಭಗವಾನ್ ಹನುಮನೇ ಆಗಿರಬೇಕು. ಹನುಮನು ಶಕ್ತಿಸಂಕೇತ.ನಿಷ್ಠೆಯ ಸಂಕೇತ. ಭಕ್ತಿ ಸಂಕೇತ ಎಂದರು. ಬಿಗಿ ಪೊಲೀಸ್ ಬಂದೋಬಸ್ತ್ : ಅಹಿತಕರ ಘಟನೆಗಳು ನಡೆಯದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಮೆರವಣಿಗೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್,ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ಕಾರ್ಯದರ್ಶಿ ನಟರಾಜು, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಬಿಜೆಪಿ ಎಸ್ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್,ಜಿಲ್ಲಾಧ್ಯಕ್ಷ ಚಂದ್ರ ಶೇಖರ್ ,ಉಪಾಧ್ಯಕ್ಷ ಬುಲೆಟ್ ಚಂದ್ರು, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಅಖಿಲಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಡಾ.ಎ.ಆರ್.ಬಾಬು, ನಗರಸಭಾ ಮಾಜಿ ಸದಸ್ಯ ಶಿವಣ್ಣ, ಬಂಗಾರನಾಯಕ, ಶಿವರಾಂ, ಬಾಲಸುಬ್ರಹ್ಮಣ್ಯಂ, ನೂರೊಂದು ಶೆಟ್ಟಿ, ಶ್ರೀನಿಧಿಕುದರ್,

ಸಾಹಿತಿ ಮಂಜುನಾಥ ಪ್ರಸನ್ನ ಬಂಗಾರನಾಯ ಚಂದ್ರಶೇಖರ್. ಶಂಕರ್‌ನಾಯಕ್. ರಾಮು. ಶ್ರೀ ಹನುಮ ಜಯಂತೋತ್ಸವ ಸಮಿತಿ ಅಧ್ಯಕ್ಷ ರಾಜು, ಉಪಾಧ್ಯಕ್ಷ ಹರ್ಷದ್ ಗೌಡ, ಶಿವು, ಜಿಲ್ಲಾ ಸಂಚಾಲಕ ಪ್ರವೀಣ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೃಥ್ವಿ, ಪದಾಧಿಕಾರಿಗಳು ಭಾಗವಹಿಸಿದ್ದರು.

ಪೋಸ್ಟ್ ಮ್ಯಾನ್ ವಂಚನೆ ಖಂಡಿಸಿ ಪ್ರತಿಭಟನೆ

ಗೌರಿಬಿದನೂರು: ತಾಲೂಕಿನ ಹಾಲಗಾನಹಳ್ಳಿ ಗ್ರಾಮದ ಅಂಚೆ ಕಚೇರಿಯಲ್ಲಿ ಸುಮಾರು 1200 ಖಾತೆದಾರರಿಗೆ ಸುಮಾರು ಎರಡು ಕೋಟಿಯಷ್ಟು ಹಣವನ್ನು ಪೋಸ್ಟ್ ಮಾಸ್ಟರ್‌ರಮ್ಯಾ ವಂಚಿಸಿ ಪರಾರಿಯಾಗಿದ್ದಾರೆ ಎಂದು ಗ್ರಾಮಸ್ಥರು ಆರೋಪ ಮಾಡಿ ಅಂಚೆ ಕಚೇರಿಗೆ ಮುತ್ತಿಗೆ ಹಾಕಿರುವ ಘಟನೆ ನಡೆದಿದೆ.

ತಾಲೂಕಿನ ಕಸಬಾ ಹೋಬಳಿಗೆ ಸೇರಿರುವ ಹಾಲಗಾನಹಳ್ಳಿಯ ಅಂಚೆ ಕಚೇರಿಯಲ್ಲಿ 2013ರಲ್ಲಿ ಪೋಸ್ಟ್ ಮಾಸ್ಟರ್ ಆಗಿ ಬಂದ, ತಾಲೂಕಿನ ಇಡಗೂರು ಗ್ರಾಮದ ರಮ್ಯಾ ಎಂಬಾಕೆ ಕೆಲಸ ಆರಂಬಿಸಿದ್ದು, ಇತ್ತೀಚಿನ ಕೆಲವು ತಿಂಗಳುಗಳಿಂದ ಗ್ರಾಹಕರ ಠೇವಣಿ, ಮನಿ ಆರ್ಡರ್, ಮಂತ್ರಿ ಪಿಂಚಣಿ, ಮಾಸಾಶನ, ಸ್ಥಿರ ಠೇವಣಿಯ ಸುಮಾರು ಎರಡು ಕೋಟಿಯಷ್ಟು ಹಣವನ್ನು ಅಕ್ರಮ ಹಾಗೂ ವಂಚನೆ ಮಾಡಿದ್ದಾರೆ ಎಂದು ಹಾಲಗಾನಹಳ್ಳಿ ಗ್ರಾಮಸ್ಥರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ.

ಇದರ ಪರಿಣಾಮ ಹಿರಿಯ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಖಾತೆದಾರರಿಗೆ ಭರವಸೆ ನೀಡುವ ಪ್ರಯತ್ನ ಮಾಡಿದರು. ಅವರ ಮಾತಿಗೆ ಒಪ್ಪದ ಖಾತೆದಾರರು ಒಂದು ಗಂಟೆಗೂ ಅಧಿಕ ಸಮಯ ಹಿರಿಯ ಅಧಿಕಾರಿಗಳನ್ನು ಕಚೇರಿಯ ಒಳಗಡೆ ಹಾಕಿ ಬೀಗ ಹಾಕಲಾಗಿತ್ತು.

ವಿಷಯ ತಿಳಿದ ಕೂಡಲೇ ಗ್ರಾಮಾಂತರ ಪೊಲೀಸ್ ಠಾಣಾ ಪಿಎಸ್ಐ ರಮೇಶ್ ಗುಗ್ಗರಿ ಸ್ಥಳಕ್ಕೆ ಭೇಟಿ ನೀಡಿ, ಗಲಾಟೆಯ ತೀವ್ರತೆಯನ್ನು ಶಮನಗೊಳಿಸಿ ಅಧಿಕಾರಿಗಳನ್ನು ಹೊರ ಕರೆ ತಂದರು. ನಂತರ ಗ್ರಾಮಸ್ಥರ ಜೊತೆ ಮಾತನಾಡಿ, ನಿಮಗೆ ಯಾರಿಂದ ಮೋಸ ಆಗಿದೆಯೋ ಅವರ ವಿರುದ್ಧ ನಿಮ್ಮಲ್ಲಿರುವ ದಾಖಲೆಗಳೊಂದಿಗೆ ಬಂದು ಠಾಣೆಯಲ್ಲಿ ದೂರು ನೀಡಿ, ತಪ್ಪಿತಸ್ಥರು ಯಾರಾದರೂ ಸರಿ ಅವರ ಮೇಲೆ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಿ ನಿಮಗೆ ನ್ಯಾಯ ಕೊಡಿಸುವಲ್ಲಿ ಪೊಲೀಸ್ ಇಲಾಖೆಯ ಪೂರ್ತಿ ಸಹಕಾರ ಇರುತ್ತದೆ ಎಂದು ಗ್ರಾಮಸ್ಥರ ಮನವೊಲಿಸಿದರು.

ಹಾಲಗಾನಹಳ್ಳಿ ಅಂಚೆ ಕಚೇರಿಯಲ್ಲಿ ಹಣದ ಅವ್ಯವಹಾರ ಆಗಿರುವ ಬಗ್ಗೆ ಗ್ರಾಹಕರೊಬ್ಬರು ನೀಡಿದ ದೂರಿನನ್ವಯ ನಾವು ಹೋಗಿ ಪರಿಶೀಲನೆ ನಡೆಸಿದಾಗ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಬಂದಿದೆ. ಅನಕ್ಷರಸ್ಥರು.

ವೃದ್ಧರು. ಅಮಾಯಕರೇ ಹೆಚ್ಚಾಗಿ ಹಣ ಕಳೆದುಕೊಂಡಿರುವ ಬಗ್ಗೆ ಗ್ರಾಮಸ್ಥರು ದೂರುತ್ತಿದ್ದಾರೆ. ಈ ಬಗ್ಗೆ ಕೂಲಂಕುಶವಾಗಿ ತನಿಖೆ ನಡೆಸಿ, ಎಲ್ಲಾ ಗ್ರಾಹಕರ ಹಣವನ್ನು ಹಿಂತಿರುಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅಂಚೆ ಕಚೇರಿಯ ನಿರೀಕ್ಷಕ ಹನುಮಂತಪ್ಪ ತಿಳಿಸಿದ್ದಾರೆ.

ಗೌರಿಬಿದನೂರು ತಾಲೂಕಿನ ಹಾಲಗಾನಹಳ್ಳಿ ಗ್ರಾಮದ ಅಂಚೆ ಕಚೇರಿಯಲ್ಲಿ ಖಾತೆದಾರರಿಗೆ ಪೋಸ್ಟ್ ಮಾಸ್ಟರ್ ರಮ್ಯಾ ವಂಚಿಸಿ ಪರಾರಿಯಾಗಿದ್ದಾರೆ ಎಂದು ಗ್ರಾಮಸ್ಥರು ಅಂಚೆ ಕಚೇರಿಗೆ ಮುತ್ತಿಗೆ ಹಾಕಿದರು.

ಮಕ್ಕಳಿಗೆ ಪ್ರತಿಭಾ ಕಾರಂಜಿ ಅವಶ್ಯ

ಬಾಗೇಪಲ್ಲಿ: ನಮ್ಮ ಗ್ರಾಮೀಣ ಮಕ್ಕಳಲ್ಲಿಯು ಅನೇಕ ಕಲೆಗಳು ಅಡಗಿವೆ ಅಂತಹ ಮಕ್ಕಳು ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿಕೊಳ್ಳಲು ಇಂತಹ ಪ್ರತಿಭಾ ಕಾರಂಜಿ ಉತ್ತಮ ವೇದಿಕೆ ಯಾಗಿದೆ ಎಂದು ಬಿಇಒ ಎನ್ ವೆಂಕಟೇಶಪ್ಪ ಹೇಳಿದರು.

ಪಟ್ಟಣದ ಸರಕಾರಿ ಬಾಲಕಿಯರ ಪ್ರೌಢ ಶಾಲೆಯ ಆವರಣದಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಬಾಗೇಪಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ. ಬಾಗೇಪಲ್ಲಿ, ಮತ್ತು ಸಮೂಹ ಸಂಪನ್ಮೂಲ ಕೇಂದ್ರ 2025-26 ನೇ ಸಾಲಿನ ಕ್ಲಸ್ಟರ್‌ಮಟ್ಟದ ಪ್ರತಿಭಾ ಕಾರಂಜಿ. ಕಲೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು

ಬಾಗೇಪಲ್ಲಿ, ಚೇಳೂರು ತಾಲೂಕುಗಳ ಕ್ಲಸ್ಟರ್‌ಮಟ್ಟದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಕಾರಂಜಿಯಲ್ಲಿ ವಿಜೇತರಾದ 22 ಕ್ಲಸ್ಟರ್‌ಗಳ ವಿದ್ಯಾರ್ಥಿಗಳು ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯ ಸಾಂಸ್ಕೃತಿಕ, ಕರಕುಶಲ ಚಟುವಟಿಕೆಗಳಲ್ಲಿ ಭಾಗಿಯಾದರು.

3 ಹಂತಗಳಲ್ಲಿ ಪ್ರಾಥಮಿಕ ವಿಭಾಗ (1ರಿಂದ 4ನೇ ತರಗತಿ) 13 ಸ್ಪರ್ಧೆಗಳಲ್ಲಿ 264 ವಿದ್ಯಾರ್ಥಿಗಳು, ಹಿರಿಯರ ವಿಭಾಗದ (5ನೇ ತರಗತಿಯಿಂದ 7ನೇ ತರಗತಿ) 16 ಸ್ಪರ್ಧೆಗಳಲ್ಲಿ 356 ವಿದ್ಯಾರ್ಥಿಗಳು ಮತ್ತು ಪ್ರೌಢಶಾಲಾ ವಿಭಾಗದಲ್ಲಿ (8ರಿಂದ 10 ನೇ ತರಗತಿ) 21 ಸ್ಪರ್ಧೆಗಳಲ್ಲಿ 415 ಮಕ್ಕಳು ಭಾಗವಹಿಸಿದ್ದರು.

ಸರಕಾರಿ ಶಾಲೆ ವಿದ್ಯಾರ್ಥಿಗಳು ಬಣ್ಣ ಬಣ್ಣದ ವೇಷಭೂಷಣಗಳನ್ನು ಧರಿಸಿದ್ದರು. ಕೋಲಾಟ, ಜಾನಪದ, ರಂಗಗೀತೆ, ಗೀಗಿಪದ, ಭಾವಗೀತೆ, ಛದ್ಮವೇಷ, ಕಥೆ ಹೇಳುವುದು, ಜಾನಪದ ನೃತ್ಯ, ಮಿಮಿಕ್ರಿ, ರಂಗೋಲಿ, ರಸಪ್ರಶ್ನೆ, ರಂಗಪ್ರದರ್ಶನ, ಪದ್ಯ ಹೇಳುವುದು, ಖವ್ವಾಲಿ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳನ್ನು ತಮ್ಮನ್ನು ತೊಡಗಿಸಿಕೊಂಡರು. ಜೇಡಿಮಣ್ಣಿನಲ್ಲಿ ಮೊಸಳೆ, ಆಮೆ, ಪರಿಸರದ ಬಗೆ ಸೇರಿದಂತೆ ವಿವಿಧ ಕಲಾಕೃತಿಗಳನ್ನು ರಚನೆ ಮಾಡಿದರು. ತಾಲ್ಲೂಕಿನ ಸರ್ಕಾರಿ ಶಾಲೆಗಳ ಶಿಕ್ಷಕರು ತಮ್ಮ ಶಾಲೆಗಳ ಮಕ್ಕಳನ್ನು ಸಿದ್ಧಗೊಳಿಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಿ.ಎನ್.ಸತ್ಯನಾರಾಯಣ ರೆಡ್ಡಿ, ಆರ್.ವೆಂಕಟರಾಮಪ್ಪ, ಆರ್. ಹನುಮಂತರೆಡ್ಡಿ, ರಂಗಾರೆಡ್ಡಿ, ನಾಗರಾಜ್, ವೆಂಕಟರವಣಪ್ಪ, ವೆಂಕಟರಾಯಪ್ಪ, ಎಂ.ಎನ್. ಮಂಜುನಾಥ್, ನಸರುದ್ದೀನ್, ಎನ್. ಶಿವಪ್ಪ, ಮಂಜುನಾಥ್, ರಂಗನಾಥ್, ಸುಜಾತ, ಈಶ್ವರಪ್ಪ, ಶಿವಯ್ಯ, ಕದಿರಪ್ಪ, ವರುಣ್, ಪ್ರಭಾವತಮ್ಮ, ಪ್ರಮೀಳ ಇದ್ದರು.

ಮಕ್ಕಳಿಗೆ ಅಂಚೆ ಚೀಟಿ, ನಾಣ್ಯಗಳ ಅರಿವು ಬೇಕಿದೆ

ತುಮಕೂರು: ಮಕ್ಕಳಿಗೆ ಅಂಚೆ ಚೀಟಿ, ನಾಣ್ಯಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದು. ಪೋಷಕರಲ್ಲಿ ಕ್ರೀಡಾಮನೋಭಾವನೆ ಬೆಳೆಸುವುದು ಸಂಸ್ಥೆಯ ಸಂಸ್ಥಾಪಕರ ಉದ್ದೇಶವಾಗಿದೆ ಎಂದು ಶಾಲಾ ಪ್ರಾಂಶುಪಾಲರು ಜ್ಯೋತಿ ಹೇಳಿದರು.

ಜಿಲ್ಲೆಯ ಗುಡೂರ್ ಹೋಬಳಿ ಕಳ್ಳಿಪಾಳ್ಯ- ಮಸ್ಕಲ್‌ನ ಎನ್.ಜಿ.ಪಬ್ಲಿಕ್ ಸ್ಕೂಲ್‌ನಲ್ಲಿ ಏರ್ಪಡಿಸಲಾ ಗಿದ್ದ ಅಂಚೆ ಚೀಟಿ, ನಾಣ್ಯಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎನ್.ಜಿ.ಪಬ್ಲಿಕ್ ಸಂಸ್ಥೆಯಲ್ಲಿ ಕರಾಟೆ, ಯೋಗ, ಡ್ಯಾನ್ಸ್, ರೋಬೋಟಿ ಕ್ಲಾಸ್, ಚಟುವಟಿಕೆಯಿಂದ ಕೂಡಿದ ಬೋಧನಾ ಶೈಲಿಯನ್ನು ಶಿಕ್ಷಣವನ್ನು ಕೊಡುವ ಮೂಲಕ ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಶಾಲೆ ಮಾದರಿಯಾಗಿದೆ ಎಂದರು.

ಅಪರೂಪದ ನಾಣ್ಯ ಹಾಗೂ ಅಂಚೆ ಚೀಟಿ ಸಂಗ್ರಹಿಸಿ ಇಂಡಿಯನ್ ಬುಕ್ ಆಫ್ ರೆಕಾರ್ಡ್, ಸೇರಿ ಹಲವು ದಾಖಲೆಗಳನ್ನು ನಿರ್ಮಿಸಿರುವ ಇತಿಹಾಸ ತಜ್ಞ, ಮುಳಬಾಗಿಲಿನ ಎಚ್.ಕೆ.ಸತೀಶ್ ಅವರ ಅಪರೂಪದ ನಾಣ್ಯ ಹಾಗೂ ಅಂಚೆ ಚೀಟಿಗಳನ್ನು ಪ್ರದರ್ಶನದಲ್ಲಿ ಕಂಡ ಶಾಲಾ ಮಕ್ಕಳು ಸಂತಸಪಟ್ಟರು. ಇದೆ ವೇಳೆ ಶಾಲಾ ಆಡಳಿತ ಮಂಡಳಿಯಿಂದ ಪೋಷಕರಿಗೆ ಕ್ರೀಡಾಕೂಟ ನಡೆಯಿತು.

ಕಳ್ಳಿಪಾಳ್ಯದಲ್ಲಿರುವ ಎನ್.ಜಿ.ಪಬ್ಲಿಕ್ ಶಾಲೆಯಲ್ಲಿ ಅಂಚೆ ಚೀಟಿ, ನಾಣ್ಯಗಳ ಪ್ರದರ್ಶನ ನಡೆಯಿತು. ಈ ವೇಳೆ ಶಾಲೆಯ ಸಿಬ್ಬಂದಿ ಇದ್ದರು.

> **ಪ್ರಸ್ತುತ ದಿನಮಾನಗಳಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಆದ್ದರಿಂದ ಪೋಷಕರು ಹಾಗೂ ಶಿಕ್ಷಕರು ಮಕ್ಕಳಲ್ಲಿ ಮಾನವೀಯ ಮೌಲ್ಯಗಳ ಕುರಿತು ಅರಿವು ಮೂಡಿಸಬೇಕು. ಕೌಟುಂಬಿಕ ಸಂಬಂಧಗಳ ಮಹತ್ವ ತಿಳಿಸಿಕೊಡಬೇಕು. ಮೊಬೈಲ್ ಹವ್ಯಾಸದಿಂದ ಹೆಚ್ಚಾಗಿ ಮಕ್ಕಳನ್ನು ದೂರವಿರಿಸಬೇಕು. ಅಂಚೆ ಚೀಟಿ, ಹಿಂದಿನ ಕಾಲದ ನಾಣ್ಯಗಳನ್ನು ಮಕ್ಕಳಿಗೆ ತೋರಿಸಬೇಕು. ಮಕ್ಕಳಿಗೆ ಪ್ರಾಚೀನ ಕಾಲದಲ್ಲಿ ಮಹತ್ವ ತಿಳಿಸಬೇಕು ಎಂದು ಹೇಳಿದರು.**
> **-ಜ್ಯೋತಿ,** ಶಾಲಾ ಪ್ರಾಂಶುಪಾಲರು

ಕಾರ್ಯಕ್ರಮದಲ್ಲಿ ವೈ.ಕೆ.ಹನುಮಂತರಾಜು, ವೈ.ಕೆ.ವಸ್ತಲ, ಎಂ.ಕೆ.ಸತೀಶ್ ಮುಖ್ಯ ಶಿಕ್ಷಕ ಗೋಪಾಲ ಕೃಷ್ಣ, ವಿವಿಧ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ

ಚಾಮರಾಜನಗರ: .ಡಿ.26 ನಗರದ ಮಹದೇಶ್ವರ ಬಡಾವಣೆಯಲ್ಲಿನ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ ಸಮೀಪ ಸಮಾಜಕಲ್ಯಾಣ ಇಲಾಖೆ ಅನುದಾನ 1.66 ಕೋಟಿ ರು.ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ತಾಲೂಕು ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಎಂಎಸ್ಐಎಲ್ ಅಧ್ಯಕ್ಷರು ಆದ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಇದೇವೇಳೆ ಮಾತನಾಡಿ, ತಾಲೂಕು ಸಮಾಜಕಲ್ಯಾಣ ಇಲಾಖೆ ಸಹಾಯಕನಿರ್ದೇಶಕರಕಚೇರಿ ಹಲವಾರು ವರ್ಷಗಳಿಂದ ಖಾಸಗಿಕಟ್ಟಡದಲ್ಲಿಕಾರ್ಯನಿರ್ವಹಿಸುತ್ತಿದೆ. ಕಚೇರಿಯ ಸ್ವಂತಕಟ್ಟಡ ನಿರ್ಮಾಣಕ್ಕೆಗುದ್ದಲಿ ಪೂಜೆ ನೆರವೇರಿಸಲಾಗಿದೆ, ಕಟ್ಟಡ ನಿರ್ಮಾಣ ಏಜೆನ್ಸಿಯವರು ನಿಗಧಿತ ಅವಧಿಯೊಳಗೆ ಕಟ್ಟಡಕಾಮಗಾರಿ ಪೂರ್ಣಗೊಳಿಸಿ, ಇಲಾಖೆ ಕೆಲಸಕಾ ರ್ಯಗಳು ಸುಗಮವಾಗಿ ನಡೆಯಲು ಅನುವು ಮಾಡಿ ಕೊಡುವಂತೆ ಸೂಚನೆ ನೀಡಿದರು. ಇದೇವೇಳೆ ಶಾಸಕರು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಭೇಟಿನೀಡಿ, ಮಲಗುವಕೋಣೆ, ಊಟದಹಾಲ್, ಅಡುಗೆಕೋಣೆ, ಕುಡಿಯುವನೀರಿನ ವ್ಯವಸ್ಥೆ ಪರಿಶೀಲಿಸಿ, ವಿದ್ಯಾರ್ಥಿಗಳ ಕುಂದುಕೊರತೆ ಆಲಿಸಿ ದರು. ಈ ಸಂದರ್ಭದಲ್ಲಿಚುಡಾಅಧ್ಯಕ್ಷ ಮಹಮದ್‌ಅಸ್ಗರ್. ನಿರ್ಮಿತಿಕೇಂದ್ರ ಇಇ ಭೀಮಸಾಗರ್,ಸೋಮಶೇಖರ್,ನಟರಾಜು, ಮೆಟ್ರಿಕ್ ಪೂರ್ವಬಾಲಕರವಿದ್ಯಾರ್ಥಿನಿಲಯದ ವಾರ್ಡನ್ರಾಜು ಹಾಜರಿದ್ದರು.

ಮಹದೇಶ್ವರ ಬಡಾ ವಣೆಯಲ್ಲಿನ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಸಮೀಪ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು.

ಸಮಾಚಾರ ಸಣ್ಣದಲ್ಲ

ಮಂಡೇಪಂಡ ಹಾಕಿ ತಂಡಕ್ಕೆ 5-0 ಜಯ

ಮಡಿಕೇರಿ: ಕೊಡವ ಕೌಟುಂಬಿಕ ಹಾಕಿ ಉತ್ಸವ ಬೆಳ್ಳಿ ಮಹೋತ್ಸವವನ್ನು ಆಚರಿಸಿಕೊಂಡ ಹಿನ್ನೆಲೆಯಲ್ಲಿ ಕೊಡವ ಹಾಕಿ ಅಕಾಡೆಮಿ ವತಿಯಿಂದ ಆಯೋಜನೆಗೊಂಡಿರುವ ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ ಟ್ರೋಫಿ ಪಂದ್ಯಾವಳಿಯ ಮೂರನೇ ದಿನದ ಪಂದ್ಯದಲ್ಲಿ ಮಂಡೇಪಂಡ ಮತ್ತು ಕೋಣೇರಿರ ನಡುವಿನ ಪಂದ್ಯದಲ್ಲಿ 5-0 ಗೋಲುಗಳ ಅಂತರದಲ್ಲಿ ಮಂಡೇಪಂಡ ತಂಡ ಜಯ ಸಾಧಿಸಿತು. ಮಂಡೇಪಂಡ ಚಂಗಪ್ಪ ತಲಾ ಎರಡು, ಮುತ್ತಪ್ಪ, ಕಾಳಪ್ಪ ಹಾಗೂ ಕರುಂಬಯ್ಯ ತಲಾ ಒಂದು ಗೋಲು ದಾಖಲಿಸಿದರು. ಮುಕ್ಕಾಟೀರ ಮತ್ತು ಪಳಂಗಂಡ ನಡುವಿನ ಪಂದ್ಯದಲ್ಲಿ 6-0 ಗೋಲುಗಳ ಅಂತರದಲ್ಲಿ ಪಳಂಗಂಡ ತಂಡ ಗೆಲುವು ದಾಖಲಿಸಿತು. ಪಳಂಗಂಡ ಪೊನ್ನಪ್ಪ ಭರ್ಜರಿ ನಾಲ್ಕು ಹಾಗೂ ಅಮರ್ ಎರಡು ಗೋಲು ಬಾರಿಸಿದರು. ಕುಲ್ಲೇಟಿರ ಮತ್ತು ನೆಲ್ಲಮಕ್ಕಡ ನಡುವಿನ ಪಂದ್ಯದಲ್ಲಿ 1-0 ಗೋಲಿನ ಅಂತರದಲ್ಲಿ ಕುಲ್ಲೇಟಿರ ತಂಡ ಗೆಲುವು ಸಾಧಿಸಿತು. ಕುಲ್ಲೇಟಿರ ಮುತ್ತಣ್ಣ ಒಂದು ಗೋಲು ದಾಖಲಿಸಿದರು. ಯಾವುದೇ ಗೋಲುಗಳಿಲ್ಲದೆ ಹಿನ್ನೆಲೆಯಲ್ಲಿ ಕೂತಂಡ ಮತ್ತು ಕಲಿಯಂಡ ನಡುವಿನ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು.

ಬ್ರೆಟ್ ಲೀಗೆ ಹಾಲ್ ಆಫ್ ಫೇಮ್ ಗೌರವ

ದೆಹಲಿ: ಕ್ರಿಕೆಟ್ ದಿಗ್ಗಜ, ವೇಗದ ಬೌಲರ್ ಬ್ರೆಟ್ ಲೀ ಅವರನ್ನು ಆಸ್ಟ್ರೇಲಿಯನ್ ಕ್ರಿಕೆಟ್ ಹಾಲ್ ಆಫ್ ಫೇಮ್‌ಗೆ ಸೇರ್ಪಡೆಗೊಳಿಸಲಾಗಿದೆ.

ಕ್ರಿಕೆಟ್ ಆಸ್ಟ್ರೇಲಿಯಾ ಈ ಸಂಸ್ಥೆಯನ್ನು 1996ರಲ್ಲಿ ಸ್ಥಾಪಿಸಿತ್ತು. ಸರ್ ಡಾನ್ ಬ್ರಾಡ್ಮನ್ ಸೇರಿದಂತೆ ಅನೇಕ ಆಸ್ಟ್ರೇಲಿಯಾದ ದಿಗ್ಗಜರನ್ನು ಹಾಲ್ ಆಫ್ ಫೇಮ್‌ಗೆ ಈಗಾಗಲೇ ಸೇರಿಸಲಾಗಿದೆ. ಬ್ರೆಟ್ ಲೀ 1999ರಲ್ಲಿ ಆಸ್ಟ್ರೇಲಿಯಾ ಪರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಭಾರತ ವಿರುದ್ಧದ ತಮ್ಮ ಮೊದಲ ಟೆಸ್ಟ್ ಪಂದ್ಯದ ಪ್ರಥಮ ಇನ್ನಿಂಗ್ಸ್‌ನಲ್ಲಿ 5 ವಿಕೆಟ್‌ಗಳ ಸಾಧನೆ ಮಾಡಿದ್ದರು. ಕ್ರಿಕೆಟ್ ಇತಿಹಾಸದಲ್ಲಿ 2ನೇ ಅತ್ಯಂತ ವೇಗದ ಎಸೆತದ ದಾಖಲೆಯನ್ನು ಹೊಂದಿದ್ದಾರೆ. 2003ರಲ್ಲಿ ಅವರು ಶ್ರೀಲಂಕಾದ ಬ್ಯಾಟ್ಸ್‌ಮನ್ ಅಟಪಟ್ಟುಗೆ ಗಂಟೆಗೆ 161.1 ಕಿಮೀ ವೇಗದ ಎಸೆತವನ್ನು ಹಾಕಿ ಔಟ್ ಮಾಡಿದ್ದರು.

ವಿಜಯ್ ಹಜಾರೆ ಕ್ರಿಕೆಟ್ ಟ್ರೋಫಿ | ಇಂದು ಕರ್ನಾಟಕ-ತಮಿಳುನಾಡು ಪಂದ್ಯ

ರಾಜ್ಯ ತಂಡಕ್ಕೆ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆ

ಅಹಮದಾಬಾದ್: ಸೋಮವಾರ ಇಲ್ಲಿ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕರ್ನಾಟಕವು ತಮಿಳುನಾಡನ್ನು ಎದುರಿಸಲಿದೆ.

ಮಯಾಂಕ್ ಅಗರ್ವಾಲ್ ನಾಯಕತ್ವದ ರಾಜ್ಯ ತಂಡವು ಈಗಾಗಲೇ ಎರಡು ಪಂದ್ಯಗಳನ್ನಾಡಿದ್ದು, ಅವುಗಳಲ್ಲಿ ಗೆದ್ದು ಬೀಗಿದೆ. ತಮಿಳುನಾಡು ವಿರುದ್ಧ ಸೋಮವಾರ ಜಯ ಪಡೆಯುವ ಮೂಲಕ, ಹ್ಯಾಟ್ರಿಕ್ ಯಶಸ್ಸನ್ನು ಪಡೆಯುವ ಕಾತರದಲ್ಲಿದೆ.

ಡಿಸೆಂಬರ್-24ರಂದು ನಡೆದ ಪಂದ್ಯದಲ್ಲಿ ಕರ್ನಾಟಕವು ದೇವದತ್ ಪಡಿಕ್ಕಲ್ ಅವರ ಶತಕದ ಬಲದಿಂದ ಜಾರ್ಖಂಡ್ ತಂಡವನ್ನು ಬಹು ಸುಲಭವಾಗಿ ಸೋಲಿಸಿತ್ತು. ಹಾಗೆಯೇ ಡಿ.26ರಂದು ನಡೆದ ಪಂದ್ಯದಲ್ಲಿ ರಾಜ್ಯ ತಂಡವು ದೇವದತ್ ಪಡಿಕ್ಕಲ್ ಹಾಗೂ ಕರುಣ್ ನಾಯರ್ ಅವರ ಶತಕಗಳ ನೆರವಿನಿಂದ ಕೇರಳವನ್ನು ಬಗ್ಗು ಬಡಿದಿತ್ತು. ಆ ಮೂಲಕ ಎಲೈಟ್-ಎ ಗ್ರೂಪ್‌ನಲ್ಲಿ 8 ಅಂಕ ಗಳೊಂದಿಗೆ ಕರ್ನಾಟಕವು ಎರಡನೇ ಸ್ಥಾನ ದಲ್ಲಿದೆ. ಮಧ್ಯಪ್ರದೇಶ ತಂಡವು 8 ಅಂಕ ಗಳನ್ನು ಪಡೆದಿದ್ದರೂ ಅಂಕಪಟ್ಟಿಯಲ್ಲಿ ಹೆಚ್ಚುವರಿ ರನ್‌ರೇಟ್ ಆಧಾರದಲ್ಲಿ ಗ್ರೂಪ್‌ನಲ್ಲಿ ಮೊದಲ ಸ್ಥಾನದಲ್ಲಿದೆ.

ಕರ್ನಾಟಕ ತಂಡದಲ್ಲಿ ಇವರಿಬ್ಬರಲ್ಲದೆ ರವಿಚಂದ್ರನ್ ಅಶ್ವಿನ್, ಅಭಿನವ್ ಮನೋಹರ್‌ರಂತಹ ಘಟಾನುಘಟಿ ಬ್ಯಾಟರ್‌ಗಳಿದ್ದಾರೆ. ಹಾಗೆಯೇ ಶ್ರೇಯಸ್ ಗೋಪಾಲ್‌ರಂತಹ ಉತ್ತಮ ಆಲ್‌ರೌಂಡರ್‌ಗಳನ್ನೂ ತಂಡ ಹೊಂದಿದೆ. ಬೌಲಿಂಗ್‌ನಲ್ಲಿ ಪ್ರಸಿದ್ಧ್ ಕೃಷ್ಣ, ಮೊಹಮ್ಮದ್ ಆಲಿ, ಕೆ. ಮಣಿಕಂಠ ಮುಂತಾದವರಿದ್ದಾರೆ. ಆದರೆ ತಂಡದ ನಾಯಕ ಮಯಾಂಕ್ ಅಗರ್ವಾಲ್ ಕಳೆದೆರಡೂ ಪಂದ್ಯಗಳಲ್ಲೂ ವಿಫಲರಾಗಿದ್ದು, ಸೋಮವಾರ ತಮಿಳುನಾಡು ವಿರುದ್ಧ ನಡೆಯಲಿರುವ ಪಂದ್ಯದಲ್ಲಿ ಮಿಂಚಲೇಬೇಕಾದ ಅನಿವಾರ್ಯತೆ ಇದೆ.

ಭಾರತ ತಂಡದ ಪ್ರತಿಯೊಬ್ಬ ಆಟಗಾರನೂ ವಿಜಯ್ ಹಜಾರೆ ಟ್ರೋಫಿಯಲ್ಲಿ ಕನಿಷ್ಠ ಎರಡು ಪಂದ್ಯಗಳನ್ನಾದರೂ ಆಡಬೇಕೆಂಬ ಸೂಚನೆ ಇದೆ. ಆದರೆ ಕನ್ನಡಿಗ ಕೆಎಲ್ ರಾಹುಲ್ ಮೊದಲೆರಡು ಪಂದ್ಯಗಳನ್ನು ಆಡಿಲ್ಲ, ಹಾಗಾಗಿ ತಮಿಳುನಾಡು ವಿರುದ್ಧ ನಡೆಯಲಿರುವ ಈ ಮೂರನೇ ಪಂದ್ಯದಲ್ಲಿ ಆಡಲು ಮೈದಾನಕ್ಕಿಳಿಯುವರೇ ಎಂಬ ಕುತೂಹಲ ಇದೆ.

ಕರ್ನಾಟಕ

ಮಯಾಂಕ್ (ನಾಯಕ), ಕರುಣ್ ನಾಯರ್, ಪಡಿಕ್ಕಲ್, ರಾಹುಲ್, ಬಿಆರ್ ಶರತ್, ಕೆ. ಶ್ರೀಜಿತ್, ಆರ್. ಸ್ಮರಣ್, ಶ್ರೇಯಸ್ ಗೋಪಾಲ್, ಅಭಿನವ್ ಮನೋಹರ್, ಮನ್ವಂತರ್ ಕುಮಾರ್, ಅಭಿಲಾಷ್ ಶೆಟ್ಟಿ, ಪ್ರಸಿದ್ಧ್ ಕೃಷ್ಣ, ವೈಶಾಖ್ ವಿಜಯ್‌ಕುಮಾರ್

ತಮಿಳುನಾಡು

ಎನ್.ಜಗದೀಶ್ (ನಾಯಕ), ಸಾಯಿ ಸುದರ್ಶನ್, ಎ. ಸಿದ್ಧಾರ್ಥ್, ಭೂಪತಿ ಕುಮಾರ್, ಪ್ರದೋಷ್ ರಂಜನ್, ಸೋನು ಯಾದವ್, ಸನ್ನಿ ಸಂಧು, ಕಾರ್ತಿಕ್ ಮಣಿಕಂಠ, ಸಾಯಿ ಕಿಶೋರ್, ಜಿ. ಗಣೇಶ್, ಸಚಿನ್ ರಾಥೋಡ್

ತಮಿಳುನಾಡು ತಂಡವು ಈ ಋತುವಿನಲ್ಲಿ ತಾನಾಡಿದ ಎರಡು ಪಂದ್ಯಗಳ ಪೈಕಿ ಒಂದು ಪಂದ್ಯವನ್ನು ಮಾತ್ರ ಗೆದ್ದುಕೊಂಡಿದ್ದು 4 ಅಂಕಗಳೊಂದಿಗೆ ಎಲೈಟ್ ಗ್ರೂಪ್-ಎನಲ್ಲಿ 4ನೇ ಸ್ಥಾನದಲ್ಲಿದೆ. ಡಿ.24ರಂದು ನಡೆದ ತನ್ನ ಮೊದಲ ಪಂದ್ಯದಲ್ಲಿ ಅದು ಪಾಂಡಿಚೇರಿ ವಿರುದ್ಧ ಭರ್ಜರಿ 101 ರನ್‌ಗಳ ಗೆಲುವನ್ನು ಪಡೆದಿತ್ತು, ಆದರೆ ಡಿ.26ರಂದು ನಡೆದ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವು ತಮಿಳುನಾಡನ್ನು 2 ವಿಕೆಟ್‌ಗಳಿಂದ ಸೋಲಿಸಿತ್ತು.

ತಮಿಳುನಾಡು ತಂಡವನ್ನು ನಾರಾಯಣ್ ಜಗದೀಶನ್ ಮುನ್ನಡೆಸುತ್ತಿದ್ದಾರೆ. ತಂಡದಲ್ಲಿ ಭಾರತೀಯ ಕ್ರಿಕೆಟ್ ತಂಡದ ಆಟಗಾರರಾದ ಸಾಯಿ ಸುದರ್ಶನ್, ವಾಷಿಂಗ್ಟನ್ ಸುಂದರ್ ಇದ್ದಾರೆ. ಹಾಗೆಯೇ ಭರವಸೆಯ ಬ್ಯಾಟರ್‌ಗಳಾದ ಎ. ಸಿದ್ಧಾರ್ಥ್, ಭೂಪತಿ ಕುಮಾರ್ ಇದ್ದಾರೆ. ಆಲ್‌ರೌಂಡರ್‌ಗಳಾಗಿ ಸೋನು ಯಾದವ್, ಸನ್ನಿ ಸಂಧು ಮುಂತಾದವರಿದ್ದರೆ, ಬೌಲರ್‌ಗಳಾಗಿ ಕೆ. ಮಣಿಕಂಠನ್, ಮೊಹಮ್ಮದ್ ಆಲಿ, ಸಾಯಿ ಕಿಶೋರ್ ಮುಂತಾದವರಿದ್ದಾರೆ.

ಸೋಮವಾರ ನಡೆಯಲಿರುವ ಪಂದ್ಯವು ತಮಿಳುನಾಡಿಗೆ ಬಹುಮುಖ್ಯವಾಗಿರುವುದರಿಂದ ಕರ್ನಾಟಕದ ವಿರುದ್ಧ ಅದು ಪೈಪೋಟಿ ನೀಡುವುದರಲ್ಲಿ ಸಂದೇಹವೇನಿಲ್ಲ. ಹಾಗೆಯೇ ಈ ಟೂರ್ನಿಯಲ್ಲಿ ಅಜೇಯ ತಂಡವಾಗಿ ಮುನ್ನಡೆಯಲು ಕರ್ನಾಟಕಕ್ಕೂ ಹ್ಯಾಟ್ರಿಕ್ ಗೆಲುವಿನ ಅಗತ್ಯವಿದೆ. ಈ ಕಾರಣದಿಂದಾಗಿ ಸೋಮವಾರದ ಪಂದ್ಯವು ಎರಡೂ ತಂಡಗಳಿಗೂ ಮಹತ್ವ ಎನಿಸಲಿದೆ.

ಭಾರತ ತಂಡ ಪ್ರತಿನಿಧಿಸಿದ ಪಾಕ್‌ನ ಉಬೈದುಲ್ಲಾ

ಪಾಕಿಸ್ತಾನದ ಕಬಡ್ಡಿ ಆಟಗಾರನಿಗೆ ನಿಷೇಧ

ಲಾಹೋರ್: ಪಾಕಿಸ್ತಾನ ಕಬಡ್ಡಿ ಆಟಗಾರ ಉಬೈದುಲ್ಲಾ ರಜಪೂತ್ ಅವರನ್ನು ಪಾಕಿಸ್ತಾನ ಕಬಡ್ಡಿ ಫೆಡರೇಶನ್ ಅನಿರ್ದಿಷ್ಟಾವಧಿಗೆ ನಿಷೇಧಿಸಿದೆ. ಫೆಡರೇಶನ್ ನಿಯಮಗಳನ್ನು ಉಲ್ಲಂಘಿಸಿ ವಿದೇಶದಲ್ಲಿ ನಡೆದ ಖಾಸಗಿ ಪಂದ್ಯಾವಳಿಯಲ್ಲಿ ಭಾರತೀಯ ತಂಡಕ್ಕಾಗಿ ಕಬಡ್ಡಿ ಆಡಿದ್ದಕ್ಕಾಗಿ ಅವರನ್ನು ನಿಷೇಧಿಸಲಾಗಿದೆ ಎಂದು ಪಿಕೆಎಫ್ ಬಹಿರಂಗಪಡಿಸಿದೆ. ನಿಯಮಗಳನ್ನು ಉಲ್ಲಂಘಿಸಿ ಎನ್‌ಒಸಿ ಪಡೆಯದೆ ರಜಪೂತ್ ವಿದೇಶಕ್ಕೆ ಹೋಗಿದ್ದಾರೆ, ಈ ಹಿನ್ನೆಲೆಯಲ್ಲಿ ಶನಿವಾರ ಅಧಿಕಾರಿಗಳು ತುರ್ತು ಸಭೆ ನಡೆಸಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಫೆಡರೇಶನ್ ಕಾರ್ಯದರ್ಶಿ ರಾಣಾ ಸರ್ವರ್ ತಿಳಿಸಿದ್ದಾರೆ.



ವಿಷಯವನ್ನು ಫೆಡರೇಷನ್ ಗಂಭೀರವಾಗಿ ಪರಿಗಣಿಸಿದ್ದು, ರಜಪೂತ್ ಎನ್‌ಒಸಿ ಇಲ್ಲದೆ ವಿದೇಶಕ್ಕೆ ಹೋಗಿದ್ದಲ್ಲದೆ, ಅಲ್ಲಿ ಅವರು ಭಾರತೀಯ ತಂಡವನ್ನು ಪ್ರತಿನಿಧಿಸಿದ್ದನ್ನು ಸಹ ಗಂಭೀರವಾಗಿ ಪರಿಗಣಿಸಿದೆ. ಪಂದ್ಯದ ನಂತರ ಭಾರತ ತಂಡದ ಜೆರ್ಸಿ ಧರಿಸಿ ಮತ್ತು ಭಾರತದ ಧ್ವಜವನ್ನು ಹೆಗಲ ಮೇಲೆ ಹೊತ್ತುಕೊಂಡು ಸಂಭ್ರಮಿಸಿದ್ದಾರೆ ಎಂದು ಫೆಡರೇಶನ್ ಹೇಳಿದೆ. ರಜಪೂತ್ ಜೊತೆಗೆ ನಿಯಮಗಳನ್ನು ಉಲ್ಲಂಘಿಸಿ ಎನ್‌ಒಸಿ ಇಲ್ಲದೆ ಪಂದ್ಯಾವಳಿಯಲ್ಲಿ ಆಡಿದ ಇತರ ಕೆಲವು ಕಬಡ್ಡಿ ಆಟಗಾರರನ್ನು ಸಹ ನಿಷೇಧಿಸಿ ದಂಡ ವಿಧಿಸಲಾಯಿತು ಎಂದು ಸರ್ವರ್ ತಿಳಿಸಿದ್ದಾರೆ.

ಏನಿದು ಘಟನೆ: ಇತ್ತೀಚೆಗೆ ಬಹ್ರೇನ್‌ನಲ್ಲಿ ಕಬಡ್ಡಿ ಖಾಸಗಿ ಪಂದ್ಯಾವಳಿ ಆಯೋಜಿತವಾಗಿತ್ತು. ಈ ಪಂದ್ಯಾವಳಿಯಲ್ಲಿ ಪಾಕಿಸ್ತಾನಿ ಕಬಡ್ಡಿ ಆಟಗಾರ ಉಬೈದುಲ್ಲಾ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಈ ಪಂದ್ಯದಲ್ಲಿ ಅವರು ಧರಿಸಿದ್ದ ಜೆರ್ಸಿಯ ಮೇಲೆ ಭಾರತದ ಹೆಸರೂ ಬರೆಯಲಾಗಿತ್ತು. ಪಂದ್ಯ ಗೆದ್ದ ನಂತರ ಉಬೈದುಲ್ಲಾ ಮೈದಾನದಲ್ಲಿ ಭಾರತ ಧ್ವಜದೊಂದಿಗೆ ಮೈದಾನವನ್ನು ಸುತ್ತಾಡಿದರು. ಇದಕ್ಕೆ ಸಂಬಂಧಿಸಿದ ಫೋಟೋಗಳು ಮತ್ತು ವೀಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದವು. ಇದು ಪಾಕಿಸ್ತಾನದಲ್ಲಿ ದೊಡ್ಡ ವಿವಾದಕ್ಕೆ ಕಾರಣವಾಯಿತು. ಈ ವಿಷಯ ಪಾಕಿಸ್ತಾನ ಕಬಡ್ಡಿ ಫೆಡರೇಶನ್ ಅಧಿಕಾರಿಗಳ ಗಮನಕ್ಕೆ ಬಂದ ನಂತರ ತುರ್ತು ಸಭೆ ನಡೆಸಿ ಈ ಸಭೆಯಲ್ಲಿ ಉಬೈದುಲ್ಲಾ ಅವರನ್ನು ನಿಷೇಧಿಸಲು ನಿರ್ಧರಿಸಲಾಯಿತು.

ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ದಾಖಲೆ ಬರೆದ 9ನೇ ಬ್ಯಾಟರ್

22 ಸಾವಿರ ರನ್: ಜೋ ರೂಟ್ ದಾಖಲೆ

ಮೆಲ್ಬರ್ನ್: ಡಿಸೆಂಬರ್ 27ರಂದು ಇಂಗ್ಲೆಂಡ್ ತಂಡ ಆಸ್ಟ್ರೇಲಿಯಾವನ್ನು ಆ್ಯಷಸ್ ಸರಣಿಯಲ್ಲಿ ಮಣಿಸಿ ಐತಿಹಾಸಿಕ ಜಯ ಗಳಿಸಿದ್ದ ಪಂದ್ಯದಲ್ಲಿ ಇಂಗ್ಲೆಂಡ್‌ನ ಜೋ ರೂಟ್ ಮಹತ್ವದ ದಾಖಲೆಯೊಂದನ್ನು ಬರೆದಿದ್ದಾರೆ.

ಟೆಸ್ಟ್‌ನ ಪ್ರಥಮ ಇನ್ನಿಂಗ್ಸ್‌ನಲ್ಲಿ ಜೋ ರೂಟ್ ಶೂನ್ಯಕ್ಕೆ ಔಟಾಗಿದ್ದರು, ದ್ವಿತೀಯ ಇನ್ನಿಂಗ್ಸ್‌ನಲ್ಲಿ ಕೇವಲ 15 ರನ್‌ಗಳನ್ನು ಗಳಿಸಿದರು. ಆದಾಗ್ಯೂ, ಕೇವಲ 15 ರನ್‌ಗಳನ್ನು ಗಳಿಸುವ ಮೂಲಕ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 22,000 ರನ್‌ಗಳನ್ನು ಪೂರ್ಣಗೊಳಿಸಿ, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈ ದಾಖಲೆ ಬರೆದ ಒಂಬತ್ತನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಈ ಹಿಂದೆ ಈ ಸಾಧನೆಯನ್ನು ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ, ಕುಮಾರ್ ಸಂಗಕ್ಕಾರ, ರಾಹುಲ್ ದ್ರಾವಿಡ್, ರಿಕಿ ಪಾಂಟಿಂಗ್, ಮಹೇಲಾ ಜಯವರ್ಧನೆ, ಜಾಕ್ ಕಾಲಿಸ್ ಮತ್ತು ಬ್ರಿಯಾನ್ ಲಾರಾ ಸಾಧಿಸಿದ್ದಾರೆ. ಇದೀಗ ಆ ಸಾಲಿಗೆ ಇಂಗ್ಲೆಂಡ್‌ನ ಜೋ ರೂಟ್ ಸೇರ್ಪಡೆಯಾಗಿದ್ದಾರೆ. ಜೋ ರೂಟ್ ಅವರು ಆಸ್ಟ್ರೇಲಿಯಾದಲ್ಲಿ ಎಂದಿಗೂ ಟೆಸ್ಟ್ ಶತಕ ಗಳಿಸಿರಲಿಲ್ಲ. ಆದರೆ ಈ ಬಾರಿ ಬ್ರಿಸ್ಬೇನ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ನೆಲದಲ್ಲಿ ತಮ್ಮ ಮೊದಲ ಶತಕವನ್ನು ದಾಖಲಿಸಿದ್ದಾರೆ. ಇಲ್ಲಿಯವರೆಗೂ ಆಡಿದ ಈ ಸರಣಿಯ ನಾಲ್ಕು ಪಂದ್ಯಗಳಿಂದ 234 ರನ್‌ಗಳನ್ನು ಗಳಿಸುವಲ್ಲಿ ಜೋ ರೂಟ್ ಯಶಸ್ವಿಯಾಗಿ ದ್ದಾರೆ. ಆಸ್ಟ್ರೇಲಿಯಾ ಈಗಾಗಲೇ ಮೊದಲ ಮೂರು ಪಂದ್ಯಗಳನ್ನು ಗೆಲ್ಲುವ ಮೂಲಕ ಸರಣಿಯನ್ನು 3-1 ಅಂತರದಲ್ಲಿ ವಶಪಡಿಸಿಕೊಂಡಿದೆ.

ರೋಹಿತ್ ಚಿತ್ತ ಎಲೈಟ್ ಲಿಸ್ಟ್ ದಾಖಲೆಯತ್ತ

ದೆಹಲಿ: ಮುಂಬೈ ತಂಡದ ಪರ 2025-26ರ ಸಾಲಿನ ವಿಜಯ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಶತಕ ಸಿಡಿಸಿದ ಬಳಿಕ ಇದೀಗ ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಗೆ ಸಜ್ಜಾಗುತ್ತಿದ್ದಾರೆ. ಈ ಸರಣಿಯಲ್ಲಿ ರೋಹಿತ್ ಶರ್ಮಾ 87 ರನ್‌ಗಳನ್ನು ಕಲೆ ಹಾಕಿದರೆ, ವಿರಾಟ್ ಕೊಹ್ಲಿ, ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ಅವರನ್ನು ಒಳಗೊಂಡ ಎಲೈಟ್ ಲಿಸ್ಟ್‌ಗೆ ಸೇರ್ಪಡೆಯಾಗಲಿದ್ದಾರೆ. ಜನವರಿ 11ರಂದು ನ್ಯೂಜಿಲೆಂಡ್ ವಿರುದ್ಧ ಮೊದಲನೇ ಏಕದಿನ ಪಂದ್ಯ ನಡೆಯಲಿದೆ.

ರೋಹಿತ್ ಇತ್ತೀಚೆಗೆ ಮುಂಬೈ ತಂಡದ ಪರ ಎರಡು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡಿದ್ದರು. 8 ವರ್ಷಗಳ ಬಳಿಕ ಆಡಿದ ಮೊದಲನೇ ಲಿಸ್ಟ್-ಎ ಪಂದ್ಯದಲ್ಲಿ ಸಿಕ್ಕಿಂ ವಿರುದ್ಧದ 155 ರನ್‌ಗಳನ್ನು ಕಲೆ ಹಾಕಿದ್ದರು. ನಂತರದ ಪಂದ್ಯದಲ್ಲಿ ಉತ್ತರಾಖಂಡ ವಿರುದ್ಧ ಯಾವುದೇ ರನ್ ಗಳಿಸದೆ ಔಟ್ ಆಗಿದ್ದರು.

ಲಿಸ್ಟ್ ಎ ಕ್ರಿಕೆಟ್‌ನಲ್ಲಿ 14000 ರನ್‌ಗಳನ್ನು ಗಳಿಸಿದ ಬ್ಯಾಟ್ಸ್‌ಮನ್‌ಗಳ ಎಲೈಟ್ ಲಿಸ್ಟ್‌ಗೆ ಸೇರಲು ರೋಹಿತ್ ಶರ್ಮಾಗೆ ಕೇವಲ 87 ರನ್‌ಗಳ ಅಗತ್ಯವಿದೆ. ಸದ್ಯ ಬಲಗೈ ಬ್ಯಾಟ್ಸ್‌ಮನ್ 352 ಪಂದ್ಯಗಳ 340 ಇನ್ನಿಂಗ್ಸ್‌ಗಳಿಂದ 13913 ರನ್‌ಗಳನ್ನು ಕಲೆ ಹಾಕಿದ್ದಾರೆ. 2006ರಲ್ಲಿ ದೇವಧರ್ ಟ್ರೋಫಿ ಟೂರ್ನಿಯಲ್ಲಿ ಪಶ್ಚಿಮ ವಲಯ ತಂಡದ ಪರ ಆಡಿದ್ದರು. ತಮ್ಮ ಚೊಚ್ಚಲ ಪಂದ್ಯದಲ್ಲಿ ರೋಹಿತ್ ಶರ್ಮಾ 47 ಎಸೆತಗಳಲ್ಲಿ ಅಜೇಯ 31 ರನ್ ಗಳಿಸಿದ್ದರು, ಅದಾದ ಒಂದು ವರ್ಷದ ಬಳಿಕ ಅವರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಅತುಲ್ ಶಿರೋಳೆ ಕುಸ್ತಿ ತಂಡದ ಕೋಚ್

ದೆಹಲಿ: ಮಲೇಷ್ಯಾದ ಕೌಲಾಲಂಪುರದಲ್ಲಿ ಮುಂದಿನ ಜ.12ರಿಂದ 17ರವರೆಗೆ ನಡೆಯಲಿರುವ ಅಂತಾರಾಷ್ಟ್ರೀಯ ಕುಸ್ತಿ ಟೂರ್ನಿಯಲ್ಲಿ ಭಾರತೀಯ ಕುಸ್ತಿ ತಂಡಕ್ಕೆ ಮುಖ್ಯ ತರಬೇತುದಾರರಾಗಿ ಬೆಳಗಾವಿ ತಾಲ್ಲೂಕಿನ ಮುಚ್ಚಂಡಿಯ ಅಂತಾರಾಷ್ಟ್ರೀಯ ಕುಸ್ತಿಪಟು ಅತುಲ್ ಶಿರೋಳೆ ಅವರನ್ನು ನೇಮಿಸಲಾಗಿದೆ. ಇಂಟರ್‌ನ್ಯಾಷನಲ್ ಒಲಿಂಪಿಕ್ಸ್ ಸ್ಪೋರ್ಟ್ಸ್ ಆರ್ಗನೈಸೇಷನ್ ಕಮಿಟಿ ಹಾಗೂ ವರ್ಲ್ಡ್ ಫೆಡರೇಷನ್ ಆಫ್ ಮಿಷನ್ ಒಲಿಂಪಿಕ್ಸ್ ಗೇಮ್ ಅಸೋಸಿಯೇಷನ್ ಈ ಟೂರ್ನಿ ಆಯೋಜಿಸಿದೆ. ಪೈಲ್ವಾನರ ಮನೆತನದ ಹಿನ್ನೆಲೆಯಿಂದ ಬಂದಿರುವ 29 ವರ್ಷ ವಯಸ್ಸಿನ ಅತುಲ್, 2 ಕಂಚಿನ ಪದಕ ಗಳಿಸಿದ್ದಾರೆ. ರಾಷ್ಟ್ರ ಮತ್ತು ರಾಜ್ಯಮಟ್ಟದ ಟೂರ್ನಿಗಳಲ್ಲಿ 3 ಚಿನ್ನ, 2 ಬೆಳ್ಳಿ ಮತ್ತು 3 ಕಂಚಿನ ಪದಕ ಅವರಿಗೆ ಒಲಿದಿವೆ.

ವಿಟಾಕೀಸ್

ಡ್ರೀಮ್ ಥಿಯೇಟರ್‌ನಲ್ಲಿ ಪ್ರಿಯಾಂಕಾ

ಸಪ್ತಸಾಗರದಾಚೆ ಎಲ್ಲೋ ಸಿನಿಮಾದಲ್ಲಿ ನವಿರಾದ ಪ್ರೇಮಕಥೆ ಹೊತ್ತು ಬಂದು ಭಗ್ನ ಪ್ರೇಮಿಯ ತುಮುಲಗಳನ್ನು ಮನಸಿನಿಗೆ ನಾಟುವಂತೆ ಹೇಳಿದ ನಿರ್ದೇಶಕ ಹೇಮಂತ್. ಎಂ. ರಾವ್ ಈಗ ಥ್ರಿಲ್ಲರ್ ಜಾನರ್ ನತ್ತ ಹೊರಳಿದ್ದಾರೆ. ಹೇಮಂತ್ , 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಹೊಸ ಕಥೆ ಹೇಳಲು ಸಿದ್ದವಾಗಿದ್ದಾರೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ಡಾಲಿ ಧನಂಜಯ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಈ ಇಬ್ಬರು ನಟರು ರೆಟ್ರೋ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದು, ಸಿನಿಮಾದ ಬಗ್ಗೆ ಕುತೂಹಲ ಮೂಡಿಸಿದೆ. ಅದಕ್ಕೂ ಮಿಗಿಲಾಗಿ ಇದು ಅಣ್ಣಾವ್ರ ಆಪರೇಷನ್ ಡೈಮಂಡ್ ರಾಕೆಟ್ ಸೇರಿದಂತೆ ಹಲವು ಥ್ರಿಲ್ಲಿಂಗ್ ಸಿನಿಮಾಗಳನ್ನು ಹೋಲುತ್ತಿದ್ದೆ. ಅಂತೆಯೇ ಡ್ರೀಮ್ ಥಿಯೇಟರ್ ನ ಪೋಸ್ಟರ್ ಗಳು ಕೂಡ ರೆಟ್ರೋ ಸ್ಟೈಲ್ ನಲ್ಲಿಯೇ ಇವೆ. ಈಗ ಡ್ರೀಮ್ ಥಿಯೇಟರ್ ಗೆ ಪ್ರಿಯಾಂಕಾ ಮೋಹನ್ ಕೂಡ ಎಂಟ್ರಿ ಕೊಟ್ಟಿದ್ದಾರೆ. ನಿರ್ದೇಶಕ ಹೇಮಂತ್ ರಾವ್ ಸಾಮಾಜಿಕ ಜಾಲ ತಾಣದಲ್ಲಿ ಪ್ರಿಯಾಂಕಾ ಮೋಹನ್ ಅವರ ಪೋಸ್ಟರ್ ಹಂಚಿಕೊಂಡಿದ್ದಾರೆ. ಅವ್ಯವಸ್ಥೆಯ ನಡುವೆ ಹಾರುವ ಚಿಟ್ಟೆ ಎಂದು ನಟಿ ಪ್ರಿಯಾಂಕಾ ಪಾತ್ರಕ್ಕೆ ಶೀರ್ಷಿಕೆ ನೀಡಿದ್ದಾರೆ. ಸದ್ಯ ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ಪ್ರಿಯಾಂಕಾ ಮೋಹನ್ ಬಲು ಸುಂದರವಾಗಿ ಕಾಣುತ್ತಿದ್ದಾರೆ. ಅವರ ವೇಷ ಭೂಷಣ ಎಲ್ಲವೂ ಎಂಬತ್ತರ ಕಾಲ ಘಟ್ಟದ ಲುಕ್ ಗೆ ಹೊಂದುತ್ತಿದೆ. 666 ಆಪರೇಷನ್ ಡ್ರೀಮ್ ಥಿಯೇಟರ್ ಎಪ್ಪತ್ತರ ದಶಕದಲ್ಲಿ ನಡೆಯುವ ಕಥೆಯನ್ನು ಒಳಗೊಂಡಿದೆ. ಡಾಲಿ ಧನಂಜಯ್ ಹಾಗೂ ಶಿವಣ್ಣ ಅವರ ಪೋಸ್ಟರ್‌ಗಳು ಇದನ್ನು ಸ್ಪಷ್ಟವಾಗಿ ಹೇಳುತ್ತಿವೆ. ಇದೀಗ ಪ್ರಿಯಾಂಕಾ ಮೋಹನ್ ಪೋಸ್ಟರ್ ಸಹ ಇದನ್ನೇ ಸೂಚಿಸುತ್ತಿದೆ. ಬೆಂಗಳೂರಿ ನಲ್ಲಿ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸಲಾಗುತ್ತಿದೆ. ಮುಂದಿನ ವರ್ಷದ ಸೆಪ್ಟೆಂಬರ್, ಅಕ್ಟೋಬರ್ ವೇಳೆಗೆ ಸಿನಿಮಾ ತೆರೆಗೆ ಬರಲಿದೆ.

ಟಾಕ್ಸಿಕ್‌ನಲ್ಲಿ ಹುಮಾ ಖುರೇಷಿ

ಟಾಕ್ಸಿಕ್ ಭಾರತೀಯ ಚಿತ್ರರಂಗದಲ್ಲಿ ಕುತೂಹಲ ಮೂಡಿಸಿದೆ. ಈ ವರ್ಷದ ನಿರೀಕ್ಷಿತ ಸಿನಿಮಾಗಳಲ್ಲಿಯೂ ಒಂದಾಗಿದೆ. ಟಾಕ್ಸಿಕ್ ಪೋಸ್ಟರ್, ಗ್ಲಿಂಪ್ಸ್ ಮೂಲಕವೇ ಕುತೂಹಲ ಮೂಡಿಸಿತ್ತು. ಈ ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇದ್ದು, ಕುತೂಹಲವನ್ನು ಇಮ್ಮಡಿಗೊಳಿಸಿದೆ. ಯಶ್ ಗ ಜತೆಯಾಗಿ ಬಾಲಿವುಡ್ ಬ್ಯೂಟಿ ಕಿಯಾರಾ ಅಡ್ವಾಣಿ ನಟಿಸಿದ್ದು ಅವರ ಪಾತ್ರದ ಫಸ್ಟ್ ಲುಕ್ ಇತ್ತೀಚೆಗೆ ಬಿಡುಗಡೆಯಾಗಿತ್ತು ಸಿನಿಪ್ರಿಯರನ್ನು ಸೆಳೆದಿತ್ತು. ಈ ಚಿತ್ರದಲ್ಲಿ ಹುಮಾ ಖುರೇಷಿ ಕೂಡ ಪ್ರಮುಖ ಪಾತದಲ್ಲಿ ಕಾಣಿಸಿಕೊಂಡಿದ್ದು, ಅವರ ಪಾತ್ರದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ. ಕಪ್ಪು ಬಣ್ಣದ ಗೌನ್ ತೊಟ್ಟು ಕಪು ಬಣ್ಣದ ಕಾರಿನ ಮುಂದೆ ನಿಂತಿರುವ ಹುಮಾ ಲುಕ್ ಅದ್ಭುತವಾಗಿದೆ. ಯಾರನ್ನೋ ನಿರೀಕ್ಷಿಸುತ್ತಿರುವ ಹುಮಾ, ಎಲಿಜಬೆತ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹುಮಾ ಖುರೇಷಿ ಕಥೆಗೆ ತಿರುವು ನೀಡುವ ಪಾತ್ರ ಅವರದ್ದಾಗಿದ್ದು, ಸಿನಿಮಾದುದ್ದಕ್ಕೂ ಎಲಿಜಬೆತ್ ಪಾತ್ರ ಸಾಗಲಿದೆ.

ಮನಸಿಗೆ ತುಂಬಾ ಖುಷಿ ಕೊಟ್ಟ ಪಾತ್ರವಿದು. ಈ ಪಾತ್ರಕ್ಕಾಗಿ ಸಾಕಷ್ಟು ತಯಾರಿ ನಡೆಸಿದ್ದೆ. ಮೆಚ್ಚುವಂತೆ ಪಾತ್ರ ನಿರ್ವಹಿಸಿರುವುದು ಮನಸಿಗೆ ಖುಷಿಕೊಟ್ಟಿದೆ. ಟಾಕ್ಸಿಕ್ ಭಾಗವಾಗಿರುವುದು ಖುಷಿ ತಂದಿದೆ ಎಂದು ಹುಮಾ ಖುರೇಷಿ ಸಂತಸ ಹಂಚಿಕೊಂಡಿದ್ದಾರೆ.

ಹುಮಾ ಖುರೇಷಿ ಅವರು ಎಲಿಜಬೆತ್ ಪಾತ್ರದಲ್ಲಿ ಬಣ್ಣ ಹಚ್ಚಿದ್ದು, ಆ ಪಾತ್ರಕ್ಕೆ ತಕ್ಕಂತೆ ಹೊಂದಿಕೊಂಡಿದ್ದಾರೆ. ಅವರ ಪಾತ್ರವನ್ನು ನಿರ್ವಹಿಸಿದ ರೀತಿ ಮೆಚ್ಚುವಂತದ್ದು ಎಂದು ನಿರ್ದೇಶಕಿ ಗೀತು ಮೋಹನ್ ದಾಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಟಾಕ್ಸಿಕ್ ಡ್ರಗ್ಸ್ ಮಾಫಿಯಾದ ಕಥೆಯನ್ನು ಒಳಗೊಂಡಿದ್ದು ಯಶ್ ಭೂಗತ ಲೋಕದ ಡಾನ್ ಆಗಿ ಅಬ್ಬರಿಸಿದ್ದಾರೆ. ಅವರ ಪಾತ್ರ ಬಲು ಪವರ್ ಫುಲ್ ಆಗಿ ಮೂಡಿಬಂದಿದೆ. ಪರ ಭಾಷೆಯ ಸ್ಟಾರ್ ನಟರೂ ಕೂಡ ಚಿತ್ರದ ತಾರಾಗಣದಲ್ಲಿದ್ದಾರೆ. ಹಾಲಿವುಡ್ ತಂತ್ರಜ್ಞರೂ ಕೂಡ ಸಿನಿಮಾದಲ್ಲಿ ಕಾರ್ಯ ನಿರ್ವಹಿಸಿದ್ದು ಸಿನಿಮಾ ತಾಂತ್ರಿಕವಾಗಿ ಶ್ರೀಮಂತವಾಗಿ ಮೂಡಿಬಂದಿದೆ. ಜನವರಿಯಲ್ಲಿ ಯಶ್ ಹುಟ್ಟುಹಬ್ಬದಂದು ಟಾಕ್ಸಿಕ್ ಟೀಸರ್ ರಿಲೀಸ್ ಆಗಲಿದೆ. ಮುಂದಿನ ವರ್ಷದ ಮಾರ್ಚ್‌ನಲ್ಲಿ ಟಾಕ್ಸಿಕ್ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ಚಂದನವನದಲ್ಲಿ ಚೈತ್ರಾಕಾಲ

ಸುರಾಮ್ ಮೂವೀಸ್ ಲಾಂಛನ ದಲ್ಲಿ ಜಯರಾಮ್ ದೇವ ಸಮುದ್ರ ನಿರ್ಮಿಸುತ್ತಿರುವ ಹೊಸ ಚಿತ್ರವನ್ನು ಶಕ್ತಿ ಪ್ರಸಾದ್ ನಿರ್ದೇಶನ ಮಾಡುತ್ತಿದ್ದು ಈ ಚಿತ್ರದಲ್ಲಿ ಚೈತ್ರಾ ಜೆ ಆಚಾರ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿ ದ್ದಾರೆ. ಲೈಲಾಸ್ ಸ್ವೀಟ್ ಡ್ರೀಮ್ ಎಂಬುದು ಸಿನಿಮಾದ ವಿಸ್ತೃತ ರೂಪ ವಾಗಿದೆ. ಈ ಚಿತ್ರದ ಟೈಟಲ್ ಟೀಸರ್ ಬಿಡುಗಡೆಯಾಗಿದೆ.

ನಮ್ಮ ಸುರಾಮ್ ಮೂವೀಸ್ ನಿರ್ಮಾಣದ ನಾಲ್ಕನೇ ಚಿತ್ರವಿದು. ನಿದ್ರಾದೇವಿ ನೆಕ್ಸ್ಟ್ ಡೋರ್ ನಮ್ಮ ಸಂಸ್ಥೆಯ ಮೊದಲ ಚಿತ್ರ. ನಂತರ ಶ್ರೀಮುರಳಿ ಅಭಿನಯದ ಉಗ್ರಾಯಧಮ್ ಹಾಗೂ ನೀ ನಂಗೆ ಅಲ್ವಾ ಚಿತ್ರಗಳ ಚಿತ್ರೀಕರಣ ನಡೆಯುತ್ತಿದೆ. ಹೊಸಪ್ರತಿಭೆಗಳಿಗೆ ಅವಕಾಶ ಮಾಡಿಕೊಡಬೇಕೆಂಬುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ. ಹಾಗಾಗಿ ಯುವ ಪ್ರತಿಭೆ ಶಕ್ತಿಪ್ರಸಾದ್ ಬಂದು ಎನ್ ಎಸ್ ಡಿ ಚಿತ್ರದ ಕಥೆ ಹೇಳಿದಾಗ ಬಹಳ ಇಷ್ಟವಾಯಿತು. ಹಾಗಾಗಿ ನಿರ್ಮಾಣಕ್ಕೆ ಮುಂದಾದೆ. ಚೈತ್ರಾ ಜೆ ಆಚಾರ್, ಎಂ.ಡಿ.ಪಲ್ಲವಿ, ಅವಿನಾಶ್ ಮುಂತಾದವರು ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಎಂದು ನಿರ್ಮಾಪಕ ಜಯರಾಮ್ ದೇವಸಮುದ್ರ ಹೇಳಿದರು.

ನಾನು ನನ್ನ ತಂಡದ ಜತೆಗೆ ಅನೇಕ ಕಿರು ಚಿತ್ರಗಳನ್ನು ನಿರ್ಮಾಣ ಮಾಡಿದ್ದೇನೆ.

ಬೆಳ್ಳಿತೆರೆಯಲ್ಲಿ ಇದು ನನ್ನ ಮೊದಲ ಚಿತ್ರ. ಎನ್ ಎಸ್ ಡಿ ಎಂದರೆ ಲೈಲಾಸ್ ಸ್ವೀಟ್ ಡ್ರೀಮ್ ಅಂತ ಅರ್ಥ. ಇದೊಂದು ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರವಿದು. ತಾಯಿ - ಮಗಳ ಬಾಂಧವ್ಯದ ಚಿತ್ರವೂ ಹೌದು. ಚೈತ್ರಾ ಜೆ ಆಚಾರ್ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದು, ಅವರ ತಾಯಿ ಪಾತ್ರದಲ್ಲಿ ಎಂ.ಡಿ.ಪಲ್ಲವಿ ನಟಿಸುತ್ತಿದ್ದಾರೆ. ಉದ್ಯಮಿಯ ಪಾತ್ರದಲ್ಲಿ ಹಿರಿಯ ನಟ ಅವಿನಾಶ್ ಕಾಣಿಸಿಕೊಳ್ಳುತ್ತಿದ್ದಾರೆ. ಮಿಥುನ್ ಮುಕುಂದನ್ ಸಂಗೀತ ನಿರ್ದೇಶನ, ರಿತೇಶ್ ಛಾಯಾಗ್ರಹಣ ಹಾಗೂ ಬಲರಾಮ್ ಸಂಕಲನವಿರುವ ಈ ಚಿತ್ರಕ್ಕಿದೆ. ಈಗಾಗಲೇ ಒಂದು ಹಂತದ ಚಿತ್ರೀಕರಣ ಮುಕ್ತಾಯ ವಾಗಿದ್ದು, ಜನವರಿ 15 ರಿಂದ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ ಎಂದು ನಿರ್ದೇಶಕ ಶಕ್ತಿಪ್ರಸಾದ್ ತಿಳಿಸಿದರು.

ನನಗೆ ಶಕ್ತಿಪ್ರಸಾದ್ ಅವರು ಸುಮಾರು ಒಂದೂವರೆ ವರ್ಷಗಳ ಹಿಂದೆ ಈ ಕಥೆ ಹೇಳಿದರು. ತುಂಬಾ ಇಷ್ಟವಾಯಿತು. ಶಕ್ತಿಪ್ರಸಾದ್ ಈ ಮೊದಲು ಬೇರೆ ಭಾಷೆಗಳ ನಿರ್ಮಾಪಕರ ಬಳಿ ಈ ಕಥೆ ಹೇಳಿದ್ದಾರೆ. ಅವರೆಲ್ಲರೂ ಕಥೆ ಮೆಚ್ಚಿಕೊಂಡು ನಿರ್ಮಾಣಕ್ಕೆ ಮುಂದಾಗಿದ್ದರು. ಆದರೆ ಕನ್ನಡದಲ್ಲೇ ಈ ಚಿತ್ರ ಮಾಡಬೇಕೆಂಬ ಉದ್ದೇಶದಿಂದ ಅವರು ಬೇರೆ ಭಾಷೆಗಳಲ್ಲಿ ಈ ಚಿತ್ರ ಮಾಡಲಿಲ್ಲ. ನಂತರ ನಿರ್ಮಾಪಕ ಜಯರಾಮ್ ದೇವಸಮುದ್ರ ಕನ್ನಡದಲ್ಲಿ ನಿರ್ಮಾಣಕ್ಕೆ ಮುಂದಾದರು. ನಾನು ಈ ಚಿತ್ರದಲ್ಲಿ ಈವರೆಗೂ ಮಾಡಿರದ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ ಎಂದು ನಟಿ ಚೈತ್ರಾ ಜೆ ಆಚಾರ್ ಹೇಳಿದರು.

ಕೆಲವು ವರ್ಷಗಳ ನಂತರ ಮತ್ತೆ ಸಿನಿಮಾದಲ್ಲಿ ನಾನು ಈ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಶಕ್ತಿಪ್ರಸಾದ್ ಒಳ್ಳೆಯ ಕಥೆ ಮಾಡಿಕೊಂಡಿದ್ದಾರೆ. ನಾನು ಚೈತ್ರಾ ಜೆ ಆಚಾರ್ ಅವರ ಅಮ್ಮನ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ ಎಂದರು ಎಂ.ಡಿ.ಪಲ್ಲವಿ.

ನಾನು ಸಾಕಷ್ಟು ಸಿನಿಮಾ ತಂಡಗಳ ಜತೆಗೆ ಕೆಲಸ ಮಾಡಿದ್ದೇನೆ. ಆದರೆ ಈ ತಂಡದ ಜತೆ ಕೆಲಸ ಮಾಡಿರುವುದು ಬಹಳ ಖುಷಿಯಾಗಿದೆ. ನನ್ನದು ಈ ಚಿತ್ರದಲ್ಲಿ ಬ್ಯುಸಿನೆಸ್ ಮ್ಯಾನ್ ಪಾತ್ರ ಎಂದು ಹಿರಿಯ ನಟ ಅವಿನಾಶ್ ಹೇಳಿದರು.

ಒಟಿಟಿಯಲ್ಲಿ ಮುದ್ದು ಸದ್ದು

ಕೆಮಿಸ್ಟ್ರಿ ಆಫ್ ಕರಿಯಪ್ಪ ಖ್ಯಾತಿಯ ನಿರ್ದೇಶಕ ಕುಮಾರ್ ಲವ್ ಯೂ ಮುದ್ದು ಎಂಬ ಅಪರೂಪದ ಲವ್ ಸ್ಟೋರಿ ಹೆಣೆದು ತೆರೆಗೆ ತಂದಿದ್ದಾರೆ. ನೈಜ ಪ್ರೇಮಕಥೆಯನ್ನು ಒಳಗೊಂಡ ಈ ಸಿನಿಮಾ ಚಿತ್ರಮಂದಿರಗಳಲ್ಲಿ ಸಿನಿಪ್ರಿಯರ ಮನಗೆದ್ದಿತ್ತು. ರಾಜ್ಯದ ಕೆಲವು ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಇಪ್ಪತ್ತೈದು ದಿನಗಳ ಪ್ರದರ್ಶನ ಕಂಡಿತ್ತು. ಲವ್ ಯೂ ಮುದ್ದು, ಇದೀಗ ಒಟಿಟಿಗೆ ಲಗ್ಗೆಯಿಟ್ಟಿದೆ. ಮಹಾರಾಷ್ಟ್ರದಲ್ಲಿ ನಡೆದ ನೈಜ ಪ್ರೇಮಕಥೆಗೆ ಪ್ರೇಕ್ಷಕರಿಂದ ಮೆಚ್ಚುಗೆ ವ್ಯಕ್ತವಾಗಿತ್ತು. ಇಂಥ ಅಪರೂಪದ ಪ್ರೇಮ್ ಕಹಾನಿ ಒಟಿಟಿಯಲ್ಲಿಯೂ ಪ್ರೇಕ್ಷಕರ ಮನಗೆಲ್ಲುತ್ತಿದೆ.

ಲವ್ ಯೂ ಮುದ್ದು ಸಿನಿಮಾದಲ್ಲಿ ನಾಯಕನಾಗಿ ಸಿದ್ದು ನಟಿಸಿದ್ದು, ನವನಟಿ ರೇಷ್ಮಾ ನಾಯಕಿಯಾಗಿ ಸಾಥ್ ಕೊಟ್ಟಿದ್ದಾರೆ. ರಾಜೇಶ್ ನಟರಂಗ, ಗಿರೀಶ್ ಶಿವಣ್ಣ, ತಬಲಾ ನಾಣಿ, ಶ್ರೀವತ್ಸ, ಅಪೂರ್ವಾ, ಉಷಾ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಕಾರ್ಕಳ, ಕುಮಟಾ, ಬೆಂಗಳೂರು ಸುತ್ತಮುತ್ತ ಶೂಟಿಂಗ್ ನಡೆಸಲಾಗಿರುವ ಈ ಚಿತ್ರ, ಪ್ರೇಮಿಗಳನ್ನು ಆಕರ್ಷಿಸಿತ್ತು. ಕಿಶನ್ ಎಂಟರ್ ಟೇನ್ ಮೆಂಟ್ ಬ್ಯಾನರ್‌ನಲ್ಲಿ ಕಿಶನ್ ಟಿ.ಎನ್ ಲವ್ ಯೂ ಮುದ್ದು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಸಂಗಮೇಶ ಈಗ ಗಲಿಬಿಲಿ ಗೋವಿಂದ

ಕಿರುತೆರೆಯಲ್ಲಿ ಪ್ರಸಾರವಾಗುತ್ತಿದ್ದ ಸಿಲ್ಲಿ ಲಲ್ಲಿ ಧಾರವಾಹಿಯಲ್ಲಿ ಅರ್ಥವಾ ಯಿತು ಬಿಡಿ... ಎಂದು ಡೈಲಾಗ್ ಹೊಡೆದು ನಗಿಸುತ್ತಿದ್ದ ಡಾ.ಸಂಗಮೇಶ ಉಪಾಸೆ ಹಲವು ಸಿನಿಮಾಗಳಲ್ಲಿ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಂಡು ಗಮನಸೆಳೆದರು. ಇದೆಲ್ಲಾ ದರ ಅನುಭವದಿಂದ ಹೊಸ ಪ್ರಯತ್ನ, ಎನ್ನುವಂತೆ ಈಗ ಗಲಿಬಿಲಿ ಗೋವಿಂದ ಚಿತ್ರವನ್ನು ನಿರ್ದೇಶನ ಮಾಡುತ್ತಿ ದ್ದಾರೆ. ಜತೆಗೆ ನಾಯಕನಾಗಿಯೂ ನಟಿಸುತ್ತಿ ದ್ದಾರೆ. ಆ ಮೂಲಕ ನಿರ್ದೇಶಕ ನಾಗಿ ಗುರುತಿಸಿಕೊಳ್ಳುತ್ತಿ ದ್ದಾರೆ. ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾ ಷಣೆ, ಸಾಹಿತ್ಯವನ್ನು ಬರೆದಿದ್ದಾರೆ. ಈ ಚಿತ್ರಕ್ಕೆ ನಗುವವರಿಗೆ ಮಾತ್ರ ಎಂಬ ಅಡಿಬರಹವಿದ್ದು ಇದನ್ನು ಗಮನಸಿದರೆ ಇದು ಹಾಸ್ಯಮಯ ಸಿನಿಮಾ ಎಂಬುದು ಸ್ಪಷ್ಟವಾಗುತ್ತದೆ. ಬಿಜಾ ಪುರ ಅಂಬರೀಷ ಬಣಜಿಗೇರ, ಸಂದೀಪ್ ರಾಠೋಡ್, ಚಿದಾನಂದ ಪರಗೊಂಡ, ಮಡಿವಾಳಪ್ಪ.ಎಮ್.ಗೋಗಿ ಒಟ್ಟಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ.

ಚಡಚಣ ಸಮೀಪ ಇರುವ ಇಂಚಗೇರಿ ಮಠದ ಆವರಣದಲ್ಲಿ ಈ ಸಿನಿಮಾದ ಮುಹೂರ್ತ ಸಮಾರಂಭ ನೆರವೇರಿತು. ಇಂಡಿ ಶಾಸಕ ಯಶ ವಂತರಾಯಗೌಡ ಪಾಟೀಲ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಗ್ರಾಮೀಣ ಭಾಗದಲ್ಲಿ ರುವ ಅನಾಥ ಮಕ್ಕಳ ಪಾಡೇನು, ಮಕ್ಕಳೇ ಇಲ್ಲದ ಪೋಷಕರ ಪಾಡು ಹೇಗಿರುತ್ತೆ ಎಂಬು ದನ್ನು ಸಿನಿಮಾದಲ್ಲಿ ಹಾಸ್ಯ ಧಾಟಿಯಲ್ಲಿ ಕಟ್ಟಿಕೊಡಲಾಗುತ್ತಿದೆ. ಅದರ ಜತೆಗೆ ಎಲ್ಲರಿಗೂ ಮನಮುಟ್ಟುವಂತಹ ಸಂದೇಶ ಅಡಕವಾಗಿದೆ. ಹೂರ್ತಿ, ಅಂಜುಟಗಿ, ಬಿಜಾಪುರ, ಇಂಡಿ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾ ಗುವುದು ಎಂದು ನಿರ್ದೇಶಕ ಸಂಗಮೇಶ ಉಪಾಸೆ ತಿಳಿಸಿದರು. ಸಂಗೀತ ಪಳನಿ.ಡಿ. ಸೇನಾಪತಿ, ಛಾಯಾಗ್ರಹಣ ಆನಂದ ದಿಂಡ್ವರ್, ಸಂಕಲನ ರವಿತೇಜ್, ನೃತ್ಯ ಮಾಲೂರು ಶ್ರೀನಿವಾಸ್ ಅವರದಾಗಿದೆ.